ಅಧ್ಯಕ್ಷರು — ಪಾಟೀಲರೇ ಇವರನ್ನೆಲ್ಲ ನೀವು ಕಂಟ್ರೋಲ್ ಮಾಡಲಿಲ್ಲ ಅಂದರೆ ನಾನು ಕ್ರಮ ಕೈಗೊಳ್ಳಬೇಕಾಗುತ್ತದೆ.

(ಗೊಂದಲ)

ಶಾಸನ ರಚನಾ ಕಾರ್ಯಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗಗಳ ಕಾಯಿದೆಗಳ (ನಿರಶನ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

೧೨.೦೦ ಮಧ್ಯಾಹ್ನ

ಅಧ್ಯಕ್ಷರು.— ಈಗ ವಿಧೇಯಕವನ್ನು ಮಂಡಿಸುವುದು.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).— ಅಧ್ಯಕ್ಷರೇ ೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗಿಗಳ ಕಾಯಿದೆಗಳ (ನಿರಸನ) ವಿಧೇಯಕವನ್ನು ಮಂಡಿಸಲು ನಾನು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಎಂದರೆ, ೧೯೮೮ನೇ ಇಸವಿಯ ಕರ್ನಾಟಕ ಕುಷ್ಠರೋಗಿಗಳ ಕಾಯಿದೆಗಳ (ನಿರಸನ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ. ರಾಚಯ್ಯ.— ೧೯೮೮ನೇ ಇಸವಿಯ ಕರ್ನಾಟಕ ಕುಷ್ಠ ರೋಗಿಗಳ ಕಾಯಿದೆಗಳ (ನಿರಸನ) ವಿಧೇಯಕವನ್ನು ಮಂಡಿಸಿದ್ದೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು. X X X ಈಗ ವಿತ್ತೀಯ ಕಾರ್ಯ ಕಲಾಪಗಳು

ವಿತ್ತೀಯ ಕಾರ್ಯಕಲಾಪಗಳು,

೧೯೮೮-೮೯ನೇ ಸಾಲಿನ ಅರಣ್ಯ ಇಲಾಖೆ ಹಾಗೂ ಅಬಕಾರಿ, ಆಹಾರವಿದ್ಯಾಭ್ಯಾಸ ಆರ್ಥಿಕ ಮತ್ತು ಸಣ್ಣ ಉಳಿತಾಯ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಜಿ. ಎಸ್. ಬಾಗಲಕೋಟೆ.— (ಅರಣ್ಯ ರಾಜ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮,೯೨ ೪೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೪,೦೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು.— ಬೇಡಿಕೆಯನ್ನು ಮಂಡಿಸಲಾಯಿತು. ನಿನ್ನೆ ಬಿಸಿನೆಸ್ ಅಡ್ವೈಸರಿಕಮಿಟಿಯಲ್ಲಿ ತೀರ್ಮಾನ ಏನು ಆಯಿತು ಎಂದರೆ ಶನಿವಾರದಂದೂ ಕೂಡ ಅಸೆಂಬ್ಲಿ ನಡೆಸುವುದು ಮತ್ತು ಇವತ್ತಿನಿಂದ ಕಾಲಿಂಗ್ ಅಟೆನ್‌ಷನ್ ಮತ್ತು ನಿಯಮ ೩೩ರ ವಿಷಯಗಳು ಇಲ್ಲ ಪ್ರತಿ ದಿವಸ ಬೆಳಿಗ್ಗೆ ೧೦ ಗಂಟೆಗೆ ಕೂರುವುದು. ೧೦ರಿಂದ ೧೧ ಗಂಟೆವರೆಗೆ ಪ್ರಶ್ನೋತ್ತರ ೧೧ರಿಂದ ೫ಗಂಟೆವರೆಗೆ ಚರ್ಚೆ,

---

XXX ANNEXURE

ಸಂಜೆ ೫ ಗಂಟೆಯಿಂದ ಮಾನ್ಯ ಮಂತ್ರಿಗಳಿಂದ ಉತ್ತರ ಪ್ರಾರಂಭವಾಗುತ್ತದೆ. ಹೀಗೆ ಕಂಟೀನ್ಯುಯೆನ್ಸ್ ಆಗಿ ಮಾಡಿ ಇದನ್ನು ಮುಗಿಸಬೇಕೆಂದು ತೀರ್ಮಾನಿಸಲಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇದಕ್ಕೆ ನಮ್ಮ ಪೂರ್ತಿ ಸಹಕಾರ ಇದೆ. ಒಂದೇ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಕಾರವಾರದಲ್ಲಿ ತೀವ್ರವಾದಂತಹ ಕಡಲ ಕೊರೆತ ಇದೆ. ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಅಪಾರ ಹಾನಿಯುಂಟಾಗುತ್ತದೆ, ಸಮುದ್ರ ಯಾರಿಗೂ ಕೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು— ರೂಲ್ಸ್ ರೆಗ್ಯುಲೇಷನ್ಸ್ ಅನ್ನು ಗಾಳಿಗೆ ತೂರಬೇಡಿ. ಮಾನ್ಯ ಬೊಮ್ಮಾಯಿಯವರೇ ತಾವು ಹೇಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ತಕ್ಷಣ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಮೊಯಿಲಿಯವರೇ ಇವತ್ತು ೯ ಡಿಮ್ಯಾಂಡ್ಸ್ ಅನ್ನು ಪಾಸ್ ಮಾಡಬೇಕಾಗಿದೆ. ನಿಮ್ಮ ಕಡೆ ೧೧ ಜನ ಮಾತನಾಡುವವರಿದ್ದು ಈ ಕಡೆ ೧೩ ಜನರು ಇದ್ದಾರೆ, ಸಿ.ಪಿ.ಐ, ಸಿ.ಪಿ.ಎಂ, ಬಿಜೆ.ಪಿ, ಪಕ್ಷಗಳ ೩ ಜನರಿದ್ದಾರೆ. ೬ ಜನ ಜನತಾದವರಿಗೆ ೧೧ ಜನ ಕಾಂಗ್ರೆಸ್‌ನವರಿಗೆ, ಸಿ.ಪಿ.ಎಂ, ಸಿ.ಪಿ.ಐ, ಬಿ.ಜೆ.ಪಿ–೩ ಜನರಿಗೆಂದು ಅವಕಾಶ ಕೊಟ್ಟರೆ ೨೦ ಜನರಾಗುತ್ತಾರೆ. ೧೫ ನಿಮಿಷ ಒಬ್ಬರಿಗೆ ಅವಕಾಶ ಕೊಡುತ್ತೇನೆ. ೫ ಗಂಟೆಗೆ ಚರ್ಚೆ ಮುಕ್ತಾಯವಾಗಬೇಕು. ಇಲ್ಲದಿದ್ದರೆ ೫ ಗಂಟೆಗೆ ಚರ್ಚೆ ಮುಕ್ತಾಯವಾಯಿತು ಎಂದು ಮಂತ್ರಿಗಳನ್ನು ಉತ್ತರಕ್ಕೆ ಕರೆಯಬೇಕಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ,— ನಿಯಮ ೩೩೪ರ ಕೆಳಗೆ ಕಳುಹಿಸಿರುವ ವಿಷಯಗಳು ಮತ್ತು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಇವ್ಯಾವುದಕ್ಕೂ ನನಗೆ ಉತ್ತರ ಬಂದಿಲ್ಲ. ನಾಳೆ ಕಳಿಸಿಕೊಡುತ್ತೇನೆಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಒಂದು ನಿಮಿಷ ಕೇಳಿ, ನಿಮ್ಮ ಪ್ರಶ್ನೆ...

(ಗೊಂದಲ)

ಅಧ್ಯಕ್ಷರು.— ಅವರು ಹೇಳುವುದನ್ನು ಕೇಳಿ ಅವರು ಪಾರ್ಲಿಮೆಂಟರಿ ಮಂತ್ರಿಗಳಿದ್ದಾರೆ ಜವಾಬ್ದಾರಿಯುಳ್ಳವರಾಗಿದ್ದಾರೆ.

(ಗೊಂದಲ)

ಶ್ರೀ ಕೆ. ವಸಂತ ಬಂಗೇರ.— ಉತ್ತರ ಬರುವುದಿಲ್ಲ, ಅಧಿವೇಶನ ಪ್ರಾರಂಭವಾದಾಗಿನಿಂದ ಎಷ್ಟೊ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುವುದನ್ನು ಕೇಳಿ. ಯಾವುದೋ ಪ್ರಶ್ನೆಗೆ ಉತ್ತರ ಬರಲಿಲ್ಲವೆಂದು ಹೇಳಿದ್ದಾರೆ, ೩೩೪ಕ್ಕೆ ಉತ್ತರ ಬರಲಿಲ್ಲವೆಂದು ಹೇಳಿದ್ದಾರೆ. ನಾನು ಅದನ್ನು ಕಳಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

†ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).— ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದಿರುವ ಬೇಡಿಕೆಗಳಲ್ಲಿ ಒಂದಾದಂತಹ ಅಬಕಾರಿ ಇಲಾಖೆಯ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಮ್ಮ ಪರವಾನಗಿಯನ್ನು ಪಡೆದು ಮಾತನಾಡಲಿಕ್ಕೆ ನಾನು ನಿಂತಿದ್ದೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಬಕಾರಿ ವಿಚಾರದಲ್ಲಿ ಹಲವಾರು ಪ್ರಶ್ನೆಗಳಿಗೆ ಸರಕಾರದವರು ಕಳಕಳಿಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲದೆ ಈ ಹಿಂದೆ ನಾನೇ ಮಂಡಿಸಿದಂತಹ ಒಂದು ಖಾಸಗಿ ನಿರ್ಣಯದ ಸಂಬಂಧದಲ್ಲಿ ಕೂಡ ಕೆಲವಾರು ವಿಚಾರಗಳು ಈ ಸದನದ ಮುಂದೆ ಪ್ರಸ್ತಾಪವಾಗಿವೆ, ಅವುಗಳನ್ನೆಲ್ಲಾ ಪುನಃ ಪ್ರಸ್ತಾಪ ಮಾಡದೇ ಸಂದರ್ಭಾನುಸಾರ ಆ ಚರ್ಚೆಯ ತಾತ್ಪರ್ಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಹಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದರಲ್ಲಿ ಎರಡು-ಮೂರು ಭಾಗಗಳಾಗಿ ನಾನು ವಿಂಗಡಿಸಿಕೊಳ್ಳಬೇಕಾಗುತ್ತದೆ. ಒಂದು ಈಗ ಆ ಇಲಾಖೆ ಏನಾಗಿದೆ? ಯಾವ ರೀತಿಯಲ್ಲಿ ಅದು ಬೆಳೆದುಬಂದಿದೆ? ಈಗ ಅದರ ಸ್ವರೂಪ ಹೇಗೆ? ಅದರೊಳಗೆ ಇರತಕ್ಕಂಥ ವಿಚಾರಗಳು ಯಾವ ದಿಶೆಯಲ್ಲಿ ನಡೆದಿವೆ? ಅದರಿಂದಾಗಿ ಸಮಾಜದಲ್ಲಿ ಏನು ಪರಿಣಾಮವಾಗಿದೆ? ಇದರ ಬಗ್ಗೆ ಸರ್ಕಾರದ ದೃಷ್ಟಿ ಏನು ಎಲ್ಲಾ ಪರಿಣಾಮಗಳಾಗಿದ್ದಾವೆ ಮತ್ತೆ ಅದನ್ನು ನಾವು ಏನು ಮಾಡುವುದಕ್ಕೆ ಸಾಧ್ಯ ಇದೆ ಎನ್ನತಕ್ಕಂಥ ವಿಷಯನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಮತ್ತೆ ನಾನು ಸ್ಪಷ್ಟವಾಗಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುವುದೇನೆಂದರೆ, ನಾನು ಇದರಲ್ಲಿ ಈ ಒಂದು ಚರ್ಚೆಗೆ ಇರತಕ್ಕಂಥ ಶೃತಿ ಏನಿದೆ ಅದು ಹಗರಣಗಳ ಪ್ರಸ್ತಾಪಿಸುವ ಶೃತಿ ಅಲ್ಲ, ಅಥವಾ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುತಕ್ಕಂಥ ಶೃತಿ ಕೂಡ ಅಲ್ಲ, ಅವುಗಳ ಬಗ್ಗೆ ಕಾಳಜಿ ಇಲ್ಲ ಎಂದಲ್ಲ, ಈ ಹಗರಣಗಳ ಭ್ರಷ್ಟಾಚಾರದ ಬಗ್ಗೆ ಕಾಳಜಿ ಇಲ್ಲ ಎಂದು ಅಲ್ಲ. ಇದಕ್ಕಿಂತ ಮೂಲಭೂತವಾಗಿ ಜನಪರವಾಗಿ ಯೋಚನೆ ಮಾಡಬೇಕು, ಶಾಸಕರಾಗಿ ಸರ್ಕಾರಕ್ಕೆ ಶೃತಿಯನ್ನು ಇಟ್ಟು ಈ ಚರ್ಚೆಯನ್ನು ಪ್ರಾರಂಭ ಮಾಡಬೇಕು ಎಂದು ನಾನು ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನೆನಪು ಇರಬಹುದು ಅಥವಾ ನೆನಪು ಇಲ್ಲವೋ ಅವರು ತಮ್ಮ ಬಜೆಟ್ ಭಾಷಣ ಒಂದರಲ್ಲಿ ಈ ಸರ್ಕಾರವನ್ನು ವಹಿಸಿಕೊಂಡಂಥ ತರುಣದಲ್ಲಿ ಅವರು ಹೇಳಿದರು, ತಮ್ಮ ಸರ್ಕಾರದ ಗುರಿ ಮತ್ತು ತಮ್ಮ ಶ್ರದ್ಧೆ ಗಾಂಧೀಜಿ ಪ್ರಣೀತ ಅರ್ಥವ್ಯವಸ್ಥೆ ಎಂದು ಹೇಳಿದರು. ಗಾಂಧೀಜಿ ಪ್ರಣೀತ ಅರ್ಥವ್ಯವಸ್ಥೆ ಎಂದರೆ ಅದಕ್ಕೆ ಹಲವಾರು ಅರ್ಥಗಳು ಇರುವುದಕ್ಕೆ ಸಾಧ್ಯ ಇದೆ. ಅವರು ಇದನ್ನು ಯಾವ ಅರ್ಥದಲ್ಲಿ ಹೇಳಿದರೋ ನನಗೆ ಗೊತ್ತಿಲ್ಲ. ಅಥವಾ ಸುಮ್ಮನೆ ಒಂದು ಆಯವ್ಯಯ ಭಾಷಣದಲ್ಲಿ ತಮ್ಮ ಶೃಂಗಾರಕ್ಕೆ ಕೆಲವು ಶಬ್ದಗಳನ್ನು ಬಳಸತಕ್ಕಂಥ ಪದ್ಧತಿಯನ್ನು ಅವರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ತಮ್ಮ ಶ್ರದ್ಧೆ ಮತ್ತು ಗುರಿ ಗಾಂಧೀಜಿ ಪ್ರಣೀತ ಅರ್ಥವ್ಯವಸ್ಥೆ ಎಂದು ಹೇಳಿದರು. ಆದ್ದರಿಂದ ಅದನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡಿದ್ದಾರೋ, ಅದನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದಾರೋ. ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಒಂದು ವಿಷಯ ಸ್ಪಷ್ಟಪಡಿಸಬೇಕು. ಅದು ಏನೆಂದರೆ, ಇವತ್ತು ಇರತಕ್ಕಂಥ ಈ ಅಬಕಾರಿ ಇಲಾಖೆ ಮತ್ತು ವ್ಯವಸ್ಥೆ ಏನು ಇದೆ, ಇದು ಮಾತ್ರ ಖಂಡಿತವಾಗಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಪ್ರಣೀತ ದುರವಸ್ಥೆ ಎಂದು ನಾನು ಸ್ಪಷ್ಟಪಡಿಸಲಿಕ್ಕೆ ಬಯಸುತ್ತೇನೆ. ಏಕೆಂದು ಹೇಳಿದರೆ, ಈ ಇಲಾಖೆಯನ್ನು ಹುಟ್ಟುಹಾಕಿ, ಅರ್ಥವು ಸುಂದರ ರೂಪವಾಗಿ ಕಲ್ಪಿಸಿರತಕ್ಕಂಥ ಕೀರ್ತಿ ಅವರಿಗೇ ಹೋಗಬೇಕು. ಪಾನನಿರೋಧ ಸುಮಾರು ಇಪ್ಪತ್ತು ವರ್ಷಗಳ ಕಾಲ ಜಾರಿಯಲ್ಲಿದ್ದಂಥ ರಾಜ್ಯದಲ್ಲಿ ಅದನ್ನು ಸಡಿಲಿಸಿ ಇವತ್ತು ಇರತಕ್ಕಂಥ ಒಂದು ಮದ್ಯಪಾನದ ವ್ಯವಸ್ಥೆಯನ್ನು ಅವರು ಹಾಕಿಕೊಟ್ಟಿದ್ದಾರೆ, ಇದು ಹಿಂದೆ ಅವರು ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಇವತ್ತು ಅವರು ನೆಟ್ಟಂಥ ಸಸಿ ಬಹಳ ದೊಡ್ಡದಾಗಿ ಬೆಳೆದು ಬಹಳ ಸಮೃದ್ಧವಾಗಿ ಫಲ ಬಿಡುತ್ತಿರತಕ್ಕಂಥ ಹೊತ್ತಿನಲ್ಲಿ ಮತ್ತೆ ಬಂದು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ, ಅಲ್ಲಿ ಉಣ್ಣುತ್ತಿದ್ದಾರೆ, ಬೇರೆಯವರೂ ಉಣ್ಣುತ್ತಿದ್ದಾರೆ, ಅದು ಬೇರೆ ವಿಚಾರ. ಇವತ್ತು ಕೂಡಾ ತಾತ್ವಿಕವಾಗಿ ನಮ್ಮ ರಾಜ್ಯ ಪಾನನಿರೋಧಕ್ಕೆ ಒಳಪಟ್ಟಿರತಕ್ಕಂಥ ರಾಜ್ಯ. ಆ ಕಾನೂನು ಹಾಗೆ ಇದೆ. ಅದನ್ನು ಬೇರೆ ಯಾರೂ ರದ್ದುಪಡಿಸಲಿಲ್ಲ. ಆದರೆ ಅದರ ಒಳಗೆ ಇರತಕ್ಕಂಥ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ಪಾನನಿರೋಧವನ್ನು ರಾಜ್ಯಾದ್ಯಂತ ಸಡಿಲಿಸಿದ್ದಾರೆ. ಮೊದಲು ಜಮಖಂಡಿ ಮತ್ತು ಇನ್ನು ಎರಡು ಕಡೆಗಳಲ್ಲಿ ಹಾಗೆ ಇಟ್ಟುಕೊಂಡಿದ್ದಾರೆ. ಅವರು ತಂದ ಹೊತ್ತಿನಲ್ಲಿ ಆದ್ದರಿಂದ ಇಡೀ ವ್ಯವಸ್ಥೆಯ ಮೂಲಭೂತ ಬ್ರಹ್ಮ ಮಾನ್ಯ ರಾಮಕೃಷ್ಣ ಹೆಗಡೆಯವರು. ಆದ್ದರಿಂದ ಅವರು ಇದನ್ನು ಸರಿಪಡಿಸತಕ್ಕಂಥ ಜವಾಬ್ದಾರಿಯನ್ನು ಕೂಡಾ ಹೊರಬೇಕು ಎಂದು ಪ್ರಪ್ರಥಮವಾಗಿ ನಾನು ಆಗ್ರಹಪಡಿಸುತ್ತೇನೆ. ಅರವತ್ತರ ದಶಕದಲ್ಲಿ, ಕೊನೆಯಲ್ಲಿ, ಆಗ ಇಪ್ಪತ್ತು ವರ್ಷಗಳ ಪಾನನಿರೋಧ, ಆ ನಂತರ ಮಾನ್ಯ ರಾಮಕೃಷ್ಣ ಹೆಗಡೆಯವರು ಅದನ್ನು ಸಡಿಲಿಸಿದ ಮೇಲೆ, ಯಾರಾದರೂ ಕುಡಿದು ರಸ್ತೆ ಮೇಲೆ ಬಿದ್ದರೆ ಜನ ಗೇಲಿ ಮಾಡುತ್ತಿದ್ದರು, ಅವರ ಮೈಮೇಲೆ ರಾಮಕೃಷ್ಣ ಹೆಗಡೆಯವರು ಬಂದಿದ್ದಾರೆ ಎಂದು.

ಈಚೆಗೆ ತಮ್ಮ ಕಾಲ ಬಂದಾಗ, ಅದು ಇನ್ನೂ ಮುಂದುವರೆದಿದೆ ಎಂದು ಹೇಳುತ್ತಿದ್ದೇನೆ. ಅಂದರೆ ಇದನ್ನು ಸೃಷ್ಟಿ ಮಾಡಿರತಕ್ಕ ಕೀರ್ತಿ ತಮ್ಮದು ಅದು ನಿಮಗೆ ಬೇಕೋ ಬೇಡವೋ ಎನ್ನುವುದು ತಮಗೆ ಬಿಟ್ಟಿದ್ದು. ಇಂತಹ ಶಾಶ್ವತವಾದ ಕೀರ್ತಿ ಅವರಿಗೆ ಉಳಿದಿದೆ, ಅದು ತೀರ್ಥ ಎಂದು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನಿಮ್ಮ ಮೇಲೆ ಬಂದಿದೆಯೋ ?.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನನ್ನ ಮೇಲೆ ಬಂದಿಲ್ಲ, ನಿಮ್ಮ ಮೇಲೆ ಬಂದಿರುವುದನ್ನು ನೋಡಿದ್ದೇನೆ. ಹಾಗೆ ಮೈ ಮೇಲೆ ಬರುವ ಹಾಗೆ ಮಾಡುವುದಿಲ್ಲ. ಶಾಸ್ತ್ರ ತಿಳಿದುಕೊಂಡು ಮಾಡುತ್ತೇನೆ. ಆ ಕಾಲದಲ್ಲಿ ಇವರ ಜೊತೆ ಇದ್ದೆ. ಎಷ್ಟೋ ವಿಷಯ ತಿಳಿದುಕೊಂಡಿದ್ದೇನೆ. ನೀವು ಈಗ ಬಂದಿದ್ದೀರಿ. ಇವೊತ್ತು ಏನು ಆಗಿದೆ, ಅಂದರೆ ತಾವು ಬಂದ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ತಮ್ಮ ಕೈಯಲ್ಲಿ ಆರ್ಥಿಕ ಇಲಾಖೆ ಬಂದಂಥ ಈ ಕಾಲದಲ್ಲಿ ಮುಂದಿನ ತಿಂಗಳು ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ ಎಂದು ಬಹಳ ಪ್ರಾಮಾಣಿಕವಾಗಿ ಹೇಳಿಕೆ ನೀಡಿದಿರಿ. ಸರ್ಕಾರಕ್ಕೆ ಆದಾಯ ಬರಬೇಕು ಎಂದು ದಿಢೀರ್ ಆಗಿ ಈ ರೀತಿ ತೀರ್ಮಾನ ಮಾಡಿದಿರೇ ಹೊರತು ಈ ತೀರ್ಮಾನದಿಂದ ಆದಾಯವನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಲಿಲ್ಲ ಎಂದು ಹೇಳುತ್ತೇನೆ, ಸರ್ಕಾರಿ ಖರ್ಚು ಆದಾಯ ವಿಷ ಬೆಳೆದ ಹಾಗೆ ಬೆಳೆದಿದೆ. ೧೯೮೪–೮೫ರಲ್ಲಿ ೧೦ ಕೋಟಿ ರೂಪಾಯಿ ವೆಚ್ಚ ಆಗಿದ್ದರೆ ಈ ಇಲಾಖೆಯಿಂದ ೧೯೦ ಕೋಟಿ ರೂಪಾಯಿ ಆದಾಯ ಬಂದಿದೆ. ೧೯೮೫–೮೬ರಲ್ಲಿ ೧೧ ಕೋಟಿ ರೂಪಾಯಿ ವೆಚ್ಚ ಆಗಿದ್ದರೆ ೧೯೬ ಕೋಟಿ ರೂಪಾಯಿ ಆದಾಯ ಬಂದಿದೆ. ೧೯೮೬–೮೭ರಲ್ಲಿ ೧೦ ಕೋಟಿ ರೂಪಾಯಿ ವೆಚ್ಚ ಆಗಿದ್ದರೆ ೨೧೪ ಕೋಟಿ ರೂಪಾಯಿ ಆದಾಯ ಬಂದಿದೆ. ೧೯೮೭–೮೮ರಲ್ಲಿ ೧೫ ಕೋಟಿ ರೂಪಾಯಿಗಳು ವೆಚ್ಚ ಆಗಿದ್ದರೆ ೨೭೧ ಕೋಟಿ ರೂಪಾಯಿ ಆದಾಯ ಬಂದಿದೆ. ನಾನು ಹೇಳುತ್ತಿದ್ದೇನೆ, ಸಾರ್ವಜನಿಕ ಉದ್ಯಮಗಳಲ್ಲಿ ಎಷ್ಟು ಕೋಟಿ ಗಟ್ಟಲೆ ಲುಕ್ಸಾನು ಆಗಿದೆ. ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್, ಎಐಎಸ್ಎಲ್, ಮೈಸೂರು ಪೇಪರ್ ಮಿಲ್ಸ್. ಉದ್ಯಮಗಳಲ್ಲಿ ಲುಕ್ಸಾನು ಆಗಿದ್ದರೂ ಈ ಒಂದು ಇಲಾಖೆ ಲಾಭ ಮಾಡಿದೆ. ಇದರಷ್ಟು ಲಾಭ ಬೇರೆ ಯಾವುದೇ ಇಲಾಖೆ ಕೂಡ ಮಾಡಿಲ್ಲ. ನಾವು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ೨೭೧ ಕೋಟಿ ರೂಪಾಯಿಗಳನ್ನು ಲಾಭ ಮಾಡುತ್ತಿದ್ದೇವೆ. ನಾನು ಆ ಸರ್ಕಾರ ಅಥವಾ ಈ ಸರ್ಕಾರ ಎಂದು ಹೇಳುವುದಿಲ್ಲ. ಮೊನ್ನೆ ಸರ್ಕಾರಿ ಭ್ರಷ್ಟಾಚಾರದ ಬಗ್ಗೆ ಮಾತನಾಡುವಾಗ ಮಾನ್ಯ ಮಂತ್ರಿಗಳಿಗೆ ಕೋಪ ಬಂತು. ನಾವು ಹೇಳತಕ್ಕಂಥ ವಿಷಯಕ್ಕೆ ಅವರು ಏಕೆ ಕೋಪ ಮಾಡಿಕೊಳ್ಳಬೇಕು ? ವಾಸ್ತವಿಕ ವಿಷಯಕ್ಕೆ ಕೋಪ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಈ ವರ್ಷ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ವರದಿ ಬಂದಿದೆ. ಮಾನ್ಯ ರಮೇಶ್ ಕುಮಾರ್ ಅವರು ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷರಾಗಿದ್ದರು ಅವರ ವರದಿಯಲ್ಲಿಯೂ ಸಹ ಭ್ರಷ್ಟಾಚಾರದ ಬಗ್ಗೆ ಕಾರ್ಖಾನೆಯಲ್ಲಿ ಆದ ನಷ್ಟದ ಬಗ್ಗೆ ಪ್ರಸ್ತಾಪ ಇದೆ. ತಾವು ಎಲ್ಲಿ ಬೇಕಾದರೂ ನೋಡಬಹುದು ಈ ಒಂದು ವಿಷಯದಲ್ಲಿ ಇಲಾಖೆಗಳ ಅಧಿಕಾರಿಗಳು ಮಾಡುತ್ತಿರುವ ಕೆಲಸ ಕಾರ್ಯಗಳು ಈ ನಷ್ಟಕ್ಕೆ ಕಾರಣಗಳು ಎಂದು ಸ್ಪಷ್ಟವಾಗಿಯೇ ವ್ಯಕ್ತವಾಗುತ್ತದೆ. ಪ್ರತಿಯೊಂದು ವಿಷಯದಲ್ಲಿ ಕೂಡ ಈ ಒಂದು ವ್ಯವಸ್ಥೆ ಇದೆ. ಅದೇ ರೀತಿಯಲ್ಲಿ ವ್ಯವಸ್ಥೆ ಮತ್ತು ಅವ್ಯವಸ್ಥೆ ಎರಡೂ ಜೊತೆ ಜೊತೆಯಲ್ಲಿ ಇದೆ. ಇದರಲ್ಲಿ ಅಧಿಕೃತ ಮತ್ತು ಅನಧಿಕೃತ ಎರಡೂ ಕೂಡ ಸಹಕಾರಿಯಾಗಿ ಆಗುತ್ತಿದೆ, ಯಾರು ಅಧಿಕೃತವಾಗಿ ಕಂಟ್ರಾಕ್ಟ್ ಮಾಡುತ್ತಾರೋ ಅವರು ಅನಧಿಕೃತವಾಗಿ ಕೂಡ ಮಾಡುತ್ತಾರೆ. ಸಾಕಷ್ಟು ಅನಧಿಕೃತವಾಗಿ ಹಾಗೂ ಅಧಿಕೃತವಾಗಿ ಎರಡೂ ಸಹ ಒಂದು ಇಲಾಖೆಯಲ್ಲಿ ನಡೆಯುತ್ತಿದೆ. ಮೊನ್ನೆ ಒಬ್ಬ ಸುಪ್ರಸಿದ್ಧ ಎಕ್ಸೈಜ್ ಕಂಟ್ರಾಕ್ಟರ್ ಅವರ ಮನೆಯನ್ನು ಇನ್‌ಕಮ್ ಟ್ಯಾಕ್ಸ್‌ನವರು ರೈಡ್ ಮಾಡಿದರು ಮಾಡಿದಾಗ ಲೆಕ್ಕ ಪತ್ರ, ಹಣ ಸಿಕ್ಕಿತು. ಹಣ ಸಿಗುವುದು ಹೋಗಲಿ, ಅದು ಬೇರೆ ವಿಚಾರ ಆದರೆ ಇವರ ಹತ್ತಿರವೂ ಸಿಗುತ್ತದೆ, ರೈಡ್ ಮಾಡಿದರೆ ಅದು ದೊಡ್ಡ ವಿಷಯ ಅಲ್ಲ. ತಮಗೆ ಬೇಡದ ಕಡೆಗಳಲ್ಲಿ ಬಿಡುತ್ತಾರೆ. ಈ ಬಗ್ಗೆ ಸರ್ಕಾರದ ಹತ್ತಿರ ಎಲ್ಲ ರೀತಿಯ ಇನ್‌ಫರ್ಮೇಷನ್‌ಗಳು ಇರುತ್ತವೆ. ಎಲ್ಲಿ ಹಿಡಿದರೆ ಏನು ಸಿಗುತ್ತದೆ ಎಂಬುದೆಲ್ಲಾ ಅವರಿಗೆ ಗೊತ್ತಿರುತ್ತದೆ. ಇದರ ಒಂದು ಆಧಾರದ ಮೇಲೆ ತಮಗೆ ಬೇಕಾದ ಕಡೆ ಹಿಡಿಯುತ್ತಾರೆ, ತಮಗೆ ಬೇಡದ ಕಡೆ ಬಿಡುತ್ತಾರೆ. ಮತ್ತೆ ಇಲ್ಲಿ ಏನು ಸಿಕ್ಕಿತು ಎಂದರೆ.

"A considerable stock of chloral hydrate and satchets".

ಇದು ಎರಡೂ ಸಹ ಸಿಕ್ಕಿತು. ಇದರ ಬಗ್ಗೆ ಇನ್‌ಕಮ್‌ಟ್ಯಾಕ್ಸ್‌ನವರಿಗೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನನಗೆ ತಿಳಿದವಟ್ಟಿಗೆ, ಈ ಬಗ್ಗೆ ಅವರು ಎಕ್ಸೈಜ್ ಕಮೀಷನರ್ ಅವರಿಗೆ ವರದಿ ಮಾಡಿದ್ದಾರೆಂದು ತಿಳಿದುಬಂದಿದೆ. ಆದ್ದರಿಂದ ಇದು ಸರ್ಕಾರದ ಗಮನಕ್ಕೆ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕು. ಎಕ್ಸೈಜ್ ಕಂಟ್ರಾಕ್ಟರ್ ಮನೆಯಲ್ಲಿ ಅಧಿಕೃತ ಕೋಟಾಗಿಂತ ಹೆಚ್ಚು ಪ್ರಮಾಣದಲ್ಲಿ ಇದು ಇರಲು ಕಾರಣವೇನು ? ಇದನ್ನು ಬಳಸಿಕೊಂಡು ಅವರು ಅಧಿಕೃತವಾಗಿ ಮಾಡುವುದರ ಜೊತೆಗೆ ಅನಧಿಕೃತವಾಗಿಯೂ ಸಹ ತಯಾರು ಮಾಡುತ್ತಾರೆ. ಇದು ಇಲಾಖಾ ಅಧಿಕಾರಿಗಳಿಗೆ ಗೊತ್ತಿದ್ದರೂ ಸಹ ಸುಮ್ಮನಿರುತ್ತಾರೆ. ಅಧಿಕೃತವಾಗಿ ಅವರು ಯಾವ ಒಂದು ಅನುಪಾತದಲ್ಲಿ ತಯಾರು ಮಾಡಬೇಕೋ ಆ ರೀತಿ ತಯಾರು ಮಾಡುತ್ತಿದ್ದಾರೆಯೋ ಎಂಬುದನ್ನು ಮಾತ್ರ ಈ ಅಧಿಕಾರಿಗಳು ನೋಡುತ್ತಾರೆ. ಅವರು ಅನಧಿಕೃತವಾಗಿ ತಯಾರು ಮಾಡುವ ಸಂದರ್ಭದಲ್ಲಿ ಈ ಅಧಿಕಾರಿಗಳು ಕಣ್ಣು ಮುಚ್ಚಿಕೊಳ್ಳುತ್ತಾರೆ. ಹೀಗೆ ಇಲ್ಲಿ ಅಧಿಕೃತ ಮತ್ತು ಅನಧಿಕೃತ ಸಹಬಾಳ್ವೆಗೆ ಸರ್ಕಾರದ ಪ್ರೋತ್ಸಾಹ ಸಿಕ್ಕಿದೆ. ಒಟ್ಟಿನಲ್ಲಿ ಈ ಇಲಾಖೆ ಭ್ರಷ್ಟಾಚಾರದ ಮಹಾ ಸಾಗರದಂತೆ ಇದೆ. ಅಲ್ಲಿರುವಂತಹ ಹಗರಣಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿದ್ದರೂ ಸಹ ಸರ್ಕಾರ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಅಬಕಾರಿ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂದರೆ, ಈ ಹಿಂದೆ ನಮ್ಮಲ್ಲಿದ್ದಂತಹ ಪಾಳೆಗಾರಿಕೆ ತರಹದಲ್ಲಿ ಕೆಲಸ ಮಾಡುತ್ತಿದೆ ಹಿಂದೆ ಈ ಪಾಳೆಗಾರರು, ಜಮೀನ್ದಾರರು ಮತ್ತು ಇನಾಂದಾರರು, ಸರ್ಕಾರಕ್ಕೆ ಜನರು ಸರಿಯಾಗಿ ತೆರಿಗೆ ಹಣ ಸಂದಾಯ ಮಾಡುತ್ತಿದ್ದಾರೆಯೇ ಎಂಬುದನ್ನು ನೋಡಿಕೊಳ್ಳುತ್ತಿದ್ದರು. ಇವರುಗಳಿಗೆ ಆ ಸಮಯದಲ್ಲಿ ಎಷ್ಟು ಸ್ವಾತಂತ್ರ್ಯವಿತ್ತು ಎಂದರೆ, ಸರ್ಕಾರಕ್ಕೆ ಕಟ್ಟಬೇಕಾದ ಬಾಕಿಯನ್ನು ಕೊಡದಿದ್ದವರನ್ನು ಕಂಬಕ್ಕೆ ಕಟ್ಟಿಸಿ ಹೊಡೆಯುತ್ತಿದ್ದರು. ಇಂತಹ ಒಂದು ವ್ಯವಸ್ಥೆ ಈಗ ಈ ಇಲಾಖೆಯಲ್ಲಿದೆ. ಸರ್ಕಾರಕ್ಕೆ ವರ್ಷದಿಂದ ವರ್ಷಕ್ಕೆ ಹೆಚ್ಚು ಆದಾಯ ಕಂಟ್ರಾಕ್ಟರ್‌ಗಳ ಮೂಲಕ ಬರುತ್ತಿದೆಯೇ ಎಂಬುದನ್ನು ಈ ಇಲಾಖೆ ನೋಡಿಕೊಳ್ಳುತ್ತಿದೆ. ಕಳೆದ ಒಂದು ವಾರದಿಂದ ಪತ್ರಿಕೆಗಳಲ್ಲಿ ಅಬಕಾರಿ ಹರಾಜಿನಿಂದ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಆದಾಯ ಎಲ್ಲಾ ಜಿಲ್ಲೆಗಳಿಂದ ಬರುತ್ತಿದೆ ಎಂಬತಕ್ಕಂಥ ನ್ಯೂಸ್ ಬರುತ್ತಿದೆ. ಸರ್ಕಾರ ಸಹ ಕಳೆದ ವರ್ಷಕ್ಕಿಂತ ಈ ವರ್ಷ ಈ ಬಾಬಿನಿಂದ ತನಗೆ ಹೆಚ್ಚು ಆದಾಯ ಬಂದಿದೆ, ಮುಂದಿನ ವರ್ಷ ಇದಕ್ಕೂ ಹೆಚ್ಚು ಆದಾಯ ಬರಬೇಕು ಎಂಬುದನ್ನು ಮಾತ್ರ ನೋಡುತ್ತದೆಯೇ ಹೊರತು, ಹೆಚ್ಚಿನ ಆದಾಯ ಎಲ್ಲಿಂದ ಬಂತು, ಹೇಗೆ ಬಂತು ಎಂಬುದನ್ನು ನೋಡುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಈ ಬಾಬಿನಿಂದ ಸರ್ಕಾರಕ್ಕೆ ಬರಬೇಕಾದ ಆದಾಯದಲ್ಲಿ ಎಷ್ಟು ಹಣ ಸೋರಿ ಹೋಗಿದೆ, ಇದರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಪಾಲು ಸಿಕ್ಕಿದೆ ಎಂಬುದನ್ನೆಲ್ಲಾ ತನಿಖೆ ಮಾಡಲು ಸರ್ಕಾರಕ್ಕೆ ಇಷ್ಟವಿಲ್ಲ. ಇದೇ ಕಾರಣದಿಂದ ಎಕ್ಸೈಜ್ ಕಂಟ್ರಾಕ್ಟರ್‌ಗಳು, ಅಧಿಕಾರಿಗಳನ್ನು ಮತ್ತು ರಾಜಕಾರಣಿಗಳನ್ನು ಚೆನ್ನಾಗಿ ನೋಡಿಕೊಂಡರೆ ಸಾಕು, ತಾವು ಬೆಣ್ಣೆ ತಿಂದು ಅವರ ಮುಖಕ್ಕೆ ಸ್ವಲ್ಪ ಬೆಣ್ಣೆ ಸವರಿದರೆ ಸಾಕು, ಮುಂದೆ ತಾವು ಯಾರ ತಲೆಯನ್ನು ಬೇಕಾದರೂ ಹೊಡೆಯಬಹುದು ತಾವು ಎಷ್ಟು ಲಾಭವನ್ನಾದರೂ ಮಾಡಿಕೊಳ್ಳಬಹುದೆಂದು ಭಾವಿಸಿಕೊಂಡು ಅದರಂತೆ ನಡೆದುಕೊಳ್ಳುತ್ತಿದ್ದಾರೆ. ಇಂತಹ ಒಂದು ದುರವಸ್ಥೆ ಈ ಇಲಾಖೆಯಲ್ಲಿದೆ. ಇದು ಸರಿಯಲ್ಲ. ಕಂಟ್ರಾಕ್ಟರ್‌ಗಳಿಗೆ ಜಿಲ್ಲೆಗಳನ್ನು ಜಾಗೀರ್ ಕೊಡುವುದು ಸರಿಯಲ್ಲ. ಇಂತಹ ಒಂದು ಪದ್ಧತಿ ಇರುವುದಕ್ಕಾಗಿ ನಾನು ನೊಂದುಕೊಂಡು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ. ಈ ಇಲಾಖೆಯಲ್ಲಿ ನಿಯಮಾವಳಿಗಳು ಇವೆ, ಕಾನೂನುಗಳಿವೆ, ರೂಲ್ಸ್, ರೆಗ್ಯುಲೇಷನ್ಸ್ ಇವೆ, ಸರ್ಕ್ಯುಲರ್ಸ್ ಇವೆ, but everything is observed more in the breach. ಇಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ ಇರತಕ್ಕಂಥ ನಿಯಮಾವಳಿಗಳನ್ನು ಅನುಸರಿಸದೇ ಇರತಕ್ಕಂಥ ಸಂದರ್ಭಗಳೇ ಜಾಸ್ತಿ ಇವೆ. ಯಾವುದೇ ಸಂದರ್ಭದಲ್ಲಿಯೂ ನಿಯಮಾವಳಿಗಳಿಗೆ ತಕ್ಕಂತೆ ಕೆಲಸ ಮಾಡಿರುವ ಸಂದರ್ಭಗಳು ಇಲ್ಲ. ಈ ಬಗ್ಗೆ ನಾವು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ತನಿಖೆ ಮಾಡಿ ನೋಡಿದ್ದೇವೆ. ಕೆಲವೊಂದು ವಿಚಾರಗಳಿಗೆ ಸಂಬಂಧಪಟ್ಟಂತೆ ನಾವು ಈ ಇಲಾಖೆಯ ಅಧಿಕಾರಿಗಳನ್ನು ಸಮಿತಿಯ ಮುಂದೆ ಕೂರಿಸಿಕೊಂಡು ಅವರ ಹೇಳಿಕೆಗಳನ್ನು ಪಡೆದುಕೊಂಡ ಮೇಲೆ ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಬಗ್ಗೆ ಸಮಿತಿ ಕೊಟ್ಟಿರುವ ವರದಿಯಲ್ಲಿ ಏನು ಹೇಳಿದೆ ಎಂಬುದನ್ನು ತಮ್ಮ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರುತ್ತೇನೆ. ತಮಗೆ ಗೊತ್ತಿರುವಂತೆ, ಈ ಸಮಿತಿ ವರದಿಗಳು ನಿಮ್ಮ ಲೈಬ್ರರಿಯಲ್ಲಿರುತ್ತದೆಯೇ ಹೊರತು ಅವುಗಳನ್ನು ಯಾರೂ ನೋಡುವುದಿಲ್ಲ ಮತ್ತು ಆ ವರದಿಗಳಿಗೆ ಯಾರೂ ಬೆಲೆ ಕೊಡುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿಯಾದರೂ

ಈ ಇಲಾಖೆಗೆ ಸಂಬಂಧಪಟ್ಟಂತೆ ಕೊಟ್ಟರುವ ವರದಿ ಬಗ್ಗೆ ಪ್ರಸ್ತಾಪ ಮಾಡುವುದು ಒಳ್ಳೆಯದೆಂದು ತಿಳಿದುಕೊಂಡು ನಾನು ಹೇಳುತ್ತಿದ್ದೇನೆ. ಈ ವರದಿಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದಾಗಿ ತಾವು ಹೇಳಿದ್ದಿರಿ. ಆದರೆ.........

ಅಧ್ಯಕ್ಷರು.--ಮತ್ತೆ ಸಭೆಯನ್ನು ಕರೆಯುತ್ತೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನೀವು ಕಷ್ಟಪಟ್ಟು ಏನೋ ವ್ಯವಸ್ಥೆ ಮಾಡುತ್ತಿದ್ದೀರಿ. ಆದರೆ ನಿಮ್ಮ ಕೈಯಲ್ಲಿ ಏನೂ ಮಾಡುವುದಕ್ಕಾಗುತ್ತಿಲ್ಲ.

ಈ ಒಂದು ಬಾಬಿನಲ್ಲಿ ಸರ್ಕಾರಕ್ಕೆ ಆದಾಯ ಬರುವುದು ೨೭೧ ಕೋಟಿ ರೂಪಾಯಿಗಳು ಇದು ಸಂತೋಷ ಪಡತಕ್ಕ ವಿಚಾರ ಅಲ್ಲ. ಈ ೨೭೧ ಕೋಟಿ ರೂಪಾಯಿ ಸರ್ಕಾರಕ್ಕೆ ಆದಾಯ ಬರಬೇಕಾದರೆ ಈ ೨೭೧ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಹಣವನ್ನು ಉಳಿದವರು ಲಪಟಾಯಿಸಿಕೊಂಡಿರುತ್ತಾರೆ. ಇದು ಜನರ ರಕ್ತ ಹೀರಿ ಲಪಟಾಯಿಸಿಕೊಂಡಿರತಕ್ಕದ್ದು. ಈ ದುಡ್ಡು ಹೇಗೆ ಬಂತು, ಸರಿಯಾದಂಥ ಕ್ರಮದಲ್ಲಿ ಬಂದಿದೆಯೋ ಎಂದು ತಿಳಿದುಕೊಳ್ಳಬೇಕಾಗಿದೆ. ಹೀಗೆ ಪ್ರತಿಯೊಂದರಲ್ಲೂ ಸಾಮಾನ್ಯವಾಗಿ ಹಣ ಸ್ಪಷ್ಟವಾದ ರೀತಿಯಲ್ಲಿ ಸೋರಿ ಹೋಗತಕ್ಕಂಥಾದಿದೆ ಇದಕ್ಕೆ ಲೆಕ್ಕವೇ ಇಲ್ಲ. ಸಾವಿರಗಟ್ಟಲೆ ಅಲ್ಲ, ಲಕ್ಷಗಟ್ಟಲೆ ಅಲ್ಲ, ಕೋಟಿಗಟ್ಟಲೆ ಆಗುತ್ತದೆ. ಇದರ ಬಗ್ಗೆ ಎಲ್ಲಾ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಪ್ರಮುಖವಾದಂಥ ವಿಚಾರಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಒಂದು ಸಂದರ್ಭ ನೋಡಿ. ಇದನ್ನು ಹೊರಗಡೆ ಎಕ್ಸ್‌ಪೋರ್ಟ್ ಮಾಡುತ್ತಾರೆ. ಎಕ್ಸ್‌ಪೋರ್ಟ್ ಮಾಡುವುದಕ್ಕೆ ಪರ್ ಲೀಟರ್ ೨೫ ಪೈಸೆ ಕನ್ಸೆಷನಲ್ ಡ್ಯೂಟಿ ಬೀಳುತ್ತದೆ. ಇದನ್ನು ಬೇರೆ ರಾಜ್ಯಗಳಿಗೆ ಕಳಿಸಿಕೊಟ್ಟರೆ ಕನ್ಸೆಷನಲ್ ಡ್ಯೂಟಿ ಬೀಳುತ್ತದೆ. ಆದರೆ ವೆರಿಫಿಕೇಷನ್ ಸರ್ಟಿಫಿಕೇಟ್‌ನ್ನು ಕೊಡಬೇಕಾಗುತ್ತದೆ. ನಾನು ಇಷ್ಟನ್ನು ಹೊರ ರಾಜ್ಯಕ್ಕೆ ಕಳಿಸಿದ್ದೇನೆ ಎಂದು ಹೇಳತಕ್ಕಂಥ ವ್ಯಕ್ತಿ ವೆರಿಫಿಕೇಷನ್ ಸರ್ಟಿಫಿಕೇಟನ್ನು ನಿಗದಿಯಾದಂಥ ತಾರೀಖಿನಲ್ಲಿ ಕೊಡದೇ ಹೋದರೆ ೯ ರೂಪಾಯಿ ೩೫ ಪೈಸೆಯಂತೆ ಡ್ಯೂಟಿಯನ್ನು ಕೊಡಬೇಕಾಗುತ್ತದೆ, ಆದರೆ ವೆರಿಫಿಕೇಷನ್ ಸರ್ಟಿಫಿಕೇಟ್ ಬಗ್ಗೆ ಇವರು ತಾತ್ಸಾರದಿಂದ ಇದ್ದಾರೆ. ೩೦-೬-೧೯೬೮ನೇ ತಾರೀಖಿನಲ್ಲಿ ಇದಕ್ಕೆ ಸಂಬಂಧಿಸಿದಂತೆ ೪೪೬ ಕೇಸುಗಳಲ್ಲಿ ವೆರಿಫಿಕೇಷನ್ ಸರ್ಟಿಫಿಕೇಟ್ ಬಂದಿಲ್ಲ, ಟೈಂ ಬಾರ್ ಆಗಿದೆ ಈ ಡ್ಯೂಟಿ ೨ ೮೮ ಅಂದರೆ ಹೆಚ್ಚು ಕಡಿಮೆ ೩ ಕೋಟಿ ರೂಪಾಯಿಗಳಷ್ಟು ಅಲ್ಲಿ ಹೋಯಿತು. ಈ ಬಗ್ಗೆ ಇಲಾಖೆಯ ಅಧಿಕಾರಿಗಳನ್ನು ಕೇಳಿದಾಗ ಇವರೇ ಹೋಗುತ್ತಾ ಇದ್ದಾರೆ, ಅವನು ಎಲ್ಲೆಲ್ಲಿ ಕಳಿಸಿದ್ದಾನೆ ಅಲ್ಲಿಂದ ವೆರಿಫಿಕೇಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಇವರು ಏಕೆ ಹೋಗಬೇಕು. Why should these people bother about bringing verification certificate in order to help the private man. They have confessed even before the Public Account Committee that they are after verification certificates. It is a shame on the part of the officers. As on particular date if he is unable to produce you must ask him to pay the duty ಆ ರೀತಿ ಮಾಡಿದರೆ ಸುಮಾರು ೫-೬ ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ ಬರಬೇಕಾಗುತ್ತದೆ. ವೆರಿಫಿಕೇಷನ್ ಸರ್ಟಿಫಿಕೇಟ್ ತರುವುದಕ್ಕೆ ಇವರು ಏಕೆ ಹೋಗಬೇಕು. ವೆರಿಫಿಕೇಷನ್ ಸರ್ಟಿಫಿಕೇಟ್ ಇವರು ಏಕೆ ಹೇಳುವುದಿಲ್ಲ. ಅಂದರೆ This man is hand in glove with the private man ಹೀಗೆ ಒಂದೊಂದು ಬಾಬು ತೆಗೆದುಕೊಂಡರೂ ಕೂಡ ಇಂತಹ ಕೆಲಸಗಳು ಆಗಿರುತ್ತವೆ. ಎರಡನೆಯದು, ಬಹಳ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದು ಅಂದರೆ ನಿನ್ನೆ ದಿವಸ ಒಂದು ಪ್ರಶ್ನೆಗೆ ಮಾನ್ಯ ಜೆ. ಹೆಚ್ ಪಟೇಲರು ಉತ್ತರ ಕೊಟ್ಟಿದ್ದಾರೆ. ಇವತ್ತು ಇದರ ಬಗ್ಗೆ ಮಾತನಾಡುವ ಉದ್ದೇಶವಿದ್ದುದರಿಂದ ಆಗ ನಾನು ಹೇಳಲಿಲ್ಲ ಆಲ್ಕೋಹಾಲ್ ಬೇಸ್ಡ್ ಇಂಡಸ್ಟ್ರೀಸ್ ಬಗ್ಗೆ ಹಿಂದೆ ಚರ್ಚೆಯಾಗಿದೆ. ಒಂದು ತೊಂದರೆ ಏನೆಂದರೆ ಇದು ಇಂಡಸ್ಟ್ರೀಸ್ ಮಿನಿಸ್ಟರಿಗೆ ಸಂಬಂಧಪಟ್ಟಿದ್ದು ಎಂದು ಮಾನ್ಯ ಅಬ್ಕಾರಿ ಸಚಿವರು ಉತ್ತರ ಹೇಳಬಹುದು. ಅಬ್ಕಾರಿ ಸಚಿವರಿಗೆ ಸಂಬಂಧಪಟ್ಟಿದ್ದು ಎಂದು ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಹೇಳಬಹುದು. ಹೀಗಾಗಿ ಅವರನ್ನು ಕೇಳಿದರೆ ಇವರನ್ನು ತೋರಿಸುತ್ತಾರೆ, ಇವರನ್ನು ಕೇಳಿದರೆ ಅವರನ್ನು ತೋರಿಸುತ್ತಾರೆ. ಈ ಪರಿಸ್ಥಿತಿ ಇದೆ. ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಶ್ರೀಮಾನ್ ಜೆ. ಹೆಚ್. ಪಟೇಲರನ್ನು, ಒಂದೆ ಇಷ್ಟು ಕೈಗಾರಿಕೆಗಳು ಇತ್ತು, ನೀವು ಬಂದ ಮೇಲೆ ಏನು ಮಾಡಿದಿರಿ ಎಂದು ಕೇಳಿದರೆ ನನಗೆ

ಗೊತ್ತಿಲ್ಲ ಎಂದು ಹೇಳಿದರು. ಅವರಿಗೆ ಗೊತ್ತಿಲ್ಲದೇ ಇರುವುದಕ್ಕೆ ಸಾಧ್ಯವಿಲ್ಲ. ಆದರೆ ದುರದೃಷ್ಟ ವಶಾತ್ ನನಗೆ ಗೊತ್ತಿದೆ ಒಂದು ವೇಳೆ ನನಗೂ ಗೊತ್ತಿಲ್ಲ ಅವರಿಗೂ ಗೊತ್ತಿಲ್ಲ. ನಿಮಗೂ ಗೊತ್ತಿಲ್ಲ ಅಂದರೆ ಅದು ಬೇರೆ ವಿಚಾರ.

೧೨-೩೦ ಪಿ. ಎಂ.

೧೯೮೨-೮೩ರಲ್ಲಿ ೨೯ ಆಲ್ಕೋಹಾಲ್ ಬೇಸ್ಡ್ ಕೈಗಾರಿಕೆಗಳು ಇದ್ದವು. ಆಗ ಆಲ್ಕೋಹಾಲ್ ಪ್ರಮಾಣ ಕೊಡುತ್ತಿದ್ದುದು ೪೬ಲಕ್ಷ ಲೀಟರ್ ಈಗ ಎಷ್ಟಿದೆ ಎಂದರೆ ನಿನ್ನೆ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದ ಪ್ರಕಾರ ಇವತ್ತು ೭೬ ಕೈಗಾರಿಕೆಗಳು ಇವೆ. ೭೬ರಲ್ಲಿ ೨೯ನ್ನು ಕಳೆದರೆ ಉಳಿದ ಕೈಗಾರಿಕೆಗಳು ಇವರ ಕಾಲದಲ್ಲಿ ಕೊಟ್ಟಿರತಕ್ಕದ್ದು, ಪ್ರಮಾಣ ಎಷ್ಟು ಜಾಸ್ತಿಯಾಗಿದೆ ಎಂದರೆ ಇಂಡಸ್ಟ್ರೀಸ್ ಯೂನಿಟ್ ವೈಸ್? ತೆಗೆದುಕೊಂಡರೆ ೧೯೦ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಆಲ್ಕೋಹಾಲ್ ಅಲೊಕೇಷನ್ ಸುಮಾರು ೧೫೪ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಇದರ ತಾತ್ಪರ್ಯ ಏನೆಂದರೆ the concessional duty of Rs. 2/-, whereas the same would be subjected otherwise to a duty of 12.00 something like that. By this concession of Rs. 2/- ಒಂದು ಲೀಟರ್ ಆಲ್ಕೋಹಾಲ್ ಮೇಲೆ ೧೦ ರೂಪಾಯಿಗಳು ತಕ್ಷಣ ಸಿಗುತ್ತದೆ. ಯಾವುದೇ ಇಂಡಸ್ಟ್ರೀಸ್‌ನ್ನು ಹಾಕಬೇಕಾಗಿಲ್ಲ. ಅವರ ಹೆಸರಿನಲ್ಲಿ ಒಂದು ಕೋಟಾ ಇಟ್ಟು ಕೊಂಡರೆ ೨೫ ಸಾವಿರ ಲೀಟರ್ ಇಟ್ಟುಕೊಂಡರೂ ೨೫x೧೦ ಮಧ್ಯವರ್ತಿಗಳಿಗೆ ಕೊಡುವುದನ್ನು ಕಳೆದರೂ ಸುಮಾರು ೮-೯ ಕೋಟಿ ರೂಪಾಯಿಗಳಿಗೆ ಮೋಸ ಇಲ್ಲದಂತೆ ದುಡ್ಡು ಬರುತ್ತದೆ. ಇವತ್ತು ಒಂದು ಕೋಟಿ ಹದಿನೆಂಟು ಲಕ್ಷ ಲೀಟರುಗಳನ್ನು ಕೊಡುತ್ತಿದ್ದಾರೆ. ನಿನ್ನೆ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡುವಾಗ ಮೇಜರ್ ಪೋರ್ಷನ್ ಇಂಡಸ್ಟ್ರೀಸ್‌ಗಳು ಬೋಗಸ್ ಇವೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿದರು. ಆದರೆ ಒಂದು ಕೋಟಿ ಹದಿನೆಂಟು ಲಕ್ಷ ಲೀಟರ್ ಆಲ್ಕೋಹಾಲ್‌ನಿಂದ ಕಣ್ಣಿಗೆ ಕಂಡಂತೆ ಸುಮಾರು ೧೧ ಕೋಟಿ ರೂಪಾಯಿಗಳು ಲಪಟಾವಣೆಯಾಗುತ್ತಿದೆ. ರಾಜಕಾರಣಿಗಳ ಕಾಲನ್ನು ಹಿಡಿದು ಅಧಿಕಾರಿಗಳನ್ನು ಹಿಡಿದು ಒಬ್ಬರ ಹೆಸರಿನಲ್ಲಿ ಒಂದು ಕೋಟ ತೆಗೆದುಕೊಂಡರೆ ಸಾಕು. ಇದರ ಬಗ್ಗೆ ಸಿ. ಒ. ಡಿ. ಎನ್‌ಕ್ವೈರಿಯಾಯಿತು. ಸಿ. ಒ. ಡಿ. ಅಧಿಕಾರಿಗಳು ಸಂಪೂರ್ಣವಾಗಿ ತನಿಖೆ ಮಾಡಿಲ್ಲ, ಅರ್ಧಂಬರ್ಧ ಮಾಡಿದ್ದಾರೆ. ಅವರು ಕೊಟ್ಟಂತಹ ರಿಪೋರ್ಟ್ ನಮ್ಮ ಹತ್ತಿರ ಇದೆ. ಅವರು ಪರಿಪೂರ್ಣವಾದಂಥ ವಿಚಾರಣೆಯನ್ನು ಮಾಡಲಿಲ್ಲ. Because it is an high level enquiry that was promised on the floor of the House ಹೈಲೆವೆಲ್ ಮಾಡಬೇಕಾಗಿತ್ತು. ಟೆಕ್ನಿಕಲ್ ಜನಗಳು ಬೇಕಿದ್ದರೆ ಅವರು ತೆಗೆದುಕೊಳ್ಳುವುದಕ್ಕೆ ತೊಂದರೆ ಇರಲಿಲ್ಲ. ಸಿ.ಓ.ಡಿ. ಯವರು ಸಮರ್ಪಕವಾಗಿ ವಿಚಾರಣೆ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಆದರೆ ಹಲವಾರು ಕೈಗಾರಿಕೆಗಳು ಮೋಸದಿಂದ ದುರುಪಯೋಗ ಮಾಡಿಕೊಳ್ಳುತ್ತಿವೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ತಮಗೆ ಖುಷಿ ಕಂಡವರಿಗೆ ಕೊಟ್ಟು ಲೆಕ್ಕ ಪತ್ರವನ್ನು ಸರಿಯಾಗಿ ಇಟ್ಟುಕೊಂಡು ಸರ್ಕಾರಕ್ಕೆ ದೊಡ್ಡ ರೀತಿಯಲ್ಲಿ ವಂಚನೆ ಮಾಡುತ್ತಿದ್ದಾರೆ. ಸಿ.ಓ.ಡಿ. ಯವರು ಕೆಲವು ಇಂಡಸ್ಟ್ರೀಸ್‌ಗಳ ಬಗ್ಗೆ ನೇರವಾಗಿ ಪ್ರಸ್ತಾಪ ಮಾಡಿದ್ದಾರೆ. ೭೬ ಇಂಡಸ್ಟ್ರೀಸ್‌ಗಳಲ್ಲಿ ಪ್ಲಾಂಟ್, ಮಿಷಿನರಿ ಯಾವ ಪ್ರಮಾಣದಲ್ಲಿ ಇದೆ ಎಂಬುದನ್ನು ತಿಳಿಸಬೇಕು. ವಿಚಾರಣೆಯ ಸಮಯದಲ್ಲಿ ೮ ಕೈಗಾರಿಕೆಗಳವರು ಮಾತ್ರ ಮಾಹಿತಿಯನ್ನು ಒದಗಿಸಿದ್ದಾರೆ. ಉಳಿದವರು ಕೊಟ್ಟಿಲ್ಲ. ೭೬ ಕೈಗಾರಿಕೆಗಳನ್ನು ತರೋ ಎನ್‌ಕ್ವೈರಿ ಮಾಡಿಸಬೇಕು. ಅಲ್ಲಿರತಕ್ಕ ಮಿಷನರಿ. ಪ್ಲಾಂಟ್. ಪ್ರೊಡಕ್ಷನ್ investment and whether they are preparing the ultimate product, all these things will have to be looked into. ಉತ್ಪಾದನೆ ಮಾಡತಕ್ಕ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಇದೆಯೋ ಉತ್ಪಾದನೆ ಮಾಡಿದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದಾರೋ, ಬಿಡುತ್ತಿದ್ದಾರೋ, ಬೇಕಾದುದು ಇದೆಯೋ. ಬೇಡವಾದುದು ಇದೆಯೋ ಇವೆಲ್ಲವನ್ನೂ ನೋಡಬೇಕಾಗಿದೆ. ಯಾರದೋ ಹೆಸರು ಕೊಟ್ಟು ಅಲಾಟ್ ಮಾಡಿಸಿಕೊಂಡಿದ್ದಾರೆ. ಕೆಮಿಸ್ಟ್ರಿಯಲ್ಲಿ ಇಲ್ಲದೇ ಇರತಕ್ಕ ಹೆಸರುಗಳು ಇವೆ. ಸಿ. ಓ. ಡಿ. ಯಲ್ಲಿ ಇದು ಕಂಡುಬಂದಿದೆ. ರೈಸ್ ಮಿಲ್ ಮಿಷನರಿ ತೋರಿಸಿ ಪಡೆದಿದ್ದಾರೆ. ನಂತರ ಪವರ್ ಇಲ್ಲ. ಜನರೇಟರ್ ಇಲ್ಲ ಎಂದು ಹೇಳಿದ್ದಾರೆ ಇಂಥ ಒಂದು ಅವ್ಯವಸ್ಥೆ ಇರುವಾಗ ಇದು ಸರ್ಕಾರಕ್ಕೆ ಗೊತ್ತಿಲ್ಲವೇ ? ಪ್ರತಿಯೊಂದು ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟಂತೆ ಎಕ್ಸೈಜ್ ಇನ್ಸ್‌ಪೆಕ್ಟರ್ ಇದ್ದಾರೆ. ಅವರು ಏನು

ಮಾಡುತ್ತಿದ್ದಾರೆ. ರಿಪೋರ್ಟಿನ ಏನು ಕೊಟ್ಟಿದ್ದಾರೆ ? He is in good books with those people.

ಅಧ್ಯಕ್ಷರೆ, ನಾನು ಅಧಿಕಾರಿಗಳಿಗೆ ಒಂದು ಪ್ರಶ್ನೆಯನ್ನು ಕೇಳಿದೆ. The Committee wanted to know whether the quantity of rectified spirit consumption is checked with reference to the out put of the industries and quantity as required as per the present report. ಯಾವುದೇ ಒಂದು ಪ್ರಾಜೆಕ್ಟ್‌ಗೆ ಎಷ್ಟು ಕ್ವಾಂಟಿಟಿ ಬೇಕು ಎಂದು ಹೇಳುತ್ತೀರಾ, ಅದನ್ನು ಚೆಕ್ ಮಾಡಿದ್ದೀರಾ ಅಂದರೆ, we got a very interesting reply The Commissioner replied that the departmental staff are not exercising this cheak and it is not included in their job chart. ಅವರನ್ನು ಪೋಸ್ಟ್ ಮಾಡಿದ್ದು ಯಾವ ಕರ್ತವ್ಯ ಕಾಯಲಿಕ್ಕೆ ಎಂದು ನನಗೆ ಅರ್ಥವಾಗಲಿಲ್ಲ, ಅಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿದ್ದಾರೋ, ಇಲ್ಲವೋ ಎಂದು ಅದನ್ನು ನೋಡಲಿಕ್ಕೆ ಅವರನ್ನು ಪೋಸ್ ಮಾಡಿರುತ್ತಾರೆ. No less a person than the Commissioner has deposed before the Public Accounts Commitee to say that this particular work has not been included in the job chart. What is the responsibility? ಯಾವ ಕರ್ತವ್ಯ ಕಾಯಲಿಕ್ಕೆ ಆ ರೆಸ್‌ಪಾನ್‌ಸಿಬಿಲಿಟಿ ಜಾಗದಲ್ಲಿ ಅವರನ್ನು ಪೋಸ್ಟ್ ಮಾಡಿದ್ದೀರಿ. Both the industries and also the staff members and Officers responsible for conniving with them and they should be brought to book and proper action should be initiated against them. ಅಧ್ಯಕ್ಷರೆ, ಈ ರೀತಿ ಇಂಡಸ್ಟ್ರಿಗಳನ್ನು ಕೊಡುತ್ತಾ ಹೋಗಿದ್ದಾರೆ, ಇವರು ಏತಕ್ಕೆ ಆ ರೀತಿ ಕೊಡುತ್ತಾ ಹೋಗಿದ್ದಾರೆ ಅದರ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ತಯಾರಿಲ್ಲ. ಪುಕ್ಕಸಟ್ಟೆ ಯಾರೂ ಇಂಡಸ್ಟ್ರಿ ಕೊಡುವುದಿಲ್ಲ ಎಂದು ಎಲ್ಲರಿಗೂ ಗೊತ್ತು. ಈಗ ಯಾರು ದುಡ್ಡು ಹೊಡೆದಿದ್ದಾರೆ, ಯಾರು ಭ್ರಷ್ಟಾಚಾರ ಮಾಡಿದ್ದಾರೆ ಅದರ ಬಗ್ಗೆ ನಾನೂ ಏನೂ ಹೇಳಲಿಕ್ಕೆ ಹೋಗುವುದಿಲ್ಲ. ಇದರಲ್ಲಿ ಬಹಳ ಸ್ವಚ್ಛ ಆಗಿ ಏನೂ ನಡೆದಿಲ್ಲ. ಈ ಇಂಡಸ್ಟ್ರಿಗಳನ್ನು ಕೊಡುವಾಗ ಮಾನ್ಯ ಜೆ. ಹೆಚ್. ಪಟೇಲರೇ ಕೊಟ್ಟಿರಲಿ ಯಾರೇ ಕೊಟ್ಟಿರಲಿ. ಈಗ ತಮ್ಮ ವರದಿಯಲ್ಲಿ ೨೦ ಇಂಡಸ್ಟ್ರಿಗಳನ್ನು ಜಾಸ್ತಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಮಾನ್ಯ ಪಟೇಲರು ನಾವು ಮಾಡಿದ್ದೇವೆ ಎಂದು ಹೇಳಿದರು. ಈಗ ೮೬ ಪ್ಲಸ್ ೨೦ ಆದರೆ ೧೦೬ ಆಗುತ್ತದೆ. ಅದೇ ೮೬ಕ್ಕೆ ೨೦ ರಿನ್ಯೂ ಮಾಡಿದ್ದರೆ ಅದು ಬೇರೆ.

ಶ್ರೀ ಡಿ. ಬಿ. ಇನಾಂದಾರ್.—ಹೊಸದಾಗಿ ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಕಸ್ಮಾತ್ ಕೊಟ್ಟಿದ್ದರೆ ರದ್ದು ಮಾಡಿ. ಹೊಸದಾಗಿ ಕೊಡಬೇಡಿ ಏಕೆಂದರೆ ಈಗ ಹೊಸದಾಗಿ ಚುನಾವಣೆ ಬಂದರೆ ಅದು ಹೊಸ ಲೆಕ್ಕ ಆದ್ದರಿಂದ, ಕ್ಲೋಸ್ ಮಾಡಿ. ಈಗ ಲೆಕ್ಕವೇ ಕ್ಲೋಸ್ ಆಗುತ್ತಿದೆ ಈಗ ಕ್ಲೋಸ್ ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ನಂತರ ತಮಗೆ ಬೇಕಾದರೆ ನಿಧಾನವಾಗಿ ರಿನ್ಯೂ ಮಾಡಿಕೊಳ್ಳಿ, ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಇನ್ನು ಬೇರೆ ಸಮಸ್ಯೆಗಳ ಬಗ್ಗೆ ತಮ್ಮಲ್ಲಿ ಪ್ರಸ್ತಾಪ ಮಾಡುತ್ತೇನೆ. ಈಗ ಬೀರ್ ಮ್ಯಾನುಫ್ಯಾಕ್ಚರರ್ಸ್‌ಗೆ ಕೂಡ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಾರೆ. ಅದಕ್ಕೆ ಕೆಲವೊಂದು ನಾರಮ್ಸ್ ಇದೆ. ಇಷ್ಟು ರೆಕ್ಟಿಫೈಡ್ ಸ್ಪಿರಿಟ್‌ಗೆ ಎಷ್ಟು ಕ್ವಾಂಟಿಟಿ ಆಫ್ ಬೀರ್ ತಯಾರಾಗಬೇಕೆಂದು ನಾರಮ್ಸ್ ಇದೆ. ಈ ನಾರಮ್ಸ್ ಅಪ್ಲೈ ಮಾಡಿ ಯಾರು ಯಾರು ಕಡಿಮೆ ತೋರಿಸುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಈಗ ಯಾರಾದರೂ ೧೦ ಲೀಟರ್ ಬೀರ್ ತಯಾರು ಮಾಡಿದೆ ಎಂದು ಹೇಳಿದರೆ, ನೀವು ಕೊಟ್ಟಿರತಕ್ಕದ್ದು ೧೫ ಲೀಟರ್ ಬೀರ್ ತಯಾರು ಮಾಡಬೇಕಾದಷ್ಟು ಇದ್ದರೆ, ಈ ೧೫ ಲೀಟರ್‌ಗೆ ವಸೂಲು ಮಾಡಬೇಕಾದುದು ನಿಮ್ಮ ಕರ್ತವ್ಯ.

SRI D. B. INAMDAR —while manufacturing wine they also add spirit into that.

SRI K. H. SRINIVAS —It is not wine You allot molases. whatever you allot, on your allotment they have to produce beer. It is not rectified spirit. it is molases. ಅವರು ಯಾವಾಗಲೂ ಏನು ಮಾಡುತ್ತಾರೆಂದರೆ, ನಿಮ್ಮಿಂದ ಹೆಚ್ಚಿಗೆ ತೆಗೆದುಕೊಂಡು ಅವರು ಕಡಿಮೆ ಪ್ರೊಡಕ್ಷನ್ ತೋರಿಸುತ್ತಾರೆ. ಅವರು ಹೆಚ್ಚಿಗೆ ತಯಾರಿಸಿದರೂ ಕೂಡ ನಿಮಗೆ ಕಡಿಮೆ ಉತ್ಪಾದನೆಯನ್ನೇ ತೋರಿಸುತ್ತಾರೆ. ರಾಮನ ಲೆಕ್ಕ ಕೃಷ್ಣನ ಲೆಕ್ಕ ಎಂದು ಮಾಡಿಕೊಂಡು. ರಾಮನ ಲೆಕ್ಕವನ್ನು ನಿಮಗೆ ತೋರಿಸಿ, ಕೃಷ್ಣನ ಲೆಕ್ಕವನ್ನು ಅವರೇ ಇಟ್ಟುಕೊಂಡು ಅದನ್ನು ಹೆಚ್ಚಿನ ದುಡ್ಡಿಗೆ ಮಾರಾಟ ಮಾಡಿಕೊಳ್ಳುತ್ತಾರೆ. ಈ ವಿಷಯವನ್ನು ನಾವು ಎಳೆಯುತ್ತಾ, ಎಳೆಯುತ್ತಾ ಹೋದರೆ ಅದು ಬೇರೆ ಎಲ್ಲಿಗೋ ಹೋಗುತ್ತದೆ. ಇವರು ನಾರಮ್ಸ್‌ನ್ನು ಏತಕ್ಕೆ ಸಿದ್ಧ ಮಾಡಿಲ್ಲ, ಇವರು ನಾರಂಸ್‌ನ್ನು ಸಿದ್ಧ ಮಾಡಿರಲಿ, ಮಾಡಿಲ್ಲದೇ ಇರಲಿ, ನಾವು ಇಷ್ಟು ಮೊಲ್ಯಾಸಿಸ್‌ನ್ನು ನಿಮಗೆ ಕೊಟ್ಟರೆ ನಿಮ್ಮಲ್ಲಿ ಇಂತಿಷ್ಟು ತಯಾರಾಗಲೇಬೇಕೆಂದು ಹೇಳತಕ್ಕ ಒಂದು ಅಧಿಕಾರ ಇವರಿಗೆ ಇದೆ. ಆ ಅಧಿಕಾರ ಇವರಿಗೆ ಇದ್ದರೂ ಕೂಡ ಅದರಂತೆ ಮಾಡಿಲ್ಲ ಇವರು ಏತಕ್ಕೆ ಈ ನಾರಂಸ್‌ನ್ನು ತಯಾರು ಮಾಡಲಿಲ್ಲ ಎಂದರೆ ಇದಕ್ಕೆ ಸರ್ಕಾರದ ಒಂದು ಡಿಪೆಕ್ಟ್‌ನ್ನು ಹೇಳಿದರು. Technical committee headed by the Excise Commissioner himself. ಈ ಆರ್ಡರ್‌ನಲ್ಲಿ ಇಷ್ಟು ಬಿಯರ್ ಇರಬೇಕೆಂದು ಒಂದು ಆರ್ಡರ್ ಮಾಡಿದ್ದಾರೆ. ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿ ಏನು ಮಾಡಿದ್ದಾರೆಂದರೆ ಮಿನಿಮಂ ಎಂದು ಯಾವ ಜಾಗದಲ್ಲಿ ತೋರಿಸಬೇಕಾಗಿತ್ತೋ ಆ ಜಾಗದಲ್ಲಿ ಮಿನಿಮಮ್ ಎಂಬುದಕ್ಕೆ ಬದಲಾಗಿ ಮ್ಯಾಕ್ಸಿಮಂ ಎಂದು ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಈ ರೀತಿಯ ಒಂದು ಬ್ಲಂಡರ್ ಮಾಡಿದ್ದಾರೆ. For 7 long years the Excise Department and the Secretariat slept over the patently erroneous order which should have been willfully done. ಇದನ್ನು ರೆಕಮೆಂಡ್ ಮಾಡಿದವರು ಯಾರು. Excise Commissioner as head of the technical committee. ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿ ಮಿನಿಮಮ್ ಎಂದು ಇರಬೇಕಾಗಿದ್ದ ಜಾಗದಲ್ಲಿ ಮ್ಯಾಕ್ಸಿಮಂ ಎಂದು ಟೈಪ್ ಮಾಡಿ ಅದನ್ನು 2 ವರ್ಷಕಾಲ ಇಟ್ಟುಕೊಂಡು ಕಣ್ಣು ಮುಚ್ಚಿಕೊಂಡು ಕುಳಿತರೆ ಇವರನ್ನು ಟೆಕ್ನಿಕಲ್ ಪರ್ಸನ್ಸ್ ಎಂದು ಕರೆಯುವುದಕ್ಕಾಗುತ್ತದೆಯೋ ? ಸ್ವಾಮಿ, ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಯಾರು ಮಾಡಿದರೋ ಏನೋ ಗೊತ್ತಿಲ್ಲ. We have not been told that it has been corrected or not. ಈಗಲಾದರೂ ಇದನ್ನು ಸರಿಪಡಿಸಿ ಯಾರು 2 ವರ್ಷಕಾಲ ಇಟ್ಟುಕೊಂಡು ಕಣ್ಣುಮುಚ್ಚಿಕೊಂಡು ಕುಳಿತರೋ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಈ ಮೊಲಾಸಿಸ್ ಉತ್ಪಾದನೆಯಾಗತಕ್ಕದ್ದು ಶುಗರ್ ಫ್ಯಾಕ್ಟರಿಯಲ್ಲಿ. ಆದರೆ ಶುಗರ್ ಫ್ಯಾಕ್ಟರಿಗಳಲ್ಲಿ ಎಷ್ಟು ಮೊಲಾಸಿಸ್ ಉತ್ಪಾದನೆಯಾಗಬೇಕೆಂಬ ಅಂದಾಜೂ ನಿಮ್ಮಲ್ಲಿಲ್ಲ. ಅಥವಾ ಎಷ್ಟು ಉತ್ಪಾದನೆಯಾಗುತ್ತಿದೆ ಎಂಬುದಕ್ಕೂ ನಿಮ್ಮಲ್ಲಿ ಲೆಕ್ಕವಿಲ್ಲ. ಸಮಗ್ರವಾದ ಒಂದು ಸ್ಟೋರೇಜ್ ವ್ಯವಸ್ಥೆ ಕೂಡ ಆಗಿಲ್ಲ. ಖಂಡಸಾರಿಗಳಲ್ಲಿ ಮೊಲಾಸಿಸ್ ಎಷ್ಟು ಉತ್ಪಾದನೆಯಾಗುತ್ತದೆಂದು ನಿಮಗೆ ಗೊತ್ತಿಲ್ಲ ಮತ್ತು ಅಲ್ಲಿ ಉತ್ಪಾದನೆಯಾಗತಕ್ಕದ್ದರ ಮೇಲೂ ಕೂಡ ಯಾವುದೇ ರೀತಿಯ ನಿಮ್ಮ ಕಂಟ್ರೋಲ್ ಇಲ್ಲ. Molases control order is there. Excise Commissioner himself functions as molases controller in the State. ಷುಗರ್ ಫ್ಯಾಕ್ಟರಿಯವರು ಸರ್ಕಾರದ ಗಮನಕ್ಕೆ ತರದೇ ಅವರ ಲೆವೆಲ್‌ನಲ್ಲೇ ಈ ಮೊಲಾಸಿಸ್‌ನ್ನು ಹಲವಾರು ಕಡೆಗಳಿಗೆ ಡೈವರ್ಟ್ ಮಾಡುತ್ತಾರೆ. is the monopoly of the Government.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಿಮಗೆ ಲೆಕ್ಕವನ್ನು ತಪ್ಪಿಸುತ್ತಾರೆ. ಈ ರೀತಿ ಲೆಕ್ಕವನ್ನು ತಪ್ಪಿಸಿದ್ದು ಅದು ಕಳ್ಳಭಟ್ಟಿ ತಯಾರು ಮಾಡಲಿಕ್ಕೆ ಹೋಗುತ್ತದೆ. ಈ ಮೊಲಾಸಿಸ್ ಅವರಿಗೆ ಹೋಗುವುದು ತಪ್ಪಿಸಿದರೆ ನಮ್ಮಲ್ಲಿ ಆಗತಕ್ಕ ಕಳ್ಳಭಟ್ಟಿ ತಯಾರಿಕೆಯೂ ಕೂಡ ನಿಲ್ಲುತ್ತದೆ. ಆದರೆ ನಾನು ಈಗಾಗಲೇ ಹೇಳಿದಂತೆ ಷುಗರ್ ಫ್ಯಾಕ್ಟರಿಗಳಲ್ಲಿ ತಯಾರಾಗತಕ್ಕ ಮೊಲಾಸಿಸ್ ಮೇಲೆ ನಿಮಗೆ ಹತೋಟಿ ಇಲ್ಲ. ಅದರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿಲ್ಲ. ನಿಮ್ಮ ಅಧಿಕಾರಿಗಳು, ಷುಗರ್ ಫ್ಯಾಕ್ಟರಿ ಮಾಲೀಕರು ಯಾರಿದ್ದಾರೆ ಅವರ ಜೊತೆ ಶಾಮೀಲಾಗಿರುವುದರಿಂದ ಈ ರೀತಿ

ಆಗುತ್ತಿದೆ. ಅವರು ಏನು ಕಳ್ಳಭಟ್ಟಿ ವ್ಯವಹಾರದಲ್ಲಿ ಸಂಪಾದನೆ ಮಾಡುತ್ತಾರೆ ಅದರಲ್ಲಿ ನಿಮ್ಮ ಅಧಿಕಾರಿಗಳಿಗೆ ಪಾಲು ಬರುತ್ತದೆ. Most of the sugar factories generate their private funds out of the blackmarketing of molases. ಇದರ ಬಗ್ಗೆ ನಿಮ್ಮ ಸರ್ಕಾರಕ್ಕೆ ಗೊತ್ತಿದ್ದರೂ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಕಣ್ಣುಮುಚ್ಚಿ ಕುಳಿತಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಸೋರಿ ಹೋಗುತ್ತಿದೆ.

ಶುಗರ್ ಮೊಲಾಸಸ್ ಏನು ಮಾಡುತ್ತಾರೆಂದರೆ ನೀವು ಗೌವರ್ನ್‌ಮೆಂಟ್ ಕಂಪೆನಿಗೆ ಅಲಾಟ್‌ಮೆಂಟ್ ಕೇಳಿದರೆ ಅದು ಸಿಕ್ಕುವುದಿಲ್ಲ. ನೋಡಿ ಸತ್ಯ ಹೇಗೆ ಹೊರಗೆ ಬರುತ್ತದೆ. ಮಾನ್ಯ ರಮೇಶ್ ಕುಮಾರ್‌ರವರ ಜೊತೆಯಲ್ಲಿ ನಾನು ಮಾತನಾಡಿದ್ದು ಇಲ್ಲ. ಅವರೂ ಕೂಡ ನನ್ನ ಜೊತೆಯಲ್ಲಿ ಮಾತನಾಡಿದ್ದಿಲ್ಲ. Both of us have arrived at the same conelusion. ಪಿ.ಯು.ಸಿ. ಯವರು ಹೇಳಿರುವುದು ಮೈಸೂರು ಶುಗರ್ ಕಂಪೆನಿಗೆ ಮೊಲಾಸಿಸ್ ಸರ್ಕಾರದವರು ಅಲಾಟ್ ಮಾಡಿದರೂ ಕೂಡ ಅದಕ್ಕೆ ಸಿಗದೆ ಬೇರೆ ಶುಗರ್ ಫ್ಯಾಕ್ಟರಿಗಳಿಗೆ ಅಲಾಟ್‌ಮೆಂಟ್ ಸಿಕ್ಕಿದೆ ಎಂದು. ಶುಗರ್ ಫ್ಯಾಕ್ಟರಿಗಳು ಗೌವರ್ನ್‌ಮೆಂಟ್‌ನಿಂದ ನಡೆಯುತ್ತಿದ್ದರೂ ಪ್ರೈವೇಟ್‌ನವರಿಗೆ ಕೊಡಬೇಕೆಂದು ಮೊಲಾಸಿಸ್ ಕಂಟ್ರೋಲ್ ಆರ್ಡರ್‌ನಲ್ಲಿಲ್ಲ. The molases controller testified before the public Undertaking Committee which has rejected his argument. It was also admitted before the P.U.C. ಅವರು ಸರ್ಕಾರದವರೇ ನಿಗದಿ ಮಾಡಿರತಕ್ಕಂತ ಬೆಲೆಗಿಂತ ಜಾಸ್ತಿ ಕೊಟ್ಟು ತಮಗೆ ಬೇಕಾದ ಎಕ್ಸ್‌ಟ್ರಾ ಕೋಟ ಶುಗರ್ ಫ್ಯಾಕ್ಟರಿಯವರು ಹೊಡೆದುಕೊಂಡು ಹೋಗುತ್ತಾರೆ. ಆದ್ದರಿಂದ ಸರ್ಕಾರಿ ಫ್ಯಾಕ್ಟರಿಯಲ್ಲಿ ಸಿಕ್ಕುವುದಿಲ್ಲ. The private distelleries pay much more than the statutorey regulated prices to get the preferential delivery. ನಾನು ಮಾತ್ರ ಹೇಳಿರುವುದಲ್ಲ. ಪಿ.ಯು.ಸಿ. ಯವರು ಹೇಳಿದ್ದಾರೆ. There is one more thing. That is why I have been saying that the entire corruption in this state has been patronaged. I want to repeat that. ಅದೇ ರೀತಿ ಅವರು ಮುಂದೆ ಹೋಗಿ ಹೇಳಿದ್ದಾರೆ. The Government has actually encouraged the corruption and blackmarketing in this Commodity. The Public Undertaking Committee has come to this conclusion the Chairman of which belongs to the ruling Party. He has come to this conclusion. The Government itself has actually encouraged corruption and black-marketing in this commodity. Further the Committee says in its report as follows ;

> "The Committee is highly disappointed to note that the encouragement given by the Government to the distilleries in private sector in the form of allotment of more rectified spirit for manufacture of IML and lendingablind eye to those distilleries marketing seconds creating stiff competition for the Company's products in the civilian market."

ಕೆಲವು ಡ್ಯೂಟಿಗಳನ್ನು ಅವರೇ ಮಾಡಿದ್ದಾರೆ. ಆದರೆ ಸರ್ಕಾರಕ್ಕೆ ಕೊಡಬೇಕಾದ ಡ್ಯೂಟಿಯನ್ನು ಕೊಡುವುದಿಲ್ಲ. ಸುಮ್ಮ ಸುಮ್ಮನೆ ಸರ್ಕಾರಕ್ಕೆ ನೇರವಾದ ಸಂಬಂಧವಿಲ್ಲದ ನಾನಾ ಡ್ಯೂಟಿಗಳನ್ನು ಅವರು ಮಾಡಿದ್ದಾರೆ. ಆದ್ದರಿಂದ ಪಿ.ಯು.ಸಿ. ಯವರು ಏನು ಹೇಳಿದ್ದಾರೆಂದರೆ, ಮೊಟ್ಟ ಮೊದಲನೆಯ ಕೆಲಸ ಸರ್ಕಾರ ಮಾಡಬೇಕಾದ್ದು ಮೊಲಾಸಿಸ್ ದಾಸ್ತಾನಿನ ಮೇಲೆ ತನ್ನ ನಿಜವಾದ ಹತೋಟಿಯನ್ನು ಪ್ರಾಮಾಣಿಕವಾಗಿ ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲಿಯವರೆಗೆ ಸರ್ಕಾರ ಈ ರೀತಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಬೇರೆ ಯಾವುದನ್ನೂ ಕಂಟ್ರೋಲ್ ಮಾಡಲು ಸಾಧ್ಯವಾಗುವುದಿಲ್ಲ. This nexus between the Department and the private sugar factories so far as molases is concerned has to be broken first.

ಅದನ್ನು ಕಂಟ್ರೋಲ್‌ಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಂತ್ತದೆಂದರೆ ಅದಕ್ಕೆ ಸರ್ಕಾರ ಮನಸ್ಸು ಮಾಡ ಬೇಕು ಈಗ ಸರ್ಕಾರಕ್ಕೆ ಆ ಮಾನಸ್ಸಿಲ್ಲ. ಈಗ ಮೊಲಾಸಿಸ್ ಸ್ಟೋರೇಜ್ ಮಾಡುವ ವಿಚಾರ ದಲ್ಲಿಯೂ ಕೂಡ ನಿಜವಾದಂಥ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿರುವುದ ರಿಂದ ಇಷ್ಟೊಂದು ಲುಕ್ಸಾನಾಗುತ್ತಿದೆ. Due to lack of storage facilities molases could not be utili ed and as such there is huge loss. This is the conclusion of the P.U.C. ಇದರಲ್ಲಿ ಅರ್ಥ ವೇಸ್ಟ್ ಎಂದು ತೋರಿಸಿ ಅರ್ಥ ತಾವೇ ಲಪಟಾಯಿಸುತ್ತಾರೆ. ಒಟ್ಟಿನಲ್ಲಿ ಲುಕ್ಸಾನಂ ಆಗಿದೆ. ಲುಕ್ಸಾನು ಎಷ್ಟಾಗಿದೆ ಎಂಬುದನ್ನು ಲೆಕ್ಕ ಹಾಕಿದರೆ ೨೦ ಕೋಟಿ ೫೬ ಲಕ್ಷ ರೂಪಾಯಿ. ಇಷ್ಟೊಂದು ಹಣ ಸೋರಿಹೋಗುತ್ತಿದೆ. This is the conclusion of the Public Accounts Committee. ಅಂದಾಗ ಅಲ್ಲಿ ಪರಿಣಾಮ ಕಾರಿಯಾದ ಕ್ರಮವನ್ನು ತೆಗೆದುಕೊಂಡರೆ ಏನಾಗಬಹುದೆಂಬುದನ್ನು ತಾವು ಯೋಚಿಸಬಹುದು. ಇನ್ನು ಡಿಸ್ಟಿಲರೀಸ್‌ಗೆ ಕೂಡ ಕೆಲವು ನಾರ್ಮ್ಸ್ ಇದೆ. ಒಂದು ಟನ್ ಮೊಲಾಸೆಸ್‌ಗೆ ಇಷ್ಟು ರೆಕ್ಟಿಫೈಡ್ ಸ್ಪಿರಿಟ್ ತಯಾರಾಗಬೇಕೆಂಬ ನಾರ್ಮ್ಸ್ ಇದೆ. ಇದು ಸರ್ಕಾರವೇ ಅಧಿಕೃತಗೊಳಿಸಿರುವ ನಾರ್ಮ್ಸ್, ಟೆಕ್ನಿಕಲ್ ಕಮಿಟಿ ಅಧ್ಯಯನ ಮಾಡಿ ಗೊತ್ತುಪಡಿಸಿರುವ ನಾರ್ಮ್ಸ್. Excise Commissioner is the Head of the Technical Committee and he has fixed the norms and the Government has approved these norms. ಈ ನಾರ್ಮ್ಸ್ ಅನ್ನು ಅಪ್ಲೈ ಮಾಡಿದಾಗ ಆ ಪ್ರಕಾರ ಡಿಸ್ಟಿಲರೀಸ್ ರೆಕ್ಟಿಫೈಡ್ ಸ್ಪಿರಿಟ್ ಅನ್ನು ತಯಾರು ಮಾಡಿಲ್ಲದೇ ಹೋದರೆ ಅದರ ಜವಾಬ್ದಾರಿ ಡಿಸ್ಟಿಲರೀಸ್ ಮೇಲೆ ಬರಬೇಕು. ೧೯೮೦ರಿಂದ ಅದರ ಚಿತ್ರವನ್ನು ತೆಗೆದುಕೊಂಡರೆ ೧೯೮೦-೮೧, ೧೯೮೧-೮೨ ಮತ್ತು ೧೯೮೨-೮೩ರಲ್ಲಿ the yield of the rectified spirit in the distilleries concerned exceeded the norms. ೧೯೮೦-೮೧ರಲ್ಲಿ ಮಾತ್ರ ಸ್ವಲ್ಪ ಪ್ರಮಾಣ ಲುಕ್ಸಾನಾಗಿದೆ. ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ ಈ ಮೂರು ವರ್ಷಗಳಲ್ಲಿ ಯಾವ ರೀತಿ ಈ ಬಾಬಿನಲ್ಲಿ ಸರ್ಕಾರಕ್ಕೆ ಏರುತ್ತಾ ಹೋಗಿದೆ ಎಂದರೆ ವಿಷ ಏರಿದ ಹಾಗೆ ಏರಿದೆ. ಆದರಿಂದ ಸರ್ಕಾರಕ್ಕೆ ಆಗಿರುವ ಲುಕ್ಸಾನು ೩೭ ಕೋಟಿ ೬೪ ಲಕ್ಷ ರೂಪಾಯಿಗಳು. ೧೯೮೦-೮೧ರಲ್ಲಿ ಲಾಸ್ ಆಫ್ ಡ್ಯೂಟಿ ಎಷ್ಟಾಯಿತೆಂದರೆ ೧,೯೭,೪೯,೩೪೬ ರೂಪಾಯಿಗಳು. ೧೯೮೧-೮೨, ೧೯೮೨-೮೩ರಲ್ಲಿ there was no shortfall according to norms. ಅಲ್ಲಿಂದ ಶುರುವಾಯಿತು, ತಮ್ಮ ಯುಗ. ೧೯೮೩-೮೪ರಲ್ಲಿ shortfall in terms of loss of duty is Rs. 8,94,26,884, ಮುಂದಿನ ವರ್ಷ ಅಂದರೆ ೧೯೮೪-೮೫ರಲ್ಲಿ ಲಾಸ್ ಸ್ವಲ್ಪ ಕಡಿಮೆ ಆಯಿತು, ಅಂದರೆ ೬,೯೬,೧೫,೩೪೧ ರೂಪಾಯಿಗಳಾಯಿತು. ಆದರ ನಂತರ ೧೯೮೫-೮೬ಕ್ಕೆ ಮೇಲಕ್ಕೆ ಹೋಯಿತು. ೧೯,೭೬,೫೨,೬೪೩ ರೂಪಾಯಿಗಳಿಗೆ ಏರಿತು. ಒಟ್ಟು ೩೭,೬೪,೪೪,೧೮೪ ರೂಪಾಯಿಗಳು ನಷ್ಟವಾಯಿತು. ಇದಕ್ಕೆ ಎಕ್ಸ್‌ಪ್ಲನೇಷನ್ ಕೇಳಿದರೆ all sorts of fals, explanations are given before the Public Accounts Committee. ಒಬ್ಬೊಬ್ಬ ಅಧಿಕಾರಿ ಒಂದೊಂದು ರೀತಿಯಲ್ಲಿ ತಮಗೆ ಹೇಗೆ ಅನ್ನಿಸುತ್ತದೆ ಆ ರೀತಿಯಲ್ಲಿ ಇದರ ಬಗ್ಗೆ ಎಕ್ಸ್‌ಪ್ಲನೇಷನ್ ಕೊಟ್ಟುಕೊಂಡು ಹೋಗಿದ್ದಾರೆ. ಆದ್ದರಿಂದ ಇದರ ಬಗ್ಗೆ ತಾವು ಸರಿಯಾದ ಇನ್‌ವೆಸ್ಟಿಗೇಷನ್ ಮಾಡಿಸಬೇಕು ಇದರಲ್ಲಿ ಏನಾಗಿದೆ ಎಂದರೆ ಇದು ನಿಜವಾಗಿ ಲಾಸ್ ಆಗಿದ್ದಲ್ಲ. ಎಷ್ಟು ಮೊಲಾಸೆಸ್‌ಗೆ ಎಷ್ಟು ರೆಕ್ಟಿಫೈಡ್ ಸ್ಪಿರಿಟ್ ಆಗಬೇಕೆಂದು ಇದೆ ಅದು ತುಂಬಾ ಲಿಬರಲ್ ಆಗಿ ತಯಾರಿಸಿರತಕ್ಕ ಕೋಷ್ಟಕ. ಸಾಕಷ್ಟು ತಂತ್ರಜ್ಞಾನ ಇಲ್ಲದೇ ಇರತಕ್ಕ ಜನರು ಸೇರಿಕೊಂಡು ಸಿದ್ಧಪಡಿಸಿರುವ ಕೋಷ್ಟಕ. ಆದ್ದರಿಂದ ಇದು ಸಾಕಷ್ಟು ತಯಾರಾಗಲಿಲ್ಲ ಎಂದು ಅಲ್ಲ, ತಯಾರಾಗಿದೆ, ಪ್ರೈವೇಟ್ ಆಗಿದೆ. ಇದರಿಂದ ನೀವು ಸೆಕೆಂಡ್ಸ್ ಎಂದು ಏನು ಹೇಳುತ್ತೀರಿ ಅದೆಲ್ಲ ತಯಾರಾಗಿದೆ, ಅವರ ಲಾಭ ಎಲ್ಲೆಲ್ಲಿ ಹಂಚಿಕೆಯಾಗಬೇಕೋ ಅಲ್ಲಲ್ಲಿ ಹಂಚಿಕೆಯಾಗಿದೆ. ಇದರ ಜವಾಬ್ದಾರಿಯನ್ನು ಸರ್ಕಾರ ಹೊರಲೇಬೇಕು, ನನ್ನದಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ೧೯೮೫-೮೬ರಲ್ಲಿ ಇದ್ದಕ್ಕಿದ್ದಂತೆ ೧೯ ಕೋಟಿ ರೂಪಾಯಿಗಳಷ್ಟು ಲಾಸ್ ಆದರೆ ಏನನ್ನಬೇಕು ?

ಇದು ಯಾರು ಯಾರಿಗೋ ಆಗಿರುವ ಲಾಭವೇ ಹೊರತು ಬೇರೆ ಏನೂ ಅಲ್ಲ. ಸರ್ಕಾರಕ್ಕೆ ಆಗಿರುವ ಲುಕ್ಸಾನು, ಬೇರೆಯವರಿಗೆ ಆಗುವ ಲಾಭ. ಇದರ ಜವಾಬ್ದಾರಿ ಸರ್ಕಾರ ಹೊರ ಬೇಕಾಗುತ್ತದೆ. ನಿಮ್ಮ ಮೇಲೆ ಅಪವಾದ ಬರಬಾರದು ಅಂದರೆ ಇನ್ನೊಬ್ಬರು ಇದಕ್ಕೆ ಜವಾಬ್ದಾರಿ

ಎಂದು ಹೇಳಬೇಕು. ಇಲ್ಲದೇ ಹೋದರೆ ಸರ್ಕಾರವೂ ಶಾಮೀಲಾಗಿದೆ ಎಂದು ಆರೋಪ ಮಾಡದೇ ವಿಧಿ ಇಲ್ಲ, ಇದಕ್ಕೆ ತಾವು ಉತ್ತರ ಕೊಡದೇ ಇರುವುದಕ್ಕೂ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಈವರೆಗೆ ಹೇಳಿದ್ದು ಕೇವಲ ಸ್ಯಾಂಪಲ್ ವಿಚಾರಗಳು. ನಾನು ಎಲ್ಲಾ ಹೇಳುತ್ತಾ ಹೋದರೆ ಮೂರು ಹಗಲು, ಮೂರು ರಾತ್ರಿ ಆದರೂ ಸಾಲುವುದಿಲ್ಲ, ನನಗೆ ಅವಕಾಶ ಕೊಟ್ಟರೆ ಎಕ್ಸೈಜ್ ಇಲಾಖೆಯಲ್ಲಿ ಎಷ್ಟು ಹುತ್ತುಗಳಿವೆ, ಹುತ್ತಗಳೊಳಗೆ ಹಾವುಗಳು ಎಷ್ಟಿವೆ ಎಂಬುದನ್ನು ಹೇಳಬಲ್ಲೆ, ಚಿಲ್ಲರೆಪಲ್ಲರೆ ಭ್ರಷ್ಟಾಚಾರಗಳು ಬೇಕಾದಷ್ಟಿವೆ. ಅದು ಲೆಕ್ಕಕ್ಕೇ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಮೇಜರ್ ವಿಚಾರಗಳನ್ನು ಸರಿಪಡಿಸಿದರೆ ನಾವು ಯಾವ ದಾರಿಯಲ್ಲಿ ಹೋಗಬೇಕು ಎಂಬುದನ್ನು ಚಿಂತನೆ ಮಾಡಬಹುದು. ನಾನು ಮೊದಲೇ ಹೇಳಿದಂತೆ ಇದರಲ್ಲಿ ಅಧಿಕೃತ ಮತ್ತು ಅನಧಿಕೃತದ ಸಹಬಾಳ್ವೆ ಇದೆ. ಯಾರುಯಾರು ಅಧಿಕೃತವಾಗಿ ಈ ಉದ್ಯೋಗ ನಡೆಸುತ್ತಿದ್ದಾರೋ ಅವರಲ್ಲಿ ಬಹುಪಾಲು ಜನರು ಅನಧಿಕೃತವಾಗಿಯೂ ನಡೆಸುತ್ತಿದ್ದಾರೆ. ಇದಕ್ಕೆ ಸರ್ಕಾರದ ಬೆಂಬಲ ಮತ್ತು ಪೋಷಣೆ ಇದೆ. ಯಾವುದಾದರೂ ಪ್ರಕರಣದ ಹೊಟ್ಟೆ ಸೀಳಿದರೆ ತಕ್ಷಣ ಅದು ನಮಗೆ ಕಾಣುತ್ತದೆ. ಹೊಸದಾಗಿ ಯೋಚನೆ ಮಾಡಬೇಕಾದ ಅಗತ್ಯವಿಲ್ಲ, ಆದರೆ ಸರ್ಕಾರ ಅದನ್ನು ಮಾಡುತ್ತಿದೆ. I am not bothered about what the politicians are making or the officials are making. ಸರ್ಕಾರಕ್ಕೆ ಬೇಕಾಗಿರುವುದು ಏನೆಂದರೆ ಈ ಬಾಬಿನಿಂದ ಜಾಸ್ತಿ ಹಣ ಬರಬೇಕು ಎಂಬುದು. ಏನಾದರೂ ಆಗಲಿ ಹಣ ಬರಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕೆ ಇರುವುದರಿಂದ ತುಂಬಾ ದೊಡ್ಡ ದುರಂತಕ್ಕೆ ಅವಕಾಶ ಆಗುತ್ತಿದೆ. ಪ್ರತಿಯೊಂದು ಪದಾರ್ಥ ಅಡಲ್ಟರೇಟ್ ಆಗುತ್ತಿದೆ. ಸೇಂದಿ ಅಡಲ್ಟರೇಷನ್ ಆಗುತ್ತಿದೆ ಎಂದು ಇವತ್ತು ಹೇಳಿದರು. ಅದಕ್ಕಾಗಿ ಏನೋ ಪರಾಕ್ರಮ ಮಾಡಿದ್ದೀರಿ. ಇದನ್ನು ಸದುದ್ದೇಶದಿಂದ ಮಾಡಿದ್ದೀರಿ ಎಂಬ ನಂಬಿಕೆ ನನಗಿಲ್ಲ. ಆದರೆ ನಿಮ್ಮ ದುರುದ್ದೇಶ ಏನು ಎಂಬುದೂ ಅರ್ಥ ಆಗಿಲ್ಲ. ಸದುದ್ದೇಶ ಇದ್ದರೆ ಅರಾಕ್ ಬಹಳ ಥರೋ ಇದೆ ಎಂದು ಹೇಳುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ನೀವು ಯಾವಾಗ ರುಚಿ ನೋಡಿದಿರಿ ?

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ರುಚಿ ನೋಡಿದೆ ಅಂತಲೇ ಇಟ್ಟುಕೊಳ್ಳಿ. ಅಧ್ಯಯನ ಮಾಡುವುದಕ್ಕೋಸ್ಕರ ಮಾಡಿದರೂ ತಪ್ಪಿಲ್ಲ. ಶಂಕರಾಚಾರ್ಯರಿಗೆ ಒಂದು ವಿಷಯ ಗೊತ್ತಾಗದೇ ಇದ್ದಾಗ ಪರಕಾಯ ಪ್ರವೇಶ ಮಾಡಿ ತಿಳಿದುಕೊಂಡರಂತೆ. ಹಾಗೆ ನಾನೂ ಕೂಡ ತಿಳಿದುಕೊಳ್ಳುವ ದೃಷ್ಟಿಯಿಂದ ಮಾಡಿದರೆ ತಪ್ಪಿಲ್ಲ. ನನಗೇನೂ ಮಡಿವಂತಿಕೆ ಇಲ್ಲ. ಹೆಂಡ ಕುಡಿಯುವುದು ತಪ್ಪು ಎಂದು ಹೇಳುವುದಿಲ್ಲ. ನಾನು ಮಹಾತ್ಮ ಗಾಂಧೀನೂ ಅಲ್ಲ, ಕುಡುಕನೂ ಅಲ್ಲ. ಜೀವನದ ಯಾವುದೇ ಪ್ರಯತ್ನಗಳಿಗೂ ನನ್ನ ವಿರೋಧ ಇಲ್ಲ. ಆದರೆ ಜೀವನ ಮಾಡುವುದರ ಜೊತೆಗೆ ಆ ಪ್ರಯತ್ನದಿಂದ ತಕ್ಷಣವೇ ಸಾವು ಬರುವಂತಿದ್ದರೆ ? ಇನ್ನೂ ಮುಂದಕ್ಕೆ ಹೋಗಿ ಹೇಳಬಲ್ಲೆ. ಜೀವನದ ಪ್ರತಿಯೊಂದು ಕ್ಷಣವೂ ಸಾವಿನ ಕಡೆಗೆ ಹಾಕುವ ಹೆಜ್ಜೆ ಎಂದು ಹೇಳುತ್ತಾರೆ. ಮರಣವನ್ನು ಯಾರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಹೆಜ್ಜೆ ಹಾಕುವಾಗ ಒಂದೇ ಸಾರಿ ಸಾವನ್ನು ಅಪ್ಪಿಕೊಳ್ಳುವ ದುರವಸ್ಥೆ ಬೇಡ. ನನಗೆ ಈ ವಿಷಯಗಳಲ್ಲಿ ಮಡಿವಂತಿಕೆ ಇಲ್ಲ. ಪ್ರೊಹಿಬಿಷನ್ ತನ್ನಿ ಎಂದು ಹೇಳುತ್ತಿಲ್ಲ. ಕೆಲವರಿಗೆ ಕುಡಿಯುವುದು ಅನಿವಾರ್ಯವಾಗಿದೆ, ಅದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಆದರೆ ಸರ್ಕಾರದ ಜವಾಬ್ದಾರಿ ಏನು ? ಸರ್ಕಾರದ ಜವಾಬ್ದಾರಿ ಏನೆಂದರೆ ನಿಜವಾಗಿಯೂ ಕುಡಿಯುವುದಕ್ಕೆ ಯೋಗ್ಯವಾದ ಪದಾರ್ಥ ಜನರಿಗೆ ಸಿಗುವಂತೆ ನೋಡಿಕೊಳ್ಳಬೇಕು. ಅವರ ಹೊಟ್ಟೆಯ ಮೇಲೆ ಹೊಡೆಯುವಂತಹ, ಅವರ ಜೀವ ತೆಗೆಯುವಂತಹ ಪದಾರ್ಥ ಆದಾಗದಂತೆ ನೋಡಿಕೊಳ್ಳಬೇಕಾದ್ದು ಸರ್ಕಾರದ ಜವಾಬ್ದಾರಿ. ಸರ್ಕಾರ ಮನಾಪಲಿ ಮಾಡುತ್ತೇವೆ ಎಂದರೆ ಅದು ಕಷ್ಟ. ಹಾಗೆ ನೋಡಿದರೆ ನೀರೂ ಕೂಡ ಎಲ್ಲರಿಗೂ ಬೇಕಾದ ವಸ್ತು. Under law, all water belongs to Government. ನಾಳೆ ಅದಕ್ಕೂ ಗೌರ್ನಮೆಂಟ್ ವೇರ್ ಹೌಸ್ ಮಾಡಿ ಟ್ಯಾಕ್ಸ್ ಹಾಕಿದರೆ ಅದರಿಂದಲೂ ೨೦ ಸಾವಿರ ಕೋಟಿ ರೂಪಾಯಿ ಒಂದು ವರ್ಷಕ್ಕೆ ಬರಬಹುದು. ಅದನ್ನು ಸರ್ಕಾರ ಮಾಡುತ್ತದೆಯೇ ? ಈ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಏನು ಎಂಬ ಬಗ್ಗೆ ಗಮನ ಹರಿಸಬೇಕು. ಇವತ್ತು ಪ್ರತಿಯೊಂದೂ ಅಡಲ್ಟರೇಟ್ ಆಗಿದೆ. ಇಂಡಿಯನ್ ಮೇಡ್ ಲಿಕ್ಕರ್ ಅಡಲ್ಟರೇಟ್ ಅಲ್ಲವೆ ? ಮೊದಲು ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್ ಎಂದು ಹೇಳುತ್ತಿದ್ದರು. ಈಗ ಏಕೋ ಇಂಡಿಯನ್ ಮೇಡ್ ಲಿಕ್ಕರ್ ಎಂದು ಹೇಳುತ್ತಿದ್ದಾರೆ. ಬ್ರಾಂದಿ, ವಿಸ್ಕಿ, ಜಿನ್

ಯಾವುದೂ ಶುದ್ಧ ಇಲ್ಲ. ಬ್ರಾಂದಿ, ವಿಸ್ಕಿ, ಜಿನ್ ಅಲ್ಲ ಅದು. Rectified spirit double distilled alcohol ಮತ್ತು ಒಂದು ಪರ್ಸೆಂಟ್ ಎಸೆನ್ಸ್ ಅಷ್ಟೆ. ಪ್ರತಿಯೊಂದಕ್ಕೂ ಇಷ್ಟಿಷ್ಟೇ ಪ್ರೂಫ್ ಇರಬೇಕೆಂದಿದೆ. ಲಂಡನ್ ಪ್ರೂಫ್ ಅಂದರೆ ಇಷ್ಟು ಆಲ್ಕೋಹಾಲ್ ಇರಬೇಕು ಇಷ್ಟಿದ್ದರೆ ಅದು ಯೋಗ್ಯ ಎಂದು ಇದೆ,

೧-೦೦ ಪಿ. ಎಂ.

ಅದಕ್ಕಿಂತಲೂ ಕಡಿಮೆ ಅಂಡರ್ ಪ್ರೂಫ್ ಆಗುತ್ತಾ ಹೋದರೆ it is considered not a potable drink but every bottle of so called Indian made liquor or Indian made Foreign Liquor is certinly under proof and it is to the knowledge of Excise Department Officers in every distillery. ಇವರಿಗೂ ಗೊತ್ತಿದೆ. ಎಕ್ಸೈಸ್ ಇನ್ಸ್‌ಪೆಕ್ಟರಿಗೆ ಕಾರು ಕೊಡುತ್ತಾರೆ. ತಿಂಗಳಿಗೆ ಇಷ್ಟು ಹಣ ಎಂದು ಕೊಡುತ್ತಾರೆ. ಒಂದು ಸಾರಿ ಬಂದು ಸರ್ಟಿಫೈ ಮಾಡುತ್ತಾರೆ. Under proof is the technique of adulteration of Indian made Liquor and Chloral-bydrate is the adulteration technique for Toddy. ಇದೆಲ್ಲಾ ಸರ್ಕಾರಕ್ಕೆ ಗೊತ್ತಿದ್ದರೂ ಕೂಡಾ ತಮಗೆ ಆದಾಯ ಬರಬೇಕೆಂಬ ಒಂದೇ ಹುಚ್ಚಿನಲ್ಲಿ ಇದನ್ನು ಶೋಷಣೆ ಮಾಡುತ್ತಾ ಬಂದಿದೆ. ಈಗ ಶೇಂದಿ ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಇವತ್ತಿನ ದಿವಸ ನಾವು ಏನು ಮಾಡಬೇಕೆಂಬುದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡತಕ್ಕ ಸ್ಥಿತಿಗೆ ನಾವು ತಲುಪಿದ್ದೇವೆ. ಇದರಲ್ಲಿ ಬದಲಾವಣೆ ಆಗದಿದ್ದರೆ ನಮ್ಮೆಲ್ಲರ ಮೇಲೆ ಪರಿಣಾಮ ಬೀರುತ್ತದೆ. ಆಮೇಲೆ ಆಗುವ ದುರಂತದಲ್ಲಿ ನಾವೆಲ್ಲರೂ ಭಾಗಿಗಳಾಗ ಬೇಕಾಗುತ್ತದೆ. ಆದ್ದರಿಂದ ಈ ಕುಡಿತದ ಬಗ್ಗೆ ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಎಂದು ನಾನು ನನ್ನ ನಿರ್ಣಯದಲ್ಲಿ ಹೇಳಿದ್ದೆ. ಅದಕ್ಕೆ ಈ ಸರ್ಕಾರದವರು ಮನ್ನಣೆ ಕೊಟ್ಟು ನನ್ನ ನಿರ್ಣಯವನ್ನು ಸರ್ವಾನುಮತದಿಂದ ಪಾಸ್ ಮಾಡಿದರು. ಆದರೆ ಅದರ ಮೇಲೆ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ, ಏನೋ ಈತನ ಕಾಟ ತಪ್ಪಿಸಿಕೊಳ್ಳಬೇಕೆಂದು ಈ ರೀತಿ ಮಾಡಿದರೋ ಏನೋ ಗೊತ್ತಿಲ್ಲ. ನಾನು ಹೇಳುತ್ತಿದ್ದೇನೆ. I am not interested in the corruption charges. I am not interested in what is going on in Excise, though I fully know what is going on. ಆದರೆ ಅದರಲ್ಲಿ ಅಲ್ಲ ನನಗೆ ಆಸಕ್ತಿ ಇರತಕ್ಕದ್ದು. ಜನರ ಪರವಾಗಿ ಯೋಚನೆ ಮಾಡಬೇಕೆಂದು ನಾನು ಇಷ್ಟು ಶಂಖ ಹೊಡೆಯುತ್ತಿದ್ದೇನೆ. ನೀವು ಎಷ್ಟೇ ದುಡ್ಡು ಮಾಡಿ, ಆದರೆ ಜನರ ಗತಿ ಏನು ? ಬೇಕಿದ್ದರೆ ಆ ಜನರ ಜೇಬಿಗೆ ನೀವು ಕೈಹಾಕಿ, ಆತನ ರಕ್ತವನ್ನು ಹೀರಬೇಡಿ ಎಂಬುದೇ ನನ್ನ ಕಳಕಳಿ. ಹ್ಯೂಜ್ ಟ್ರಾಜಿಡಿ ಆದಂತಹ ಸಂದರ್ಭದಲ್ಲಿ ದೇಸಾಯಿ ಕಮಿಷನ್ ನೇಮಕ ಮಾಡಲಾಯಿತು. ಅವರು ಅದರಲ್ಲಿ ಹಲವಾರು ರೆಕಮೆಂಡೇಷನ್ಸ್ ಮಾಡಿದ್ದಾರೆ. ಆ ರೆಕಮೆಂಡೇಷನ್ಸ್‌ನ್ನು ಮಾನ್ಯ ಅಬಕಾರಿ ಮಂತ್ರಿಗಳು ಓದಿದ್ದಾರಾ ? ಏಕೆಂದರೆ, the copies are not available. There is only one copy available in the library. Every time, I borrow and give them back. ಇನ್ನು ಬಾಟ್ಲಿಂಗ್ ಏಕೆ ಮಾಡಿದಿರಿ ? ದೇಸಾಯಿ ಕಮಿಷನ್ ಅವರು ರೆಕಮೆಂಡ್ ಮಾಡಿದರು ಎಂದು ಬಾಟ್ಲಿಂಗ್ ಮಾಡಿದ್ದೇವೆಂದು ಹೇಳುತ್ತೀರಿ. ದೇಸಾಯಿ ಕಮಿಷನ್‌ನವರು ಹೇಳಿದ್ದು ಏನು ? ನೀವು ಮಾಡಿದ್ದು ಏನು ? ಈಗ ಶೇಂದಿ ರದ್ದು ಮಾಡಿದ್ದೀರಿ. ದಲಿತ ಸಂಘರ್ಷ ಸಮಿತಿಯವರು ಹೇಳಿದರು, ಅದಕ್ಕೋಸ್ಕರ ಮಾಡಿದ್ದು ಎಂದು ಹೇಳುತ್ತೀರಿ. ದಲಿತ ಸಂಘರ್ಷ ಸಮಿತಿಯವರು ಏನು ಹೇಳುತ್ತಿದ್ದಾರೆ ಎಂದು ನನಗೆ ಗೊತ್ತು. ನನಗೂ ಅವರಿಗೂ ನಿಕಟ ಪರಿಚಯ ಇದೆ. ನಮ್ಮ ಜನರಿಗೆ ಹೆಂಡ ಕುಡಿಸಬೇಡಿ ಎಂದು ಹೇಳಿದರು. ಅವರ ಅರ್ಥದಲ್ಲಿ ಹೆಂಡ ಎಂದರೆ ಮದ್ಯಪಾನ ಎಂದು. ಸ್ಕಾಚ್ ಇರಲಿ, ಬೀರ್ ಇರಲಿ, ಬ್ರಾಂದಿ ಇರಲಿ ಏನೇ ಕುಡಿದರೂ ಹೆಂಡ ಕುಡಿಯುತ್ತಾರೆ ಎಂದೇ ಅವರು ಹೇಳುವುದು. ಅವರು ಹೇಳಿದ್ದು, ನಮ್ಮ ಜನರಿಂದ ಹೆಂಡ ಬಿಡಿಸಿ ವಸತಿ ಶಾಲೆ ಕೊಡಿ, ನಮ್ಮ ಜನರಿಗೆ ವಿದ್ಯೆ ಕಲಿಸಿ ಎಂದು. ಇವತ್ತು ಶೇಂದಿ ಬಂದ್ ಮಾಡಿ. ಅದು ನಿಮ್ಮ ಪರಾಕ್ರಮ ಎಂದರೆ ಅದು ಖಂಡಿತಾ ಅಲ್ಲ. ದಲಿತ ಸಂಘರ್ಷ ಸಮಿತಿಯವರ ನಿಕಟ ಸಂಪರ್ಕ ನನಗೆ ಇದೆ. ನಾನು ಅವರ ಜೊತೆ ಮಾತನಾಡಿದ್ದೇನೆ. ಅವರು ಹೇಳುತ್ತಾ ಇರುವುದಕ್ಕೂ ನೀವು ಹೇಳುವುದಕ್ಕೂ ಏನೂ ಸಂಬಂಧ ಇಲ್ಲ. ದೇಸಾಯಿ ಸಮಿತಿಯವರ ಶಿಫಾರಸ್ಸುಗಳ ತಾತ್ಪರ್ಯ ಏನು?

ಇವತ್ತಿನ ದಿವಸ ಅವರು ಬೆಲೆಯನ್ನು ಕಡಿಮೆ ಮಾಡಿ ಎಂದು ಹೇಳಿದರೆ, ನೀವು ಈಗಿರುವ ಬೆಲೆಗೆ ಮತ್ತೆ ಸೇರಿಸಿ ಬಾಟ್ಲಿಂಗ್ ವ್ಯವಸ್ಥೆ ತಂದು ಹೊಸ ಕಂಟ್ರಾಕ್ಟರಿಗೆ ಅನುಕೂಲ ಮಾಡಬೇಕೆಂದು ಹೊರಟಿರಿ. ಇದನ್ನು ಅವರು ಹೇಳಿದರೇ ? ಜಸ್ಟೀಸ್ ದೇಸಾಯಿಯವರು ಏನು ಹೇಳಿದ್ದಾರೆಂಬುದನ್ನು ನೋಡಿ.

Mr. Justice Desai on Page 43 in his Report has said thus :

"There should be a national tax and Price policy. The idea that if prices of liquor are kept high, then the demand for liquor will be kept within bounds is a misguided one".

ಇಲ್ಲಿ ಎಷ್ಟೋ ಸಂದರ್ಭದಲ್ಲಿ ಏಕೆ ಇಷ್ಟು ರೇಟ್ ಮಾಡುತ್ತೀರಿ ಎಂದರೆ ? ಹೆಚ್ಚು ಬೆಲೆ ಮಾಡಿದರೆ ಕುಡಿಯುವುದನ್ನು ಕಡಿಮೆ ಮಾಡುತ್ತಾರೆ ಎಂದು ಹೇಳುತ್ತೀರಿ.

To discourage drinking, it is a most hypocratic answer for a Government to say like that, However, they have given this answer for number of times on the floor of the House. Mr. Justice Desai has clearly said that this is a misguided idea. ರೇಟ್ ಜಾಸ್ತಿ ಮಾಡಿದ ಹಾಗೆ ಕುಡಿತ ಕಡಿಮೆಯಾಗುವುದಿಲ್ಲ ಅಂತ ಅವರು ಹೇಳಿದ್ದಾರೆ. ಆದರೆ ವಾಸ್ತವ ಸಂಗತಿ ಏನೆಂದರೆ, ಬೀರ್ ಮೇಲೆ, ಅರಾಕ್ ಮೇಲೆ ಹಾಗೂ ಸೇಂದಿ ಮೇಲೆ ಬೆಲೆಯನ್ನು ಕಡಿಮೆ ಮಾಡಿ, ಉಳಿದವುಗಳ ಬೆಲೆಯನ್ನು ಬೇಕಾದರೆ ಜಾಸ್ತಿ ಮಾಡಿ ಎಂಬುದಾಗಿ ಕ್ಲಿಯರ್ ಕಟ್ಟಾಗಿ ಹೇಳಿದ್ದಾರೆ. ಆದರೆ ಪ್ರತಿ ವರ್ಷವೂ ಯಾವುದರ ಮೇಲೆ ಬೆಲೆ ಜಾಸ್ತಿಯಾಗುತ್ತಿದೆ ಎಂದರೆ, ಬೀರ್ ಬೆಲೆ ಜಾಸ್ತಿಯಾಗುತ್ತಿದೆ. ಅದೇ ರೀತಿ ಅರಾಕ್ ಬೆಲೆ ಜಾಸ್ತಿಯಾಗುತ್ತಿದೆ. ಈಗ ಸೇಂದಿಯನ್ನು ತೆಗೆದಿದ್ದೀರಿ. ಇಲ್ಲದಿದ್ದರೆ ಅದರ ಮೇಲೂ ಬೆಲೆ ಜಾಸ್ತಿಯಾಗುತ್ತಿತ್ತು. ಅವರು ಮುಂದೆ ಏನು ಹೇಳುತ್ತಾರೆಂದರೆ.—

"The obvious effect of high prices is to shift the consumer to alternate product of illicit distillation. Therefore, it is necessary to rationalise the structure of tax and rentals and to reduce the prices of licit liquor where it is unduly high and allowing vigorous competition with illicit product"

ಮುಂದೆ ಅವರು ಏನು ಹೇಳಿದ್ದಾರೆಂದರೆ ಮಾಡುವುದಾದರೆ ಮುಂದೆ ಈ ರೀತಿ ಮಾಡಿ ಎಂಬ ಮಾತನ್ನೂ ಹೇಳಿದ್ದಾರೆ.

"If the content of tax element in the price has to be kept at a minimum, the system of having contractors bid for licence is one of the worst methods for achieving these results. The bidding system quite often is the surest guarantee of ending up with high prices with all the evil consequences in terms of distillation. Therefore, the necessary condition for having liquor price reasonable is the substitution of the bidding system by a system of sales by the State directly or by inviting tenders. The policy of continuing the licence through good behaviour and keeping the licence fee low may also help."

This is the crux of the recommendation, He further states :

"Therefore, it is necessary to discontinue the present bidding system and it is recommended accordingly."

ಎಂದು ಹೇಳಿದ್ದಾರೆ. ಅದರ ಅರ್ಥ ಏನು ? ಈಗಿರುವ ಕಂಟ್ರಾಕ್ಟ್‌ದಾರರಿಗೆ ಜಹಗೀರ್ ಕೊಡತಕ್ಕಂತಹ ಪದ್ಧತಿ ಏನು ಇದೆ, ಅಂದರೆ ಅವರು ಏನು ಬೇಕಾದರೂ ಮಾಡಿಕೊಳ್ಳಬಹುದು, ಯಾರಿಗೆ ಏನು ಬೇಕಾದರೂ ಕುಡಿಸಿಕೊಳ್ಳಲಿ, ನಮಗೆ ಇಂತಿಷ್ಟು ರೆಂಟಲ್ ಚಾರ್ಜಸ್ ಹಾಗೂ ಇಷ್ಟೂ ಪ್ರೈಸ್ ಇಂತಿಷ್ಟು ಅಂತ ಕೊಟ್ಟುಬಿಡಿ ಎಂಬುದಾಗಿ ಅವರಿಗೆ ಜಹಗೀರ್ ಮಾಡಿ ಕೊಟ್ಟು ಬಿಟ್ಟಿದ್ದೀರಲ್ಲಾ ಆ ಪದ್ಧತಿ ಸರಿಯಾದುದಲ್ಲವೆಂದು ಬಹಳ ಕ್ಲಿಯರ್ ಕಟ್ಟಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಒಂದು ಕಂಟ್ರಾಕ್ಟ್ ಪದ್ಧತಿಯಿಂದ ಇವತ್ತು ಅರಾಕಿನ ಬೆಲೆಯಾಗಲಿ... ಇಲ್ಲವೇ ಬೀರ್‌ನ ಬೆಲೆಯಾಗಲಿ, ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿಲ್ಲ ಎಂಬ ಮಾತನ್ನು ಹೇಳಿ, ಬೀರ್, ಅರಾಕ್‌ನ ಬೆಲೆಯನ್ನು ಕಡಿಮೆ ಮಾಡಿ ಎಂದು ಅವರು ಹೇಳಿದ್ದಾರೆ. ಈಗ ಇರುವ ಪ್ರೈಸ್‌ಗೆ ಬಾಟ್ಲಿಂಗ್ ಪ್ರೈಸ್ ೩-೫೦ ರೂಪಾಯಿಗಳನ್ನೂ ಅದರ ಜೊತೆಗ ಸೇರಿಸಿದ್ದೀರಿ, ಅಂದರೆ ಏನಾಯಿತು ? ಅದರ ಬೆಲೆ ಮತ್ತಷ್ಟು ಜಾಸ್ತಿಯಾಯಿತು. ಇವತ್ತು ಏನಾಗಿದೆಯೆಂದರೆ,...

ಶ್ರೀ ರಾಜವರ್ಧನ್.—ಮಾನ್ಯ ಶ್ರೀನಿವಾಸ್‌ರವರು ಎಕ್ಸೈಜ್ ಡಿಮ್ಯಾಂಡ್ ಮೇಲೆಯೇ ಮಾತನಾಡುತ್ತಾರೋ ಅಥವಾ ಬೇರೆ ಡಿಮ್ಯಾಂಡ್ ಮೇಲೂ ಮಾತನಾಡುತ್ತಾರೋ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಬೇರೆ ಸಬ್ಜೆಕ್ಟ್ ಮೇಲೆ ನಾನು ಮಾತನಾಡುವುದಿಲ್ಲ. ಇದರ ಮೇಲೆ ಮಾತ್ರ ಮಾತನಾಡಿ ಇನ್ನೂ ಸ್ವಲ್ಪ ಸಮಯ ತೆಗೆದುಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗಾಗಲೇ ಒಂದು ಗಂಟೆಯಾಯಿತು.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ಬಹಳ ಮಹತ್ವದ ವಿಚಾರ. ಸುಮ್ಮನೆ ೨೫ ಸಬ್ಜೆಕ್ಟ್ ಮೇಲೆ ದಿನಬೆಳಗಾದರೆ ಚರ್ಚೆ ಮಾಡುವುದಕ್ಕೆ ಬದಲಾಗಿ ಯಾವುದಾದರೊಂದು ಸಬ್ಜೆಕ್ಟ್ ಮೇಲೆ ಮಾತನಾಡುವಂತಹ ನಿಲುವಿಗೆ ಬರುವುದಾದರೆ ಒಳ್ಳೆಯದೆಂಬುದು ನನ್ನ ಭಾವನೆ. ಶರಾಬಿನ ಬೆಲೆ, ಅದರ ಕಾಸ್ಟ್ ಆಫ್ ಪ್ರೊಡಕ್ಷನ್ ಹಾಗೂ ಡಿಸ್ಟ್ರಿಬ್ಯೂಷನ್ ಸೇರಿಸಿ ೭೫೦ ಎಂ. ಎಲ್.ಗೆ ಬಾಟ್ಲಿಂಗ್ ಮೂರು ರೂಪಾಯಿಗಳು ಸೇರಿದರೆ ೩೩ ರೂಪಾಯಿಗಳಾಗುತ್ತವೆ. ಮೊದಲು ಇದು ೩೨ ರೂಪಾಯಿಗಳಿಗೆ ಸಿಕ್ಕುತ್ತಿತ್ತು. ಇವತ್ತು ಅದನ್ನು ೩೫ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಬಾಟ್ಲಿಂಗ್ ಚಾರ್ಜಸ್‌ನ್ನು ಮೊದಲು ಇದ್ದಂತಹ ಬೆಲೆಗೆ ಸೇರಿಸಿದ್ದೀರಿ. ಆದರೆ ಅವರು ಗೌರ್ನಮೆಂಟ್ ವತಿಯಿಂದ ಟೆಂಡರ್‌ನ್ನು ಕರೆದು ಸೀಮಿತ ಕಾಸ್ಟ್‌ನಲ್ಲಿ ಬಾಟ್ಲಿಂಗ್ ಮಾಡಿ ಎಂದು ಹೇಳಿದರೆ ಹೊರತು, ಬಾಟ್ಲಿಂಗ್‌ಗಾಗಿ ಬೇರೊಂದಷ್ಟು ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಅವರಿಗೆ ಸಹಾಯ ಮಾಡಿ ಅವರಿಂದ ಸಹಾಯವನ್ನು ತೆಗೆದುಕೊಳ್ಳುವಂತೆ ಮಾಡಿ ಎಂದು ಅವರು ಹೇಳಲಿಲ್ಲ. ಆದರೆ ಈಗ ಏನೇನು ಮಾಡಿದ್ದೀರೆಂದರೆ, ಯಾರ್ಯಾರಿಗೋ ಕಂಟ್ರಾಕ್ಟ್‌ನ್ನು ಕೊಟ್ಟಿದ್ದೀರೆಂದು ಹೇಳುತ್ತಿದ್ದೀರಿ. ಬಾಟ್ಲ್ ಚಾರ್ಜಸ್ ೩-೫೦ ರೂಪಾಯಿಗಳೆಂದು ನಿಗದಿ ಮಾಡಿದ್ದೀರಿ ಬಾಟ್ಲ್‌ಗಳ ಸಾಮಾನ್ಯ ಸೈಜ್ ೭೫೦ ಎಂ. ಎಲ್. ೩೭೫ ಎಂ ಎಲ್. ೧೮೦ ಎಂ.ಎಲ್. ಹಾಗೂ ೧೦೦೦ ಎಂ.ಎಲ್. ಎಂದು ಇರುತ್ತದೆ. ಸಹಜವಾಗಿ ಕೆಲಸ ಮಾಡಿಕೊಂಡು ಬಂದಂತಹವನು ಕುಡಿಯುವುದಕ್ಕೆ ಬಯಸುವಂತಹದ್ದು ೫೦ ಎಂ.ಎಲ್ ಅವನಿಗೆ ಬೇಕಿದ್ದರೆ ಇನ್ನೂ ೫೦ ಎಂ. ಎಲ್. ಕುಡಿಯಬಹುದು. ಆದರೆ ನಿಮ್ಮ ಪ್ರಕಾರ ೧೦೦೦ ಎಂ.ಎಲ್.ಗಿಂತ ಕಡಿಮೆ ಅಳತೆಯ ಬಾಟ್ಲ್‌ಗಳೇ ಇಲ್ಲ. ಲೂಸ್ ಕೂಡ ಸಿಕ್ಕುವುದಿಲ್ಲ. ಅಂತಹದ್ದರಲ್ಲಿ ಅವನಿಗೆ ಪಾರ್ಟನರ್ ಕೂಡ ಇಲ್ಲದಿದ್ದರೆ ೧೦೦೦ ಎಂ.ಎಲ್. ತೆಗೆದುಕೊಂಡು ಅವನು ಏನು ಮಾಡಬೇಕು ? ಪಾರ್ಟನರ್ ಇದ್ದರೆ ಅಡ್ಡಿಯಿಲ್ಲ, ಪಾರ್ಟನರ್ ಇದ್ದರೂ ಸರಿಹೋಗುವುದಿಲ್ಲ. ೬೦ ಎಂ. ಎಲ್. ಕುಡಿಯಬೇಕಾದರೆ ಫಿಫ್ಟಿ ಫಿಫ್ಟಿ ಅಂದರೂ ಅದು ಸಾಲುವುದಿಲ್ಲ ಇದು ಏತಕ್ಕೆ ಬೇಕು? ಬಾಟ್ಲ್ ಬಿಟ್ಟು ಬೇರೆ ಪ್ಲಾಸ್ಟಿಕ್‌ನಲ್ಲಿ ಮಾಡಿ. ಪ್ಲಾಸ್ಟಿಕ್ ಯುಗ ಬಂದಿದೆ, ಅದನ್ನು ಮಾಡಿದರೆ ನಿಮಗೆ ಲಾಭವಿಲ್ಲ, ಇವತ್ತು ಬಾಟ್ಲಿಂಗ್ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ. ದೇಸಾಯಿ ಕಮಿಷನ್ ಏನು ರೆಕಮೆಂಡೇಶನ್ ಮಾಡಿದೆ ಅವರು ಹೇಳಿದ್ದೇನು ? ಈಗಿರುವ ಕಂಟ್ರಾಕ್ಟ್ ಸಿಸ್ಟಮ್ ತೆಗೆಯಿರಿ. ಗೌರ್ನಮೆಂಟ್ ಕಾಸ್ಟ್‌ನಲ್ಲಿ ಗೌರ್ನಮೆಂಟ್ ಡಿಸ್ಟಿಲರಿಗಳಲ್ಲಿ ಮಾಡಿರಿಯೆಂದು ಹೇಳಿದ್ದಾರೆ. ನೀವು ಮಾಡಿರುವುದನ್ನು ಅಲ್ಲ ಅವರು ಹೇಳಿದ್ದು, ಅವರು ಏನು ಹೇಳುತ್ತಾರೆಂದರೆ,

The system of fixing the selling price of liquor must be followed by keeping tax element in the price low so that th

> drinkers may not be tempted to shift to illicit liquor. To guarantee purity and reducing the chances of adulteration, it is necessary to bottle the liquor in the distillery or the wareho se, and not in retail shop.''

ದರ ಕಡಿಮೆ ಮಾಡಬೇಕೆಂದು ಪ್ರತಿಯೊಂದು ವಾಕ್ಯದಲ್ಲೂ ಹೇಳಿದ್ದಾರೆ. ಮುಂದುವರಿದು ಏನು ಹೇಳಿದ್ದಾರೆಂದರೆ,

> It is obvious that liquor trade is run for private profit in accordance with the number of maximum sales, and at present few persons have monopolised the said trade and are making huge profites at the cost of consumers.''

ಇದನ್ನು ಕಮಿಷನ್‌ರವರೆ ಅಂಡರ್‌ಲೈನ್ ಮಾಡಿದ್ದಾರೆ. ಉಳಿದಿದ್ದನ್ನು ನಾನು ಅಂಡರ್‌ಲೈನ್ ಮಾಡಿದ್ದೇನೆ. ಅದರಲ್ಲಿನ ಒಂದು ವಾಕ್ಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

> ''Therefere, the Commission recommends that prodution, distribution and retail sale of liquor in the State should be nationalised. In other words, the Commission suggests absolute control over bonded warehouse, breweries, distilleries and retail sale points and their being shifted to the Public Sector.''

This is the reeommendation. If you have got guts, do this. ಅದನ್ನು ಬಿಟ್ಟು ಯಥಾಸ್ಥಿತಿ ಸಹಗಮನ ದೇಸಾಯಿ ಕಮಿಷನ್ ಶಿಫಾರಸ್ಸಿನ ತಾತ್ಪರ್ಯ ಅಲ್ಲ. ಪೂರ್ತಿ ಸಹಗಮನ ಮಾಡುವುದು ತಪ್ಪು ಅದು ಬೇರೆ ವಿಚಾರ. ದಲಿತ ಸಂಘರ್ಷ ಸಮಿತಿಯವರು ಹೇಳುತ್ತಿರುವುದು ಏನು ? ಅವರು ಗಣಪತಿ ಮಾಡಿ ಅಂದರೆ ಇವರು ಈಶ್ವರಲಿಂಗ ಗಣಪತಿ ಅಪ್ಪನನ್ನು ಮಾಡುತ್ತಾರೆ. ಅಪ್ಪ ಇಲ್ಲದೆ ಮಗ ಹೇಗೆ ಹುಟ್ಟುತ್ತಾನೆ? ಅವರು ಗಣಪತಿ ಅಂದರೆ ಇವರು ಅವನ ಅಪ್ಪನನ್ನು ಮಾಡಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲ್‌ರವರ ಪೂರ್ತಿ ತಾತ್ಪರ್ಯ ತೆಗೆದುಕೊಂಡರೆ ಅವರು ಇದನ್ನೇ ಹೇಳುವುದು.

Here is a beautiful article ''Liquor Politics'' An insider suggests how excise evils can be ended by Mr. M. Bhaktavatsala published in Indian Express dated 18-2-1986. He himself is an excise contractor. He has written an article which is an eye opener He says.

> ''The main thrust has always been at maximisation of revenue. This has been at the cost of human suffering.
>
> Of all the methods used, the most anachronistic, corrupting, pernicious and disgusting one is the auction system of selling the vending rights for country liquors annually.''

The contractor who holds the contract had the intellectual integrity to highlight these evils I mu t compliment him for his article. ಅವರು ಏನು ಹೇಳಿದ್ದಾರೆಂದರೆ ಇದರಷ್ಟು ಹೊಲಸು ಸಿಸ್ಟಮ್ ಇಲ್ಲ. ಒಂದೊಂದು ಜಾಹಿರಾತು ಕೊಟ್ಟು ಏನಾದರೂ ಮಾಡಿಕೊಳ್ಳಿಯೆಂದು ಏನು ಹೇಳುತ್ತಾರೆ ಇದಕ್ಕಿಂತ ಹೊಲಸು ಸಿಸ್ಟಮ್ ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಏನು ಹೇಳುತ್ತಾರೆಂದರೆ ಪ್ರತಿ ವರ್ಷ ಹೇಗೆ ಜಾಸ್ತಿ ಹಣ ಬರಬೇಕು. ಆ ಬಗ್ಗೆ ಎಲ್ಲೆಲ್ಲಿಂದಲೋ ಕಾಂಪಿಟೇಷನ್ ತರುತ್ತಾರೆ, ಆಗ ಅವರು ಒಬ್ಬರ ಮೇಲೊಬ್ಬರು ಪೈಪೋಟಿಮಾಡುತ್ತಾರೆ, ಒಬ್ಬರಿಗಿಂತ ಒಬ್ಬರು ಜಾಸ್ತಿ ಕೂಗುತ್ತಾರೆ. ಕೊನೆಗೆ ಅವರಿಂದ ರೆಂಟಲ್

ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಹಳೆಯ ಬಾಕಿ ಎಷ್ಟು ಕೋಟಿ ರೂಪಾಯಿ ಇದೆ ? ಹಲವಾರು ಕೋಟಿ ಜಂಪ್ಶಾ ಎಷ್ಟು, ಕಂಟ್ರಾಕ್ಟರುಗಳಿಂದ ಎಷ್ಟು ಕೋಟಿ ರೂಪಾಯಿ ಬಾಕಿ ಬರತಕ್ಕದ್ದು ಇದೆ ? ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ, ಅವರು ಅದರಲ್ಲಿ ಏನು ಹೇಳುತ್ತಾರೆಂದರೆ,

He further states :

"I drink a discreet scotch but condemn all those evil addicts to the wages of their sin."

ಇನ್ನೊಂದು ಮುಖ್ಯ ವಿಷಯವೆಂದರೆ. ಈ ಕಂಟ್ರಾಕ್ಟರ್ಸ್ ಇದ್ದಾರಲ್ಲ; most of them are Benami. ನಿಜವಾದ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡುತ್ತಿಲ್ಲ. ಇವರ ವಿರುದ್ಧವಾಗಿ ದುಡ್ಡು ಬರುವ ಲೆಕ್ಕ ಇದೆಯಲ್ಲ, ಅದು ಜೇನು ತಂಪ್ಪ ಬಾಕಿ ನೆಕ್ಕುವ ಲೆಕ್ಕವೇ ಹೊರತು ಅದನ್ನು ಎಂದೆಂದೂ ರಿಕವರಿ ಮಾಡುವುದಕ್ಕೆ ಸಾಧ್ಯವಿಲ್ಲ. ರಿಕವರಿ ಅಂದಕೂಡಲೇ ಅವರ ಬ್ರಹ್ಮಾಸ್ತ್ರ ಎಂದರೆ ಡೆಪ್ಯುಟಿ ಕಮೀಷನರ್ ಅವರಿಗೆ to recover it as an arrears of land revenue ಎಂದು ಹೇಳುವಹಾಗೆ ಇದೊಂದು ಪದ್ಧತಿ. ಸರ್ಕಾರದ ಕೊನೆಯ ಬ್ರಹ್ಮಾಸ್ತ್ರ ಡೆಪ್ಯುಟಿ ಕಮೀಷನರ್‌ಗೆ ರೆಫರ್ ಮಾಡುವುದು. arreares of land revenue ಅದು ಅಸೆಟ್ಸ್ ಇರಬಹುದು, ಏನೇ ಇರಬಹುದು. ಇವರ ಹತ್ತಿರ ಯಾವ tangiable assets ಇರುವುದಿಲ್ಲ. ಹೆಸರೇ ಇರುವುದಿಲ್ಲ ಅಡ್ರೆಸ್ಸೇ ಇರುವುದಿಲ್ಲ. ಇನ್ನು ಎಲ್ಲಿಂದ ರಿಕವರಿ ಮಾಡುತ್ತಾರೆ ? Even this is known to the Government, Even this Government certainly knows. The Government is not ignorant of anything. I charge that this whole thing ss systemtically patronised by the Government. ಇವತ್ತು ಏನಾಗಿದೆ ನಮ್ಮ ರಾಜ್ಯದಲ್ಲಿ ಎಲ್ಲಾ ಪೇಯಗಳಿಗೆ ಹೆಸರುಗಳನ್ನು ಇಟ್ಟಿವೆಯೇ ಹೊರತು ಗುಣಮಟ್ಟ ಇಲ್ಲ. ಕ್ವಾಲಿಟಿ ಮೊದಲೇ ಇಲ್ಲ, ಕ್ವಾಲಿಟಿ, ಸ್ಟಾಂಡರ್ಡ್ ಇಲ್ಲವೇ ಇಲ್ಲ. ಪರದೇಶಗಳಲ್ಲಿ ಆದರೆ they are brothered about quality and standards ನಮ್ಮ ರಾಜ್ಯದಲ್ಲಿ ಹಾಗಿಲ್ಲ. ಬ್ರಾಂದಿ, ವಿಸ್ಕಿ, ಜಿನ್, ಅದು ಅಲ್ಲವೇ ಅಲ್ಲ. All these things are suppposed to be deliver from a particular malt. ಅಲ್ಲಿ ಒಂದೊಂದು ಕೂಡ ಒಂದೊಂದು ಮಾಲ್ಟ್‌ನಿಂದ ತಯಾರಿಸಲ್ಪಡುತ್ತವೆ. ಆದರೆ ಇಲ್ಲಿ ಫರ್‌ಮೆಂಟ್ ಅಲ್ಕೋಹಾಲ್‌ನಿಂದ ತಯಾರಿಸಿದ್ದು, ಅದು ಯೋಗ್ಯವಾದ ಪಾನೀಯ ಆಗುವುದಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಸ್ಟಾಂಡರ್ಡ್ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ.

"The swiss rules on manfacture of wine is a guide for making wine. It specifies the grape, the temperatures, the the additives: the aging process including a precise prescri ption for the vessels...

ಅಲ್ಲಿ ಹೇಗೆ ವೈನ್ ಮಾಡಬೇಕೆಂದು ಹೇಳುತ್ತಾರೆ. ಇಷ್ಟು ಪ್ರಿಸ್ಕ್ರಿಪ್‌ಶನ್ಸ್ ಇದೆ. ಇಲ್ಲಿ ಯಾವುದೇ ಪ್ರಿಸ್ಕ್ರಿಪ್‌ಶನ್ ಇಲ್ಲ ಏನೂ ಇಲ್ಲ.

"In contrast there is not all single sentence in our legislation that defines what is a Brandy, a whisky of a Gin...

ನಮ್ಮಲ್ಲಿ ಬ್ರಾಂದಿ, ವಿಸ್ಕಿ, ಜಿನ್ ಹೇಗೆ ಇರಬೇಕೆಂದು ಎಲ್ಲಿಯೂ ಹೇಳಿಲ್ಲ. ಆದ್ದರಿಂದ ನಾನು ಹೇಳುತ್ತೇನೆ, ಈ ದೇಶದಲ್ಲಿ ಇರುವುದು ಎಲ್ಲ ಕೂಡ adulterated stuff. It is not fit for human consumption. ಇಂಥ ಸಂದರ್ಭದಲ್ಲಿ ನಾವು ಆಮೂಲಾಗ್ರವಾಗಿ ಯೋಚನೆ ಮಾಡಿ ಒಂದು ಬದಲಾವಣೆಯನ್ನು ತಂದರೆ ಮಾತ್ರ ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ ಹೊರತು ಇನ್ಯಾವುದೇ ರೀತಿಯಲ್ಲಿ ಸಾಧ್ಯವಿಲ್ಲ, ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ನಾವು ತಲೆರೋಸಿ ಹೋಗತಕ್ಕಂಥ ಸ್ಥಿತಿಗೆ ಬಂದಿದ್ದೇವೆ, ಎಷ್ಟೋ ಹಳ್ಳಿಗಳಲ್ಲಿ ಅರ್‍ಯಾಕ್, ಸೇಂದಿ ಶಾಪ್ ಬೇಡ ಎಂದರೆ Your Deputy Commiss

ioner Police Officer and the arrack contractors compel then to open one. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು ಅರ್ಥವಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಘಟನೆ ಆಯಿತು, ಇದರಲ್ಲಿ ನನ್ನ ಪಾತ್ರವೇನು ಇಲ್ಲ. I got if as a pleasant surprise just yesterday. ಸಾರಾಯಿ ಅಂಗಡಿ ಮುಚ್ಚಿಸಿದರು ಎಂದು ಪತ್ರಿಕೆಯಲ್ಲಿ ಬಂದಿದೆ.

“ಶಿವಮೊಗ್ಗಕ್ಕೆ ಮೂರು ಕಿಲೋಮೀಟರ್ ದೂರದಲ್ಲಿ ತಟ್ಟೆಕೆರೆ–ಹೊಸಕೊಪ್ಪ ಗ್ರಾಮದ ಮಹಿಳೆಯರು ಶೇಂದಿ ಅಂಗಡಿಯನ್ನು ಮುಚ್ಚಿಸಲು ಯಶಸ್ವಿಯಾಗಿದ್ದಾರೆ. ಶಿವಮೊಗ್ಗದ ಕಾಂತ್ರಿದೀಪ ಪತ್ರಿಕೆಯಲ್ಲಿ ಬಂದಿರುವ ವರದಿ ಈ ರೀತಿ ಇದೆ.

ಸಾರಾಯಿ ಅಂಗಡಿ ಮುಚ್ಚಿಸಿದ ಮಹಿಳೆಯರು

“ಶಿವಮೊಗ್ಗ ತಾಲ್ಲೂಕಿನ ತಟ್ಟೆಕೆರೆ ಹೊಸ ಕೊಪ್ಪ ಜೋಡಿ ಗ್ರಾಮದ ಮಹಿಳೆಯರು ಸೇರಿ, ಸಾರಾಯಿ ಅಂಗಡಿಗಳನ್ನು ಮುಚ್ಚಿಸಲು ಯಶಸ್ವಿಯಾಗಿದ್ದಾರೆ. ಸಾರಾಯಿ ವ್ಯಾಪಾರಗಾರರು ಪೋಲೀಸರಿಗೆ ಈ ಬಗ್ಗೆ ನೀಡಲಾಗಿ, ಇಬ್ಬರು ಪೋಲೀಸರು ಸ್ಥಳಕ್ಕೆ ಬಂದಾಗ ಅವರನ್ನು ಮಹಿಳೆಯರು ಕೂಡಿಹಾಕಿದರು. ಸುಮಾರು ೨ ಸಹಸ್ರ ಜನ ಸಂಖ್ಯೆ ಇರುವ ಈ ಜೋಡಿ ಗ್ರಾಮದಲ್ಲಿ ಕುಡುಕರೇ ಜಾಸ್ತಿಯಾಗಿದ್ದು, ಹೆಂಗಸರೂ ಕುಡಿತಕ್ಕೆ ಬಲಿಯಾಗಿದ್ದರು. ಶಿವಮೊಗ್ಗದಲ್ಲಿ, ಕಳೆದ ತಿಂಗಳು ರೈತ ಮಹಿಳೆಯರು ಸಮಾವೇಶಗೊಂಡಾಗ, ತಮ್ಮ ಊರುಗಳಿಂದ ಹೆಂಡದಂಗಡಿಗಳನ್ನು ಖಾಲಿ ಮಾಡಿಸಲು ನಿರ್ಧರಿಸಿದ್ದರು. ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷ ಪಾರ್ವತಮ್ಮ ಸೇಂದಿ ಮಾರುವ ಸೇವಾನಾಯ್ಕನ ಹೆಂಡತಿ. ಈತ ಗಾಜನೂರು ಮಂಡಲ ಸದಸ್ಯನೂ ಹೌದು. ಇದು ಇವರಿಗೆ ಉಪ ಕಸಬು ಆಗಿತ್ತು. ಸೇವಾನಾಯ್ಕನಿಗೆ ಹೆಂಡತಿ ತಿಳುವಳಿಕೆ ಹೇಳಿ ಸೇಂದಿ ಮಾರುವುದನ್ನು ನಿಲ್ಲಿಸಿದರು. ಆದರೆ, ಇವನ ಸಹೋದರ ಸಾಮ್ಯಾನಾಯ್ಕ ಇದಕ್ಕೆ ಒಪ್ಪಲಿಲ್ಲ. ಮಾಮೂಲಿನಂತೆ ಸೇಂದಿ ಲಾರಿ ಬಂದಾಗ ಮಹಿಳೆಯರು ಇದನ್ನು ತಡೆದರು. ಕಂಟ್ರಾಕ್ಟ್‌ದಾರರು ನಷ್ಟ ಆಗುತ್ತೆ ಎಂದು ಗೋಗರೆದಾಗ ಇದುವರೆಗೆ ದುಡಿದಿದ್ದೀರಿ, ಇನ್ನು ಹೋಗಿ ಎಂದು ಎಚ್ಚರಿಕೆ ನೀಡಿದರು. ಸಾಮ್ಯಾನಾಯ್ಕ ಮತ್ತೆ ಹೆಂಡ ಮಾರಾಟ ಮಾಡಲು ಹೋದಾಗ ಮಹಿಳೆಯರು ಅಂಗಡಿಗೆ ಮುತ್ತಿಗೆ ಹಾಕಿದರು. ಸಾಮ್ಯಾನಾಯ್ಕನ ಹೆಂಡತಿ ಬಂದು ತಡೆದ ಮಹಿಳೆಯರನ್ನು ಬೆದರಿಸಿದರು. ಮರುದಿನ ಇಬ್ಬರು ಪೋಲೀಸರು ಆಟೋದಲ್ಲಿ ಸಾಮ್ಯಾನಾಯ್ಕನನ್ನು ಕರೆದುಕೊಂಡು ಬಂದಾಗ, ರೈತ ಮಹಿಳೆಯರು ಬಂದರು. ಪೋಲೀಸ್ ಪೇದೆಗಳನ್ನ ಘೇರಾವ್ ಮಾಡಿ ಪಂಚಾಯ್ತಿ ಕಟ್ಟಡದಲ್ಲಿ ಕೂಡಿ ಹಾಕಿದರು. ಅಂಗಡಿ ಇರಲಿ ಬಿಡಿ ಎಂದು ಪೇದೆಗಳು ಹೇಳಿದಾಗ, ಅಂಗಡಿ ತೆಗೆಯಲು ಬಿಡುವುದಿಲ್ಲ ಎಂದು ಮಹಿಳೆಯರು ಪಟ್ಟುಹಿಡಿದರು. ಸಾಮ್ಯಾನಾಯ್ಕನ ಬಳಿ ಹಣ ತಿಂದು ಇಲ್ಲಿಗೆ ಬಂದಿದ್ದೀರಿ. ಎಂದು ಮಹಿಳೆಯರು ದೂಷಿಸಿದರು. ನಾವು ಊರಿಗೆ ವಾಪಸ್ ಹೋಗುತ್ತೇವೆ ಎಂದು ಪೇದೆಗಳು ಹೇಳಿದರೂ ಅವರನ್ನು ಬಿಡಲಿಲ್ಲ. ಈ ವೇಳೆಗೆ ಆಟೋ ಚಾಲಕನ ಮೂಲಕ ಸುದ್ದಿ ತಿಳಿದ ಪೋಲೀಸರು ವ್ಯಾನ್‌ನಲ್ಲಿ ಬಂದರು. ಪರಿಸ್ಥಿತಿ ಅರಿತ ಪೋಲೀಸರು ಸಾರಾಯಿ ಅಂಗಡಿಯನ್ನು ಮುಚ್ಚಿಸಿದರು. ಅನಂತರ ತಟ್ಟೆಕೆರೆ ಹೊಸಕೊಪ್ಪದಲ್ಲಿ ಪುಟ್ಟ ಸಮಾರಂಭ ನಡೆದು ಗಂಡಸರು ನಾವು ಇನ್ನು ಮುಂದೆ ಹೆಂ ಕುಡಿಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು,”

ಇದು ಒಂದು ಘಟನೆ ಇರಬಹುದು ಇದೇರೀತಿ ಪ್ರತಿ ಊರಿನಲ್ಲೂ ಮಾಡಬೇಕಾದ ಸಂದರ್ಭ ಬರುತ್ತದೆ. ಇವರು ಮೊದಲು ಹೇಳಿದಂತೆ ಮಾಡುವ ವಿಧಾನ ಇಲ್ಲಿ ಇಟ್ಟಿಲ್ಲ. ನೀವು ಕೂಡಲೇ ಬೇಕಾದ ಅಗತ್ಯ ಇದ್ದರೆ, ಕುಡಿಯುವುದಕ್ಕೆ ಯೋಗ್ಯವಾದ ಪಾನೀಯ ತಯಾರು ಮಾಡಬೇಕು. ನಮ್ಮ ದೇಶದಲ್ಲಿ ಇರತಕ್ಕ ಸಾಮಗ್ರಿಗಳನ್ನು ಉಪಯೋಗ ಮಾಡಿಕೊಂಡು, ಒಳ್ಳೆಯ ಪಾನೀಯಗಳನ್ನು ತಯಾರು ಮಾಡತಕ್ಕ ಟೆಕ್ನಿಕ್ ನಮ್ಮ ದೇಶದಲ್ಲಿ ಬರಬೇಕಾಗಿದೆ. ಸೇಂದಿ ಮರಗಳು ಈಗ್ಗೆ ೨೦ ವರ್ಷಗಳಲ್ಲಿ ಸಾಕಷ್ಟು ವಿಫುಲವಾಗಿ ಇದ್ದವು. ಏನೋ ಒಳ್ಳೆಯ ಮದ್ಯಪಾನ ತರುತ್ತೇವೆ ಎನ್ನುವ

ದೃಷ್ಟಿಯಿಂದ ಅವುಗಳೆಲ್ಲವನ್ನೂ ಕಡಿದು ಹಾಕಿದರು. ಈಗ ಇದುವರೆಗೂ ಇದ್ದ ಟೆಕ್ನಿಕ್‌ನ್ನು ಬದಲಾಯಿಸಿಕೊಳ್ಳಬೇಕು, ಇದನ್ನು ರಿವ್ಯೂವ್ ಮಾಡಬೇಕು. State monopoly means the State excercises its monopoly on standards, on real quality and not on its sale or production. ಇದರಲ್ಲಿ ಎಷ್ಟು ಆದಾಯ ಬರುತ್ತದೊ ಅದನ್ನು ತೆಗೆದುಕೊಳ್ಳಿ. ಆದರೆ, ಇದರಲ್ಲಿ ಪ್ರತಿ ವರ್ಷ ಆದಾಯ ಜಾಸ್ತಿ ಮಾಡಬೇಕೆಂಬ ಚಿತ್ತವನ್ನು ಸರ್ಕಾರ ಕೈಬಿಟ್ಟರೆ ಮಾತ್ರ, ಏನಾದರೂ ಒಂದು ಒಳ್ಳೆಯ ವ್ಯವಸ್ಥೆ ಮಾಡಬಹುದು. ಆದುದರಿಂದ ಇನ್ನು ಮುಂದೆ ಹೊಸ ವ್ಯವಸ್ಥೆ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕು. ಜನರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಎರಡೂ ಬದಲಾವಣೆ ಮಾಡಬೇಕೆಂದು ನಾನು ಒಂದು ನಿರ್ಣಯ ತಂದಿದ್ದೆ. ಆ ನಿರ್ಣಯಕ್ಕೆ ಈ ಸಭೆ ಸರ್ವಾನುಮತದ ಅನುಮತಿ ಕೊಟ್ಟಿದೆ. ಸರ್ಕಾರವೂ ಬೆಂಬಲ ವ್ಯಕ್ತಪಡಿಸಿದೆ. ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಬದಲಾವಣೆ ಮಾಡುತ್ತದೆಂದು ನಾನು ನಂಬಿಕೊಂಡಿದ್ದೇನೆ. ಕೊನೆಯದಾಗಿ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಕೊನೆಯ ಪಕ್ಷ ಇದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ. ಇಲ್ಲದೇ ಹೋದರೆ, ಇದೇ ರೀತಿ ಕಣ್ಣು ಮುಚ್ಚಿಕೊಂಡು ಮುಂದುವರಿಯುವುದಾದರೆ, ಜನಪರ ಚಳುವಳಿಯನ್ನು ಸಂಘಟಿಸಬೇಕಾದ ಕಾಲ ಸನ್ನಿಹಿತವಾಗುತ್ತದೆ. ನಾನು ರಾಜಕಾರಣಕ್ಕೆ ತಿಲಾಂಜಲಿ ಕೊಟ್ಟಾದರೂ ಕೂಡ ಈ ಬಗ್ಗೆ ಹೋರಾಟ ಮಾಡುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ.—ನಮ್ಮ ನೇತೃತ್ವದಲ್ಲೇ ಒಂದು ಸಮಿತಿಯನ್ನು ಮಾಡಿ ಎಂದು ಸಲಹೆ ಕೊಡಿ, ನೀವು ರಾಜಕೀಯ ಬಿಡುವಂಥ ವಿಷಯ ಏಕೆ ಹೇಳುತ್ತೀರಿ, ನೀವು ರಾಜಕೀಯ ಬಿಡುವುದು ಬೇಡ.

ಶ್ರೀ ಕೆ. ಹೆಚ್. ಶ್ರೀನಿವಾಸ.—ನಾನು ರಾಜಕೀಯದಿಂದ ಸೋತು ಹೋಗತಕ್ಕ ಕಾಲ ಬಂದಿದೆ. ಇದೇ ರೀತಿಯಲ್ಲಿ ಹೆಂಡದ ಅಂಗಡಿಗಳನ್ನು ತೆರೆಯುತ್ತಾ ಹೋದರೆ, ಹೆಂಡದ ಲಾರಿಯನ್ನು ಇಳಿಸುತ್ತಾ ಹೋದರೆ, ನಿಮ್ಮ ಮೇಲೆ ಮತ್ತು ಮಾನ್ಯ ಜೆ. ಹೆಚ್. ಪಟೇಲರ ಮೇಲೆ ಜನರು ಪ್ರತಿಭಟನೆ ಮಾಡುತ್ತಾರೆ. ಆದುದರಿಂದ ಈ ವಿಚಾರದಲ್ಲಿ ಸೋತು ಹೋಗುವುದಕ್ಕಿಂತ ರಾಜಕೀಯ ಬಿಡುವುದೇ ಕ್ಷೇಮ ದಯಮಾಡಿ ತಾತ್ಸಾರ ಮಾಡಬೇಡಿ. ಹಿಂದೆ ಚುನಾವಣ ದಿವಸ ಕಾಫಿ ಕುಡಿಯುವರು ಕಾಫಿ, ಬೇರೆ ಪಾನೀಯ ಕುಡಿಯುವವರು ಪಾನೀಯಗಳನ್ನು ಕುಡಿದು ಸಲಹೆಗಳನ್ನು ಕೊಡುತ್ತಿದ್ದರು ಈಗ ಅದು ತಿರುಗು ಮುರುಗು ಆಗಿದೆ, ಕುಡಿಯುವುದಕ್ಕೆ ಚುನಾವಣೆ ಎಂಬಂತಾಗಿದೆ. ಸರ್ಕಾರ ಕಣ್ಣು ಮುಚ್ಚಿಕೊಂಡು ಹೋಗಬಾರದು. ಇದರಿಂದ ಜನ ಬದುಕುವುದಕ್ಕಾಗುವುದಿಲ್ಲ. ಇಲ್ಲಿಯ ವರೆಗೂ ಇದ್ದ ಸ್ಥಿತಿ ಈಗ ಬದಲಾಗಿದೆ, ಕುಡಿಯುವುದಕ್ಕೆ ಚುನಾವಣೆ ಎಂಬತಕ್ಕಂಥ ಒಂದು ತೀರ್ಮಾನಕ್ಕೆ ಬಂದಂತಿದೆ.

ಆದುದರಿಂದ ಮಾನ್ಯ ಅಧ್ಯಕ್ಷರೇ, ನಾನು ಬಹಳ ಕಳಕಳಿಯಿಂದ ಸಂಕಟದಿಂದ ಇದನ್ನು ಹೇಳುತ್ತಿದ್ದೇನೆ. ನನಗೆ ಯಾವುದೇ ಸರಕಾರದ ಮೇಲಾಗಲೀ, ಯಾವುದೇ ವ್ಯಕ್ತಿಗಳ ಮೇಲಾಗಲೀ ದ್ವೇಷಾಸೂಯೆಗಳು ಇರುವ ಪ್ರಶ್ನೆ ಇಲ್ಲ. ಯಾರು ಎಷ್ಟಾದರೂ ದುಡ್ಡು ಮಾಡಿಕೊಳ್ಳಲಿ. ಅದರಲ್ಲಿ ನನಗೆ ಪಾಲು ಬೇಡ, ಅದರಿಂದ ನನಗೇನೂ ಇಲ್ಲ, ಅವರ ಮೇಲೆ ದ್ವೇಷಾಸೂಯೆಯೂ ಇಲ್ಲ, ಆದರೆ ನಮ್ಮ ಮುಂದಿನ ಜನಾಂಗಕ್ಕೆ ನಾವು ಏನು ಮಾಡುತ್ತಿದ್ದೇವೆ ಎಂಬುದು ಮುಖ್ಯ. ಬೇರೆ ದೇಶಗಳಲ್ಲಿ ಏನೆಲ್ಲಾ ಆಗಿದೆ ಎಂಬುದನ್ನು ನೋಡಬೇಕು. ರಷ್ಯಾದಲ್ಲಿ, ಚೈನಾದಲ್ಲಿ ಹಲವಾರು ದೇಶಗಳಲ್ಲಿ ಈ ಕುಡಿತದ ಚಟದಿಂದ ಏನೆಲ್ಲಾ ದುರಂತಗಳಾಗಿವೆ ಎಂಬುದನ್ನು ನೋಡಬಹುದು. ಇವತ್ತು ರಷ್ಯಾದಲ್ಲಿ ಕುಡಿಯುವ ವ್ಯಕ್ತಿಗೆ ಏನು ಮಾಡಿದ್ದಾರೆ ಎಂದರೆ, ಒಂದು ಬಾಟಲ್ "ವೋಡ್ಕಾ" ಕುಡಿಯಬೇಕಾದರೆ ಅವನು ಇಷ್ಟು ತಿನ್ನಬೇಕೆಂದು ಕೋಷ್ಟಕ ಮಾಡಿ ಇಟ್ಟಿದ್ದಾರೆ. ನಮ್ಮ ದೇಶದಲ್ಲಿ ಏನಿದೆ ನಮ್ಮ ದೇಶದಲ್ಲಿ ಅಕ್ಕಿಗೆ ರೇಷನ್ ಇದೆ, ಎಣ್ಣೆಗೆ ರೇಷನ್ ಇದೆ, ಬಟ್ಟೆಗೆ ರೇಷನ್ ಇದೆ, ಆದರೆ ಈ ಕುಡಿಯುವುದಕ್ಕೆ ಯಾವುದೇ ರೇಷನ್ ಇಲ್ಲ. ಯಾರು ಬೇಕಾದರೂ ಯಥೇಚ್ಛವಾಗಿ ಯಥಾನು ಶಕ್ತಿ ಕುಡಿಯಬಹುದು, ಅವನು ಊಟ ಬೇಕಾದರೆ ಮಾಡಬಹುದು, ಬೇಡದೇ ಇದ್ದರೆ ಬಿಡಬಹುದು. ಇವತ್ತು ಎಷ್ಟು ಜನ ಊಟ ಮಾಡುತ್ತಾರೆ? ಬರುವ ದುಡ್ಡನ್ನೆಲ್ಲಾ ಪೂರ್ತಿಯಾಗಿ ಕುಡಿಯುವುದಕ್ಕೇ ಕೊಡಬೇಕಾದಂಥ ವ್ಯವಸ್ಥೆ ಮಾಡಿದ್ದೇವೆ. ಇದನ್ನು ಮಾಡಿ, ಇಲ್ಲಿ ಕುಳಿತು ಕೊಂಡು ಸೋಷಿಯಲ್ ವೆಲ್‌ಫೇರ್

ಡಿಮ್ಯಾಂಡ್‌ಮೇಲೆ ಚರ್ಚೆ ಮಾಡುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಮಡಕೆ ತೂತಾಗಿದೆ, ಅದಕ್ಕೆ ಎಷ್ಟು ನೀರು ತುಂಬಿದರೂ ಸಹ ಅದು ಯಾವಾಗ ತುಂಬುತ್ತದೆ. ಆದುದರಿಂದ ಸರಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಇದರ ಬಗ್ಗೆ ಯಾವುದಾದರೂ ಒಂದು ಸ್ಪಷ್ಟ ವಿಚಾರವನ್ನು ಸರಕಾರ ಉತ್ತರ ನೀಡತಕ್ಕ ಕಾಲದಲ್ಲಿ ಸ್ಪಷ್ಟಪಡಿಸಬೇಕೆಂದು ಆಗ್ರಹ ಪಡಿಸುತ್ತೇನೆ, ಇವನ್ನೆಲ್ಲಾ ನಾನು ಹೇಳಿದ್ದೇನೆ. ಅದಿಲ್ಲದೇ ಹೋದರೆ ನಾನು ಏನು ಮಾಡುತ್ತೇನೆ ಎಂದು ನನ್ನ ನಿಲುವನ್ನು, ನನ್ನ ಎಚ್ಚರಿಕೆಯನ್ನು ನಾನು ಕೊಟ್ಟಿದ್ದೇನೆ. ಅದನ್ನು ಮಾತ್ರ ನಾನು ಮಾಡೇ ಮಾಡುತ್ತೇನೆ. ಇದಕ್ಕೆ ಸರಕಾರದವರು ದಯವಿಟ್ಟು ಅವಕಾಶ ಕೊಡಬಾರದು. ಇದರ ಬಗ್ಗೆ ಸರಕಾರದವರು ಚೆನ್ನಾಗಿ ವಿಚಾರ ಮಾಡಿ ತಮ್ಮ ನಿಲುವನ್ನು, ಸ್ಪಷ್ಟವಾದ ನಿಲುವನ್ನು ಕೊಡಬೇಕೆಂದು ನಾನು ಆಗ್ರಹ ಪಡಿಸುತ್ತೇನೆ.

ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷರೇ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ತಮ್ಮ ಮಾತನ್ನು ಮುಕ್ತಾಯ ಮಾಡುವ ಸಂದರ್ಭದಲ್ಲಿ ನಮಗೆ ಟಚ್ ಆಗತಕ್ಕಂಥ ಕೆಲವು ಮಾತುಗಳನ್ನು ಹೇಳಿದ್ದಾರೆ. ಹಿಂದೆ ಅವರ ಖಾಸಗಿ ನಿರ್ಣಯ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ನಾನು ಮಧ್ಯ ಪ್ರವೇಶ ಮಾಡಿ ಒಂದೆರಡು ಮಾತುಗಳನ್ನು ಹೇಳಿದ್ದೆ. ಶ್ರೀನಿವಾಸ್‌ರವರು ೧೯೭೪ನೇ ಇಸವಿ ನಂತರ ಆಗಿನ ಮುಖ್ಯ ಮಂತ್ರಿಗಳಾಗಿದ್ದಂಥ ದಿವಂಗತ ದೇವರಾಜ ಅರಸರಿಗೆ ರಾಜಕೀಯ ಸಲಹೆಗಾರರಾಗಿ ಕೆಲಸ ಮಾಡಿದರು. ನಂತರ ೧೯೭೮ರಲ್ಲಿ ನಮ್ಮ ಜೊತೆಗೆ ಅಸೆಂಬ್ಲಿ ಸದಸ್ಯರಾಗಿ, ಸಚಿವರಾಗಿ ಇದ್ದರು. ೧೯೭೨ರಿಂದ ಈಚೆಗೆ ಈ ಎಕ್ಸೈಸ್ ವಿಚಾರದಲ್ಲಿ ಇಲ್ಲಿಯವರೆಗೆ ಆಗಿರತಕ್ಕ ಹ್ಯೂಮನ್ ಆಸ್ಪೆಕ್ಟ್ ಏನು ಅದರಿಂದ ಜನರಿಗಾಗಿರುವ ತೊಂದರೆ ಏನು ಎಂದು ಎಲ್ಲಾ ಹೇಳಿದರು. ಲಿಕ್ಕರ್ ಲಾಬಿ ಎಂದರೆ ಯಾರು. ಜನರ ಹಿತಾಸಕ್ತಿ ರಕ್ಷಣೆ ಮಾಡತಕ್ಕಂಥವರು ಇವರ ಜೊತೆ ಹೇಗೆ ಸೇರಿದ್ದಾರೆ, ಲಿಕ್ಕರ್ ಲಾಬಿಯವರು ೧೯೭೨ ರಿಂದ ಈಚೆಗೆ ಎಷ್ಟು ಪ್ರಬಲರಾಗಿ ಬೆಳೆದಿದ್ದಾರೆ, ರಾಜಕೀಯ ಚಟುವಟಿಕೆಗಳಲ್ಲಿ ಇವರ ಪಾತ್ರ ಎಷ್ಟು ಮಹತ್ವದ್ದು ಎಂಬುದು ಅವರಿಗೆ ಎಲ್ಲಾ ಗೊತ್ತಿದೆ. ಅವರಿಗೆ ಇದು ಗೊತ್ತಿಲ್ಲ ಎಂದು ಅಲ್ಲ. ವಿಧಿ ಇಲ್ಲದೆ, ಇಷ್ಟ ಇದ್ದೋ ಇಲ್ಲದೆಯೋ, ಅವರೂ ಕೂಡಾ ಕೆಲವು ಸಂದರ್ಭಗಳಲ್ಲಿ ಇವರಿಗೆ ಸಹಾಯ ಮಾಡಬೇಕಾದ ಅನಿವಾರ್ಯ ಸ್ಥಿತಿ ಒದಗಿ ಬಂದಿತು. ನಾವೆಲ್ಲಾ ಕೂಡಾ ಅಪರಾಧಿಗಳು. ಇವತ್ತೂ ಕೂಡಾ ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥ ನಮ್ಮ ಸ್ನೇಹಿತರು, ಹಿರಿಯ ಸದಸ್ಯರೂ ಆದ ಮೊಯಿಲಿಯವರು, ಉಪ ನಾಯಕರಾದ ಶ್ರೀಮಾನ್ ಖರ್ಗೆಯವರು ಇದ್ದಾರೆ ಅವರಿಗೂ ಇದೆಲ್ಲಾ ಗೊತ್ತಿದೆ. ಕೆಲವು ಸಂದರ್ಭಗಳಲ್ಲಿ ನಾವು ಅವರ ವಿರುದ್ಧ ನಿರ್ಧಾರ ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲ. ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಯಾವುದೇ ನಿರ್ಧಾರ ತೆಗೆದು ಕೊಳ್ಳುವುದಕ್ಕೂ ಆಗುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಯಾವುದಾದರೂ ಒಂದು ವಿಷಯ ಚರ್ಚೆ ಆಗ ಬೇಕಾಗಿದ್ದರೆ, ನಾಳೆ ಯಾವ ವಿಚಾರ ಚರ್ಚೆಯಾಗುತ್ತದೆ, ಅದರ ನಿರ್ಣಯ ಏನಾಗುತ್ತದೆ ಎಂಬುದು ಕ್ಯಾಬಿನೆಟ್‌ನಲ್ಲಿರುವವರಿಗಿಂತ ಮೊದಲು ಲಿಕ್ಕರ್ ಲಾಬಿಯವರಿಗೆ ಗೊತ್ತಿರುತ್ತದೆ. ಇಷ್ಟು ಪವರ್ ಫುಲ್ ಆಗಿದೆ ಲಿಕ್ಕರ್ ಲಾಬಿ. ಇವರ ಪೋಷಣೆಗೆ ಇವರ ಬೆಳವಣಿಗೆಗೆ ನಾವೆಲ್ಲಾ ಕಾರಣರಾಗಿದ್ದೇವೆ. ಮನಸ್ಸು ಮಾಡಿ ನಾವು ಹೇಳಿಕೊಳ್ಳುವುದಾದರೆ, ಯಾವ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ ಅವರನ್ನು ಸಂಕಟದಿಂದ ಪಾರು ಮಾಡಬೇಕಾದರೆ, ನಾವು ಆಡತಕ್ಕಂಥ ಮಾತಿಗೆ ಪರಿಣಾಮಕಾರಿಯಾದ ಅರ್ಥ ಬರಬೇಕಾದರೆ ಇವರ ಮರ್ಜಿಯಿಂದ ನಾವು ಬಿಡಿಸಿಕೊಳ್ಳತಕ್ಕಂಥ ಪಕ್ಷಾತೀತವಾದ ನಿರ್ಣಯವನ್ನು ನಾವು ಬೆಳೆಸಿಕೊಳ್ಳಬೇಕು. ನಾವು ಯಾವುದೇ ರಾಜಕೀಯ ಪಕ್ಷಗಳಿಗೆ ಸೇರಿದ್ದರೂ ಕೂಡಾ ನಮ್ಮ ಪಕ್ಷವೊಳಗೆ ಆಂತರೀಕವಾಗಿ ಸಾಕಷ್ಟು ತುಂಬಿರುವ ಅನ್ಯಾಯದ ವಿರುದ್ಧ ಹೋರಾಡತಕ್ಕಂಥ ಮನೋಭಾವನೆಯನ್ನು ನಾವು ಬೆಳೆಸಿಕೊಳ್ಳಬೇಕು. ಚುನಾವಣೆಯ ಸಮಯದಲ್ಲಿ ನಾವೂ ನೀವೂ ಅವರ ಮುಲಾಜಿನಲ್ಲಿ ಬಿದ್ದು ಅವರ ಕೃಪಾಕಟಾಕ್ಷಕ್ಕೆ ಒಳಗಾಗಿ ಚುನಾವಣಾ ಕಾರ್ಯಕ್ರಮಗಳನ್ನು ನಡೆಸತಕ್ಕಂಥ ಸ್ಥಿತಿಗೆ ಬಂದು ತಲುಪಿದ್ದೇವೆ. ಆದುದರಿಂದ ಈ ರೀತಿ ಭಾಷಣ ಮಾಡಿದರೆ ಏನೂ ಅರ್ಥ ಇರುವುದಿಲ್ಲ. ದಯವಿಟ್ಟು ಇದರ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಏನಾದರೂ ಹೇಳಿದರೆ ಅವರಿಗೆ ನಾನ ಕೃತಜ್ಞನಿದ್ದೇನೆ ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ರಮೇಶ್ ಕುಮಾರ್‌ರವರು ಹೇಳಿದತಕ್ಕಂಥ ಮಾತಿಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಮೊದಲೇ ನಾನು ಇವುಗಳನ್ನೆಲ್ಲಾ ಒಪ್ಪಿಕೊಂಡು ಹೇಳಿಬಿಟ್ಟಿದ್ದೇನೆ. ಇದು ಒಂದು ದಿವಸದ ವಿಚಾರ ಅಲ್ಲ. ಇದು ನನ್ನ ಒಂದು ದಿವಸದ ಚಿಂತನೆ ಅಲ್ಲ. ಆದರೆ ಇದು

ಸರಿಯಿಲ್ಲ ಎಂದು ನನಗೆ ಅನ್ನಿಸಿದರೂ ಕೂಡಾ, ನಾನು ದೇವರಾಜ ಅರಸರ ಮಂತ್ರಿ ಮಂಡಲದಲ್ಲಿ ಒಬ್ಬ ಮಂತ್ರಿಯಾಗಿದ್ದಾಗ ಇದರ ಗಂಭೀರ ಸ್ವರೂಪ ನನಗೆ ಅರ್ಥವಾಯಿತು. ನನ್ನ ಕ್ಷೇತ್ರದಲ್ಲಿರತಕ್ಕಂಥ ಒಂದು ಹಳ್ಳಿಗೆ ಅದೂ ಲಂಬಾಣಿ ತಾಂಡಾಕ್ಕೆ ನಾನು ಹೋದಾಗ, ಅಲ್ಲಿರತಕ್ಕಂಥ ಹೆಂಗಸರೆಲ್ಲರೂ ಒಂದು ಬೇಡಿಕೆಯನ್ನು ನನ್ನ ಮುಂದೆ ಇಟ್ಟರು. ಅದೇನೆಂದರೆ, ನಮ್ಮ ಊರಿನ ಮಧ್ಯೆ ಇರುವ ಹೆಂಡದ ಪಾಪನ್ನು ತೆಗೆಸಬೇಕು ಎಂಬುದು. ಮಂತ್ರಿಯಾದವನಿಗೆ ಇದು ಸುಲಭದ ಕೆಲಸ ಎಂದು ನಾನು ತಿಳಿದುಕೊಂಡೆ. I thought it is a very simple matter for a Minister. But I could not do it. ಆದರೆ ನಾನು ಎಷ್ಟು ಪ್ರಯತ್ನ ಮಾಡಿದರೂ ಕೂಡಾ ಇದನ್ನು ತೆಗೆಸುವುದಕ್ಕೆ ಸಾಧ್ಯವಾಗಲಿಲ್ಲ. ಕೊನೆಗೆ ನಾನು ಸಾಧಾರಣವಾಗಿ ಯಾವುದೇ ಅಧಿಕಾರಿಗಳ ಜೊತೆಗೆ ದುರ್ವರ್ತನೆ ಮಾಡುವುದಿಲ್ಲ, ಅವನು ಎಷ್ಟೇ ದುರ್ವರ್ತನೆ ಮಾಡಿದರೂ ಮಾಡಲಿ ನಾನು ಮಾಡುವುದಿಲ್ಲ. ಆದರೆ ಇದರಲ್ಲಿ ನಾನು ಕೊನೆಗೆ ಅಲ್ಲಿನ ಡೆಪ್ಯುಟಿ ಕಮಿಷನರ್‌ರವರಿಗೆ ಹೇಳಬೇಕಾಯಿತು, ಜನರಿಂದ ಒಡೆಸುತ್ತೇನೆ ಎಂದು ಹೇಳಬೇಕಾಯಿತು. ಆ ಮೇಲೆ ದೇವರಾಜ ಅರಸರಿಗೆ ನಾನು ರಿಪೋರ್ಟ್ ಮಾಡಿದೆ ಒಂದು ದೀರ್ಘವಾದ ಕಾಗದ ಬರೆದೆ.

೧-೩೦ ಪಿ. ಎಂ.

ಆ ಮೇಲೆ ದೇವರಾಜ ಅರಸುರವರಿಗೆ ನಾನು ರಿಪೋರ್ಟ್ ಮಾಡಿದೆ; ಈ ರೀತಿಯಾಗಿದೆ, ಇದನ್ನು ಅಧ್ಯಯನಮಾಡಿ ಎಂದು ಸುದೀರ್ಘವಾದ ಕಾಗದ ಒಂದನ್ನು ಸಹ ಬರೆದೆ ಆದರೆ ಆ ಎಕ್ಸೈಜ್ ಡೆಪ್ಯುಟಿ ಕಮಿಷನರ್, ಎಕ್ಸೈಜ್ ಕಮಿಷನರ್ ಮುಖ್ಯಮಂತ್ರಿಗಳು ಇವರುಗಳ axis ನಡುವೆ ಯಾರೂ ಏನನ್ನೂ ಮಾಡುವುದಕ್ಕಾಗುವುದಿಲ್ಲ, ಮಾನ್ಯ ಇನಾಂದಾರ್‌ರವರು ಮಂತ್ರಿಗಳಾಗಿರಬಹುದಷ್ಟೇ ಅವರಿಗೆ ಏನೋ ಸ್ವಲ್ಪ ಶಾಖಾಯಲವಣ ನೋಡಿಕೊಳ್ಳಬಹುದು. ಅದು ಬಿಟ್ಟರೆ he will have direct rapport with the chief Minister. He will get his orders and mandate from the Chief Minister and direct the Deputy Commissioners to implement it. ಇವರ ನಡುವೆ ಯಾರದೂ ಏನೂ ನಡೆಯುವುದಿಲ್ಲ. ಈ ಒಂದು ವ್ಯವಸ್ಥೆಯಲ್ಲಿ ಏನಾಗುತ್ತಿದೆ ಎಂದು ನಾನು ದಿವಂಗತ ಶ್ರೀ ದೇವರಾಜ ಅರಸರ ಜೊತೆ ಸುದೀರ್ಘವಾದ ಚರ್ಚೆ ಮಾಡಿದೆ ಮತ್ತು ಒಂದು ಸುಯೋಗವೆಂದರೆ ನನಗೆ ಶ್ರೀಮತಿ ಇಂದಿರಾಗಾಂಧಿಯವರ ಜೊತೆ ಮಾತನಾಡುವ ಅವಕಾಶ ಸಿಕ್ಕಿತು. ಆಗ ನಾನು ಅವರಿಗೆ ನನಗೆ ಗೊತ್ತಿದ್ದ ಎಲ್ಲಾ ವಿವರಗಳನ್ನು ಹೇಳಿದೆ ಆಗ ಅವರು "Is it so?" ಎಂದು ದಿಗ್ಭ್ರಮೆ ವ್ಯಕ್ತ ಪಡಿಸಿದರು. ಆಮೇಲೆ ಜಾರ್ಜ್ ಫರ್ನಾಂಡೀಸ್‌ರವರ ಜೊತೆ ಒಮ್ಮೆ ಮಾತನಾಡುತ್ತಾ ಚಳುವಳಿ ಮಾಡುವ ಬಗ್ಗೆ ಸಾಕಷ್ಟು ಚರ್ಚೆ ಮಾಡಿದೆ, ಇದು ನನ್ನ ಒಂದು ದಿವಸದ ಚಿಂತನೆಯಲ್ಲ. ಮುಂದಿನ ಚಿಂತನೆ, ಇದರ ವಿರುದ್ಧ ಹೋರಾಟ ಮಾಡಿ ಸಾಯುತ್ತೇನೆ, ತಾವೆಲ್ಲ ಇದಕ್ಕೆ ಸಹಾಯ ಮಾಡಿದರೆ ಬದುಕುತ್ತೇನೆ, ಇಲ್ಲದಿದ್ದರೆ ಹೋರಾಟ ಮಾಡಲೇ ಬೇಕಾಗುತ್ತದೆಂದು ನಾನು ಆಗಲೇ ಇದೇ ಮಾತು ಹೇಳಿದೆ.

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಮಂತ್ರಿಗಳು, ಮಾನ್ಯ ಸದಸ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಅವರು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಕೊಡಲಿ.

† ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಉಪಾಧ್ಯಕ್ಷರೇ, ಈಗತಾನೇ ಕುಡಿತದ ಅಮಲು ಆಯಿತು, ಆದಾದ ಮೇಲೆ ಈಗ ಊಟ. ಕುಡಿತ ಆಗಿದೆ ಮುಂದೆ ಯಾವ ತರಹದ ಊಟವನ್ನು ನಮ್ಮ ಮಾನ್ಯ ಮಂತ್ರಿಗಳಾದ ಬಸವರಾಜ ಪಾಟೀಲ್ ಅನ್ವರಿಯವರು ಕರ್ನಾಟಕದ ಜನತೆಗೆ ಕೊಡುತ್ತಿದ್ದಾರೆ ಎನ್ನತಕ್ಕಂಥ ವಿಚಾರ, ಆಮೇಲೆ ನಮ್ಮ ಮಾನ್ಯ ಸದಸ್ಯರಾದ ರಾಣಿಯವರು ನಮ್ಮನ್ನೆಲ್ಲಾ ಕಾಡಿಗೆ ಕರೆದುಕೊಂಡು ಹೋಗುತ್ತಾರೆ. ಈಗ ರಾಜಕೀಯ ಅನುಭವದಲ್ಲಿ ಕುಡಿತ, ಆಮೇಲೆ ಊಟ. ಇದಾದಮೇಲೆ ಕಾಡಿಗೆ ಹೋದರೂ ಹೋಗಬಹುದು. ಅದೇನೆ ಇರಲಿ. ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಇರತಕ್ಕಂಥ ಜನತೆಗೆ ಅದು ಯಾವುದೇ ಸರ್ಕಾರವಿರಲಿ, ಅನ್ನ ಬಟ್ಟೆ ಹಾಗೂ ವಸತಿಗಳನ್ನು ಕಲ್ಪಿಸಿಕೊಡತಕ್ಕಂಥ ಜವಾಬ್ದಾರಿ ಸರ್ಕಾರದ್ದು ಎಂದು ನಾನು ಭಾವಿಸಿದ್ದೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ಮೂರು ಕಾರ್ಯಗಳನ್ನು ಯಶಸ್ವಿಗೊಳಿಸುವಲ್ಲಿ ನಮ್ಮ ಆಹಾರ ಮತ್ತು ನಾಗರೀಕ ಸರಬರಾಜು
ಇಲಾಖೆ ಯಾವ ರೀತಿ ಕೆಲಸ ಮಾಡಿದೆ ಎನ್ನತಕ್ಕಂಥದ್ದನ್ನು ನಾನು ಸ್ವಲ್ಪ ಪ್ರಮಾಣದಲ್ಲಿ ವಿಚಾರ
ಮಾಡಿ ನೋಡಿದಾಗ ಅವರು ಪೂರ್ಣವಾಗಿ ವಿಫಲರಾಗಿದ್ದಾರೆಂದು ಹೇಳಬೇಕಾಗುತ್ತದೆ. ಅನ್ನ ಒದಗಿಸು
ವಲ್ಲಿ ವಿಫಲರಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅನ್ನ ದೇವರ ಮುಂದೆ ಇನ್ನೊಬ್ಬ ದೇವರಿಲ್ಲ,
ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಇಲಾಖೆಯನ್ನು ನಾವು ಅರ್ಥ ಮಾಡಿಕೊಳ್ಳುವುದಾದರೆ, ನನ್ನ
ದೃಷ್ಟಿಯಲ್ಲಿ ಮಾನ್ಯ ಅಧ್ಯಕ್ಷರೇ, ಹಸಿದವರ ಕಷ್ಟ ಊಟ ಮಾಡಿದವರಿಗೆ ಗೊತ್ತಾಗುವುದಿಲ್ಲ. ಆಹಾರ
ಇಲಾಖೆಯ ಜವಾಬ್ದಾರಿಯನ್ನು ಹೊತ್ತ ಮಾನ್ಯ ಮಂತ್ರಿಗಳು ಯಾವತ್ತೂ ಹಸಿದವರಲ್ಲ. ನೋಡಿ
ಅವರು ಏನು ಕಳೆಯಾಗಿದ್ದಾರೆ, ನಗುತ್ತಿದ್ದಾರೆ, ಮೈಕೈ ಚೆನ್ನಾಗಿ ತುಂಬಿಕೊಂಡಿದ್ದಾರೆ. ಸಾಮಾನ್ಯ
ಜನರಿಗೆ ಇದು ಇದೆಯೋ ಎನ್ನತಕ್ಕಂಥ ಕಳಕಳಿ ಅವರಲ್ಲಿ ಇರಬೇಕು. ಅದು ಇದ್ದರೆ ಮಾತ್ರ ಆಹಾರ
ಸರಬರಾಜು ವ್ಯವಸ್ಥೆ ಸರಿಯಾಗಿ ಆಗುತ್ತದೆ. ಅದು ಇಲ್ಲದಿದ್ದರೆ ಯಾವ ರೀತಿ ಅನ್ನ ಪ್ರತಿಯೊಬ್ಬರಿಗೂ
ಕೊಡಬೇಕು ಎನ್ನುವುದನ್ನು ಅವರು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಇವತ್ತು ಈ ಜವಾಬ್ದಾರಿ
ಆಹಾರ ಇಲಾಖೆಯ ಮೇಲೆ ಇದೆ. ಆಹಾರ ಇಲಾಖೆಯವರು ಯಾವ ರೀತಿ ಅನ್ನ ಒದಗಿಸುತ್ತಿದ್ದಾರೆ?
ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಒಂದು
ಭರವಸೆಯನ್ನು ಕೊಟ್ಟಿದ್ದರು. ಅದೇನೆಂದರೆ, ಬಡತನ ರೇಖೆಗಿಂತ ಕೆಳಗೆ ಇರತಕ್ಕಂಥ ಜನರಿಗೆ ನಾವು
ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತೇವೆಂದು. ಈ ಭರವಸೆಯನ್ನು
ನಿಜವಾಗಿ ಈಡೇರಿಸುವುದಕ್ಕೆ ಆಗುತ್ತದೆಯೋ ಎಂದು ನಿಮಗೆ ಪ್ರಶ್ನೆ ಹಾಕಿದರೆ ನಿಮ್ಮಿಂದ ಏನು
ಉತ್ತರ ಬರುತ್ತದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ನನ್ನ ಕ್ಷೇತ್ರದ ಪರಿಮಿತಿಯನ್ನು
ಇಟ್ಟುಕೊಂಡು ನಾನು ಸಮೀಕ್ಷೆ ನಡೆಸಿದಾಗ ನೀವು ಈ ಭರವಸೆಯನ್ನು ಈಡೇರಿಸಿಲ್ಲ ಎಂಬುದು
ಗೊತ್ತಾಯಿತು. ಈ ಭರವಸೆಯನ್ನು ಈಡೇರಿಸುವಲ್ಲಿ ನೀವು ವಿಫಲರಾಗಿದ್ದೀರಿ ಎನ್ನತಕ್ಕ
ವಿಚಾರವನ್ನು ನಾನು ನಿಮಗೆ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಮತ್ತೆ ಪಬ್ಲಿಕ್ ಡಿಸ್ಟ್ರಿಬ್ಯೂಷನ್
ಮೂಲಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವ ಒಂದು ಕಾರ್ಯಕ್ರಮವನ್ನು ನೀವು ಹಾಕಿ
ಕೊಂಡಿದ್ದೀರಿ. ಈ ವಿತರಣೆಯನ್ನು ಸೊಸೈಟಿಗಳ ಮೂಲಕ ಫೇರ್ ಪ್ರೈಸ್ ಡಿಪೋಗಳ ಮೂಲಕ,
ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳ ಮೂಲಕ ಮತ್ತು ಮೊಬೈಲ್ ಶಾಪ್‌ಗಳ ಮೂಲಕ ಮಾಡಲಾಗುತ್ತದೆ
ಎನ್ನತಕ್ಕ ಆಶ್ವಾಸನೆಯನ್ನು ನೀವು ಕೊಟ್ಟಿದ್ದಿರಿ. ಮೊದಲನೆಯದಾಗಿ ಸೊಸೈಟಿಗಳ ವಿಷಯವನ್ನು
ಹೇಳುವುದಾದರೆ, ಮೊನ್ನೆ ತಾನೆ ಮಾನ್ಯ ಸಹಕಾರ ಸಚಿವರಾದ ಶ್ರೀ ಏಕಾಂತಯ್ಯನವರು ಸೊಸೈಟಿಗಳ
ವಿಚಾರದಲ್ಲಿ ನಿಜವಾದ ಪರಿಸ್ಥಿತಿಯನ್ನು ಸಭೆಯ ಮುಂದಿಟ್ಟಿದ್ದಾರೆ. ಸೊಸೈಟಿಗಳ ಪರಿಸ್ಥಿತಿ ಹೇಗಿವೆ.
ನೂರಕ್ಕೆ ೯೦ ರಷ್ಟು ಸೊಸೈಟಿಗಳಲ್ಲಿ ಹಣ ಇಲ್ಲ, ಕೇವಲ ೫ ಸಾವಿರ ಸೊಸೈಟಿಗಳು ಮಾತ್ರ
ಲಾಭಗಳಿಸುತ್ತಿವೆಯೆಂದು ಹೇಳಿದ್ದಾರೆ. ಈ ಹೇಳಿಕೆಯನ್ನು ಸರ್ಕಾರವೇ ಕೊಟ್ಟಿದೆ. ಸೊಸೈಟಿಗಳ
ಮೂಲಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದನ್ನು ನೋಡಿದರೆ ನಿಜಾಂಶ ಎಲ್ಲರಿಗೂ
ಗೊತ್ತಾಗುತ್ತದೆ ನೂರಕ್ಕೆ ತೊಂಭತ್ತರಷ್ಟು ಸೊಸೈಟಿಗಳು ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲ. ಅವರ
ಹತ್ತಿರ ಹಣ ಇಲ್ಲ. ಸರ್ಕಾರ ಕೊಡತಕ್ಕಂಥ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಜನರಿಗೆ
ವಿತರಣೆ ಮಾಡತಕ್ಕ ಶಕ್ತಿ ಆ ಸೊಸೈಟಿಗಳಿಗೆ ಇಲ್ಲ. ಇದು ಕಟು ಸತ್ಯ. ಇದನ್ನು ನೀವು ಮುಚ್ಚಿ
ಕೊಳ್ಳುವುದಕ್ಕಾಗುವುದಿಲ್ಲ, ನಾನೂ ಮುಚ್ಚಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾದರೆ ಇದುವರೆಗೆ
ಸರ್ಕಾರದವರು ಕೊಟ್ಟ ಆಹಾರ ಪದಾರ್ಥಗಳು ಏನಾಯಿತು ? ಸರ್ಕಾರ ಕೊಟ್ಟಂಥ ಆಹಾರ ಪದಾರ್ಥ
ಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಸೊಸೈಟಿಗಳ ಹತ್ತಿರ ಹಣ ಇಲ್ಲ ಎಂದ ಮೇಲೆ ಈ ಆಹಾರ
ಪದಾರ್ಥಗಳನ್ನು ಯಾರು ತೆಗೆದುಕೊಂಡು ಹೋದರು ? ಇದರ ಬಗ್ಗೆ ನಾವು ಯೋಚನೆ ಮಾಡ
ಬೇಕಾಗುತ್ತದೆ. ಇದರ ಅರಿವು ಸರ್ಕಾರಕ್ಕೆ ಆಗಲಿಲ್ಲವೇ ? ಈ ವಿಷಯವಾಗಿ ಅನೇಕ ಸಾರಿ ಜಿಲ್ಲಾ
ಪರಿಷತ್ತಿನ ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ. ಅನೇಕ ಸಾರಿ ತಾಲ್ಲೂಕು ಮಂಡಲ ಸಮಿತಿಗಳಲ್ಲಿ
ಚರ್ಚೆಯಾಗಿದೆ. ಸೊಸೈಟಿಗಳಲ್ಲಿ ಹಣ ಇಲ್ಲ. ಹಣ ಇಲ್ಲದಿದ್ದರೆ ಸರ್ಕಾರದಿಂದ ಕೊಡತಕ್ಕ ಆಹಾರ
ಪದಾರ್ಥಗಳನ್ನು ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ. ಈ ಎಲ್ಲಾ ವಿಚಾರಗಳೂ ಎಲ್ಲರಿಗೂ
ಗೊತ್ತಿದೆ. ಅಂದರೆ ಸರ್ಕಾರ ಕೊಡತಕ್ಕ ಆಹಾರ ಪದಾರ್ಥಗಳೆಲ್ಲಾ ಪೂರ್ಣವಾಗಿ ಬ್ಲಾಕ್ ಮಾರ್ಕೆಟ್ಟಿಗೆ
ಹೋಗುತ್ತಿದೆ. ಸಾರ್ವಜನಿಕರಿಂದ ಇದರ ಬಗ್ಗೆ ಸದಾ ಕಾಲ ದೂರುಗಳು ಸರ್ಕಾರಕ್ಕೆ ಬರುತ್ತಲೇ
ಇರುತ್ತವೆ. ಇದರ ಬಗ್ಗೆ ಯಾವ ಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ? ಒಂದು ಸೊಸೈಟಿಗೆ ೨೦

ಕ್ವಿಂಟಾಲ್ ಅಕ್ಕಿ ಕೊಟ್ಟರೆ ೧೦ ಕ್ವಿಂಟಾಲ್ ಮಾತ್ರ ಆ ಸೊಸೈಟಿಯವರು ತೆಗೆದುಕೊಂಡು ಹೋಗುತ್ತಾರೆ. ಆದರೆ ಪೂರ್ಣವಾಗಿ ಬಿಲ್‌ನ್ನು ಹಾಕಿಸುತ್ತಾರೆ. ಉಳಿದ ೧೦ ಕ್ವಿಂಟಾಲ್ ಅಕ್ಕಿಯನ್ನು ಬ್ಲಾಕ್ ಮಾರ್ಕೆಟ ನಲ್ಲಿ ಮಾರುತ್ತಾರೆ. ಯಾರೋ ಒಬ್ಬ ಬ್ಲಾಕ್ ಮಾರ್ಕೆಟ್ ವರ್ತಕನನ್ನು ಜೊತೆಯಲ್ಲೇ ಕರೆದುಕೊಂಡು ಬಂದಿರುತ್ತಾರೆ. ೧೦ ಕ್ವಿಂಟಾಲ್ ಮಾತ್ರ ಅಕ್ಕಿಯನ್ನು ತೆಗೆದುಕೊಂಡು ಉಳಿದ ೧೦ ಕ್ವಿಂಟಾಲ್ ಅಕ್ಕಿಯನ್ನು ಆ ಬ್ಲಾಕ್ ಮಾರ್ಕೆಟ್ ವರ್ತಕನಿಗೆ ಮಾರಾಟ ಮಾಡಿ ಹೋಗುತ್ತಾರೆ. ಇದರ ಬಗ್ಗೆ ನಿಮ್ಮ ಇಲಾಖೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ನಿಮ್ಮ ಅಧಿಕಾರಿಗಳಿಂದ ನಿಮಗೆ ಇದರ ಬಗ್ಗೆ ಏನಾದರೂ ವರದಿ ಬಂದಿದೆಯೇ ? ಇದನ್ನು ನಾನು ಬಹಳ ಕಟುವಾಗಿ ಕೇಳಬೇಕಾಗುತ್ತದೆ. ಬೇರೆ ಎಲ್ಲಾ ಇಲಾಖೆಯ ನೌಕರರುಗಳು ಹಾಗೂ ಸಾರ್ವಜನಿಕರು ನಿಮ್ಮ ಇಲಾಖೆಯನ್ನೇ ಆಹಾರ ಪದಾರ್ಥಗಳಿಗೆ ಅವಲಂಬಿಸಿಕೊಂಡಿರುತ್ತಾರೆ. ನಾವು ನಿಮ್ಮ ಇಲಾಖೆ ಬಗ್ಗೆ ಕೇಳಿದರೆ ಬರೀ ಅಂಕಿ ಅಂಶಗಳನ್ನು ಒದಗಿಸಿ ಪ್ರತಿ ತಿಂಗಳೂ ಇಷ್ಟು ಕ್ವಿಂಟಾಲ್ ಅಕ್ಕಿಯನ್ನು ಇಂತಿಂಥ ಸೊಸೈಟಿಗಳಿಗೆ ಕೊಟ್ಟುಬಿಟ್ಟಿದ್ದೇವೆ ಎಂದು ಹೇಳುತ್ತೀರಿ.

ಆದರೆ ಹೇಗೆ ವಿತರಣೆ ಆಯಿತು ಎಂದು ಇದುವರೆಗೆ ಕೂಡ ಒಬ್ಬ ಅಧಿಕಾರಿಯಿಂದ ರಿಪೋರ್ಟ್ ಬಂದಿಲ್ಲ. ಈ ಬಗ್ಗೆ ನೀವು ಏನು ಮಾಡುತ್ತಿದ್ದೀರಿ ? ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಚಿಂತನೆ ಮಾಡಿದ್ದಾರೆಯೆ ? ಈ ತಪ್ಪನ್ನು ಸರಿಪಡಿಸತಕ್ಕಂಥ ರೀತಿನೀತಿಗಳು ನಿಮ್ಮಲ್ಲಿ ಏನಾದರೂ ಇವೆಯೇ? ಅದನ್ನು ನಾವು ಈಗ ಪ್ರಶ್ನೆ ಮಾಡಬೇಕಾಗುತ್ತದೆ. ಅದು ಕೂಡ ಜಿಲ್ಲಾಪರಿಷತ್ತು ಬಂದ ಮೇಲೆ, ಜಿಲ್ಲಾ ಪರಿಷತ್ತಿನವರ ಬಗ್ಗೆಯೂ ನಾವು ಹೇಳಬೇಕಾಗುತ್ತದೆ. ಅಧಿಕಾರ ವಿಕೇಂದ್ರೀಕರಣ ಹೇಗೆ ಆಗಬೇಕು ? ಮೊದಲು ಡಿ.ಸಿ. ಕಚೇರಿಯಲ್ಲಿ ಮಾತ್ರ ಭ್ರಷ್ಟಾಚಾರ ಆಗುತ್ತಿತ್ತು. ಇಷ್ಟು ಕೊಟ್ಟರೆ ಇಷ್ಟು ಎಂದು ಹಂಚಿಕೆಯಾಗುತ್ತಿತ್ತು. ಈಗ ಹಾಗಲ್ಲ, ಜಿಲ್ಲಾಪರಿಷತ್ತಿನವರು ಹಳ್ಳಿಗಳಿಗೆ ಹಂಚಿಕೆ ಮಾಡುವುದು ಮತ್ತು ಡಿ.ಸಿ. ಆಫೀಸಿನವರು ಪೇಟೆಗಳಿಗೆ ಹಂಚಿಕೆ ಮಾಡುವುದು ಎಂದು ಒಪ್ಪಂದ ಆಗಿದೆಯಂತೆ. ಇದು ಅಧಿಕಾರದ ಹಂಚಿಕೆಯ ರೀತಿಯಾಗಿದೆ ಈಗ ಈ ಆಹಾರ ಪದಾರ್ಥಗಳನ್ನು ನೀವು ಹೇಗೆ ಶೇಖರಣೆ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಈ ಸೊಸೈಟಿಗಳ ಮೂಲಕ ಬರತಕ್ಕಂಥ ಆಹಾರ ಪದಾರ್ಥಗಳು ಶೇಕಡಾ ೭೦-೮೦ರಷ್ಟು ಸೂಕ್ತ ರೀತಿಯಲ್ಲಿ ಹಂಚಿಕೆ ಆಗುತ್ತಾ ಇಲ್ಲ. ಆ ಒಂದು ಹಂಚಿಕೆಯ ವಿಚಾರದಲ್ಲಿ ನೀವು ಪೂರ್ಣವಾಗಿ ವಿಫಲರಾಗಿದ್ದೀರಿ ಎಂದು ಹೇಳಬೇಕಾಗುತ್ತದೆ. ಇವರು ಚುನಾವಣಾ ಕಾಲದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟರು. ಬಡತನ ರೇಖೆಗಿಂತ ಕೆಳಗಿರತಕ್ಕಂಥ ಎಲ್ಲಾ ಬಡವರಿಗೆ ೨ ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಒದಗಿಸುತ್ತೇವೆ ಎಂದು ಹೇಳಿದರು. ನಮ್ಮ ಒಂದು ಅಂಕಿ ಅಂಶಗಳ ಪ್ರಕಾರ ಶೇಕಡಾ ೫೦ ಕ್ಕಿಂತ ಮೇಲ್ಪಟ್ಟು ಬಡತನ ಸಂಖ್ಯೆ ಇದೆ ಎಂದಾಗ ನಮ್ಮ ರಾಜ್ಯ ಸರಕಾರ ಎಷ್ಟು ಜನರಿಗೆ ಅನ್ನವನ್ನು ಒದಗಿಸುತ್ತಿದೆ ? ನೀವು ಕೆಲವರಿಗೆ ಗ್ರೀನ್ ಕಾರ್ಡನ್ನು ಕೊಟ್ಟಿದ್ದೀರಿ. ಈ ಗ್ರೀನ್ ಕಾರ್ಡ್‌ಗಳನ್ನು ರಾಜ್ಯದಲ್ಲಿನ ಎಷ್ಟು ಜನ ಅರ್ಹ ಬಡ ಜನರಿಗೆ ಕೊಟ್ಟಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಬೇಕು. ಚುನಾವಣೆಯ ತನಕ ಒಂದು ಮಾತನ್ನು ಹೇಳಿ, ಚುನಾವಣೆ ಮುಗಿದ ಮೇಲೆ ಇನ್ನೊಂದು ರೀತಿಯಲ್ಲಿ ವರ್ತಿಸುತ್ತಾರೆ. ಈ ಬಡ ಜನರಿಗೆ ಹಂಚುವಾಗ, ಅರ್ಹರನ್ನು ಗುರುತಿಸುವಾಗ ಆರ್‌ಡಿಪಿ ಲಿಸ್ಟನ್ನು ಅನುಸರಿಸಿದ್ದಾರೆ. ನಾವು ಲಿಸ್ಟ್‌ನಲ್ಲಿ ಲೋಪದೋಷಗಳು ಇವೆಯೆಂದು ಹೇಳಿದ್ದಾಯಿತು, ನೀವು ಕೂಡ ಅದನ್ನು ಒಪ್ಪಿಕೊಂಡಿದ್ದೀರಿ. ಹಾಗೆಯೇ ಹಸಿರು ಕಾರ್ಡ್‌ಗಳನ್ನು ವಿತರಿಸುವಾಗ ಹೇಳಿದಂತಹ ಕೆಲವಾರು ಲೋಪದೋಷಗಳನ್ನು ತಾವುಗಳು ಒಪ್ಪಿಕೊಂಡಿದ್ದೀರಿ. ಆದರೆ ಇದುವರೆಗೂ ಕೂಡ ಒಂದು ಕಾರ್ಡನ್ನು ಜಾಸ್ತಿ ಮಾಡುವುದಕ್ಕೆ ನಿಮ್ಮಿಂದ ಆಗಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಇಂತಹ ವಿಷಯಗಳು ಕೇವಲ ಚುನಾವಣೆಯ ಭಾಷಣಗಳಿಗೆ ಸೀಮಿತವಾಗಿರಬಾರದು. ಇಂತಹ ಇಲಾಖೆಯು ಬಡಜನರ ವಿಷಯದಲ್ಲಿ ರಾಜಕೀಯ ಮಾಡಬಾರದು. ಈ ಇಲಾಖೆಯು ಅನ್ನ ಕೊಡುವ ವಿಚಾರದಲ್ಲಿಯೂ ರಾಜಕೀಯ ಮಾಡಬಾರದು, ನೀರು ಕೊಡುವ ವಿಚಾರದಲ್ಲಿಯೂ ರಾಜಕೀಯ ಮಾಡಬಾರದು. ಹೀಗೆ ಮಾಡಿದರೆ ನಿಮಗೆ ಬಡಜನರ ಶಾಪ ತಟ್ಟುತ್ತದೆ. ಆದುದರಿಂದ ನೀವು ಬಡವರ ಪರಿಸ್ಥಿತಿಯನ್ನು, ಅವರ ಕಷ್ಟಗಳನ್ನು ಅರ್ಥಮಾಡಿಕೊಳ್ಳಬೇಕು. ಬಡವರ ಗೋಳು ನಿಮಗೆ ಅರ್ಥವಾಗುವಂತಿರಬೇಕು. ಬಡವರ ಗೋಳು ಎಂದರೆ ತಾವು ನಗುತ್ತೀರಿ...

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಶಿವನಂಜಪ್ಪನವರು ಯಾವಾಗಲೂ ಸತ್ಯವನ್ನು ಹೇಳುತ್ತಿರುತ್ತಾರೆ. ಆದರೆ ಇವೊತ್ತು ಯಾಕೋ ಸತ್ಯವನ್ನು ಮರೆಮಾಚಿ ಮಾತನಾಡುತ್ತಾ ಇದ್ದಾರೆ. ಅದಕ್ಕಾಗಿ ನನಗೆ ನಗು ಬಂತು...

ಶ್ರೀ ಜಿ. ಎಸ್. ಶಿವನಂಜಪ್ಪ.—ಬಡಜನರ ಕಷ್ಟವು ನಿಮಗೆ ಗೊತ್ತಾಗುವುದಿಲ್ಲ ಎಂದು ಕಾಣುತ್ತದೆ. ಅವರ ಪ್ರಶ್ನೆ ಬಂದಾಗ ಅದಕ್ಕಾಗಿ ನಗುತ್ತೀರಿ ಎಂದು ಕಾಣುತ್ತದೆ. ಈಗ ನಾನು ಆಹಾರ ಹಂಚಿಕೆ ಮಾಡುತ್ತಿರುವ ಸೊಸೈಟಿಗಳ ವಿಚಾರವನ್ನು ಹೇಳಿದ್ದೇನೆ. ಮತ್ತು ಇದರ ರೀತಿಯಲ್ಲಿನ ಆಹಾರ ಹಂಚಿಕೆಯ ವಿಚಾರವನ್ನೂ ಹೇಳಿದ್ದೇನೆ. ನೀವು ಈ ೨ ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡತಕ್ಕಂಥಾದ್ದರಲ್ಲಿ ೧ ರೂಪಾಯಿ ೧೦ ಪೈಸೆಯನ್ನು ಸಬ್ಸಿಡಿ ಕೊಡಬೇಕು. ನಮ್ಮ ಗುಬ್ಬಿಯಲ್ಲಿರ ತಕ್ಕಂಥ ಒಂದು ಸೊಸೈಟಿಗೆ ೧ ಲಕ್ಷದ ೨೪ ಸಾವಿರ ರೂಪಾಯಿಗಳನ್ನು ನೀವು ಕೊಡಬೇಕಾಗಿದೆ. ಕಳೆದ ೪ ತಿಂಗಳುಗಳಿಂದ ಆ ಹಣವು ಅವರಿಗೆ ಬಿಡುಗಡೆಯಾಗಬೇಕಾಗಿದೆ, ಇದುವರೆಗೂ ಆಗಿಲ್ಲ. ಹೀಗೆ ನೀವು ಕೊಡಬೇಕಾದ ಇಷ್ಟು ದೊಡ್ಡ ಮೊತ್ತದ ಹಣವನ್ನು ಅವರಿಗೆ ಸಕಾಲದಲ್ಲಿ ಕೊಡದಿದ್ದರೆ, ನೀವು ಅಲಾಟ್ ಮಾಡಿದ್ದಂಥ ಆಹಾರ ಪದಾರ್ಥಗಳನ್ನು ಅವರು ಹೇಗೆ ತೆಗೆದುಕೊಂಡು ಹೋಗಬೇಕು ? ಅವರಿಗೆ ಬೇರೆ ಯಾವುದಾದರೂ ಮಾರ್ಗ ಇದೆಯೇ ? ಅವರ ಬೇರೆ ಯಾರ ಹತ್ತಿರವೋ ದುಡ್ಡು ತೆಗೆದು ಕೊಂಡು ಬಂದು ಬಿಲ್ ಹಾಕಿಸುತ್ತಾರೆ, ಅದನ್ನು ಮತ್ತೆ ಯಾರಿಗೋ ಕೊಡುತ್ತಾರೆ ಅವರಿಗೆ ಸಿಕ್ಕಿದಷ್ಟನ್ನು ವಿತರಣೆ ಮಾಡುತ್ತಾರೆ. ಇದನ್ನು ಏಕೆ ಸರಿಪಡಿಸಲಿಲ್ಲ. ಇಂತಹ ಸೊಸೈಟಿಗಳು ಎಷ್ಟಿವೆ ಎಂಬುದನ್ನು ಹೇಳಬೇಕು. ನಿಮ್ಮ ಆಡಳಿತ ಕ್ರಮ ಮತ್ತು ನಿಮ್ಮ ಇಲಾಖೆಯನ್ನು ನೋಡಿದರೆ ಅದು ನಿಮಗೆ ಇನ್ನೂ ಹಸ್ತಗತವಾಗಿಲ್ಲ ಎಂಬ ಭಾವನೆ ಬರುತ್ತದೆ. ನೀವು ಏನು ಜಿಲ್ಲಾ ಪರಿಷತ್ ಮಾಡಿದಿರಿ ಎಲ್ಲ ಬರೀ ರಾಜಕಾರಣ ಮಾಡಿಕೊಂಡು ಬಂದಿರಿ. ನಿಮಗೆ ಬೇಕಾ ದವರಿಗೆ ಎಫ್‌ಪಿಡಿಗಳನ್ನು ಕೊಟ್ಟಿರಿ, ಬೇಡವಾದವರಿಗೆ ಏನೂ ಇಲ್ಲ. ಈ ವ್ಯವಸ್ಥೆ ಸರಿಯಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಜಿಲ್ಲಾ ಪರಿಷತ್ತುಗಳ ಮೂಲಕ ಪ್ರತಿ ಹೆಜ್ಜೆಯಲ್ಲೂ ರಾಜಕೀಯ ಮಾಡುತ್ತಿದ್ದೀರಿ. ಇವರ ಸರ್ಕಾರಕ್ಕೆ ಆಹಾರ ಬೇಕು ಹಂಚೋದಕ್ಕೆ. ಆದರೆ ಅದು ಎಲ್ಲಿಂದ ಬರುತ್ತದೆ ? ಸರ್ಕಾರ ಉತ್ಪತ್ತಿ ಮಾಡುತ್ತದೆಯೇ ? ಕೇಂದ್ರ ಸರ್ಕಾರ ಕೊಡುವ ಆಹಾರ ಪದಾರ್ಥಗಳ ಜೊತೆಗೆ ಪಬ್ಲಿಕ್‌ನಲ್ಲಿ ಕೊಂಡು ಕೊಳ್ಳುವುದರ ಮೇಲೆ ಇವರು ಅವಲಂಬಿತರಾಗಿದ್ದಾರೆ. ಆ ಕಾರಣದಿಂದ ಯಾವಾಗಲೂ ಕೇಂದ್ರ ಕೊಟ್ಟಿಲ್ಲ, ಕೊಟ್ಟಿಲ್ಲ ಎಂದು ಹೇಳುವ ಚಾಳಿ ಬೆಳೆಸಿ ಕೊಂಡಿದ್ದಾರೆ. ನಿಮ್ಮ ಪ್ರೊಕ್ಯೂರ್‌ಮೆಂಟ್ ಪಾಲಿಸಿ ಏನು ? ನೀವು ಏನು ಕೊಂಡು ಕೊಳ್ಳುತ್ತಿದ್ದೀರಿ ಅದಕ್ಕೂ ನೀವು ಮಾರುವುದಕ್ಕೂ ಎಷ್ಟು ಡಿಫರೆನ್ಸ್ ಇದೆ ? ನೀವು ಹೆಚ್ಚಿಗೆ ಬೆಲೆ ಇಟ್ಟು ಮಾರುವುದರಿಂದ ಯಾರಿಗಾದರೂ ಲಾಭ ಇದೆಯೇ ? ರೈತನಿಂದ ೧೫೦ ರೂಪಾಯಿಗಳಿಗೆ ಕೊಂಡು ಅದನ್ನೇ ೧೮೦ ರೂಪಾಯಿಗಳಿಗೆ ಮಾರಿದರೆ ಯಾರಿಗೆ ಅನುಕೂಲವಾಗುತ್ತದೆ ? ಬಳಕೆದಾರನಿಗೆ ಅನುಕೂಲವಾಗಲಿಲ್ಲ, ರೈತನಿಗೆ ಅನುಕೂಲವಾಗಲಿಲ್ಲ. ನೀವು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲು, ಟ್ರಾನ್ಸ್‌ಪೋರ್ಟ್, ಗೋಡೋನ್ ಬಾಬ್ತುಗಳಿಗಾಗಿ ಹೆಚ್ಚಿಗೆ ಬೆಲೆ ಇಡಬೇಕಾಗುತ್ತದೆ ಎಂದು ನೀವು ಆ ಮೇಲೆ ಉತ್ತರ ಕೊಡುತ್ತೀರೆಂದು ಗೊತ್ತು. ಆದರೂ ಕೂಡ ಈ ಅಂತರವನ್ನು ಕಡಿಮೆ ಮಾಡಿದರೆ ರೈತನಿಗೆ ಅನುಕೂಲವಾಗುತ್ತದೆ. ಬೆಳೆಯುವ ರೈತನ ಸ್ಥಿತಿಯ ಬಗ್ಗೆ ನೀವು ಗಂಭೀರವಾಗಿ ಯೋಚನೆ ಮಾಡ ಬೇಕಾಗುತ್ತದೆ. ಇಲ್ಲಿ ನೂರಕ್ಕೆ ೮೦ ರಷ್ಟು ನಾವೆಲ್ಲ ರೈತರ ಮಕ್ಕಳಿದ್ದೇವೆ, ಒಂದಲ್ಲ ಒಂದು ಕಾರಣ ದಿಂದ ಬೇಸಾಯ ಮಾಡುತ್ತಿದ್ದೇವೆ, ಬಹಳಷ್ಟು ಜನ ಅದನ್ನೇ ಅವಲಂಬಿಸಿರುವವರು ಇದ್ದಾರೆ. ಅಂಥಾ ರೈತನ ಕುರಿತು ನೀವು ಯಾವ ನಿರ್ದಿಷ್ಟ ನೀತಿಯನ್ನನುಸರಿಸುತ್ತಿದ್ದೀರಿ, ರೈತನಿಗೆ ಕೊಡುವ ಬೆಲೆ ಏನಿದೆ ಅದು ಯಾವುದೂ ತೃಪ್ತಿಕರವಾಗಿಲ್ಲ. ಒಂದು ಕೆಲಸ ಮಾಡಿ, ನಿಮಗೆ ಶಹಭಾಷ್‌ಗಿರಿ ಕೊಡುತ್ತೇನೆ, ಪ್ಯಾರಿಟಿ ಪ್ರೈಸ್ ಮತ್ತು ಸಪೋರ್ಟ್ ಪ್ರೈಸ್ ಎರಡನ್ನು ರೈತ ಬೆಳೆಯುವ ಮುಂಚೆಯೇ ಫಿಕ್ಸ್ ಮಾಡಿ ಸಾಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಹಾಗೆಂದು ಕೇಂದ್ರದವರಿಗೆ ನೀವು ಏಕೆ ಖಚಿತವಾಗಿ ಹೇಳಬಾರದು ?

ಶ್ರೀ ಜಿ. ಎಸ್. ಶಿವನಂಜಪ್ಪ.—ಆಯಿತು, ನೀವು ಆಯ್ಕೆ ಮಾಡಿ ನನ್ನನ್ನು ಅಲ್ಲಿಗೆ ಕಳಿಸಿದಾಗ ನಾನು ಹಾಗೆಂದು ಹೇಳುತ್ತೇನೆ. ಸರ್ಕಾರದವರು, ನೀವು ರೆಸಲ್ಯೂಷನ್ ತೆಗೆದುಕೊಂಡು ಬಂದರೆ ನಾವು ಸಪೋರ್ಟ್ ಮಾಡುತ್ತೇವೆ. ಎಲ್ಲ ಸೇರಿ ಒತ್ತಾಯ ಮಾಡೋಣ. ಅದನ್ನು ಮಾಡಿ. ರೈತನಿಗೆ ಹಕ್ಕುವುದನ್ನು ಹೊರತು ಪಡಿಸಿ ಎಲ್ಲ ಬೆಲೆಗಳೂ ಗಗನಕ್ಕೇರಿವೆ, ಗ್ರಾಹಕ ಪಡೆಯುವ ಯಾವ ಸಾಮಗ್ರಿಯನ್ನು ಬೆಂಗಳೂರಿನಲ್ಲಿ ಕಡಿಮೆ ದರದಲ್ಲಿ ಅದನ್ನು ಪಡೆಯಲಾರ. ಅದಕ್ಕೆ ನಿಮ್ಮ ಇಲಾಖೆಗೇ ಅವನು ಮೊರೆಹೋಗಬೇಕಾಗುತ್ತದೆ. ಇಷ್ಟಾದರೂ ರೈತನಿಗೆ ಅನುಕೂಲವಾಗಿಲ್ಲ. ಅವನಿಗೆ

ಮಧ್ಯವರ್ತಿಗಳ ಕಾಟ ಬೇರೆ ಇದೆ. ಒಂದು ಕಡೆ ಮಿಲ್ಲು, ಇನ್ನೊಂದು ಕಡೆ ನೀವು–ಅವನಿಗೆ ಕಾಟ ಕೊಡುವುದಕ್ಕೆ ಇದ್ದೀರಿ. ಹೀಗಾಗಿ ರೈತರು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಎಲ್ಲಿಯವರೆಗೆ ಸಿಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಪಡಿತರದ ವ್ಯವಸ್ಥೆಯನ್ನು ಸರಿ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ಇವತ್ತು ವಿಷಾದದಿಂದ ಹೇಳಬೇಕಾಗಿದೆ. ಇವತ್ತು ತುಮಕೂರು ಜಿಲ್ಲೆಯಲ್ಲಿ ರಾಗಿ ಮತ್ತು ಭತ್ತ ಬೆಳೆಯತಕ್ಕಂತಹ ಜಮೀನಿನಲ್ಲಿ ನೀಲಗಿರಿ ಗಿಡಗಳನ್ನು ಹಾಕುತ್ತಿದ್ದಾರೆ. ಒಂದು ಕ್ವಿಂಟಾಲ್ ರಾಗಿಗೆ ೧೩೦ ರೂಪಾಯಿ ಬೆಲೆ ಎಂದು ಯಾವ ಸೈದ್ಧಾಂತಿಕ ಆಧಾರದ ಮೇಲೆ ತೀರ್ಮಾನ ಮಾಡಿದ್ದೀರಿ. ಒಂದು ಕ್ವಿಂಟಾಲ್ ರಾಗಿ ಬೆಳೆಯಬೇಕಾದರೆ ಎಷ್ಟು ರೂಪಾಯಿ ಖರ್ಚಾಗುತ್ತದೆ, ಅದರಿಂದ ಏನು ಲಾಭ ಬರುತ್ತದೆ ಎಂಬುದನ್ನೆಲ್ಲಾ ನೋಡಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ಕೇಂದ್ರ ಸರಕಾರದವರು ೧೫ ರೂಪಾಯಿ ಮಾಡಿದ್ದಾರೆ, ನಾವು ನೋಡಿ ೧೩೦ ರೂಪಾಯಿ ಮಾಡಿದ್ದೇವೆಂದು ತಾವು ಶಹಭಾಸ್‌ಗಿರಿ ಕೊಡಿ ಎಂದು ಕೇಳತಕ್ಕಂಥಾದ್ದು ಅಲ್ಲ. ಸರಕಾರ ನಡೆಸತಕ್ಕಂಥಾದ್ದು ಇದಲ್ಲ. ಕೇಂದ್ರ ಸರ್ಕಾರ ಏನು ಮಾಡುತ್ತದೆ ಅದನ್ನು ಅನುಕರಣೆ ಮಾಡಬೇಕಾಗಿರುವುದು ಅಲ್ಲ, ನಿಮ್ಮ ಸ್ವಂತ ನಿಲುವನ್ನು ತೆಗೆದುಕೊಂಡು ರೈತರ ಕಷ್ಟ ಸುಖಗಳನ್ನು ವಿಚಾರ ಮಾಡಿ, ಒಂದು ಕ್ವಿಂಟಾಲ್ ಭತ್ತಕ್ಕೆ, ಒಂದು ಕ್ವಿಂಟಾಲ್ ರಾಗಿಗೆ ಎಷ್ಟು ಖರ್ಚು ಬರುತ್ತದೆ, ಒಂದು ಕ್ವಿಂಟಾಲ್ ಜೋಳಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ನೋಡಿಕೊಂಡು ಬೆಲೆಯನ್ನು ಮೊದಲೇ ಅನೌನ್ಸ್ ಮಾಡಬೇಕು. ಅವರು ಬೆಳೆದದ್ದನ್ನೆಲ್ಲಾ ಮಂಡಿ ಪೇಟೆಗಳಿಗೆ ದಲ್ಲಾಳಿಗಳಿಗೆ ಹಾಕಿಯಾದ ಮೇಲೆ ೧೩೦ ರೂಪಾಯಿಗಳಿಗೆ ಕೊಂಡುಕೊಳ್ಳುತ್ತೇವೆಂದು ಅನೌನ್ಸ್ ಮಾಡುತ್ತಾರೆ. ಈ ಪದ್ಧತಿ ಸರಿಯಲ್ಲ. ಆದುದರಿಂದಾಗಿ ಇವತ್ತಿನ ದಿವಸ ನೀವು ಹಾಕಿಕೊಂಡಿರತಕ್ಕಂತಹ ಆಹಾರ ಒದಗಿಸತಕ್ಕಂತಹ ನೀತಿಯಲ್ಲಿ ವಿಫಲರಾಗಿದ್ದೀರಿ ಇನ್ನು ಮುಂದೆ ಕೂಡ ವಿಫಲರಾಗುತ್ತೀರಿ, ಯಶಸ್ಸು ಕಾಣಲಿಕ್ಕೆ ಸಾಧ್ಯವೇ ಇಲ್ಲವೆಂದು ನನಗೆ ಅನಿಸುತ್ತದೆ. ಚುನಾವಣೆ ಬರುತ್ತದೆ, ಎಲ್ಲರೂ ಕೂಡ ಆಗ ಆಶ್ವಾಸನೆಗಳನ್ನು ಕೊಡಬೇಕಾಗುತ್ತದೆ. ಆ ರೀತಿ ಆಶ್ವಾಸನೆಗಳನ್ನು ಕೊಟ್ಟಾದ ಮೇಲೆ ಅದನ್ನು ಪರಿಪಾಲನೆ ಮಾಡಬೇಕು ಎನ್ನತಕ್ಕಂತಹ ಮನಸ್ಸಾದರೂ ನಿಮಗೆ ಬೇಡವೇ ? ಬಡವರಿಗೆ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದೇ ರೀತಿ ಎಷ್ಟು ಜನ ಬಡವರಿಗೆ ಈ ರೀತಿ ಅಕ್ಕಿಯನ್ನು ಕೊಟ್ಟಿದ್ದೀರಿ ಎಂದರೆ ಕೇವಲ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಜನ ಅಂದರೆ ೫೦ ಲಕ್ಷ ಜನರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಸುಮಾರು ೪ ಕೋಟಿ ಜನಸಂಖ್ಯೆಯಲ್ಲಿ ಅರ್ಧ ಭಾಗದಷ್ಟು ಜನರು ಬಡತನದ ರೇಖೆಯಿಂದ ಕೆಳಗೆ ಇದ್ದಾರೆ. ಇನ್ನೂ ಎಷ್ಟು ಜನರಿಗೆ ಅನ್ನ ಕೊಡಬೇಕು ಅಂದರೆ, ಸುಮಾರು ೨ ಕೋಟಿ ಜನರಿಗೆ ಅನ್ನ ಕೊಡಬೇಕಾಗುತ್ತದೆ. ಬಡತನದ ರೇಖೆಗಿಂತ ಕೆಳಗೆ ಇರತಕ್ಕಂತಹ ಜನರಿಗೆ, ಬಡವರಿಗೆ, ೨ ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡಿ. ಸಂತೋಷ ಆದರೆ ಇದನ್ನು ಕೊಡ ಬೇಕಾದರೂ ಹೇಗೆ ಕೊಡುತ್ತಿದ್ದೀರಿ, ಅದು ಯಾರಿಗೆ ಮುಟ್ಟುತ್ತಿದೆ ಎಂಬುದು ಮುಖ್ಯ. ಯಾವುದಾದರೂ ಕಮಾಡಿಟೀಸನ್ನು ಕಡಿಮೆ ಬೆಲೆಗೆ ಕೊಟ್ಟರೆಂದರೆ ಕೇಂದ್ರ ಸರಕಾರದವರು ಕಡಿಮೆ ಕೊಟ್ಟಿದ್ದಾರೆ ನಾವು ಏನು ಮಾಡೋಣ ಕಡಿಮೆ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಒಂದು ಕೆ. ಜಿ. ಅಕ್ಕಿಗೆ ಕೇಂದ್ರ ಸರಕಾರದವರು ಎಷ್ಟು ಸಬ್ಸಿಡಿ ಕೊಡುತ್ತಿದ್ದಾರೆಂದರೆ ನನಗೆ ಗೊತ್ತಿರುವ ಮಟ್ಟಿಗೆ ೫೦–೬೦ ಪೈಸೆ ಕೊಡುತ್ತಿದ್ದಾರೆ. ಆದರೆ ಇದನ್ನು ನೀವು ಏಕೆ ಹೇಳಲಿಲ್ಲ. ಕೇಂದ್ರದವರೂ ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ ಎಂದು ಹೇಳಿದರೆ ತಪ್ಪೇನಾಗುತ್ತದೆ. ಕೇಂದ್ರದ ಸುದ್ದಿ ಎತ್ತಿದರೆ ಜನ ಓಟು ಕೊಡುವುದಿಲ್ಲವೇ ಬೇರೆ ವಿಚಾರಕ್ಕೆ ಮಾತ್ರ ಕೇಂದ್ರದ ಬಗ್ಗೆ ಹೇಳುತ್ತೀರಿ. ಆದರೆ ನಾವು ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಏನು ಕೊಡುತ್ತೇವೆ ಅದರಲ್ಲಿ ಅವರದ್ದೂ ಸಬ್ಸಿಡಿ ಇದೆ ಎಂದು ಏಕೆ ಹೇಳುವುದಿಲ್ಲ. ಈ ರೀತಿಯಾಗಿ ಕೇಂದ್ರ ಸರಕಾರವನ್ನು ದೂರದೇ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿ. ಸಾರ್ವಜನಿಕರಿಗೆ ಮೋಸ ಮಾಡತಕ್ಕಂಥಾದ್ದಕ್ಕೆ ಕೈ ಹಾಕಬೇಡಿ. ಎಷ್ಟು ದಿವಸ ಸುಳ್ಳು ಹೇಳಿಕೊಂಡು ತಿರುಗಾಡಲಿಕ್ಕೆ ಸಾಧ್ಯ? ಇನ್ನು ಒಂದು ವರ್ಷ ಆಮೇಲೆ ಸುಳ್ಳು ಹೇಳುವುದಕ್ಕೆ ಸಾಧ್ಯವಿಲ್ಲ. ನಿಜವಾಗಿ ಇರತಕ್ಕಂತಹ ಪರಿಸ್ಥಿತಿಯನ್ನು ಜನರ ಮುಂದಿಡಿ, ಅವರೇನೂ ನಿಮ್ಮನ್ನೂ ಗಲ್ಲಿಗೆ ಹಾಕುವುದಿಲ್ಲ. ೪ ವರ್ಷಗಳಿಂದ ಮಳೆಯಾಗಿಲ್ಲ, ಅವರೇನು ಮಾಡುತ್ತಾರೆ. ಅದು ನಿಜ, ನಾವು ಕೂಡ ಒಪ್ಪಿಕೊಳ್ಳೋಣ. ಆದರೆ ಏನು ಮಾಡುವುದಕ್ಕೆ ಸಾಧ್ಯ ? ಒಂದು ವರ್ಷ ನಾವು ಮಾಡತಕ್ಕಂಥ ಮುಕ್ಕಾಲು ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮ್ಮ ರಾಜ್ಯದಲ್ಲಿ ನಿಗದಿ ಪಡಿಸಿದ ಒಂದು ಗೊತ್ತುವಳಿಗೆ ಕೇವಲ ೨ ಪರ್ಸೆಂಟ್ ಮಾಡಿದ್ದೀರಿ. ಇನ್ನೊಂದು ವರ್ಷ ೧೯ ಪರ್ಸೆಂಟ್ ಮಾಡಿದ್ದೀರಿ. ನೂರಕ್ಕೂ ಹೆಚ್ಚು ಮಿಕ್ಕತಕ್ಕಂಥಾದ್ದನ್ನು ಎಲ್ಲಿ

ಭರಿಸುತ್ತೀರಿ. ನೀವು ವಿತರಣೆ ಮಾಡಬೇಕಾಗಿದ್ದರೆ ಪೂರ್ಣವಾಗಿ ಕೇಂದ್ರ ಸರಕಾರದವರು ಏನು ಕೊಡುತ್ತಾರೆ ಅದರ ಮೇಲೆ ವಿತರಣೆ ಮಾಡಬೇಕೇ ಹೊರತು ನಿಮ್ಮ ಪ್ರಯತ್ನದಿಂದ ನೀವು ಮಾಡಿಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ನನಗೆ ಅನ್ನಿಸುತ್ತದೆ. ಈ ಪ್ರೊಕ್ಯೂರ್‌ಮೆಂಟ್ ಬಗ್ಗೆ ಏನು ಮಾಡಿದ್ದೀರಿ ? ನೀವು ಪರ್‌ಫಾರ್ಮೆನ್ಸ್ ಬಜೆಟನ್ನು ನಮಗೆ ಕೊಟ್ಟಿಲ್ಲ. ಪರ್‌ಫಾರ್ಮೆನ್ಸ್ ಬಜೆಟ್‌ನ್ನು ತಾವು ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಇವರ ಆಹಾರ ನಿಗಮಗಳವರು ಮತ್ತೆ ಹೋಲ್‌ಸೇಲ್ ಸೊಸೈಟಿಗಳವರು ಏನೇನು ಮಾಡುತ್ತಿದ್ದಾರೆ. ಏನೇನು ಆಗಿದೆ ಎಂಬ ವಿಚಾರವನ್ನು ಬಹುಶಃ ಹೇಳಬೇಕಾಗಿತ್ತು. ಅದು ಯಾವುದನ್ನೂ ನೀವು ಕೊಟ್ಟಿಲ್ಲ. ಮತ್ತೆ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳತಕ್ಕಂಥಾದ್ದು ಇದೆ. ನೀವು ಈ ವರ್ಷ ಎಷ್ಟು ಕೊಂಡುಕೊಂಡಿದ್ದೀರಿ. ೧೯೮೭–೮೮ರಲ್ಲಿ ಎಷ್ಟು ಕೊಂಡುಕೊಂಡಿದ್ದೀರಿ ? ೧೯೮೬–೮೭ ರಲ್ಲಿ ಏನು ಮಾಡಿದ್ದೀರಿ ? ಎಲ್ಲೆಲ್ಲಿ ಶೇಖರಣೆ ಮಾಡಿದ್ದೀರಿ ? ಕೆ. ಎಸ್. ಎಫ್. ಸಿ. ಗೋಡೌನ್‌ನಲ್ಲಿ ಯಾವ ಯಾವ ಹೆಗ್ಗಣಗಳು ಎಷ್ಟೆಷ್ಟು ತಿಂದವು ? ಇಲ್ಲಿ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಂಡಂಥ ಆಹಾರ ಪದಾರ್ಥಗಳನ್ನು ಎಲ್ಲೆಲ್ಲಿ ಶೇಖರಣೆ ಮಾಡಿದ್ದೀರಿ ? ನಾಲ್ಕು ಕಾಲಿನ ಹೆಗ್ಗಣಗಳು, ಎರಡು ಕಾಲಿನ ಇಲಿಗಳು ಎಷ್ಟೆಷ್ಟು ತಿಂದವು ಎನ್ನುವುದನ್ನು ವರದಿಯಲ್ಲಿ ಕೊಡಬೇಕಾಗಿತ್ತು. ಲಾಸ್ ಅಥವಾ ಪ್ರಾಫಿಟ್ ಯಾವುದೂ ಇಲ್ಲ. ವಾರ್ಷಿಕ ವರದಿಯಲ್ಲಿ ಹೋದ ವರ್ಷದ ಅಂಕಿಅಂಶಗಳು ಏನು ಇತ್ತು, ಅದಕ್ಕೆ ಸ್ವಲ್ಪ ಅಂದಾಜು ಹೆಚ್ಚು ಕಡಿಮೆ ಮಾಡಿ, ಅಂಕಿಗಳನ್ನು ಮೇಲೆ ಕೆಳಗೆ ಹಾಕಿ ಗುಣಿಸಿ ತೆಗೆದು ಅಲ್ಲಿ ಇಟ್ಟುಬಿಟ್ಟಿದ್ದಾರೆ. ನಿಮ್ಮ ಪರ್‌ಫಾರ್ಮನ್ಸ್ ಬಜೆಟ್ ಎಲ್ಲಿ ? ನೀವು ಓಪನ್ ಮಾರ್ಕೆಟ್‌ನಲ್ಲಿ ಎಷ್ಟು ಕೊಂಡುಕೊಂಡ್ರಿ ? ಲೆವಿ ಮೂಲಕ ಓನರ್ ಮೂಲಕ ಎಷ್ಟು ಕೊಂಡುಕೊಂಡ್ರಿ ? ಅದನ್ನು ಎಲ್ಲೆಲ್ಲಿ ಶೇಖರಣೆ ಮಾಡಿದ್ದೀರಿ. ಮಾರ್ಕೆಟ್ ಮೂಲಕ ಪರ್ಚೇಸ್ ಮಾಡಿದ್ದು ಎಲ್ಲಿ ? ಇವುಗಳ ವಿವರಗಳನ್ನು ಕೊಟ್ಟಿದ್ದರೆ, ನೀವು ಎಷ್ಟು ಕೊಂಡುಕೊಂಡಿದ್ದೀರಿ, ಎಷ್ಟು ಆಚೆಗೆ ಹೋಯಿತು, ಎಷ್ಟು ಷಾರ್ಟೇಜ್ ಬಂತು, ಎಷ್ಟು ಮಿಕ್ಕಿದ್ದು ಎನ್ನತಕ್ಕಂಥ ವಿಚಾರ ತಿಳಿಯುತ್ತಿತ್ತು. ಪ್ರಾಫಿಟ್ಟೂ ಇಲ್ಲ, ಲಾಸ್ ಕೂಡಾ ಇಲ್ಲ. ಸ್ಟಾಕ್ ಕೂಡಾ ಇವರು ಕೊಟ್ಟಿಲ್ಲ. ಹೀಗಾಗಿ ಒಂದು ದೊಡ್ಡ ಕತ್ತಲೆಯಲ್ಲಿ ಇವತ್ತಿನ ದಿವಸ ಈ ಆನ್ಯುಯಲ್ ರಿಪೋರ್ಟನ್ನು ಇಟ್ಟಿದ್ದಾರೆ, ಇದರಲ್ಲಿ ಏನೂ ಇಲ್ಲ. ನಿಮ್ಮ ಇಲಾಖೆಯು ಎಲ್ಲಾ ಆಗುಹೋಗುಗಳನ್ನು ನಮ್ಮ ಪಿ. ಎ. ಸಿ. ಕಮಿಟಿಯವರು ೧೯೮೭–೮೮ರಲ್ಲಿ ನಿಮಗೆ ಕೊಟ್ಟಿದ್ದಾರೆ. ಬಹುಶಃ ತಾವು ಅದನ್ನು ನೋಡಿದ್ದೀರಿ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈಗ ಪ್ರೊಕ್ಯೂರ್‌ಮೆಂಟ್......

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಪೇಜ್ ನಂ. ೧೭ರಲ್ಲಿ ಈ ಆಹಾರ ನಿಗಮದ ವಹಿವಾಟಿನ ಕಿರುಪರಿಚಯವನ್ನು ಕೊಟ್ಟಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಅದನ್ನು ಓದಿಕೊಂಡೇ ಬಂದಿದ್ದೇನೆ. ಇದನ್ನು ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಕೊಡಬೇಕಾಗಿತ್ತು. ನಿಮ್ಮ ಸಾಧನೆ ವಿಫಲತೆ, ಇವುಗಳನ್ನಾದರೂ ಕೊಡಬೇಕಾಗಿತ್ತು. ಅದನ್ನು ಅವರು ಕೊಟ್ಟಿಲ್ಲ.

ಉಪಾಧ್ಯಕ್ಷರು.—ತಮಗೆ ಮಾತನಾಡುವುದಕ್ಕೆ ೪೦ ಮಿನಿಟ್‌ನ್ನು ಕೊಡಲಾಗಿತ್ತು. ಅದರಲ್ಲಿ ಈಗಾಗಲೇ ೩೦ ನಿಮಿಷ ಆಗಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆಯಿತು, ಮುಗಿಸುತ್ತೇನೆ. ಈಗ ಗ್ರೀನ್ ಕಾರ್ಡ್‌ಗೆ ಅಕ್ಕಿಯನ್ನು ಕೊಡುವ ಬಗ್ಗೆ ಹೇಳುತ್ತೇನೆ. ಹಸಿರು ಕಾರ್ಡ್‌ಗೆ ಈಗ ಒಂದು ವರ್ಷದಿಂದ ಕೂಡಾ ಒಂದು ಕೆ. ಜಿ. ಅಕ್ಕಿಯನ್ನು ಇವರು ಹಂಚಿಲ್ಲ ಎಂದು ನನ್ನ ಭಾವನೆ. ಇಡೀ ತುಮಕೂರು ಜಿಲ್ಲೆಯಲ್ಲಿ, ಚಿತ್ರದುರ್ಗ ಜಿಲ್ಲೆಯಲ್ಲಿ, ಹಾಸನ ಜಿಲ್ಲೆಯಲ್ಲಿ ನಾನು ಸುತ್ತಾಡಿ ಬಂದೆ. ನಾನು ಬೇರೆ ಬೇರೆ ಕೆಲಸಗಳಿಗೆ ಹೋಗಿದ್ದೆ. ಇದರ ಬಗ್ಗೆ ವಿಚಾರ ಮಾಡಿದಾಗ ಹಸಿರು ಕಾರ್ಡ್‌ಗೆ ಅಕ್ಕಿಯನ್ನು ಇದುವರೆಗೂ ಇವರು ವಿತರಣೆ ಮಾಡಿಲ್ಲ. ಇದರ ಬಗ್ಗೆ ಏನೂ ಹೇಳಲಿಲ್ಲ. ಇದರ ಸಾಧನೆ ಏನು ಎಂದು ಗೊತ್ತಾಗಲಿಲ್ಲ. ಅದಕ್ಕಾಗಿ ಎಷ್ಟು ಪ್ರೊಕ್ಯೂರ್ ಮಾಡಿದ್ದಾರೆ, ಎಷ್ಟು ಅಲಾಟ್ ಮಾಡಿದ್ದಾರೆ ಎಂದು ಹೇಳಲಿಲ್ಲ. ಇದರಿಂದಾಗಿ ಆಹಾರವನ್ನು ಒದಗಿಸತಕ್ಕಂಥ ವಿಚಾರದಲ್ಲಿ ಇವರು ಪೂರ್ಣವಾಗಿ ಫೇಲ್ ಆಗಿದ್ದಾರೆ, ವಿಫಲರಾಗಿದ್ದಾರೆ, ಇವರು ಜನರಿಗೆ ಹೇಳುವ ರೀತಿಯಲ್ಲಿ ಅನ್ನ ಕೊಡತಕ್ಕಂಥ ಶಕ್ತಿ ಇಲ್ಲ, ಅವರ ಬಗ್ಗೆ ಕಳಕಳಿ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇನ್ನೂ ಸುಮಾರು ಒಂದು ಕೋಟಿ ಜನ ಹಸಿರು ಕಾರ್ಡನ್ನು

ಹೊಂದುವವರು ಇದ್ದಾರೆ, ಇವತ್ತು ಕೆಲವು ಮುನಿಸಿಪಾಲಿಟೀಸ್ ಮಂಡಲ ಪಂಚಾಯಿತಿಗಳಾಗಿ ಪರಿವರ್ತನೆಯಾಗುತ್ತಿವೆ.

೨-೦೦ ಪಿ. ಎಂ.

ಅಲ್ಲಿ ಹಸಿರು ಕಾರ್ಡ್‌ನ ವ್ಯವಸ್ಥೆ ಇಲ್ಲ, ಇದುವರೆಗೆ ಮಾಡಿಲ್ಲ. ನೀವು ಅಲ್ಲಿ ಎಲ್ಲಾ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದೀರಿ, ಆದರೆ ಮಾಡಲಿಲ್ಲ, ಒಂದು ಕಾರ್ಡ್ ಕೂಡ ಅಲ್ಲಿ ಕೊಟ್ಟಿಲ್ಲ. ಇವೊತ್ತಿನ ದಿವಸ ಅಮ್ಮಸಂದ್ರ ಮುನಿಸಿಪಾಲಿಟಿ ಆಗಿದೆ. ಇಂಟೀರಿಯಂ ಮಂಡಲ್‌ವೆಂದು ಡಿಕ್ಲೇರ್ ಮಾಡಿದ್ದೀರಿ. ಅಲ್ಲಿ ಕಾರ್ಖಾನೆಗೆ ಹೋಗತಕ್ಕ ಕಾರ್ಮಿಕರು ಬಹಳ ಜನ ಇದ್ದಾರೆ. ಇವೊತ್ತು ೨೦ ಜನಕ್ಕೆ ಕಾರ್ಡ್ ಕೊಡುತ್ತಿದ್ದುದನ್ನು ನಿಲ್ಲಿಸುತ್ತಿದ್ದೀರಿ. ೧೦ ಜನಕ್ಕೆ ಕೂಡ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಗೊಂದಲಮಯ ವಾತಾವರಣವನ್ನು ನಿರ್ಮಾಣ ಮಾಡಿದ್ದೀರಿ. ಡೆಪ್ಯುಟಿ ಕಮೀಷನರ್‌ನ್ನು ಕೇಳಿದರೆ ಜಿಲ್ಲಾ ಪರಿಷತ್‌ನಲ್ಲಿ ಕೇಳಿ ಎನ್ನುತ್ತಾರೆ. ಜಿಲ್ಲಾ ಪರಿಷತ್‌ನಲ್ಲಿ ಕೇಳಿದರೆ ಡೆಪ್ಯುಟಿ ಕಮೀಷನರ್‌ರವರನ್ನು ಕೇಳಿ ಎಂದು ಹೇಳುತ್ತಾರೆ. ಇಬ್ಬರನ್ನೂ ಸೇರಿಸಿ ಕೇಳಿದರೆ ಸರ್ಕಾರವನ್ನು ಕೇಳಿ ಎಂದು ಹೇಳುತ್ತಾರೆ. ಇದು ಯಾವ ನೀತಿ. ನೀವು ಯಾವುದೇ ನೀತಿಯನ್ನು ರೂಪಿಸುವಾಗ ಅದರ ಸಾಧಕ ಬಾಧಕಗಳನ್ನು ನೋಡಿಕೊಂಡು ನೀತಿಯನ್ನು ರೂಪಿಸಬೇಕು. ಆ ರೀತಿ ಮಾಡಲಿಲ್ಲ. ಇದರಿಂದ ಬಡವರಿಗೆ ಕಷ್ಟ ಏನು ಎಂದು ಯೋಚನೆ ಮಾಡಿಲ್ಲ, ಕೇವಲ ರಾಜಕೀಯ ಉದ್ದೇಶ ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಮಾಡುತ್ತಾ ಬಂದಿದ್ದೀರಿ. ಇದರಿಂದ ಬಡವರಿಗೆ ಅನ್ಯಾಯ ಆಗಿದೆ. ಎರಡು ಹೊತ್ತಿನ ಊಟ ಇಲ್ಲದವರ ಬಗ್ಗೆ ಕಳಕಳಿ ಇಲ್ಲ, ಯಾರಿಗೆ ಎರಡು ಹೊತ್ತಿನ ಅನ್ನ ಇಲ್ಲ ಅವರ ಜವಾಬ್ದಾರಿ ಸರ್ಕಾರದ್ದು ಆಗಬೇಕು. ದುರ್ದೈವವಶಾತ್ ವ್ಯವಸ್ಥಿತವಾದ ರೀತಿಯಲ್ಲಿ, ಸರಿಯಾದ ರೀತಿಯಲ್ಲಿ ಆಹಾರ ಹಂಚಿಕೆಯನ್ನು ಮಾಡುತ್ತಿಲ್ಲ. ಹಿಂದೆ ನಮ್ಮ ಸ್ನೇಹಿತರು ಒಂದು ಮಾತು ಹೇಳಿದರು. ''ಅನ್ನದಾತಾ ಸುಖೀ ಭವ'' ಎಂದು. ಆದರೆ ಯಾರು ಅನ್ನವನ್ನು ಕೊಡುತ್ತಾರೆ ಅವರು ಸುಖವಾಗಿರಲಿ ಎಂದು. ನಾನು ಮಾನ್ಯ ಬಸವರಾಜ ಪಾಟೀಲ್ ಅನ್ವರಿ ಅವರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಅವರು ಹೆಚ್ಚು ಪ್ರಯತ್ನ ಮಾಡಿ ಗ್ರಾಹಕರಿಗೆ ಏನು ಎಸೆನ್ಷಿಯಲ್ ಕಮಾಡಿಟೀಸ್‌ನ್ನು ವಿತರಣೆ ಮಾಡುತ್ತಾರೆ ಅದೇ ರೀತಿ ರೈತನಿಗೆ ಬೇಕಾದ ಐಟಂಗಳನ್ನು ರೈತರಿಗೆ ಕೊಡಬೇಕು. ಉಕ್ಕಿನ ಸಾಮಾನುಗಳು, ಬೇಸಾಯಕ್ಕೆ ಬೇಕಾದಂತಹ ಪೆಸ್ಟಿಸೈಡ್ಸ್ ಮತ್ತು ರೈತರಿಗೆ ಬೇಕಾಗಿರತಕ್ಕ ಕೆಲವು ಸಲಕರಣೆಗಳನ್ನು ನಿಮ್ಮ ಎಸೆನ್ಷಿಯಲ್ ಕಮಾಡಿಟೀಸ್‌ನಲ್ಲಿ ಏಕೆ ಸೇರಿಸಬಾರದು. ರೈತ ಬೆಳೆಯತಕ್ಕ ಬೆಳೆ, ರೈತ ಉತ್ಪಾದನೆ ಮಾಡತಕ್ಕ ಪದಾರ್ಥಗಳ ಬಗ್ಗೆ ಚಿಂತೆ ಇಲ್ಲ. ರೈತರು ಅಸಂಘಟಿತರು, ಇವರನ್ನು ಯಾರೂ ಕೇಳುವುದಿಲ್ಲ, ಇವರ ಬಗ್ಗೆ ಚಿಂತೆ ಇಲ್ಲ. ಆದರೆ ರೈತ ಬೆಳೆದು ಮಾರತಕ್ಕ ಬೆಲೆಗೂ, ರೈತ ಕೊಳ್ಳತಕ್ಕ ಬೆಲೆಗೂ ಇವತ್ತು ಅಜಗಜಾಂತರ ವ್ಯತ್ಯಾಸ ಇದೆ. ರೈತನ ಗೋಳನ್ನು ಯಾರೂ ಕೇಳುವುದಿಲ್ಲ. ನೀವು ಇಂಟರೆಸ್ಟ್ ಬಿಟ್ಟಿದ್ದೀರಿ, ಸಬ್ಸಿಡಿ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಈ ರೀತಿ ಹೇಳಿದರೆ ಅವರು ಉದ್ಧಾರವಾಗುವುದಿಲ್ಲ, ಅವರು ಉಸಿರು ಬಿಡುವುದಕ್ಕೆ ಮಾತ್ರ ಸಾಧ್ಯ. ರೈತನಿಗೆ ಬೇಕಾಗಿರತಕ್ಕ ವಸ್ತುಗಳನ್ನೂ ಸಹ ಎಸೆನ್ಷಿಯಲ್ ಕಮಾಡಿಟೀಸ್‌ನಲ್ಲಿ ಏಕೆ ಸೇರಿಸುವುದಕ್ಕೆ ಪ್ರಯತ್ನ ಮಾಡಬಾರದು. ಆತ ಬೆಳೆಯುವುದಕ್ಕೆ ಬೇಕಾದ ಗೊಬ್ಬರ, ಇತ್ಯಾದಿಯನ್ನು ಎಸೆನ್ಷಿಯಲ್ ಕಮಾಡಿಟೀಸ್‌ನ್ನು ಸೇರಿಸಿ. ಇವೊತ್ತಿನ ದಿವಸ ಎಲ್ಲಾ ಪದಾರ್ಥಗಳ ಬೆಲೆ ಏರಿದ್ದರೂ ರಾಗಿ ಮಾತ್ರ ಒಂದು ಕ್ವಿಂಟಾಲ್‌ಗೆ ೮೦ ರೂಪಾಯಿನಿಂದ ೯೦ ರೂಪಾಯಿವರೆಗೆ ಮಾತ್ರ ಇದೆ. ರೈತನ ಬೆಳೆಗೆ ಹೆಚ್ಚು ಬೆಲೆ ಸಿಕ್ಕುತ್ತಾ ಇಲ್ಲ. ರೈತನಿಂದ ೮೦-೯೦ ರೂಪಾಯಿಗಳಿಗೆ ತೆಗೆದುಕೊಂಡು ಮಧ್ಯವರ್ತಿಗಳು ಅದನ್ನು ಎರಡು ನೂರು ರೂಪಾಯಿಗಳಿಗೆ ಮಾರಿ ತಮ್ಮ ಕಿಸೆಗೆ ಹಣವನ್ನು ಹಾಕಿಕೊಂಡು ಹೋಗುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಇದು ನಡೆಯುತ್ತಿದೆ. ರೈತನಿಗೆ ಲಾಭ ಸಿಗುತ್ತಾ ಇಲ್ಲ. ಆದುದರಿಂದ ರೈತ ಬೆಳೆದ ಪದಾರ್ಥಗಳನ್ನು ಎಸೆನ್ಷಿಯಲ್ ಕಮಾಡಿಟೀಸ್‌ನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ಗುಳ ೪ ಆಣೆ ಇದ್ದದ್ದು ಇವೊತ್ತಿನ ದಿವಸ ೮-೧೦ ರೂಪಾಯಿ ಆಗಿದೆ. ರೈತ ಕೊಳ್ಳತಕ್ಕ ವಸ್ತುಗಳು ಒಂದಕ್ಕೆ ಹತ್ತರಷ್ಟು ಹೆಚ್ಚು ಆಗಿದೆ. ಆದರೆ ಅವನ ಬೆಳೆಗೆ ಮಾತ್ರ ಹೆಚ್ಚು ಬೆಲೆ ಸಿಗುತ್ತಿಲ್ಲ. ಸುಗ್ಗಿ ಕಾಲದಲ್ಲಿ ಸಹ ಆತನಿಗೆ ಹೆಚ್ಚು ಬೆಲೆ ಸಿಗುತ್ತಿಲ್ಲ. ಆದುದರಿಂದ ರೈತನು ಬೆಳೆದ ಪದಾರ್ಥಗಳಿಗೆ ಹೆಚ್ಚು ಬೆಲೆಯು ಸಿಗುವಂತೆ ವ್ಯವಸ್ಥೆ ಮಾಡಬೇಕು. ಇನ್ನು ಬಟ್ಟೆ ವಿಷಯ ಹೇಳುವುದಾದರೆ, ನನಗೆ ಬಹಳ ವ್ಯಥೆಯಾಗುತ್ತದೆ. ನಮ್ಮ ದೇಶದಲ್ಲಿರತಕ್ಕ ಹೆಣ್ಣು ಮಕ್ಕಳಿಗೆ ಏನು

ಸೀರೆ ಕೊಡುತ್ತಿದ್ದೀರಿ, ಅದು ಬಹಳ ತೆಳುವಾಗಿದೆ. ಆದ್ದರಿಂದ ಅವರ ಮಾನ ಹೋಗುತ್ತಿದೆ. ಹಳ್ಳಿಯಲ್ಲಿನ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಒಳ ಲಂಗ ಹಾಕಿರುವುದಿಲ್ಲ ನೀವು ಕೊಡುವಂತಹ ಸೀರೆ ಅವರಿಗೆ ಕೊಟ್ಟರೆ ಕ್ಯಾಬರೆ ತರಹ ಆಗುತ್ತದೆ ಎಂದು ಮಾನ್ಯ ಸದಸ್ಯಣಿಯವರು ಹೇಳುತ್ತಿದ್ದಾರೆ. ಈ ರೀತಿಯ ತೆಳ್ಳನೆಯ ಸೀರೆಯನ್ನು ಕೊಟ್ಟು ಹೆಣ್ಣು ಮಕ್ಕಳ ಮಾನ ಮರ್ಯಾದೆ ತೆಗೆಯಲು ಹೊರಟಿದ್ದೀರಿ, ಈ ರೀತಿಯ ಪ್ರಯತ್ನವನ್ನು ಯಾಕೆ ಮಾಡಿದ್ದೀರಿ. ಈ ಕಾರ್ಯಕ್ರಮದಲ್ಲಿ ಬಟ್ಟೆ ಹಂಚುವ ಕಾರ್ಯಕ್ರಮ ಎರಡು ತಿಂಗಳು ಮಾತ್ರ ನಡೆಯಿತು ನಮ್ಮ ಮಂತ್ರಿಗಳು ಹೋದ ಕಡೆಯಲ್ಲಿ ಟಾಮ್ ಟಾಮ್ ಮಾಡಿದ್ದೇ ಮಾಡಿದ್ದು ಮಂತ್ರಿಗಳು ಹಳ್ಳಿಗೆ ಹೋಗಿ ಸೀರೆ ಕೊಡುತ್ತೇವೆ ಬಟ್ಟೆ ಕೊಡುತ್ತೇವೆ ಎಂದು ಹೇಳಿದ್ದೇ ಹೇಳಿದ್ದು ಈ ಕಾರ್ಯಕ್ರಮ ಕೂಡ ನಿಲ್ಲಿಸಿದ್ದೀರಿ. ಯಾಕೆ ನೀವು ಈ ರೀತಿಯ ಸುಳ್ಳು ಹೇಳಿಕೆ ಕೊಟ್ಟು ಪ್ರಚಾರ ಮಾಡುತ್ತಿದ್ದೀರಿ, ಇದು ಸರಿಯಲ್ಲ. ಇದನ್ನು ಅಗ್ಗದ ಪ್ರಚಾರಕ್ಕೋಸ್ಕರ ಮತ್ತು ರಾಜಕೀಯ ದುರುದ್ದೇಶಕ್ಕೋಸ್ಕರ ಮಾಡುತ್ತಿದ್ದೀರಿ ? ನೀವು ಪ್ರಚಾರ ಮಾಡಿದಂತೆ ನಿಮ್ಮ ಕೈಯಲ್ಲಿ ಕೊಡುವುದಕ್ಕೆ ಆಗಿಲ್ಲ. ಅದೇ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಬಡವರಿಗೆ ೧೪ ರೂಪಾಯಿಗಳಿಗೆ ಒಂದು ಸೀರೆ, ೧೨ ರೂಪಾಯಿಗಳಿಗೆ ಒಂದು ಪಂಚೆಯನ್ನು ಮಾರಾಟ ಮಾಡಲಾಗುತ್ತಿತ್ತು. ಅವುಗಳನ್ನು ಎರಡು ವರ್ಷಗಳ ಕಾಲ ತೊಟ್ಟರೂ ಸಹ ಹರಿಯುತ್ತಿರಲಿಲ್ಲ. ಆದರೆ ಇವರು ಕೊಡುತ್ತಿರುವ ಬಟ್ಟೆಗಳನ್ನು ನೋಡಿದರೆ ಸಾಕಿಕೆ ಆಗುತ್ತದೆ. ಈ ಹಿಂದೆ ಮಾನ್ಯ ಬಸವರಾಜಪಾಟೀಲ್ ಅವರು ನಮ್ಮ ಜೊತೆಯಲ್ಲಿಯೇ ಇದ್ದರು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಕಳೆದ ಎರಡು ಮೂರು ತಿಂಗಳುಗಳಿಂದ ಸಾಲ ಮೇಳ ನಡೆಯುತ್ತಿಲ್ಲ. ಅದು ನಿಂತು ಹೋಗುವುದಕ್ಕೆ ಕಾರಣವೇನೆಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ಎಸ್. ಶಿವನಂಜಪ್ಪ.—ನಮ್ಮ ಪ್ರತಿನಿಧಿಗಳು ಪಾರ್ಲಿಮೆಂಟ್‌ನಲ್ಲಿ ಸದಸ್ಯರಾಗಿದ್ದಾರೆ. ಮೊನ್ನೆ ತಾನೆ ಬಹಳ ಪ್ರಬಲರಾದಂಥ ಹೊಸ ಸದಸ್ಯರೊಬ್ಬರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೀರಿ. ಅವರ ಹೆಸರು ಜೇಠ್‌ಮಲಾನಿ ಎಂದು ಕಾಣುತ್ತದೆ. ಅವರು ಅಲ್ಲಿ ಈ ಬಗ್ಗೆ ಪ್ರಶ್ನೆ ಮಾಡಿದರೆ ಕೇಂದ್ರದವರ ಉತ್ತರ ಕೊಡುತ್ತಾರೆ. ಅವರು ನಿಲ್ಲಿಸಿದರು ಎಂದು ನೀವೂ ಸಹ ನಿಲ್ಲಿಸಲು ಹೊರಟ್ಟಿದ್ದೀರಾ? ಅವರ ಮಾಡಲಿಲ್ಲ. ಅದಕ್ಕೆ ನಾವೂ ಸಹ ಮಾಡಲಿಲ್ಲ ಎಂದು ಹೇಳುತ್ತಿದ್ದೀರಾ ಹೇಗೆ ? ಒಟ್ಟಿನಲ್ಲಿ ಆಹಾರ ಪದಾರ್ಥಗಳ ಹಂಚಿಕೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಎಷ್ಟೋ ಸೊಸೈಟಿಗಳವರು ತಾವು ಜನರಿಗೆ ಹಂಚಿಕೆ ಮಾಡಲು ಕೊಟ್ಟಿದ್ದನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಹಳ್ಳಿಗಳಲ್ಲಿ ಸಕ್ಕರೆಯನ್ನು ಹಂಚಿಕೆ ಮಾಡುತ್ತಿಲ್ಲ. ಸಕ್ಕರೆ ತಯಾರು ಮಾಡಲು ಹಳ್ಳಿಯ ರೈತರು ಕಬ್ಬನ್ನು ಬೆಳೆದು ತಮಗೆ ಸಹಾಯ ಮಾಡುತ್ತಿದ್ದಾರೆ. ಆದರೆ ಸಕ್ಕರೆ ತಿನ್ನುವ ಅದೃಷ್ಟ ಮಾತ್ರ ಹಳ್ಳಿಯ ಜನರಿಗೆ ಇಲ್ಲವಾಗಿದೆ, ನೀವು ಹಂಚಿಕೆ ಮಾಡಬಹುದು, ಆದರೆ ಒಂದು ಕೆ.ಜಿ. ಸಕ್ಕರೆ ಸಹ ಹಳ್ಳಿಗಳಿಗೆ ಹೋಗುತ್ತಿಲ್ಲ. ಹಳ್ಳಿಗಳಲ್ಲಿ ಯಾರು ಪ್ರಭಾವಯುತರಾದಂಥ ಜನರು ಇರುತ್ತಾರೆ, ಅಂತಹವರಿಗೆ ಮಾತ್ರ ನಾಮಕಾವಸ್ಥೆಗೆ ಹಂಚಿಕೆ ಮಾಡಿ ಇನ್ನುಳಿದಿದ್ದನ್ನು ಬೆಂಗಳೂರಿನ ದೊಡ್ಡ ದೊಡ್ಡ ಹೋಟೆಲ್‌ಗಳಿಗೆ ಮತ್ತು ದೊಡ್ಡ ದೊಡ್ಡ ವ್ಯಾಪಾರಸ್ಥರಿಗೆ ಮಾರಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ತಮಗೆ ಕಳಕಳಿ ಇದೆಯೋ ? ತಮ್ಮ ವಾರ್ಷಿಕ ವರದಿಯಲ್ಲಿ ಇದರ ಬಗ್ಗೆ ನೀವು ಒಂದು ಶಬ್ದವನ್ನೂ ಸಹ ಹೇಳಿಲ್ಲ. ಈ ರೀತಿ ನಡೆಯುತ್ತಿರುವುದು ಇವರಿಗೆ ಗೊತ್ತಿದೆ. ಆದರೂ ಕ್ರಮ ತೆಗೆದುಕೊಳ್ಳದೆ ಎಲ್ಲವನ್ನೂ ಅಧಿಕಾರಿಗಳಿಗೇ ಬಿಟ್ಟುಕೊಟ್ಟಿದ್ದಾರೆ. ಅವರೂ ಏನಾದರೂ ಮಾಡಿಕೊಂಡು ಹೋಗಲಿ ಎಂದು ಸುಮ್ಮನಿದ್ದಾರೆ. ಈ ಮೊದಲು ಇಲ್ಲಿ ಮಾನ್ಯ ಸಚಿವರು ತಾಳೆ ಎಣ್ಣೆಯನ್ನು ಪಾಕೆಟ್‌ಗಳ ಮೂಲಕ ಹಂಚಿಕೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದರ ವ್ಯವಸ್ಥೆ ಇನ್ನೂ ಜಾರಿಗೆ ಬಂದಿಲ್ಲ. ನಿಮ್ಮ ಕೈಯಲ್ಲಿ ಮಾಡಲು ಆಗದೇ ಇದ್ದ ಮೇಲೆ ಇಲ್ಲಿ ಏತಕ್ಕೆ ಆಶ್ವಾಸನೆ ಕೊಡುತ್ತೀರಿ ? ನೀವು ಕೊಟ್ಟ ಆಶ್ವಾಸನೆಗಳು ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುತ್ತದೆ. ಆದರೆ ಯಾವುದೂ ಕಾರ್ಯಗತ ಆಗುವುದಿಲ್ಲ. ನೀವೇನಾದರೂ ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದೀರ ಎಂದು ನಾನು ತಮ್ಮನ್ನು ಕೇಳುತ್ತೇನೆ? ಬೆಂಗಳೂರು ತುಮಕೂರು ಮುಂತಾದ ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಪಾಮಾಯಿಲ್ ಪಾಕೆಟ್‌ಗಳನ್ನು ಜನರಿಗೆ ಇವರು ವಿತರಣೆ ಮಾಡುತ್ತಿಲ್ಲ. ಇದಕ್ಕಾಗಿ ೭೦–೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಇದು ಹಳ್ಳಿಯ ಜನರಿಗೆ ಮಾತ್ರ ಮುಟ್ಟುತ್ತಿಲ್ಲ. ಕರ್ನಾಟಕ ರಾಜ್ಯದ ಯಾವುದೇ ಹಳ್ಳಿಗೆ ಹೋಗಿ ವಿಚಾರಿಸಿದರೂ ಸಹ ಇದರ ಸರಬರಾಜು ಆಗಿರುವುದು ಕಂಡುಬರುತ್ತಿಲ್ಲ.

ತಾವು ಎಲ್ಲ ಹಳ್ಳಿಗಳಿಗೂ ಕಳುಹಿಸಿಕೊಡುತ್ತಿದ್ದೇವೆಂದು ಹೇಳಬಹುದು. ಆದರೆ ಶೇಕಡಾ ೯೦ರಷ್ಟು ಹಳ್ಳಿಗಳಿಗೆ ಇದು ತಲುಪುತ್ತಿಲ್ಲ. ನಾನು ಒಂದು ಸಲ ಯುಗಾದಿ ಹಬ್ಬಕೆಂದು ಒಂದು ಹಳ್ಳಿಗೆ ಹೋದಾಗ ಅಲ್ಲಿನ ಹರಿಜನ ಮಹಿಳೆ ನನ್ನ ಹತ್ತಿರ ಬಂದು ಒಗ್ಗರಣೆ ಹಾಕಲು ಸಹ ಎಣ್ಣೆ ಸಿಗುತ್ತಿಲ್ಲ ಎಂದು ಹೇಳಿಕೊಂಡಳು. ಆದ್ದರಿಂದ ಈ ಬಗ್ಗೆ ತಾವು ವಿಚಾರಣೆ ಮಾಡಲು ಸಿದ್ಧರಿದ್ದೀರಾ ಎಂದು ನಾನು ತಮ್ಮನ್ನು ಕೇಳುತ್ತೇನೆ? ಮೊನ್ನೆ ತಾನೆ ಪತ್ರಿಕೆಗಳಲ್ಲಿ ಒಂದು ವರದಿ ಬಂದಿದೆ. ಏನೆಂದರೆ, ಬೆಳಗಾಂನಲ್ಲಿ ಆಹಾರ ಇಲಾಖೆಯ ಸಹಾಯಕ ಅಧಿಕಾರಿ ಮನೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ಧಾಳಿ ನಡೆಸಿದ ಬಗ್ಗೆ ವರದಿ ಆಗಿದೆ. ಅಂದರೆ ತಪ್ಪು ಮಾಡಿದಂಥ ಅಧಿಕಾರಿ ಇವರು ಒಬ್ಬರೇ ಇರುವುದು ಎಂದು ತಾವು ಹೇಳುತ್ತೀರಾ? ಇವೊತ್ತು ನೀವು ಹಂಚಿಕೆ ಮಾಡಲು ಕೊಡುತ್ತಿರುವ ಪಾಮಾಯಿಲ್ ಯಾವುದೇ ಜಿಲ್ಲೆಗಳಿಗಾಗಲೀ, ಹಳ್ಳಿಗಳಿಗಾಗಲೀ ಹೋಗುತ್ತಿಲ್ಲ. ನೀವು ಕೊಟ್ಟಿದ್ದು ಶೇಕಡಾ ನೂರರಷ್ಟು, ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತಿದೆ. ಇದರಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಈ ಬಗ್ಗೆ ನೀವು ಯಾವುದೇ ರೀತಿಯ ವಿಚಾರಣೆ ನಡೆಸಿದರೂ ಸಹ ನಾನು ಇದನ್ನು ಸಾಬೀತು ಮಾಡುತ್ತೇನೆ. ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಸಹ ನಾನು ಇಲ್ಲಿ ಸದಸ್ಯನಾಗಿದ್ದೆ. ಆಗ ಮಾನ್ಯ ತಿಮ್ಮೇಗೌಡರವರು ಐ.ಎ.ಎಸ್. ಆಫೀಸರ್ಸ್ ಬಗ್ಗೆ ಬಹಳ ತೀವ್ರವಾಗಿ ಮಾತನಾಡಿದರು. ನಾನು ಬಹಳ ನೊಂದ ಮನಸ್ಸಿನಿಂದ ಹೇಳಿದೆ ಆಗ ಶ್ರೀಮಾನ್ ದೇವರಾಜ ಅರಸ್‌ರವರು ಇದ್ದರು. ಐ.ಎ.ಎಸ್. ಆಫೀಸರ್ಸ್‌ನಲ್ಲಿ ಸಂಪೂರ್ಣವಾಗಿ ಎಲ್ಲರನ್ನೂ ದೂಷಣೆ ಮಾಡುವುದು ಸರಿಯಲ್ಲ, ಅವರಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡತಕ್ಕಂಥವರೂ ಇದ್ದಾರೆ, ಒಳ್ಳೆಯ ನಿಪುಣರೂ ಇದ್ದಾರೆ. ಅಲ್ಲಿ ಇಲ್ಲಿ ಕೆಲವರು ಬ್ಲಾಕ್‌ಶಿಪ್ ತರಹ ಇರಬಹುದು, ಎಲ್ಲರೂ ಹೀಗೆ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ ಎಂದು ಹೇಳಿದೆ. ಈಗ ನಮ್ಮ ತುಮಕೂರಿನಲ್ಲಿ ತಾಳೆ ಎಣ್ಣೆ ವಿಚಾರದಲ್ಲಿ ಅವ್ಯವಹಾರವಾಗಿದೆ ಎಂದು ದೊಡ್ಡ ದೊಡ್ಡ ಪೇಪರಿನಲ್ಲಿ ಬಂದಿದೆ ಚಂದ್ರಪ್ಪ ಎನ್ನುವವರು ಒಂದು ಕಂಪ್ಲೈಂಟ್ ಕೊಟ್ಟಿದ್ದಾರೆ. ಬಿದರೆ ಅಮ್ಮನಗುಡಿ ಯಲ್ಲಿರತಕ್ಕಂಥ ಚಂದ್ರಪ್ಪ ಎಂಬುವರು ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಆ ಕಂಪ್ಲೈಂಟ್ ಬಗ್ಗೆ ವಿಚಾರಣೆ ಮಾಡಲಿಕ್ಕೆ ಹೋದಂಥವರು ನಂಜುಂಡೇಶ್ವರ ಹೋಟೆಲಿನಲ್ಲಿ ಪೂರ್ಣವಾಗಿ ಕಾಲ ಕಳೆದು ಕಂಪ್ಲೈಂಟ್ ಕೊಟ್ಟ ಫಿರ್ಯಾದಿಯನ್ನೂ ಕೂಡ ಕರೆಸದೆ ವಾಪಸ್ ಬಂದಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ೭೦-೮೦ ಕೋಟಿ ರೂಪಾಯಿ ಬೆಲೆ ಬಾಳುವ ತಾಳೆ ಎಣ್ಣೆ ಮಧ್ಯವರ್ತಿಗಳ ಕೈಗೆ ಹೋಗಿದೆ, ನೀವು ಏನು ಮಾಡುತ್ತಿದ್ದೀರಿ, ನಿಮಗೆ ಗೊತ್ತಿಲ್ಲವೇ. ನಿಮಗೆ ಅನೇಕ ಅರ್ಜಿಗಳು ಬಂದಿವೆ, ವಿಚಾರಣೆ ಏನು ಮಾಡಿದ್ದೀರಿ. ಯಾರನ್ನು ವಿಚಾರಣೆ ಮಾಡಿದ್ದಾರೆ ಅಂದರೆ ಎಫ್.ಪಿ.ಡಿ. ಇಟ್ಟು ಕೊಂಡಿರತಕ್ಕಂಥ ಬಡಪಾಯಿಗಳನ್ನು ವಿಚಾರಣೆ ಮಾಡಿದ್ದಾರೆ. ಏಕೆಂದರೆ ಅವರು ಕಂಪ್ಲೈಂಟ್ ಕೊಟ್ಟಿದ್ದರು, ನಮಗೆ ಅಲಾಟ್ ಆಗಿರತಕ್ಕ ತಾಳೆ ಎಣ್ಣೆಯನ್ನು ಬೇರೆಯವರು ತೆಗೆದುಕೊಂಡಿದ್ದಾರೆ ಎಂದು. ಎಫ್.ಪಿ.ಡಿ. ಇಟ್ಟುಕೊಂಡಿರತಕ್ಕವರು ಭ್ರಷ್ಟಾಚಾರವನ್ನು ಬಯಲಿಗೆ ಎಳೆದಿದ್ದಾರೆ ಎಂದು ಇವರನ್ನು ವಿಚಾರಣೆ ಮಾಡಿದ್ದಾರೆ. ಇದೇ ರೀತಿ ೫ ಜನರನ್ನು ವಿಚಾರಣೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ೬ ಜನ ಇವರ ಕೈಗೆ ಸಿಗತಕ್ಕವರು, ಅದರಲ್ಲೂ ರಾಜಕೀಯ ಮಾಡಿದ್ದೀರಿ. ಇದು ತಪ್ಪು ಬೇಕಾಗುತ್ತದೆ. ಇನ್ನು ಎಫ್. ಪಿ. ಡಿ.ಗಳಿಗೆ ಕೊಡತಕ್ಕಂಥ ಲೈಸನ್ಸ್ ಇದೆ. ನಾನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ತುಂಬ ರಾಜಕೀಯ ಇದೆ. ತುಮಕೂರಿನಲ್ಲಿ ನಾಗರಾಜ ಎಂಬ ಕಾಂಗ್ರೆಸ್ ಕಾರ್ಯಕರ್ತರು ಇದ್ದಾರೆ. ಅವರಿಗೆ ಡೆಪ್ಯುಟಿ ಕಮಿಷನರು ಕೋಟಾ ಕಾರ್ಡ್‌ಗಳನ್ನು ಹಿಡಿದುಕೊಡಿ ಎಂದು ಹೇಳಿದರಂತೆ. ಇದು ಹೇಗಿದೆ ನೋಡಿ. ಕೋಟಾ ಕಾರ್ಡ್‌ಗಳಿಗೆ ಸೈನ್ ಹಾಕಿ ಕೊಡುವವರು ಅವರು. ಇವರಿಗೆ ಏಕೆ ಹೇಳಬೇಕು. ಎಫ್.ಪಿ.ಡಿ. ಓನರ್ ಕೋಟಾ ಕಾರ್ಡುಗಳನ್ನು ಹಿಡಿದುಕೊಡಬೇಕಂತೆ. ಇವರು ಕೇಳಿದರೆ ಕಪಾಳಕ್ಕೆ ೪ ಬಿಗಿಯುತ್ತಾರೆ. ಕಾರ್ಡ್ ಇಟ್ಟುಕೊಂಡಿರುವವರು ನಾನು ಕಾರ್ಡ್ ಕೊಡುತ್ತೇನೆ, ನನಗೆ ಆಹಾರ ಪದಾರ್ಥಗಳನ್ನು ಕೊಡಬೇಕು ಎಂದು ಹೇಳುತ್ತಾರೆ. ಯಾರೋ ಒಬ್ಬರು ಮಂತ್ರಿಗಳು ಡೆಪ್ಯುಟಿ ಕಮಿಷನರಿಗೆ ಫೋನ್ ಮಾಡಿದರಂತೆ ಆದ್ದರಿಂದ ಈ ರೀತಿ ರಾಜಕೀಯ ಮಾಡಬಾರದು. ಆಮೇಲೆ ಅಕೌಂಟ್ಸ್ ಮತ್ತು ಹಣದ ಬಗ್ಗೆ ಇನ್ನೂ ಕೆಲವು ಲೋಪದೋಷಗಳಿವೆ. ಆಮೇಲೆ ಈ ಫುಡ್ ಕಾರ್ಪೊರೇಷನ್‌ನವರು ೧೬ ಲಕ್ಷ ರೂಪಾಯಿಗಳ ಬಿಸ್ಕತ್ ವ್ಯಾಪಾರ ಮಾಡುವುದಕ್ಕೆ ಹೋಗಿದ್ದಾರೆ. ಲಾಸ್ ಇನ್ ಟ್ರೇಡಿಂಗ್ ಆಫ್ ಬಿಸ್ಕಟ್ಸ್. ಇದರ ವ್ಯಾಪಾರ ೧೬ ಲಕ್ಷದ ೩೦ ಸಾವಿರ ರೂಪಾಯಿ. ೧೯೮೫-೮೬ನೇ ಸಾಲಿನ ಆಡಿಟರ್ ಜನರಲ್

ಆಫ್ ಇಂಡಿಯಾದವರ ರಿಪೋರ್ಟ್ ಇದೆ. ಅದನ್ನು ಬಹುಶಃ ಅವರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟಿನಲ್ಲಿ ೧೯೮೭-೮೮ರಲ್ಲಿ ಕಾರ್ಪೋರೇಷನ್‌ನಿಂದ ೧೭೩.೩೦ ಲಕ್ಷ ನಿಮಗೆ ಬ್ಯಾಲೆನ್ಸ್ ಬರಬೇಕಾಗಿದೆ ಎಂದು ಇದೆ. ಇದನ್ನು ಲಾಸ್ ಎಂದು ಹೇಳುತ್ತೀರೋ ಅಡ್ಜಸ್ಟ್ ಮಾಡುತ್ತೀರೋ ಅಥವಾ ವೇವ್ ಆಫ್ ಮಾಡುತ್ತೀರೋ ಗೊತ್ತಿಲ್ಲ. ನಿಮಗೆ ಬರಬೇಕಾಗಿರುವುದು ೨೧.೪೬ ಲಕ್ಷ. ಇದರಲ್ಲಿರುವ ಒಂದು ಸೆಂಟೆನ್ಸ್‌ನ್ನು ನಾನು ಹೇಳುತ್ತೇನೆ.

> "The Deputy Commissioner of District stated that short-fall in procurement was due to lack of funds inadequate purchase points, announcement of procurement policy after the harvest, inadequate check-post to prevent smuggling."

ಇದು ನಿಮ್ಮ ಇಲಾಖೆಗೆ ಕೊಟ್ಟಿರತಕ್ಕ ಸರ್ಟಿಫಿಕೇಟ್, ಇದನ್ನು ತಾವು ಓದಿ. ಕ್ವಾಲಿಟಿ ಆಫ್ ಸಪ್ಲೈ ಬಗ್ಗೆ ಹೇಳುವುದಾದರೆ, ಯಾವುದೇ ಒಂದು ಪದಾರ್ಥವನ್ನು ತೆಗೆದುಕೊಂಡರೂ ಕೂಡ ರಾಷ್ಟ್ರದಲ್ಲಾಗಲಿ. ರಾಜ್ಯದಲ್ಲಾಗಲಿ, ಶುದ್ಧವಾದುದ್ದು ಸಿಗುತ್ತಿಲ್ಲ. ಇವತ್ತು ಶುದ್ಧಿಯಾಗಿ ಸಿಗತಕ್ಕದ್ದು ಭ್ರಷ್ಟಾಚಾರ ಮತ್ತು ಲಂಚ ಕುಡಿಯುವ ನೀರಿನಲ್ಲಿ ಬೆರಕೆ ಗಾಳಿಯಲ್ಲಿ ಬೆರಕೆ ತಿನ್ನತಕ್ಕ ಪದಾರ್ಥಗಳಲ್ಲಿ ಬೆರಕೆ, ಇವರು ಕೊಡತಕ್ಕ ಎಲ್ಲಾ ಪದಾರ್ಥಗಳಲ್ಲಿಯೂ ಬೆರಕೆ ಇದ್ದರೆ ನಾವು, ನೀವು ಬದುಕುವುದು ಹೇಗೆ? ರಾಜ್ಯದ ಅಜ್ಜಂಪುರದಲ್ಲಿ ಕೊತ್ತಂಬರಿ ಬೀಜವನ್ನು ಬೆಳೆಯುತ್ತಾರೆ. ಕೊತ್ತಂಬರಿ ಬೀಜದ ಜೊತೆಗೆ "ಕತ್ತೆಯ ಲದ್ದಿಯನ್ನು" ಪುಡಿ ಮಾಡಿ ಬೆರಸುತ್ತಾರೆ. ಇವರು ಸರಬರಾಜು ಮಾಡತಕ್ಕ ಅಕ್ಕಿಯಲ್ಲಿ ಒಂದೆರಡು ಕೆ.ಜಿ. ಕಲ್ಲು ಇರುತ್ತದೆ. ಗೋಧಿಯಲ್ಲಿ ಮಣ್ಣು ಮತ್ತು ಧೂಳು ಬರುತ್ತದೆ. ಇದರ ಬಗ್ಗೆ ಕೇಳಿದರೆ ರೈಲ್ವೆ ಗೋಡೌನಿನಲ್ಲಿ ಇದೆಲ್ಲ ಸೇರಿದೆ ಎಂದು ಹೇಳುತ್ತಾರೆ. ಇದು ನಿಮಗೆ ನಿಜವಾಗಿಯೂ ಘನತೆ ಗೌರವಗಳನ್ನು ತರತಕ್ಕಂಥದಲ್ಲ. ಜನರಿಗೆ ಕೊಡತಕ್ಕ ಗೋಧಿ, ಅಕ್ಕಿ ಮತ್ತು ಸಕ್ಕರೆಯಲ್ಲಿ ಎರಡು ಕೆ.ಜಿ.ಕಡಿಮೆ ಇರುತ್ತದೆ. ಎಣ್ಣೆ ತೆಗೆದುಕೊಂಡರೂ ಕಡಿಮೆ ಇರುತ್ತದೆ. ನಿಜವಾದ ಹೆಗ್ಗಣಗಳು ಇಲ್ಲ, ಎರಡು ಕಾಲಿನ ಹೆಗ್ಗಣಗಳು ಇವೆ. ಅವುಗಳ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲವೆಂದೂ ಈ ವಿಚಾರದಲ್ಲಿ ಮಂತ್ರಿಗಳು ಗಮನಹರಿಸಬೇಕೆಂದೂ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ. ಪಿ.ಎ.ಸಿ.ಯವರು ಕೊಟ್ಟಿರತಕ್ಕ ರಿಪೋರ್ಟ್‌ನಲ್ಲಿ ನಿಮ್ಮ ಇಲಾಖೆಯ ಪೂರ್ಣ ಚಿತ್ರವಿದೆ. ೧೦-೧೫ ಮಿಸ್ ಅಪ್ರೋಪ್ರಿಯೇಷನ್ ಕೇಸುಗಳು, ಮಿಸ್‌ಯುಟಿಲೈಜೇಷನ್ ಅಮೌಂಟ್, ಮತ್ತು ನಾಟ್ ಪರ್ಚೇಸಿಂಗ್ ಕೇಸ್‌ಗಳ ಬಗ್ಗೆ ಹೇಳಿದ್ದರೂ, ವಾರ್ಷಿಕ ವರದಿಯಲ್ಲಿ ಏನು ಹೇಳಿಲ್ಲ. The performance budget would have reflected the performance of your Government that you have not done... ಅಧಿಕಾರಿಗಳು ಪರ್‌ಪಸ್ ಆಗಿ ಮಾಡಿದ್ದಾರೆ. ಐ.ಎ.ಎಸ್, ಅಧಿಕಾರಿಗಳು ಇವತ್ತಿನ ದಿವಸ ಯಾರ ಕೈಗೂ ದಿವಸ ಸಿಗುವುದಿಲ್ಲ. ತಾವು ಪಾಲಿಸಿ ಮಾಡುತ್ತೀರಿ. ನಮ್ಮ ನಿಮ್ಮ ಮಾತನ್ನು ಅವರು ಕೇಳುವುದಿಲ್ಲ, ೮-೧೦ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದು, ಲಾಸ್ ಆಗಿರುವಂಥಾದ್ದು, ವಾರ್ಷಿಕ ವರದಿಯಲ್ಲಿ ಬರಬೇಕಾಗಿತ್ತು. ಅದು ಬಂದಿದ್ದರೆ, ಅದರ ಮೇಲೆ ಹೆಚ್ಚಿನ ಬೆಳಕು ಚೆಲ್ಲಬಹುದಿತ್ತು. ಆದ್ದರಿಂದ ಸದನಕ್ಕೆ ತಾವು ತಪ್ಪು ವರದಿ ಕೊಟ್ಟಿದ್ದೀರಿ. ಇವತ್ತು ಹಳ್ಳಿ ಪ್ರದೇಶಗಳಲ್ಲಿ ಸೀಮೆ ಎಣ್ಣೆ ಸಿಗುತ್ತಿಲ್ಲ. ಸೀಮೆ ಎಣ್ಣೆಯನ್ನು ಒಂದು ಲೀಟರ್‌ಗೆ ೪ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಡಿ.ಸಿ.ಯವರಿಗೆ ಹೇಳಿದ್ದೇನೆ ತಹಶೀಲ್ದಾರ್‌ರವರಿಗೆ ಹೇಳಿದ್ದೇನೆ, ಅರೇಂಜ್ ಮಾಡುತ್ತೇವೆಂದು ಅವರು ಹೇಳುತ್ತಾರೆ, ಇಡೀ ರಾಜ್ಯದಲ್ಲಿ ಇಂಥ ಪರಿಸ್ಥಿತಿ ಇರಬಹುದು. ತುಮಕೂರು ಜಿಲ್ಲೆಯಲ್ಲಿ ಎಲ್ಲೂ ಸೀಮೆಎಣ್ಣೆ ಸಿಗುತ್ತಿಲ್ಲ. ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಸೀಮೆಎಣ್ಣೆ ಸಿಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಪ್ರತಿಯೊಬ್ಬರಿಗೂ ಬೇಕಾಗಿರತಕ್ಕ ಈ ಇಲಾಖೆ ಕೇವಲ ಕೆಲವರಿಗೆ ಮಾತ್ರ ಕೆಲಸ ಮಾಡುತ್ತಿರುವುದು ಸರಿಯಲ್ಲ. ಇದು ಮೊದಲು ತಪ್ಪಬೇಕು. ೪ ಕೋಟಿ ಜನರ ಹಿತರಕ್ಷಣೆ ಮಾಡತಕ್ಕ ಜವಾಬ್ದಾರಿ ನಿಮ್ಮ ಮೇಲಿದೆ. ಇವತ್ತು ತಿನ್ನುವುದಕ್ಕೋಸ್ಕರ ಯಾರೂ ಬದುಕಬೇಕಾಗಿಲ್ಲ, ಬದುಕಲಿಕ್ಕಾಗಿ ಜನರು ತಿನ್ನಬೇಕಾಗಿದೆ ಎಂಬ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ನಾವು ವಿವಿಧ ಬೇಡಿಕೆಗಳ ಮಂಡನೆಯ ಒಂದು ವಿಲಕ್ಷಣ ಹೊಂದಾಣಿಕೆಯನ್ನು ಕಾಣುತ್ತಿದ್ದೇವೆ. ಈ ಸದನದಲ್ಲಿ ಅಬಕಾರಿಯನ್ನು ಮುಗಿಸಿ, ಆಹಾರವನ್ನು ಸೇವಿಸಿ, ಯಾರೂ ಕೇಳುವವರು ಇಲ್ಲದ, ಅನಾಥ ಮಕ್ಕಳ ಶಿಕ್ಷಣ ಖಾತೆಯನ್ನು ಸರಸರನೆ ನೋಡಿ, ಅಲ್ಲಿ ಹಣ ಉಳಿದರೆ ಚಿಕ್ಕ ಉಳಿತಾಯ ಮಾಡಿ, ಜೈಲಿಗೆ ಓಡುವುದು, ಕಾಡು ಸೇರುವುದು ಇದು ಇಂದು ಬೇಡಿಕೆಗಳನ್ನು ಈ ಸಭೆ ಪರಿಶೀಲನೆ ಮಾಡಬೇಕಾದ ನಮ್ಮ ವಿಲಕ್ಷಣ ಪರಿಸ್ಥಿತಿ; ನನ್ನ ಮಾತನ್ನು ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿ ಇಡುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಮಂಡಿಸಿದ ಬೇಡಿಕೆಯಲ್ಲಿ,

ಲೇಖನ ಸಾಮಗ್ರಿ ಮುದ್ರಣಕ್ಕೆ ೨½ ಕೋಟಿ,
ಮಿಟ್ಟುವಿಲ್ಲದ ಪಥ್ಯದಲಿ ಮುದ್ರಾರಾಕ್ಷಸನ ಹತೋಟಿ,
ಉಚ್ಚ ಶಿಕ್ಷಣಕ್ಕೆ ಅನುದಾನ ೨೫½ ಕೋಟಿ,
ಸರಕಾರದ ಕೃಪೆಯಿಂದ ಕ್ಯಾಪಿಟೇಷನ್ ಲೂಟಿ
ಪ್ರಾಥಮಿಕ ಶಿಕ್ಷಣಕ್ಕೆ ವಯಸ್ಕರ ವಿದ್ಯೆಗೆ ೬೨ ಕೋಟಿ,
ಕೋಟಿ ಮಕ್ಕಳಿಗೆ ಇಲ್ಲ ಸಾಕಷ್ಟು ಶಿಕ್ಷಕರ ಭೇಟಿ.
ಬಹುಕಾಲದಿಂದಿಲ್ಲ ನೇಮಕಾತಿ, ಇದಕಿನ್ನೆಲ್ಲೂ ಇಲ್ಲ ಸರಿಸಾಟಿ,
ಸೆಕೆಂಡರಿ ಶಿಕ್ಷಣಕ್ಕೆ ಲೆಕ್ಕಾನುದಾನ ೫೦ ಕೋಟಿ
ಅಧ್ಯಾಪಕರ ಸ್ಥಾನ — ವೇತನ, ನಿಂತ ನೀರು ಈ ಪಾಟಿ,
ಶೈಕ್ಷಣಿಕ ಧೋರಣೆ — ದಿನಕೊಂದು ರೀತಿ ನೀತಿ,
ಆಶ್ವಾಸನೆಗೆ ಮಾತ್ರ ಮಂತ್ರಿಗಳ ಪೈಪೋಟಿ.

ಮಾನ್ಯ ಅಧ್ಯಕ್ಷರೆ. ಭಾರತ ಸಂವಿಧಾನದ ೪೫ನೇ ವಿಭಾಗದಲ್ಲಿ — ೧೦ ವರ್ಷದೊಳಗೆ ಎಲ್ಲಾ ೧೪ ವರ್ಷದ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ಕೊಡಬೇಕೆಂದು ಉಲ್ಲೇಖಿತವಾಗಿದೆ. ಭಾರತ ಸಂವಿಧಾನದ ೨೯ನೇ ವಿಭಾಗದಲ್ಲಿ — ಮತ, ಜನಾಂಗ, ಜಾತಿ ಭಾಷ ಆಧಾರದಲ್ಲಿ ಯಾವುದೇ ಸರಕಾರಿ ಅಥವಾ ಅನುದಾನಿತ ಸಂಸ್ಥೆ ಪ್ರವೇಶ ನಿರಾಕರಿಸಕೂಡದು. ಎಂದು ಉಲ್ಲೇಖಿತವಾಗಿದೆ. ಭಾರತ ಸಂವಿಧಾನದ ೪೬ನೇ ವಿಭಾಗದಲ್ಲಿ ದುರ್ಬಲ ವರ್ಗದವರ ಶೋಷಣೆ ತಪ್ಪಬೇಕು. ಆದರೆ ಇವೊತ್ತು ಶಿಕ್ಷಣ ರಂಗದಲ್ಲಿ ಪ್ರವೇಶಕ್ಕೆ ಹಣ ಆಧಾರ, ಎಸ್.ಸಿ. ಎಸ್.ಟಿ. ರಿಸರ್ವೇಷನ್ ಇಲ್ಲ ಗ್ರಾಮಾಂತರ ಪ್ರದೇಶಗಳಲ್ಲಿ ಕೊಡಬೇಕಾದಂಥ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ. ೧೯೪೮ರಲ್ಲಿ ರಾಧಾಕೃಷ್ಣನ್ ಆಯೋಗ, ೧೯೫೨ರಲ್ಲಿ ಮೊದಲಿಯಾರ್ ಆಯೋಗ, ೧೯೬೬ರಲ್ಲಿ ಕೊಠಾರಿ ಆಯೋಗ ಬಂದಿದೆ. ಇತ್ತೀಚೆಗೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ "ಶಿಕ್ಷಣದ ಸವಾಲುಗಳು" ಹೊಸ ಶಿಕ್ಷಣ ನೀತಿ ೧೯೮೫. ಶಿಕ್ಷಣದ ಎಲ್ಲ ರಂಗಗಳಲ್ಲೂ ಪ್ರಯೋಗಗಳ ಮೇಲೆ ಪ್ರಯೋಗಗಳು ಆಗುತ್ತಾ ಇವೆ, ಆದರೆ, ಸಾಧನೆಯ ಪ್ರಮಾಣದ ದೃಷ್ಟಿಯಿಂದಾದರೂ, ಮೌಲ್ಯದ ದೃಷ್ಟಿಯಿಂದಾಗಿಲ್ಲ. ನಗರ ಭಾಗಗಳಲ್ಲಿ ಶಿಕ್ಷಣದಿಂದ ಸುಧಾರಣೆ ಆಗಿರಬಹುದು. ಹಳ್ಳಿಗಳಲ್ಲಿ ಇನ್ನೂ ಅನಕ್ಷರಸ್ಥರಿದ್ದಾರೆ. ಪ್ರೀ ಪ್ರೈಮರಿ ಶಿಕ್ಷಣದಿಂದ ಹಿಡಿದು ಕಾಲೇಜು ಶಿಕ್ಷಣ ವಯಸ್ಕರ ಶಿಕ್ಷಣ ಮಟ್ಟದವರೆಗೆ ಬಿಡಿಸಿ ಬಿಡಿಸಿ ಮಾತನಾಡಲಿಕ್ಕೆ ಸಮಯಾವಕಾಶ ಇಲ್ಲದೇ ಇರುವುದರಿಂದ ಸ್ಥೂಲವಾಗಿ ನಾನು ಎಲ್ಲಾ ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಹಳ್ಳಿಗಳಲ್ಲಿ ಇನ್ನೂ ಅನಕ್ಷರಸ್ಥರಿದ್ದಾರೆ, ಬಡತನ, ಅಜ್ಞಾನ, ರೋಗರುಜಿನ ಎಲ್ಲಾ ಜಾಸ್ತಿಯಾಗಿದೆ. ನಮ್ಮ ದೇಶದಲ್ಲಿ ಉದ್ಯೋಗ — ಉತ್ಪಾದನೆ ಜೊತೆಗೆ ಶಿಕ್ಷಣದ ಸಂಬಂಧವನ್ನು ಕಲ್ಪಿಸಬೇಕು, ಅಂತಹ ಶಿಕ್ಷಣದ ನೀತಿಯನ್ನು ರೂಪಿಸಬೇಕೆಂದು ಹೇಳುತ್ತೇನೆ. ಮಗುವಿನ ಪೂರ್ಣ ವ್ಯಕ್ತಿತ್ವದ ಸರ್ವಾಂಗೀಣ ವಿಕಸನಕ್ಕಾಗಿ ಶಿಕ್ಷಣ ಬೇಕಾಗುತ್ತದೆ. ಇದಕ್ಕಾಗಿ ಕರ್ನಾಟಕದಲ್ಲಿ ನಮ್ಮ ಸರ್ಕಾರ ಇಟ್ಟಂತಹ ಬೇಡಿಕೆ ರಾಜಸ್ವ ಖಾತೆಯಲ್ಲಿ ೧೭೦ ಕೋಟಿ ರೂಪಾಯಿಗಳು. ಬಂಡವಾಳ ಖಾತೆಯಲ್ಲಿ ೬ ಕೋಟಿ ರೂಪಾಯಿಗಳು ಇದರ ಸಿಂಹಪಾಲು ಸಂಬಳಕ್ಕೆ ಹೋಗುತ್ತಿದೆ. ಇನ್ನುಳಿದದ್ದರಲ್ಲಿ ಪೀಠೋಪಕರಣ, ಸ್ಲೇಟು, ಪುಸ್ತಕ, ಬಟ್ಟೆ ಇತ್ಯಾದಿಗಳಿಗೆ ಹೋಗುತ್ತಿದೆ. ಇವೊತ್ತು ಬಡವರ ಜೊತೆಗೆ ಶ್ರೀಮಂತರ ಮಕ್ಕಳಿಗೂ ಇದರ ಸವಲತ್ತು ಸಿಕ್ಕುತ್ತಿದೆ. ಎಲ್ಲರನ್ನೂ ಸಮಾನವಾಗಿ ನೋಡುತ್ತೇವೆ, ಎನ್ನುವ ಕಾನೂನಿನಿಂದ ಈ ಸವಲತ್ತುಗಳೆಲ್ಲಾ ಶ್ರೀಮಂತರ ಮಕ್ಕಳಿಗೂ ಸಿಕ್ಕುತ್ತಿವೆ, ಬಡ ಮಕ್ಕಳ ಜೊತೆಗೆ ಶ್ರೀಮಂತರ ಮಕ್ಕಳಿಗೂ ಎಲ್ಲ ಸವಲತ್ತು ಸಿಕ್ಕುವಂಥಾದ್ದು ಇದೆ. ಇದರಿಂದ ಶ್ರೀಮಂತರ ಮಕ್ಕಳಿಗೆ ಅನಾವಶ್ಯಕವಾಗಿ ಖರ್ಚು ಮಾಡಬೇಕಾದಂಥ ಧೋರಣೆ ಇದೆ.

ಅನೇಕ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳೇ ಇಲ್ಲ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆರ್.ಎಲ್.ಇ.ಜಿ.ಪಿ. ಮತ್ತು ಎನ್. ಆರ್. ಇ. ಪಿ. ಹೆಸರು ಕೇಳಿಬರುತ್ತಿದೆ ರಾಜ್ಯದಲ್ಲಿರತಕ್ಕ ಎಲ್ಲಾ ಶಾಲಾ ಕಟ್ಟಡಗಳನ್ನೂ ಕಟ್ಟಿಸುವುದಕ್ಕೆ ಇದರಿಂದ ಹಣವನ್ನೊದಗಿಸುವುದಕ್ಕೆ ಸಾಧ್ಯವಿಲ್ಲ. ಹಣವನ್ನು ಸಂಗ್ರಹಿಸುವುದಕ್ಕೆ ಡೊನೇಷನ್‌ನ್ನು ಸಂಗ್ರಹಿಸುವುದಕ್ಕೆ ಬೆಟರ್‌ಮೆಂಟ್ ಕಮಿಟಿಗಳನ್ನು ಮಾಡಿದ್ದೀರಿ. ಈ ಬೆಟರ್‌ಮೆಂಟ್ ಕಮಿಟಿಗಳಿಗೆ ನೀವು ಅಧಿಕಾರವನ್ನು ಕೊಡಬೇಕು. ಏಕೆಂದರೆ ಕ್ಯಾಪಿಟೇಷನ್ ಶುಲ್ಕವನ್ನು ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದೆಂದು ಅಪ್ರತ್ಯಕ್ಷವಾಗಿ ಇರುವಾಗ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ, ಪಿಠೋಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಡೊನೇಷನ್‌ನ್ನು ಕಲೆಕ್ಟ ಮಾಡುವ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಶಾಲೆಗಳಲ್ಲಿ ಶಿಕ್ಷಕರು ಇಲ್ಲದೆ ಇವತ್ತು ಬಹಳ ತೊಂದರೆಯಾಗಿದೆ. ೩ ವರ್ಷಗಳಿಂದಲೂ ಶಿಕ್ಷಕರ ನೇಮಕಾತಿ ಆಗಿಲ್ಲ. ಅಷ್ಟೇ ಅಲ್ಲ. ೧೯೯೦ನೇ ಇಸವಿಯವರೆಗೂ ಈ ಶಿಕ್ಷಕರ ನೇಮಕಾತಿಯನ್ನೇ ಮಾಡಬಾರದೆಂದು ಸರ್ಕಾರದ ಆಜ್ಞೆ ಇದೆ. ಈಗ ಏನೋ ನೇಮಕ ಮಾಡಬಹುದೆಂದು ಸೂಚನೆ ನೀಡಿದ್ದಾರೆಂದು ಹೇಳುತ್ತಿದ್ದಾರೆ. ಹಿಂದಿನ ರೇಷಿಯೋ ತೆಗೆದುಕೊಂಡರೂ ೧:೫೦ ಆಗಿರಬೇಕು. ಇದರ ಪ್ರಕಾರ ೫೦೦೦ ಜನ ಪ್ರಾಥಮಿಕ ಶಾಲಾ ಶಿಕ್ಷಕರು ಬೇಕಾಗುತ್ತದೆ. ೨೦೦೦ ಹಿಂದಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ತುಂಬುವುದಕ್ಕೆ ಕೇಂದ್ರಸರ್ಕಾರಕ್ಕೆ ಕೇಳಿದ್ದೇವೆಂದು ಹೇಳಿದ್ದೀರಿ, ಇದರ ಜೊತೆಗೆ ವ್ಯಾಯಾಮ ಶಿಕ್ಷಕರು ಬೇಕು. ಉರ್ದು ಶಿಕ್ಷಕರು ಬೇಕು, ಶಾಲಾ ಮಾತೆಯರು ಬೇಕು, ತಾಂತ್ರಿಕ ಶಿಕ್ಷಕರು ಬೇಕು. ಇವರುಗಳ ಸಮಸ್ಯೆ ಕೂಡ ಬಹಳ ಇದೆ. ಇದರ ಬಗ್ಗೆ ಸರ್ಕಾರ ಸಮಗ್ರವಾಗಿ ಏತಕ್ಕೆ ಚಿಂತನೆಯನ್ನು ಮಾಡುತ್ತಿಲ್ಲ ನಮ್ಮಲ್ಲಿ ಬಹಳ ಜನ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ, ಅವರುಗಳನ್ನಾದರೂ ನೇಮಕ ಮಾಡಿಕೊಳ್ಳಬಹುದು. ಅವರು ಕೆಲಸಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಇಷ್ಟೇ ಅಲ್ಲದೆ, ಬಹಳಷ್ಟು ಉಪಾಧ್ಯಾಯರು ಅರೆಕಾಲಿಕ ಮತ್ತು ಗುತ್ತಿಗೆ ಆಧಾರದಮೇಲೆ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಬಹಳ ಜನರು ವಯೋಮಿತಿ ಮೀರಿರುವವರಿದ್ದಾರೆ, ಮದುವೆಯಾಗಿ, ಮಕ್ಕಳೂ ಆಗಿರುವವರಿದ್ದಾರೆ, ಈ ಕೆಲಸವನ್ನು ಬಿಟ್ಟರೆ ಬೇರೆ ಕೆಲಸ ಸಿಕ್ಕುವುದಿಲ್ಲ ಎಂದು ಕೆಲಸದ ಭದ್ರತೆಗಾಗಿ ಅವರು ಕಾಯುತ್ತಿದ್ದಾರೆ ಅವರನ್ನು ಖಾಯಂಗೊಳಿಸುವುದಕ್ಕೆ ಸರ್ಕಾರ ಚಿಂತನೆಯನ್ನು ಮಾಡುತ್ತಿಲ್ಲ. ಇವತ್ತು ಶಿಕ್ಷಣ ಕ್ಷೇತ್ರ ವೇಸ್ಟ್ ಕ್ಷೇತ್ರವಾಗಿದೆ. ಇನ್ನು ರೇಷಿಯೋ ಬಗ್ಗೆ ಹೇಳುವುದಾದರೆ, ಇವತ್ತು ಜಪಾನ್ ಅದ್ಭುತ ಆರ್ಥಿಕ ಪ್ರಗತಿಗೆ ಶಿಕ್ಷಣವೇ ಕಾರಣ. ಅಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ೧:೨೧ ರೇಷಿಯೋ ಇದ್ದರೆ ನಮ್ಮಲ್ಲಿ ೧:೫೦ ರೇಷಿಯೋ ಇದೆ. ಇದಕ್ಕೂ ಕೂಡ ನಮ್ಮಲ್ಲಿ ಅಧ್ಯಾಪಕರಿಲ್ಲ. ನಮ್ಮಲ್ಲಿ ಈ ರೇಷಿಯೋ ಪ್ರಕಾರವೂ ಶಿಕ್ಷಕರಿಲ್ಲ. ಎಂದರೆ ನಮ್ಮ ಶಿಕ್ಷಣ ಕ್ಷೇತ್ರ ಯಾವ ಮಟ್ಟದಲ್ಲಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲೂಕಿನಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಇವತ್ತು ೧:೯೮ ರೇಷಿಯೋ ಇದೆ. ತಾವು ಇವತ್ತು ಜಿಲ್ಲಾ ಪರಿಷತ್ತಿಗೆ ಅಧಿಕಾರವನ್ನು ಕೊಟ್ಟಿರುವುದಾಗಿ ಹೇಳುತ್ತಿದ್ದೀರಿ. ಜಿಲ್ಲಾ ಪರಿಷತ್ತಿನಲ್ಲಿ ಇದನ್ನು ನಾವು ಸರಿಪಡಿಸಿಕೊಳ್ಳಬೇಕೆಂದು ಬಹಳ ಪ್ರಯತ್ನ ಮಾಡುತ್ತಿದ್ದೇವೆ, ಇವತ್ತು ಇರತಕ್ಕ ರೇಷಿಯೋ ಪ್ರಕಾರ ೧:೭೦ ಬರುತ್ತಿದೆ. ಇದನ್ನು ಕಡಿಮೆ ಮಾಡಬೇಕಾದರೆ, ಮೊದಲು ಶಿಕ್ಷಕರ ನೇಮಕಾತಿ ಆಗಬೇಕು. ಈ ಅಧಿಕಾರವನ್ನು ತಾವು ಜಿಲ್ಲಾ ಪರಿಷತ್ತಿಗೆ ಏತಕ್ಕೆ ಬಿಡಬಾರದು? ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ೮೦೦ ಜನ ಶಿಕ್ಷಕರು ಬೇಕಾಗಿದ್ದಾರೆ. ಈಗ ಖಾಲಿ ಹುದ್ದೆಗಳು ಇನ್ನೂ ೯೫ ಇವೆ. ಗಣಿತಕ್ಕೆ ಶಿಕ್ಷಕರು ಬೇಕಾಗಿದ್ದಾರೆ ಉರ್ದುವಿಗೆ ಶಿಕ್ಷಕರು ಬೇಕಾಗಿದ್ದಾರೆ. ಈಗ ಏನು ತಾವು ೧೫೦ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಹೊರಟಿದ್ದೀರಿ, ಇದರ ಜೊತೆಯಲ್ಲೇ ಬೇರೆ ಬೇರೆ ವಿಷಯಗಳಿಗೂ ಸಂಬಂಧಪಟ್ಟಂತೆ ಶಿಕ್ಷಕರನ್ನು ತಾವು ನೇಮಕ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕರಿ ಹಲಗೆ ಯೋಜನೆಗೆ ಸಂಬಂಧಪಟ್ಟಂತೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರ ಮಂಜೂರಾತಿಯನ್ನು ಮಾಡಿದ್ದು ಸರ್ಕಾರಿ ಆಜ್ಞೆಯೂ ಇದೆ. ಈ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಇನ್ನೊಂದು ರಿಕ್ರೂಟ್‌ಮೆಂಟ್ ಆರ್ಡರ್ ಬೇಕೆಂದು ಹೇಳುತ್ತಿದ್ದೀರಿ ಕರಿ ಹಲಗೆ ಯೋಜನೆಗೆ ಕೇಂದ್ರಸರ್ಕಾರ ದುಡ್ಡನ್ನು ಕೊಡುತ್ತದೆ. ಇದು ಕೇಂದ್ರಸರ್ಕಾರ ನೆರವು ಕೊಡತಕ್ಕ ಒಂದು ಯೋಜನೆ. ಇದಕ್ಕೆ ೭೦೫ ಲಕ್ಷ ರೂಪಾಯಿ ಕೇಂದ್ರದಿಂದ ಬರುತ್ತದೆ. ಎನ್. ಆರ್. ಇ. ಪಿ. ಆರ್. ಎಲ್. ಇ. ಜಿ. ಪಿ. ನಿಂದ ೭೦೮ ಲಕ್ಷ ರೂಪಾಯಿ ಶಾಲಾ ಕಟ್ಟಡಗಳಿಗೆ ಬರುತ್ತದೆ.

೨-೩೦ ಪಿ. ಎಂ.

೧೬೦೦ ಶಿಕ್ಷಕರನ್ನು ನೇಮಕ ಮಾಡಲು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೆಂಬುದನ್ನು ತಿಳಿಸಬೇಕು. ನೀವು ಏನು ಮಾಡಿದ್ದಿರೆಂದರೆ ೧೬೦೦ ಶಿಕ್ಷಕರು ಈಗ ಯಾರು ಇದ್ದಾರೋ ಆಲ್‌ರೆಡಿ ಅಪಾಯಿಂಟೆಂಟ್ ಆವರನ್ನೇ ಈ ಕರಿ ಹಲಗೆಯ ಯೋಜನೆಗೆ ಟ್ರಾನ್ಸ್‌ಫರ್ ಮಾಡಿ ಸೆಂಟ್ರಲ್ ಗ್ರಾಂಟನ್ನು ಖರ್ಚುಮಾಡಿ ಎನ್ನುವ ಸೂಚನೆ ಇಲ್ಲಿಂದ ಹೋಗಿದೆ. ೧೬೦೦ ಶಿಕ್ಷಕರನ್ನು ನೇಮಕ ಮಾಡಿಕೊಂಡು ಈ ಕೆಲಸವನ್ನು ಮಾಡಬೇಕು, ಆದ್ದರಿಂದ ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಟ್ರಾನ್ಸ್‌ಫರ್ ಮಾಡುವ ವಿಧಾನ ಸರಿಯಾದುದಲ್ಲ ಇನ್ನು ಪ್ರತಿ ಜಿಲ್ಲೆಗೆ ಒಂದು ನವೋದಯ ಶಾಲೆ ಪ್ರಾರಂಭಮಾಡಬೇಕೆಂಬ ಆದೇಶ ಇದೆ. ಆದರೆ ನಿಮಗೆ ಜಾಗ ನಿಷ್ಕರ್ಷೆ ಮಾಡಲು ಇನ್ನೂ ಸಾಧ್ಯವಾಗಿಲ್ಲ ಇದರ ಬಗ್ಗೆ ಕೂಡ ನೀವು ಕೂಡಲೇ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿರುವ ಈ ಯೋಜನೆಯು ಪ್ರಯೋಜನ ಪೂರ್ತಿಯಾಗಿ ನಮ್ಮ ಮಕ್ಕಳಿಗೆ ದೊರೆಯುವಂತಾಗಬೇಕು

ಇನ್ನು ಶಾಲಾ ಅಭಿವೃದ್ಧಿ ಸಮಿತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಶಾಲಾ ಅಭಿವೃದ್ಧಿ ಸಮಿತಿಯ ಬಗ್ಗೆ ಟಾಪ್ ಲೆವೆಲ್‌ನಿಂದ ಆದೇಶ ಹೋಗಿದೆ. ಅದೇನೆಂದರೆ ಲೋಕಸಭಾ ಸದಸ್ಯರು ಇದ್ದರೆ ಅವರೇ ಇದಕ್ಕೆ ಅಧ್ಯಕ್ಷರು, ಲೋಕಸಭಾ ಸದಸ್ಯರು ಇಲ್ಲದಿದ್ದರೆ ಅಲ್ಲಿಯ ಶಾಸಕರೆ ಅಧ್ಯಕ್ಷರು, ಶಾಸಕರು ಇಲ್ಲದಿದ್ದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರೇ ಇದರ ಅಧ್ಯಕ್ಷರು. ಅವರಿಲ್ಲದಿದ್ದರೆ ಮಂಡಲ್ ಪಂಚಾಯತ್ ಪ್ರಧಾನರು, ಅಧ್ಯಕ್ಷರು ಅವರಿಲ್ಲದಿದ್ದರೆ ಮಂಡಲ್ ಪಂಚಾಯತ್ ಸದಸ್ಯರು ಅಧ್ಯಕ್ಷರೆಂದು ಇದೆ. ಇದಕ್ಕೆ ಕಾರ್ಯಾಧ್ಯಕ್ಷರು ಮಂಡಲ್ ಪಂಚಾಯತ್ ಪ್ರಧಾನರು ಅಧ್ಯಕ್ಷರು ಯಾರು ಸಿಗದೇ ಮಂಡಲ್ ಪಂಚಾಯತ್ ಸದಸ್ಯರು ಈಗ ಜಾಗಕ್ಕೆ ಬಂದರೆ ಆಗ ಈ ಸಾಮಾನ್ಯ ಸದಸ್ಯರ ಕೆಳಗೆ ಮಂಡಲ್ ಪಂಚಾಯತ್ ಪ್ರಧಾನರು ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡತಕ್ಕಂಥ ಈ ಸುತ್ತೋಲೆ ಏನು ಕಳುಹಿಸಿದ್ದೀರಿ ಇದು ಸರಿಯಲ್ಲ ಆದ್ದರಿಂದ ಇದರ ಬಗ್ಗೆ ಸರಿಯಾದ ಒಂದು ಗೈಡ್ ಲೈನ್ ಕೂಡಲೇ ಕಳುಹಿಸಬೇಕು. ಇನ್ನು ಟಿ. ಸಿ. ಎಚ್. ಸಿಪಿಎಡ್ ಮಾಡಿಕೊಂಡಂತಹವರು ಬಹಳ ಜನರು ಇದ್ದಾರೆ ಎಲ್ಲ ಹೈಯರ್ ಪ್ರೈಮರಿ ಶಾಲೆಗಳಿಗೆ ಸಿ. ಪಿ. ಎಡ್. ಆಗಿರುವವರನ್ನು ಏತಕ್ಕೆ ಕೊಡಬಾರದು. ನೀವು ಈಗಾಗಲೇ ಸಿ. ಪಿ. ಎಡ್. ಕಾಲೇಜುಗಳಿಗೆ ಟಿ. ಸಿ. ಎಚ್. ಕಾಲೇಜುಗಳಿಗೆ ಬಹಳ ಅನುಮತಿಯನ್ನು ನೀಡಿದ್ದೀರಿ ಆದ್ದರಿಂದ ಕೂಡಲೇ ಡಿ. ಎಲ್. ಆರ್. ಸಿ ಒಂದು ಸಮಿತಿಯನ್ನು ಮಾಡಿ ಇವರನ್ನು ನೇಮಕ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಯಾರು ಪ್ರಾಯ ಮೀರಿರುತ್ತಾರೆ ಅಂತಹವರಿಗೆ ಆದ್ಯತೆಯನ್ನು ಕೊಡಬೇಕು ಯಾರಿಗೆ ಮುಂದೆ ಕೆಲಸ ಸಿಗುವುದಿಲ್ಲ, ಅಂಥವರಿಗೆ ಆದಷ್ಟು ಬೇಗ ಕೆಲಸ ಕೊಡುವ ರೀತಿಯಲ್ಲಿ ಮಾನವೀಯ ದೃಷ್ಟಿಯಿಂದ ಇದನ್ನು ನೋಡಬೇಕು. ಈಗ ಹೈಯರ್ ಪ್ರೈಮರಿ ಶಾಲೆಗಳಲ್ಲಿ ಹಾಗೂ ಮಾಡಲ್ ಶಾಲೆಗಳಲ್ಲಿ ಪದವೀಧರ ಉಪಾಧ್ಯಾಯರನ್ನು ಮುಖ್ಯೋಪಾಧ್ಯಾಯರಾಗಿ ಅವರನ್ನು ಹೈಸ್ಕೂಲಿಗೆ ಜಾಗಗಳಿಗೆ ಟ್ರಾನ್ಸ್‌ಫರ್ ಮಾಡಿಬಿಡಿ ಹೊಂದಿದ ಮುಖ್ಯೋಪಾಧ್ಯಾಯವರನ್ನು ನೇಮಿಸಬಹುದು. ಇದರ ಬಗ್ಗೆಯೂ ಕೂಡ ಸರಿಯಾಗಿ ಕ್ರಮ ತೆಗೆದುಕೊಳ್ಳಬೇಕು. ಇನ್ನು ವರದಿಯ ೯ನೇ ಪುಟದಲ್ಲಿ ಏನು ಹೇಳಿದ್ದಾರೆಂದರೆ, ಜಿಲ್ಲಾ ಪರಿಷತ್ತುಗಳು ಪ್ರಾಂತೀಯ ಅಸಮತೋಲನ ಹೋಗಲಾಡಿಸಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಮಾಡುವುದಾಗಿ ಆಶಿಸಲಾಗಿದೆ. ಶಾಲೆಗಳ ಬೇಡಿಕೆಗೆ ಅನುಗುಣವಾಗಿ ಹೊಸ ಶಾಲೆಗಳನ್ನು ನೀಡಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಹೈಸ್ಕೂಲುಗಳ ಅವಶ್ಯಕತೆ ಇದೆ, ಆದರೆ ಸರ್ಕಾರಿ ಆಜ್ಞೆ ತೆರೆಯಬೇಡಿ ಎಂದು ಇದೆ. ಆದ್ದರಿಂದ ನೀವು you have to limit it so much of High Schools ಎಂದು ಮಾಡಬಹುದು. ಈ ಟಿ. ಸಿ. ಎಚ್. ಮತ್ತು ಸಿ. ಪಿ. ಎಡ್. ಕಾಲೇಜುಗಳಿಗೆ ಇನ್ನು ಮುಂದೆ ಅನುಮತಿ ನೀಡಬೇಡಿ. ಈ ಪ್ರಾದೇಶಿಕ ಅಸಮತೋಲವನ್ನು ಹೋಗಲಾಡಿಸಿ ಹಾಗೂ ಹೊಸ ಹೈಸ್ಕೂಲುಗಳನ್ನು ತೆರೆಯುವ ಬಗ್ಗೆ ಸರ್ಕಾರವು ಮರುಚಿಂತನೆ ಮಾಡಬೇಕಾದ್ದು ಬಹಳ ಅಗತ್ಯವಿದೆ.

ದಿನಾಂಕ ೪-೬-೧೯೮೮ರಕ್ಕೆ ಸರ್ಕಾರದಿಂದ ಒಂದು ಆಜ್ಞೆ ಹೊರಟದೆ. ಅದರ ಪ್ರಕಾರ ಶಾಶ್ವತ ಅನುದಾನ ಇಲ್ಲದೆ ೧೯ ಪದವಿಪೂರ್ವ ಕಾಲೇಜುಗಳನ್ನು ತೆರೆಯಲಿಕ್ಕೆ ಆದೇಶಿಸಲಾಗಿದೆ, ಶಾಶ್ವತ ಅನುದಾನ ಇಲ್ಲ ಅಂದರೆ ಇನ್ನು ಮುಂದೆ ಅನುದಾನ ಕೊಡುವ ಪ್ರಶ್ನೆಯೇ ಇಲ್ಲ. ಹೀಗಾದರೆ ಸಂಸ್ಥೆ ಗಳು ನಡೆಯುವುದು ಹೇಗೆ ? ಇಂದಿನವರೆಗೆ ಏನಾಗಿದೆ ಎಂದರೆ ಎಲ್ಲಿ ಶಕ್ತಿ ಇದೆ ಅಂಥ ಕಡೆ

ಪದವಿಪೂರ್ವ ಕಾಲೇಜುಗಳಿವೆ. ನಗರ ಪ್ರದೇಶಗಳಲ್ಲಿ ಜನ ಕೂಗುತ್ತಾರೆ, ಆದ್ದರಿಂದ ಅಲ್ಲಿ ಕಾಲೇಜುಗಳು ಆಗಿವೆ. ಎಲ್ಲಿ ಪ್ರಭಾವಿಗಳಿದ್ದಾರೆ ಅಲ್ಲಿ ತೆರೆಯಲ್ಪಟ್ಟಿವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದ ಜನರು ಮೂಕರಾಗಿ ಇದನ್ನು ಕುರಿತು ಚಿಂತನೆ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದು, ಈಗ ಎಚ್ಚೆತ್ತಿದ್ದಾರೆ. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ರಚನೆಯಿಂದಾಗಿ ಹಳ್ಳಿಗಳಲ್ಲಿ ಜಾಗೃತಿ ಉಂಟಾಗಿದೆ. ಹಳ್ಳಿಗಳಲ್ಲಿ ಪಿಯುಸಿ. ತರಗತಿ ಇರತಕ್ಕ ಕಾಲೇಜು ಆಗಬೇಕೆಂಬ ಬೇಡಿಕೆ ಬರುತ್ತಿದೆ. ಆದರೆ ಶಾಶ್ವತ ಅನುದಾನ ಇಲ್ಲದ ಸಂಸ್ಥೆಗಳನ್ನು ಅಲ್ಲಿ ನಡೆಸುವುದಕ್ಕಾಗುವುದಿಲ್ಲ. ನಗರ ಪ್ರದೇಶಗಳಲ್ಲಿ ಮಾತ್ರ ಆಗಬಹುದು. ಆದ್ದರಿಂದ ನಿಯಮಾವಳಿಗಳನ್ನು ಸ್ವಲ್ಪ ಸಡಿಲಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಯಾರಿಗೆ ಶಕ್ತಿ ಇದೆ, ಯಾರು ವಿದ್ಯೆಯನ್ನು ಮಾರಾಟ ಮಾಡುವ ಚಾಕಚಕ್ಯತೆಯನ್ನು ಪಡೆದಿದ್ದಾರೆ ಅವರು ಮಾತ್ರ ಮಾಡಲಿಕ್ಕೆ ಹೋಗುತ್ತಾರೆ. ಹಿಂದಿನ ನಿಯಮಾವಳಿ ಪ್ರಕಾರ ೫ ವರ್ಷ ಕಾಲ ಯಾರು ಜೂನಿಯರ್ ಕಾಲೇಜನ್ನು ನಡೆಸಿದ್ದಾರೆ ಅವರಿಗೆ ಗ್ರಾಂಟ್ ಕೊಡಬೇಕು. ಹುಕ್ಕೇರಿ ತಾಲ್ಲೂಕಿನಲ್ಲಿ ಒಬ್ಬರು ೧೯೮೭ರಲ್ಲಿ ಎಸ್.ಎಲ್.ಬಿ.ಎಸ್. ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡಿದರು, ನಿಯಮಾವಳಿ ಪ್ರಕಾರ ಷರತ್ತು ಪೂರೈಸಿದರು, ೫ ವರ್ಷ ಪೂರೈಸಿದೆ. ಅದು ಗಡಿನಾಡು ಪ್ರದೇಶದಲ್ಲಿದೆಯಲ್ಲದೆ ಕ್ಷಾಮಪೀಡಿತ ಪ್ರದೇಶ ಅಲ್ಲಿ ಇನ್ನೂ ಗ್ರಾಂಟ್ ಕೊಡುವುದಕ್ಕೆ ಏರ್ಪಾಡಾಗಿಲ್ಲ. ಕಾಲೇಜನ್ನು ಪ್ರಾರಂಭಿಸಿ ೫ ವರ್ಷವಾಗಿರುವುದರಿಂದ ಹಿಂದಿನ ನಿಯಮಾವಳಿ ಪ್ರಕಾರ ಗ್ರಾಂಟ್ ಕೊಡಬೇಕು. ಇನ್ನು ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಹೇಳುವುದಾದರೆ, ಇದು ಕಾಂಟ್ರವರ್ಷಿಯಲ್ ವಿಚಾರವಾದರೂ ಕೂಡ ಆಂಗ್ಲ ಮಾಧ್ಯಮವನ್ನು ಅಪೇಕ್ಷಿಪಡುವವರು ಇದ್ದಾರೆ. ಅನೇಕ ಮಂದಿ ಪ್ರಭಾವಿಗಳು ಆಂಗ್ಲ ಮಾಧ್ಯಮ ಶಾಲೆಗಳನ್ನು ಮಂಜೂರ್ಮಾಡಿಸಿಕೊಂಡರು. ಅನೇಕರು ಮೈನಾರಿಟಿ ಕಮ್ಯುನಿಟಿಗೆ ಸೇರಿದವರು ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕಲಿಯುವುದಕ್ಕೆ ಅಪೇಕ್ಷೆ ಪಡುತ್ತಾರೆ. ಬಡ ರೈತರ ಮಕ್ಕಳಲ್ಲೂ ಜಾಗೃತಿ ಮೂಡಿದೆ, ನಾವು ಕೂಡ ಮುಂದೆ ಹೋಗಬೇಕೆಂಬ ಆಸೆ ಅವರಲ್ಲಿದೆ. ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆದರೆ ಕಷ್ಟದಲ್ಲಾದರೂ ಮುಂದೆ ಬರಬೇಕೆಂಬ ಛಲ ಅವರಲ್ಲಿ ಬಂದಿದೆ. ಅದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು - ಸಾರಾಸಗಟಾಗಿ, ಹಿಂದೆ ಕೊಟ್ಟಿದ್ದೇವೆ, ಮುಂದೆ ಕೊಡುವುದಿಲ್ಲವೆಂದು ಹೇಳಿದರೆ ಸಮಂಜಸವಾಗುವುದಿಲ್ಲ. ಇದರಲ್ಲೂ ಕ್ರಮಬದ್ಧವಾಗಿ ಹಂಚಿಕೆಯಾಗುವ ವಿಧಾನವನ್ನು ಅನುಸರಿಸಬೇಕು. ಗ್ರಾಮೀಣ ಮಕ್ಕಳಿಗೆ ಹತ್ತು ಮಾರ್ಕ್ಸ್ ವೆಯಿಟೇಜ್ ಕೊಟ್ಟು ಉದ್ಧಾರ ಮಾಡಿದ್ದೇವೆಂದರೆ ಸಾಕಾಗುವುದಿಲ್ಲ. ಅಲ್ಲಿ ಕಲಿಯುವ ಅನುಕೂಲಗಳು ಇಲ್ಲ, ವ್ಯವಸ್ಥೆಗಳು ಇಲ್ಲ. ಎಲ್ಲಾ ವ್ಯವಸ್ಥೆ ಇರುವ ವಿದ್ಯಾ ಮಂದಿರಗಳು ಅಲ್ಲಿ ಸ್ಥಾಪನೆ ಆಗಬೇಕು. ಖಾಸಗಿ ಶಾಲೆಗಳಲ್ಲಿ ನೇಮಕಾತಿಗೆ ಒಂದು ನಿರ್ಬಂಧ ಇದೆ. ಅದನ್ನು ಸಡಿಲಿಸಬೇಕು. ಖಾಸಗಿ ಶಾಲೆಗಳಲ್ಲೂ ಅಧ್ಯಾಪಕರು ನಿವೃತ್ತರಾಗುತ್ತಾರೆ, ಮರಣ ಹೊಂದುತ್ತಾರೆ. ಮುಂದೆ ೧೯೮೦ರವರೆಗೆ ನೇಮಕಾತಿ ಇಲ್ಲವೆಂದು ಆಜ್ಞೆ ಬಂದಿದೆ. ಅವರಿಗೆ ನಿರ್ವಹಣಾ ಸಹಾಯ, ಅನುದಾನ ಯಾವುದು ಇದೆ ಅದು 75% of the pre-revised salary that comes to 60% of the revised salary. ಈ ರೀತಿ ಅನುದಾನ ಕೊಡುವ ಕ್ರಮ ಆಗಬಾರದು. ಸರ್ಕಾರಿ ಶಾಲೆಗಳಿಗೆ ಪೂರ್ತಿ ಕೊಡುವುದು, ಖಾಸಗಿ ಶಾಲೆಗಳಿಗೆ 75% of pre-revised salary, ಕೊಡುವುದು. ಇದು ಯಾವ ನೀತಿ ? ಅದೂ ಶಾಲೆ, ಇದೂ ಶಾಲೆ, ಅವರೂ ಅಧ್ಯಾಪಕರು, ಇವರೂ ಅಧ್ಯಾಪಕರು. ಖಾಸಗಿ ಶಾಲೆಗಳಿಗೆ ಕೊಡತಕ್ಕ ಅನುದಾನ ಏನಿದೆ ಅದನ್ನು ರಿಲೀಸ್ ಮಾಡುವುದಕ್ಕೆ ೩-೪ ತಿಂಗಳು ತಡವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಪತ್ರ ಬರೆದಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಒಳ್ಳೆಯ ಶಿಕ್ಷಣ ಕೊಡುವ ಮತ್ತು ಉತ್ಕೃಷ್ಟ ಫಲಿತಾಂಶ ಬರುವ ಹಲವಾರು ಖಾಸಗಿ ಶಾಲೆಗಳಿವೆ. ಇದು ಪಾಪವೆ ? ಅವರು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಕೊಡುವಂಥ ಶಾಪವೆ ? ಆದ್ದರಿಂದ ಖಾಸಗಿ ಶಾಲೆಗಳಿಗೆ ಮಲತಾಯಿ ಧೋರಣೆ ಮಾಡಬಾರದೆಂದು ಹೇಳುತ್ತೇನೆ, ಖಾಸಗಿ ಶಾಲೆಗಳಲ್ಲಿ ಫಲಿತಾಂಶ ಕಡಿಮೆ ಆದರೆ ಗ್ರಾಂಟ್ ಕಟ್ ಮಾಡಬೇಕೆಂಬ ಯೋಜನೆ ಇದೆ ಎಂದು ಕೇಳಿದ್ದೇನೆ. ಹಾಗಿದ್ದರೆ ಮುಂದೆ ದಾರಿ ಇರುವಂಥದ್ದು, ಮಾಸ್ ಕಾಪಿಯಿಂಗ್ ಮಾಡಿ ಪಾಸ್ ಮಾಡುವ ಕ್ರಮಕ್ಕೆ ತಯಾರಾಗಬೇಕಾಗುತ್ತದೆ. ಇದು ಕೆಟ್ಟ ಚಾಳಿಯಾಗುತ್ತದೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ ಒಳ್ಳೆಯ ರಿಸಲ್ಟ್ ಬರುವುದಕ್ಕೆ ಏನು ಮಾಡುತ್ತೀರಿ? ಖಾಸಗಿ ಶಾಲೆಗಳಲ್ಲಿ ಒಳ್ಳೆಯ ರಿಸಲ್ಟ್ ಬರದಿದ್ದರೆ ಗ್ರಾಂಟ್ ಕಟ್ ಮಾಡಬೇಕೆಂದು ಕಡ್ಡಾಯವಾಗಿ ಹೇಳುತ್ತೀರಿ. ಸರ್ಕಾರೀ ಶಾಲೆಗಳಿಗೆ ಯಾವರೀತಿ ಮಾಡುತ್ತೀರಿ ? ಯಾವ ಅನುದಾನವನ್ನು ಕಟ್

ಮಾಡುತ್ತೀರಿ ? ಸರ್ಕಾರಿ ಶಾಲೆಗಳಲ್ಲಿ ಅಧ್ಯಾಪಕರು ಸರಿಯಾಗಿ ಕೆಲಸ ಮಾಡದಿದ್ದರೆ ಏನು ಮಾಡುತ್ತೀರಿ ಎಂದು ಕೇಳಬಯಸುತ್ತೇನೆ. ಈ ಗ್ರಾಂಟಿನ ವಿಚಾರದಲ್ಲಿ ನನಗೆ ಎರಡು ಪತ್ರಗಳು ಬಂದಿವೆ. ದಕ್ಷಿಣ ಕನ್ನಡದ ಅದಮಾರುವಿನ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನಿಂದ ಬಂದಿರುವ ಪತ್ರದಲ್ಲಿ ಈ ರೀತಿ ಹೇಳಿದ್ದಾರೆ. ''ಖಾಸಗಿ ಆಡಳಿತದಲ್ಲಿದ್ದು ಅನುದಾನ ಪಡೆಯುತ್ತಿರುವ ಪದವಿಪೂರ್ವ ಕಾಲೇಜುಗಳ ಸಿಬ್ಬಂದಿಗೆ ಸಮಯಕ್ಕೆ ಸರಿಯಾಗಿ ವೇತನ ಪಾವತಿ ಕಳೆದ ನಾಲ್ಕು ವರ್ಷಗಳಿಂದಲೂ ಆಗುತ್ತಿಲ್ಲ. ಕೆಲವು ವೇಳೆ ಒಂದು ತಿಂಗಳು ತಡವಾದರೆ ಮತ್ತೆ ಕೆಲವು ಸಲ ಮೂರು–ಮೂರೂವರೆ ತಿಂಗಳು ತಡವಾಗುತ್ತದೆ. ಏಪ್ರಿಲ್ ಹಾಗೂ ಮೇ ತಿಂಗಳ ವೇತನ ಈ ಪತ್ರ ಬರೆಯುವ ತನಕ ಸಂದಾಯವಾಗಿಲ್ಲ. ಮೂರು ತಿಂಗಳು ಮುಂಗಡ ವೇತನಕ್ಕೆ ಸಾಕಾಗುವಷ್ಟು ಹಣವನ್ನು ವೇತನ ಪಾವತಿಗಾಗಿ ಸಂಸ್ಥೆಯ ಹೆಸರಲ್ಲಿ ಬ್ಯಾಂಕಿನಲ್ಲಿ ಸರಕಾರ ಜಮಾ ಇಡಬೇಕೆಂದು ಆಡಳಿತ ಮಂಡಳಿಗೂ ಸರಕಾರಕ್ಕೂ ನಡುವೆ ಒಂದು ಒಪ್ಪಂದ ಆಗಿ ಸುಮಾರು ಒಂದು ದಶಕವೇ ಸಂದಿದೆ. ಸರ್ಕಾರ ಈ ಶರತ್ತನ್ನು ಪಾಲಿಸುತ್ತಿಲ್ಲ '' ಇದು ಪತ್ರ. ಇನ್ನೊಂದು ಪತ್ರದಲ್ಲಿ ಹೀಗಿದೆ. ''ಸಂಬಳ ವಿಳಂಬ, ಪತ್ರವ್ಯವಹಾರ ವಿಳಂಬ, ಅರ್ಥವಿಲ್ಲದ ರಜಾ ಬದಲಾವಣೆ, ಶನಿವಾರ ಇಡೀ ದಿನ ಕೆಲಸ, ಒಂದಕ್ಕೊಂದು ಹೊಂದಿಕೆ ಇಲ್ಲದ ತೊಗಲಕ್ ದರ್ಬಾರು ಶ್ರೀ ಸೋಮಶೇಖರರ ಕಾರುಬಾರು, ಜನತಾ ಸರ್ಕಾರ ಬಂದಮೇಲೆ ಗೊಂದಲ. ಅವ್ಯವಸ್ಥೆ, ಸಂಬಳ ಇಲ್ಲದೆ ಮರ್ಯಾದೆ ಬೀದಿಪಾಲು, ಇದು ನಿಮಗೆ ನಮ್ಮ ಅಹವಾಲು.'' ಈ ರೀತಿ ಪತ್ರ ಬರೆದು ಕಳುಹಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲೂ ಉತ್ತಮ ಶಾಲೆಗಳಿಲ್ಲ ಎಂದು ಹೇಳುವುದಿಲ್ಲ. ಆಕಸ್ಮಾತ್ತಾಗಿ ಸರ್ಕಾರಿ ಹೆಣ್ಣುಮಕ್ಕಳ ಪದವಿಪೂರ್ವ ಕಾಲೇಜು, ಬಸವನಗುಡಿ, ಬೆಂಗಳೂರು ಇಲ್ಲಿಗೆ ಹೋಗುವ ಪ್ರಮೇಯ ಬಂತು. ಅಲ್ಲಿ ಪರಿಸರವನ್ನು ನೋಡಿದೆ. ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ೭೦–೮೦ ಪರ್ಸೆಂಟ್‌ಗಿಂತ ಹೆಚ್ಚಿಗೆ ಅಂಕಗಳನ್ನು ಪಡೆದಿರುವವರನ್ನು ಅಡ್ಮಿಟ್ ಮಾಡಿಕೊಳ್ಳುತ್ತಾರೆ. ಆದರೆ ಇಲ್ಲಿ ೪೦–೫೦ ಪರ್ಸೆಂಟ್ ಅಂಕ ಪಡೆದಿರುವವರನ್ನೂ ಸೇರಿಸಿಕೊಳ್ಳುತ್ತಾರೆ. ಬಡಮಕ್ಕಳು ಕೂಲಿಕಾರರ ಮಕ್ಕಳು, ಗಂಜಿಗೂ ಗತಿ ಇಲ್ಲದೇ ಇರುವ, ಡೊನೇಷನ್ ಕೊಡಲು ಆಗದೇ ಇರುವ ಮಕ್ಕಳು ಇಲ್ಲಿ ಓದುತ್ತಿದ್ದಾರೆ. ಇಂಥವರನ್ನು ಸೇರಿಸಿಕೊಂಡು ಸ್ಪೆಷಲ್ ಕ್ಲಾಸ್‌ಗಳನ್ನು ಅಧ್ಯಾಪಕರು ಮಾಡಿ ಒಳ್ಳೆಯ ಫಲಿತಾಂಶವನ್ನು ತರುತ್ತಿದ್ದಾರೆ. ಸಂಗೀತ, ನೃತ್ಯ ಪರೀಕ್ಷೆಗೆ ನಮ್ಮ ಕಡೆಯ ಮಕ್ಕಳನ್ನು ಕರೆದುಕೊಂಡು ಹೋದಾಗ ನನಗೆ ಅಲ್ಲಿನ ಅಧ್ಯಾಪಕರ ಜೊತೆ ಮಾತನಾಡುವ ಅವಕಾಶ ಬಂತು. ಇಂಥವರಿಗೆ ಹೆಚ್ಚಿಗೆ ಪ್ರೋತ್ಸಾಹ ನೀಡುವಂಥ ಕೆಲಸವನ್ನು ಮಾಡಬೇಕೆಂದು ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ನಿಮ್ಮ ಸರ್ಕಾರದ ನೀತಿ, ಧೋರಣೆ ಯಾವುದಿದೆ ? ದುರಾದೃಷ್ಟವಶಾತ್, ಕರ್ನಾಟಕ ಸರ್ಕಾರದಲ್ಲಿ ಶಿಕ್ಷಣ ಇಲಾಖೆಯಲ್ಲಿ ದಿನಕ್ಕೊಬ್ಬ ಮಂತ್ರಿ, ದಿವಸಕ್ಕೆ ಒಂದು ನೀತಿ ಮತ್ತು ಧೋರಣೆಯಾಗುತ್ತಿದೆ. ಇದು ದುರ್ದೈವ. ಶನಿವಾರ ಇಡೀ ದಿನ ಶಾಲೆ. ಇದು ಇತ್ತೀಚೆಗೆ ಬಂದ ಹೊಸ ರೂಲು. ಹಾಗಾದರೆ ಮಕ್ಕಳು ತಮ್ಮ ಕೆಲಸವನ್ನು, ಒಂದು ವಾರದಲ್ಲಿ ಕಲಿತ ಪಾಠವನ್ನು ರಿವಿಜನ್ ಮಾಡುವುದು ಯಾವಾಗ ? ಹೋಮ್ ವರ್ಕ್ ಮಾಡುವುದು ಯಾವಾಗ ? ಅಧ್ಯಾಪಕರು ಮುಂದಿನ ವಾರದ ತಯಾರಿಯನ್ನು ಯಾವಾಗ ಮಾಡಿಕೊಳ್ಳುವುದು ? ಇಂಥ ನಿರ್ಧಾರಗಳನ್ನು ಯಾರ ಹತ್ತಿರ ಸಮಾಲೋಚನೆ ಮಾಡಿ ಮಾಡುತ್ತಿದ್ದೀರಿ ? ಇಂಥ ನಿರ್ಧಾರಗಳನ್ನು ದಿಢೀರನೆ ಮಾಡುತ್ತಿದ್ದೀರಿ ವಿಧಾನ ಪರಿಷತ್ತಿನಲ್ಲಿ ಅನೇಕ ಮಂದಿ ಶಿಕ್ಷಕರ ಪ್ರತಿನಿಧಿಗಳಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಪಕ್ಷದವರೇ, ಆಡಳಿತ ಪಕ್ಷದವರೇ ಇದರ ಬಗ್ಗೆ ಬಹಳಷ್ಟು ಟೀಕೆ ಮಾಡಿದ್ದಾರೆ, ಶಿಕ್ಷಣ ತಜ್ಞರಿದ್ದಾರೆ, ನಮ್ಮ ಶಾಸಕರಿದ್ದಾರೆ. ಅವರೊಡನೆ ಸಮಾಲೋಚನೆ ಮಾಡಿ ಇದರ ಕುರಿತು ಚಿಂತನೆ ಮಾಡಿ ರಜಾದಿನಗಳ ಬಗ್ಗೆ ನಿರ್ಧಾರ ಕೈಗೊಳ್ಳಬೇಕು. ಕೇರಳ ಶಿಕ್ಷಣ ರಂಗದಲ್ಲಿ ಅತ್ಯಂತ ಮುಂದುವರೆದ ರಾಜ್ಯ. ಅಲ್ಲಿ ಮೂರು ಅವಧಿಯಲ್ಲಿ ಮಧ್ಯೆ ಮಧ್ಯೆ ಬಿಡುವು ಕೊಟ್ಟು ಶಾಲಾ ದಿನಗಳನ್ನು ಗೊತ್ತು ಮಾಡಿದ್ದಾರೆ. ಇಲ್ಲಿ ಎರಡು ಅವಧಿ ಇದೆ. ಇದರ ಬದಲು ದಸರಾ ರಜ, ಕ್ರಿಸ್‌ಮಸ್ ರಜಾ, ಮತ್ತು ಬೇಸಿಗೆ ರಜ ಎಂದು ಮೂರು ಅವಧಿ ಏಕೆ ಮಾಡಬಾರದು ! ಆ ರೀತಿ ಮಾಡಿದರೆ ಮಕ್ಕಳು ಸುಸ್ತಾಗುವುದಿಲ್ಲ. ಅವರ ಚೇತನ ಮೊಟಕಾಗ ಬಾರದು ತಂದೆ ತಾಯಿಗಳ ಬಾಂಧವ್ಯ ರಜಾ ದಿನಗಳಲ್ಲಿ ಹೆಚ್ಚಾಗಿರುತ್ತದೆ. ನಾಲ್ಕು ದಿನ ಅವರ ಜೊತೆ ಸಂತೋಷದಿಂದ ಇರುವುದಕ್ಕೆ ಮಕ್ಕಳಿಗೆ ಹೊಸ ಚೇತನ ಪಡೆಯುವುದಕ್ಕೆ ಅವಕಾಶ ಏತಕ್ಕೆ ಮಾಡಬಾರದು ? ಹೊಸ ನೀತಿ ಈಗ ಬಂದಿದೆ. ಬೇಗ ಬೇಗ ಎಸ್.ಎಸ್.ಎಲ್.ಸಿ. ಪರೀಕ್ಷೆ ಮಾಡುವಂಥ ನೀತಿ ಬಂದಿದೆ. ಫೆಬ್ರುವರಿಯಲ್ಲಿ ಪಾಠ ಮುಕ್ತಾಯವಾಗಬೇಕು ಕಳೆದ ವರ್ಷ ಬೇಗ

ಪರೀಕ್ಷೆ ಬಂದಿದ್ದರಿಂದ ಬೇಗ ಪ್ರೋರ್ಷನ್ ಮುಗಿಸಿದರು. ಇಲ್ಲಿ ವಿಧಾನ ಸಭೆಯಲ್ಲಿ ಇನ್ನು ಎರಡು ದಿವಸಗಳಲ್ಲಿ ಎಲ್ಲಾ ಡಿಮ್ಯಾಂಡ್‌ಗಳನ್ನು ಮುಗಿಸುತ್ತೇವಲ್ಲ ಆ ರೀತಿ ಬಹಳ ರಭಸದಿಂದ ಜಟ್ ಸ್ಪೀಡಿನಿಂದ ಎಲ್ಲ ಪರೀಕ್ಷೆಗಳನ್ನು ಮುಗಿಸಿದ್ದೂ ಆಯಿತು, ಆ ಮಕ್ಕಳು ಏನು ಕಲಿತರೆಂಬುದು ಗೊತ್ತಿಲ್ಲ. ಇದರ ಪರಿಣಾಮ ಯಾವ ರೀತಿ ಆಗಿದೆ ಎಂಬುದನ್ನು ಮುಂದೆ ಹೇಳುತ್ತೇನೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಸಮಯ ಬಂದರೆ ಶಾಲೆಯಲ್ಲಿ ಮಕ್ಕಳಿಗೆ ಪಾಠ ಇಲ್ಲ. ಆ ಶಾಲೆಯಲ್ಲಿ ೮–೯ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ಮಕ್ಕಳಿಗೆ ಪಾಠ ಇಲ್ಲ. ಕಾರಣ ಅಲ್ಲಿನ ಅಧ್ಯಾಪಕರು ಪರೀಕ್ಷೆಯ ಸೂಪರ್‌ವಿಷನ್‌ಗೆ ಹೋಗಬೇಕಾಗುತ್ತದೆ. ಆಗ ಆ ಮಕ್ಕಳಿಗೆ ಪಾಠ ಇಲ್ಲ. ನಂತರ ಅಧ್ಯಾಪಕರುಗಳು ಮೌಲ್ಯಮಾಪನಕ್ಕೆ ಹೋಗುತ್ತಾರೆ. ಆಗ ಪಾಠ ಇಲ್ಲ. ಉಳಿದ ಮಕ್ಕಳು ಅಂದರೆ ೮–೯ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ಮಕ್ಕಳು ಏಪ್ರಿಲ್ ೧೦ನೇ ತಾರೀಖಿನವರೆಗೂ ಇರುತ್ತಾರೆ ಈ ರೀತಿಯಾದರೆ ಇದರ ವ್ಯವಸ್ಥೆ ಹೇಗೆ? ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಗಳ ಬಗ್ಗೆ ಇಂದು ನಾವು ಕೆಲವು ದಿನಪತ್ರಿಕೆಗಳಲ್ಲಿ ಬರುವುದನ್ನು ನೋಡಿದರೆ ಗೊತ್ತಾಗುತ್ತದೆ. ಜನವಾಣಿ. ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ ಈ ರೀತಿಯಾಗಿ ಹಲವಾರು ಪತ್ರಿಕೆಗಳಲ್ಲಿ ಜನವಾಣಿ, ವಾಚಕರವಾಣಿ, ದೂರುಗಂಟೆ ಹೀಗೆ ಕೆಲವೊಂದು ವಿಭಾಗಗಳಿದ್ದು. ಅದರಲ್ಲಿ ಅದರಲ್ಲಿ ಜನಸಾಮಾನ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿ ಬರೆದಿರುವುದನ್ನು ನಾವು ನೋಡಬಹುದು, ಅದರಲ್ಲಿ ಶೇಕಡ ೫೦ಕ್ಕಿಂತ ಹೆಚ್ಚು ಹೊಸ ಶಾಲಾ ವೇಳೆ ಪರೀಕ್ಷೆ ನೀತಿಯ ಬಗ್ಗೆ ಟೀಕೆಯನ್ನೇ ಮಾಡಿದ್ದಾರೆ. ಅಂದರೆ ಇದರಲ್ಲಿ ಅತ್ಯಂತ ಆಸಕ್ತಿಯಿಂದ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ತೀರ ಸಾಮಾನ್ಯವೆಂದು ತಾವು ತಿಳಿದುಕೊಳ್ಳಬಾರದು. ಇದರಿಂದಾಗಿ ತಾವು ಒಂದು ರೀತಿಯಾದ ಚಿಂತನೆಯನ್ನು ಮಾಡುವುದಕ್ಕೆ ಹೊರಟಿದ್ದೀರೆಂದು ನನಗೆ ಅನ್ನಿಸಿದೆ. I must appreciate the Government also. ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ತಯಾರು ಮಾಡಿದ್ದಾರೆ. ಸಪ್ಲಿಮೆಂಟರಿ ಪರೀಕ್ಷೆ ಅಕ್ಟೋಬರ್‌ಗೆ ಬದಲು ಜೂನ್ ತಿಂಗಳಲ್ಲಿ ನಡೆಯುವಂತಹದು ಇದು ನಮ್ಮ ಮಾನ್ಯ ಸೋಮಶೇಖರ್ ಅವರ ಕೊಡುಗೆ. ಬೇಗಬೇಗ ಪರೀಕ್ಷೆ. ಬೇಗ ಬೇಗ ಫಲಿತಾಂಶ ನಮ್ಮ ವೀರಣ್ಣನವರ ಖಾತೆಯಲ್ಲಿ ಲಾಟರಿಗೆ ಬೇಗ ಬೇಗ ಡ್ರಾ ಬೇಗ ಬೇಗ ಬಹುಮಾನ ಎಂದು ಇದ್ದ ಹಾಗೆ. ಇದನ್ನು ಮಾಡಿರುವುದರಿಂದ ಇವತ್ತು ಏನಾಗಿದೆಯೆಂದರೆ ಜೂನ್ ತಿಂಗಳಲ್ಲಿ ಎಸ್.ಎಸ್.ಎಲ್.ಸಿಯ ಪರೀಕ್ಷೆಯಾದ ಮೇಲೆ ಮೌಲ್ಯಮಾಪನ ಆಗಬೇಕು ಅಂದರೆ ಆ ಕಾಲದಲ್ಲಿ ಬೇರೆ ಮಕ್ಕಳಿಗೆ ಪಾಠ ಇರುವುದಿಲ್ಲ, ಈ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸಾಗಿ ಬಂದಂತಹವರಿಗೆ ಪಿ.ಯು.ಸಿ ಗೆ ಸೇರುವುದಕ್ಕೆ ಆಗಸ್ಟ್‌ವರೆಗೆ ಅವಕಾಶ ಆದರೆ ಇದಕ್ಕೆ ಪದವಿ ಪೂರ್ವ ಕಾಲೇಜುಗಳಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲ ಇದಕ್ಕೆ ಮೊದಲು ಮಾರ್ಚಿಯಲ್ಲಿ ನಡೆದ ಎಸ್.ಎಸ್.ಎಲ್‌ಸಿ ಪರೀಕ್ಷೆಯಲ್ಲಿಯಲ್ಲಿ ಪಾಸಾದಂತಹವರು ಏನು ಅಪರಾಧ ಮಾಡಿದ್ದರು ? ಆದ್ದರಿಂದ ಅದರ ಬಗ್ಗೆ ಸಾಕಷ್ಟು ವಿಚಾರಗಳನ್ನು ನಮ್ಮ ಅನೇಕ ಮಾನ್ಯ ಮಿತ್ರರು ಈ ಮನೆಯಲ್ಲಿ ಗಮನ ಸೆಳೆಯುವ ಸೂಚನೆ ಮುಖಾಂತರ, ಪ್ರಶ್ನೆಗಳ ಮುಖಾಂತರ ಹಾಗೂ ಶಿಷ್ಯರ ನಿಯಮದ ಮುಖಾಂತರ ಎತ್ತಿದ್ದಾರೆ. ಅಧಿಕ ತರಗತಿಗಳನ್ನು ತೆರೆಯುವಂತಹ ಏರ್ಪಾಡು ಮಾಡುವಂತಹದ್ದು, ಅಧಿಕ ಸಂಖ್ಯೆಯಲ್ಲಿ ಅಧ್ಯಾಪಕರುಗಳನ್ನು ನೇಮಿಸುವಂತಹದ್ದರ ಬಗ್ಗೆ ಪ್ರತಿಕ್ರಿಯೆ ತಮ್ಮಿಂದ ಬಂದಿಲ್ಲ. ಅದರಿಂದ ಏನೂ ಆಗುವುದಿಲ್ಲ; ಅದನ್ನು ಮಾಡುವುದೂ ಇಲ್ಲ. ಅದು ನಮಗೆ ಗೊತ್ತಿದೆ. ಈ ರೀತಿಯ ಹೊಸ ಪದ್ಧತಿಯಿಂದ ಫಲಿತಾಂಶವಾದರೂ ಬೇಗ ಬೇಗ ಬರುವಂತಹ ವ್ಯವಸ್ಥೆಯಾಗಬೇಕು. ಆದರೆ ಆ ರೀತಿಯ ವ್ಯವಸ್ಥೆ ಇಲ್ಲ ರೀಟೋಟಲಿಂಗ್‌ಗೆ ಅರ್ಜಿ ಹಾಕಿದಾಗ ಕೊನೆಯಪಕ್ಷ ೧–೨ ತಿಂಗಳಾದರೂ ಆಗುತ್ತದೆ. ಅಂತಹ ಸಮಯದಲ್ಲಿ ಏನು ಮಾಡಬೇಕು? ಅದೇ ರೀತಿ ಪಿ.ಯು.ಸಿ.ಯಲ್ಲೂ ರೀ–ಟೋಟಲಿಂಗ್‌ಗೆ ಅರ್ಜಿ ಹಾಕಿದರೆ ಅದರ ಬಗ್ಗೆ ತೀರ್ಮಾನವಾಗಬೇಕಾದರೆ ಕೊನೆಯಪಕ್ಷ ೧–೨ ತಿಂಗಳಾದರೂ ತಡವಾಗುತ್ತದೆ, ಇದು ನನಗೆ ಸ್ವತಃ ಅಂತಹ ಅನುಭವ ಸ್ವತಃ ನನ್ನ ಮಗಳಿಗೆ ಆದಂತಹ ತೊಂದರೆಯನ್ನು ನಾನು ಅನುಭವಿಸಿದ್ದೇನೆ. ಆದ್ದರಿಂದ ಎಲ್ಲಾ ಬೇಗ ಬೇಗನೆ ಆಗಬೇಕೆಂಬ ವ್ಯವಸ್ಥೆ ಇದ್ದರೂ ಆಚರಣೆಯಲ್ಲಿ ಸರಿಹೋಗುವುದಿಲ್ಲ, ಸಮಯದ ಅಭಾವ ಇರುವುದರಿಂದ ಅದನ್ನು ವಿವರಿಸುವುದಕ್ಕೆ ಹೋಗುವುದಿಲ್ಲ. ಮತ್ತೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪನ ಬಂದ ಕೂಡಲೇ ಅಧ್ಯಾಪಕರ ಸ್ಟ್ರೈಕ್ ಪ್ರಾರಂಭವಾಗುತ್ತದೆ. ಯಾವುದೋ ಹಂತದಲ್ಲಿ ಅವರ ಅಸೋಸಿಯೇಷನ್ ಜೊತೆಗೆ ಸಂಧಾನ ಮಾಡಿಕೊಂಡು ಅವರಿಗೆ ಹೆಚ್ಚು ಧನ ಸಹಾಯ ಕೊಡುತ್ತೀರಿ. ಅದರಲ್ಲೂ ಅವರ ನ್ಯಾಯ

ಯುತ ಬೇಡಿಕೆ ಇದ್ದರೂ ಅದನ್ನು ಬೇಗನೇ ಈಡೇರಿಸದೆ ನಿಧಾನವಾಗುತ್ತದೆ. ಇದರಿಂದ ಸಮಯ ಹಾಳಾಗುತ್ತದೆ. ಇನ್ನುಳಿದ ಸಮಯದಲ್ಲಿ ಜಟ್ ಸ್ಪೀಡಿನಿಂದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ. ಒಂದು ದಿವಸಕ್ಕೆ ಅಧ್ಯಾಪಕರು ಇಂತಿಷ್ಟು ಉತ್ತರ ಪತ್ರಿಕೆಗಳನ್ನು ಕರೆಕ್ಷನ್ ಮಾಡಬೇಕೆಂದಿದ್ದರೆ, ಅದಕ್ಕಿಂತ ಹೆಚ್ಚು ಉತ್ತರ ಪತ್ರಿಕೆಗಳನ್ನು ಕರೆಕ್ಷನ್ ಮಾಡಿ ಕೊಡಬೇಕು ಆ ಅಧ್ಯಾಪಕರು, ಇದರಿಂದಾಗಿ ಎಸ್.ಎಸ್.ಎಲ್.ಸಿ, ಪರೀಕ್ಷೆಯಲ್ಲಿ ನಿಜವಾಗಿಯೂ ಪಾಸಾದದ್ದು ೨೮ ಪರ್ಸೆಂಟ್, ಅದಕ್ಕೆ ನೀವು ಗ್ರೇಸ್ ಮಾರ್ಕ್ಸ್ ಸೇರಿಸಿದ್ದು ೪೯ ಪರ್ಸೆಂಟ್ ಕಳೆದ ವರ್ಷ ಕೂಡ ನಿಜವಾಗಿಯೂ ಪಾಸಾದದ್ದು ೨೦ ಪರ್ಸೆಂಟ್ ಅದಕ್ಕೆ ಗ್ರೇಸ್ ಮಾರ್ಕ್ಸ್ ಅಂತ ಸೇರಿಸಿದ್ದು ೬೦ ಪರ್ಸೆಂಟ್. ಇದು ಎಂತಹ ತೇರ್ಗಡೆ? ಇದು ಸರಿಯಾದುದಲ್ಲ. ನಮ್ಮ ಎಸ್.ಎಸ್.ಎಲ್.ಸಿ. ಬೋರ್ಡಿನ ಪ್ರೊಸೀಡಿಂಗ್ಸ್‌ನಲ್ಲೂ ಇದು ಉಲ್ಲೇಖವಾಗಿದೆ ಎಂದು ನಾನು ತಿಳಿದಿದ್ದೇನೆ,

ಕರ್ನಾಟಕ ರಾಜ್ಯ ಆದ ಮೇಲೆ ಬೇರೆ ಬೇರೆ ಭಾಗಗಳಿಂದ ಬಂದಂತಹ ಶಿಕ್ಷಕರು ಇದ್ದಾರೆ ಇದರಿಂದಾಗಿ ಅವರ ವೇತನ ಶ್ರೇಣಿಯಲ್ಲಿ ಅಸಮತೋಲನ ಇದ್ದು ಅದನ್ನು ಸರಿಪಡಿಸಬೇಕಾಗಿದೆ. ಅದೇ ರೀತಿ ಅವರ ಜ್ಯೇಷ್ಠತಾ ಪಟ್ಟಿಯನ್ನೂ ಕೂಡ ತಯಾರು ಮಾಡಬೇಕಾಗಿದೆ. ಜ್ಯೇಷ್ಠತಾ ಪಟ್ಟಿ ತಕ್ಕ ಮಟ್ಟಿಗೆ ಆಗಿದೆ ಎಂಬುದಾಗಿ ಕೇಳಿದ್ದೇನೆ. ಆದರೆ ಅದು ಸಂಪೂರ್ಣವಾಗಿ ತಯಾರಾಗಿಲ್ಲ. ಅದನ್ನು ಮಾಡುವುದಕ್ಕೆ ಎಷ್ಟು ದಿವಸಗಳು ಬೇಕು ? ೩೦ ವರ್ಷಗಳು ಮೀರಿ ಹೋಯಿತು. ಈ ರೀತಿ ಶಿಕ್ಷಕರ ಕ್ಷೇತ್ರದಲ್ಲಿ ಇರತಕ್ಕ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದಾದರೆ ಇನ್ಯಾವ ಕ್ಷೇತ್ರದಲ್ಲಿ ಸುಧಾರಣೆ ಮಾಡುವುದಕ್ಕೆ ಸಾಧ್ಯ ಇದೆ? ಈಗ ಶಿಕಕ್ಷರ ಕ್ಷೇತ್ರದಲ್ಲಿ ಇರುವಂತಹ ವ್ಯವಸ್ಥೆ ಇದು. ನಾನೂ ಕೂಡಾ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ. ತಾಲ್ಲೂಕು ಬೋರ್ಡನಿಂದ ಸರ್ಕಾರಕ್ಕೆ ಟ್ರಾನ್ಸ್‌ಫರ್ ಆದ ಅಧ್ಯಾಪಕರು ಇದ್ದಾರೆ. ಹೈಸ್ಕೂಲಿನ ಅಧ್ಯಾಪಕರು ಇದ್ದಾರೆ. ಹಾಗೂ ಪಿಯುಸಿ ಕಾಲೇಜಿನಲ್ಲಿ ಕೆಲಸ ಮಾಡುತ್ತಾ ಇರುವ ಅಧ್ಯಾಪಕರು ಇದ್ದಾರೆ. ಈ ಶಿಕ್ಷಕರಿಗೆ ಬಡ್ತಿಯಾಗಿಲ್ಲ ವೇತನದ ನಿರ್ಧಾರ ಆಗಿಲ್ಲ. ಯಾವುದೋ ಒಂದು ದಿವಸದಿಂದ ಎಂದರೆ ೩–೧೨–೧೯೬೫ ಎಂದು ನೆನಪು. ಇದಕ್ಕಿಂತಾ ಮೊದಲು ತಾಲ್ಲೂಕು ಬೋರ್ಡಿನಿಂದ ಟ್ರಾನ್ಸ್‌ಫರ್ ಆಗಿರುವವರು ಇದ್ದಾರೆ. ಆದರೆ ಕಾನೂನು ೧–೧–೬೬ರಲ್ಲಿ ಆಗಿದೆ. ಕೇವಲ ಒಂದು ದಿವಸದ ವ್ಯತ್ಯಾಸ. ಇದನ್ನು ಮಾಡಿಫೈ ಮಾಡಿ ತಿದ್ದುಪಡಿ ಮಾಡುವುದಕ್ಕೆ ಆಗುವುದಿಲ್ಲವೇ? ಇದರಿಂದ ನೂರಾರು ಅಧ್ಯಾಪಕರಿಗೆ ತೊಂದರೆ ಆಗಿದೆ. ಇದರ ಬಗ್ಗೆ ಮಾನ್ಯ ಸಚಿವರ ಹಾಗೂ ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಗಮನಕ್ಕೆ ತಂದಿದ್ದೇನೆ. ಇಂತಹ ಅನ್ಯಾಯಗಳು ಸಾವಿರಾರು ಇವೆ. ೮–೧೦ ವರ್ಷಗಳಿಂದ ಬಾಕಿ ಇದೆ. ಇವತ್ತು ಕಛೇರಿಗಳಲ್ಲಿ ಏನು ಆಗುತ್ತಿದೆ ಎಂಬುದನ್ನು ನೋಡಬೇಕು. ಇವತ್ತು ನಮ್ಮ ಶಿಕ್ಷಕರು ಮಾತ್ರ ೫ ಗಂಟೆ ಕೆಲಸ ಮಾಡಬೇಕು. ಆಮೇಲೆ ಇವರಿಗೆ ಸೆನ್‌ಸಸ್ ಕೆಲಸ ಇರುತ್ತದೆ. ಜನರ ಸೆನ್‌ಸಸ್, ದನದ ಸೆನ್ಸಸ್, ಕುರಿ, ಕೋಳಿಗಳ ಸೆನ್‌ಸಸ್ ಮತ್ತು ಮತದಾರರ ಪಟ್ಟಿ ತಯಾರಿಕೆ ಮಾಡುವುದು. ಮತ್ತೆ ಕುಟುಂಬ ಯೋಜನೆ ಬಗ್ಗೆ ಪ್ರಚಾರ ಮಾಡಬೇಕು, ಮತ್ತೆ ಅಗತ್ಯ ಬಿದ್ದರೆ ನಿರೋಧ್‌ನ್ನು ಜನರಿಗೆ ಒದಗಿಸಬೇಕು. ಆದರೆ ಇದರ ಬಗ್ಗೆ ಚಿಂತನೆ ಮಾಡತಕ್ಕ ಕಛೇರಿಗಳಲ್ಲಿ ಆಗತಕ್ಕ ಕೆಲಸ ಏನು ೧–೨ಗಂಟೆ ಕಾಲ ಕೆಲಸ ಮಾಡಲು ಬರುತ್ತಾರೆ. ಬಂದ ತಕ್ಷಣ ಕಾಫಿಗೆ ಹೋಗುತ್ತಾರೆ. ಆ ನಂತರ ಫೈಲ್‌ಗಳನ್ನೇ ನೋಡುವುದಕ್ಕೆ ಹೋಗುವುದಿಲ್ಲ. ಇಷ್ಟು ಜನ ಅಧ್ಯಾಪಕರು ಇರುವಾಗ ಇಂತಹ ಅಧ್ಯಾಪಕರ ಸಲುವಾಗಿ ಎಷ್ಟು ಜನ ಶಾಸಕರು ಸ್ವತಃ ಅವರ ಅಹವಾಲುಗಳನ್ನು ಮಂತ್ರಿಗಳ ಎದುರಿಗೆ ತರಲು ಸಾಧ್ಯ? ಇವತ್ತಿನ ದಿವಸ ಈ ಶಿಕ್ಷಕರಲ್ಲಿನ ಅಸಮತೋಲನವನ್ನು ಸರಿ ಮಾಡುವುದಕ್ಕೆ ಎಷ್ಟು ವರ್ಷ ಬೇಕು? ಇವತ್ತು ಅನೇಕ ಜನರು ನಿವೃತ್ತಿ ಸಹಾ ಆಗಿದ್ದಾರೆ. ಇವತ್ತು ಉಳಿದಿರುವವರಿಗಾದರೂ ಸರಿಯಾದ ವ್ಯವಸ್ಥೆ ಮಾಡಿ ಇವತ್ತು ಶಿಕ್ಷಣ ಕ್ಷೇತ್ರದಲ್ಲಿನ ಅಭಿವೃದ್ಧಿ ಬಗ್ಗೆ ಅನೇಕ ಸಮಿತಿಗಳು ಆಗಿಹೋಗಿವೆ. ಬಿ. ಕೆ. ಭಟ್ಟಾಚಾರ್ಯರ ಸಮಿತಿ ಶಿಫಾರಸು ಬಂದಿದೆ. ಸರ್ಕಾರಕ್ಕೆ ವೆಂಕಟಸ್ವಾಮಿ ಸಮಿತಿಯ ಶಿಫಾರಸು ಬಂದಿದೆ. ಫೀ ಸ್ಟ್ರಕ್ಚರ್ ಬಗ್ಗೆ ಹಾಗೂ ಹೈಸ್ಕೂಲು ಮತ್ತು ಕಾಲೇಜಿನಿಂದ ಪಿ.ಯು.ಸಿಯನ್ನು ಬೈಫರ್ಕೇಷನ್ ಮಾಡುವ ಬಗ್ಗೆ ಭರತ್ ಸಮಿತಿಯ ಎರಡು ಶಿಫಾರಸುಗಳು ಸರ್ಕಾರಕ್ಕೆ ಬಂದಿವೆ. ಎಜ್ಯುಕೇಷನಲ್ ರಿಫಾರ್ಮ್ಸ್ ಬಗ್ಗೆ ನರಸಿಂಹಯ್ಯನವರ ಸಮಿತಿಯ ಶಿಫಾರಸ್ಸು ಸರ್ಕಾರಕ್ಕೆ ಬಂದಿದೆ. ಇವೆಲ್ಲವೂ ಇವತ್ತು ಮೂಲೆಪಾಲು ಆಗಿವೆ. ಇವುಗಳ ಬಗ್ಗೆ ಇದುವರೆವಿಗೂ ಯಾರೂ ಚಿಂತನೆ ಮಾಡಿಲ್ಲ. ವರ್ಷೇ ವರ್ಷೇ ಮಂತ್ರಿಗಳು ಬದಲಾವಣೆ ಆಗುತ್ತಾರೆ, ವರ್ಷೇ ವರ್ಷೇ ಖಾತೆಗಳು ಬದಲಾವಣೆ ಆಗುತ್ತವೆ, ವರ್ಷೇವರ್ಷೇ ಅಧಿಕಾರಿಗಳು ಬದಲಾವಣೆ ಆಗುತ್ತಾರೆ. ಆದರೆ ಇಷ್ಟೊ ಜನ

ಹಿರಿಯ ಶಿಕ್ಷಣ ತಜ್ಞರು ಮಾಡಿದ ಸಮಿತಿ ಶಿಫಾರಸುಗಳು ಮೂಲೆಗುಂಪು ಆಗುವುದು ಸರಿಯಲ್ಲ ಶಿಕ್ಷಣ ರಂಗದ ಸುಧಾರಣೆ ಇದು ಅಲ್ಲ, ಇವರುಗಳ ಬಗ್ಗೆ ಕನಿಷ್ಟ ಕಾಳಜಿ ಇರಬೇಕಾದುದು ಸರ್ಕಾರದ ಕರ್ತವ್ಯ, ಇನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೃತ್ತಿ ಶಿಕ್ಷಣದ ಕುರಿತು ದಿವ್ಯ ನಿರ್ಲಕ್ಷ್ಯ ತೋರಿರುವ ಬಗ್ಗೆ ಹೇಳಬೇಕು. ಮತ್ತೆ ವಿಶ್ವೇಶ್ವರಯ್ಯ ಐಟಿಐನಲ್ಲಿ ವೇತನ ಶ್ರೇಣಿ ಮಂಜೂರಾತಿ ಹುದ್ದೆಗಳಿಗೆ ನೇಮಕ, ಗುತ್ತಿಗೆ ಖಾಯಮಾತಿ ಬಗ್ಗೆ ಮಾನ್ಯ ನಿಜಲಿಂಗಪ್ಪನವರ ಆದಿಯಾಗಿ ಅನೇಕ ಮಹನೀಯರು ಸರ್ಕಾರಕ್ಕೆ ಅನಿವಾರ್ಯವಾಗಿ ಪತ್ರ ಬರೆದಿದ್ದಾರೆ, ಈ ಬಗ್ಗೆ ನನಗೂ ಪತ್ರ ಬಂದಿದೆ. ಈ ಬಗ್ಗೆ ಸರ್ಕಾರದಲ್ಲಿ ಚಿಂತನೆ ಆಗಿಲ್ಲ. ಇವತ್ತು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲೂ ಕೂಡಾ ಅನೇಕ ಪಾಲಿಟೆಕ್ನಿಕ್‌ಗಳು ಬರುತ್ತವೆ. ಇವತ್ತು ಐಟಿಐ ಮಂಜೂರಾತಿಯಲ್ಲಿ ರಾಜಕೀಯ ನಿರ್ಧಾರ, ಮುಂದುವರಿಸುವುದರಲ್ಲಿ ರಾಜಕೀಯ ನಿರ್ಧಾರಗಳು ಆಗುತ್ತವೆ. ೨೪-೫-೧೯೮೮ರಲ್ಲಿ ಸರ್ಕಾರದ ಆದೇಶ ಹೊರಟ ಪ್ರಕಾರವಾಗಿ ಪ್ರೊ. ಕೆ. ವಿ. ಕೃಷ್ಣಮೂರ್ತಿಯವರ ನೇತೃತ್ವದಲ್ಲಿ ತಜ್ಞರ ಸಮಿತಿ ರಚನೆಯಾಯಿತು. ರಾಜ್ಯದಲ್ಲಿನ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮುಚ್ಚಲು, ಕೋರ್ಸ್ ರದ್ದು ಮಾಡಲು ಈ ಸಮಿತಿ ಮಾಡಲಾಯಿತು. ಈ ಸಮಿತಿಯ ಶಿಫಾರಸ್ಸಿನ ಪುನಃ ತಪಾಸಣೆಗೆ ಮತ್ತೆ ೪ ಸಮಿತಿಗಳು ಆದವು. ಇದರಿಂದ ೪೮ ಸಂಸ್ಥೆಗಳನ್ನು ಮುಚ್ಚಲು ಅಥವಾ ಕೋರ್ಸ್ ರದ್ದು ಮಾಡಲು ಶಿಫಾರಸು ಆಗಿದೆ. ಇವತ್ತು ಎಷ್ಟು ರದ್ದು ಆಗಿವೆ ಎನ್ನುವುದು ನಮಗೆ ಗೊತ್ತಿಲ್ಲ ರದ್ದು ಆಗದೇ ಇರುವ ಕೆಲವು ಪಾಲಿಟೆಕ್ನಿಕ್‌ಗಳಲ್ಲಿ ಇವತ್ತಿನ ದಿವಸ ಕಟ್ಟಡಗಳು ಇಲ್ಲ ಪ್ರಯೋಗಾಲಯಗಳಿಲ್ಲ, ಅಧ್ಯಾಪಕರು ಇಲ್ಲ. ಇವುಗಳೆಲ್ಲಾ ಸಮರ್ಪಕವಾಗಿವೆಯೋ ಎಂದು ನಾನು ಕೇಳುತ್ತೇನೆ. ಇಂತಹ ಕೆಲವು ಸಂಸ್ಥೆಗಳು ಇನ್ನೂ ಇರುವುದಕ್ಕೆ ಆಳುವ ಪಕ್ಷದ ಕೃಪಾಶ್ರಯ ಇವಕ್ಕೆ ಇರುವುದೇ ಕಾರಣವಾಗಿದೆ. ಒಂದು ಉದಾಹರಣೆ ಕೊಡುವುದಾದರೆ, ಇದೊಂದು ವಿಚಾರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದಿದೆ. ಆ ಬಗ್ಗೆ ಒಂದು ಸಿ.ಓ.ಡಿ. ರಿಪೋರ್ಟ್ ಇದೆ. ಮಾನ್ಯ ಸಚಿವರು ಇರತಕ್ಕ ನವೋದಯ ಪಾಲಿಟೆಕ್ನಿಕ್ ಏನಿದೆ ಅದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

"COD has held that the allegation of certain irregularities in the trust formed by the Minister of State for Education Somasekhar has been proved"

ಶ್ರೀ ಜೀವರಾಜ ಆಳ್ವ.—ಯಾವುದೋ ರಿಪೋರ್ಟ್ ಮೇಲೆ ತಾವು ಆ ತರಹ ಮಾತನಾಡಬಾರದು ರಿಪೋರ್ಟ್ ಬಂದಿದೆ. unless that report is accepted it is not right to Bring it on the floor of the house.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಉಪಾಧ್ಯಕ್ಷರೆ, ಇದು ಸರ್ಕಾರಕ್ಕೆ ಬಿಟ್ಟ ವಿಚಾರ. ನನ್ನ ಅನಿಸಿಕೆಯನ್ನು ಹೇಳುವಂತಹ ಹಕ್ಕು ನನಗಿದೆ. ಇದರ ಬಗ್ಗೆ ಮತ್ತೊಂದು ಮನೆಯಲ್ಲಿ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ತನಿಖೆಯಾಗಿದೆ. ಸಿ.ಓ.ಡಿ. ಪ್ರೋಬ್ ಆಗಿದೆ ಮಾನ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ ಹಾಗೂ ಸಹಾಯಕರು ಇದ್ದಾರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಂಥದ್ದೆಲ್ಲಾ ಆದರೆ ಅದು ಅಲ್ಲಿ ಸರಿಯಾಗಿ ನಡೆಯದಿದ್ದರೆ ರಾಜಕೀಯ ಕೃಪಾಶ್ರಯವಲ್ಲದೆ ಮತ್ತೇನೂ ಅಲ್ಲ. ನನಗೆ ವೈಯಕ್ತಿಕವಾಗಿ ಯಾರ ಮೇಲೂ ದ್ವೇಷವಿಲ್ಲ. ಮಾನ್ಯ ಸೋಮಶೇಖರ್‌ರವರ ಮೇಲೆ ಏನೂ ಇಲ್ಲ, ಇಂತಹದ್ದು ನಡೆಯಬಾರದು. ಇಂತಹ ವಿಚಾರಗಳ ಬಗ್ಗೆ ಚಿಂತನೆ ಏಕೆ ಹಚ್ಚಬಾರದು ? ಇಂತಹ ಅವ್ಯವಹಾರ ಆಗಬಾರದು ಎಂದು ಹೇಳುತ್ತಿದ್ದೇನೆ.

ಇನ್ನು ಕಾಲೇಜುಗಳ ಬಗ್ಗೆ ಹೇಳುವುದಾದರೆ, ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರುಗಳು ಇಲ್ಲ, ಕಾಲೇಜುಗಳಿಗೆ ಕಟ್ಟಡಗಳಿಲ್ಲ. ಖಾಸಗಿ ಕಾಲೇಜುಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಕಿರಿಯ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ಅಧ್ಯಾಪಕರುಗಳಿಗೆ ಯಾವುದೇ ಸೌಲಭ್ಯವಿಲ್ಲ. ನನ್ನ ಕ್ಷೇತ್ರವಾದ ಬೈಂದೂರಿನಲ್ಲಿರತಕ್ಕ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡವಿಲ್ಲ. ಸರ್ಕಾರ ಕಟ್ಟಡದ ಕೆಲಸವನ್ನು ವಿಳಂಬ ಮಾಡುತ್ತಿದೆ. ಮಾನ್ಯ ಸಚಿವರು ಈ ಕುರಿತು ಆಲೋಚನೆ ಮಾಡಬೇಕು. ಕಟ್ಟಡ ರಚನೆಯ ಬಗ್ಗೆ ಹಿಂದೆ ಏನೂ ಆದ್ಯತೆ ಕೊಟ್ಟಿಲ್ಲ ಮುಂದೆ ಇದರಲ್ಲಿ ರಾಜಕೀಯ ಬರಬಾರದು. ಇರುವ ಸರ್ಕಾರಿ ಕಾಲೇಜುಗಳಲ್ಲಿ ಸಮರ್ಪಕವಾದ ವ್ಯವಸ್ಥೆ ಇಲ್ಲದೇ ಇರುವಾಗ ಹೊಸ ಕಾಲೇಜುಗಳಿಗೆ

ಮಂಜೂರಾತಿಯನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಪ್ರಾದೇಶಿಕ ಅಸಮತೋಲನವಿರುವ ಕಡೆ ಕಾಲೇಜುಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ತಾವು ಹೇಳಬಹುದು. ಪ್ರಾದೇಶಿಕ ಅಸಮತೋಲನ ಆಗಬಾರದು. ನಮ್ಮ ಜಿಲ್ಲೆಯಲ್ಲಿಯೂ ಸಹ ಕಾಲೇಜುಗಳನ್ನು ಕೊಡಬೇಕೆಂದು ಹೇಳಿದ್ದಾರೆ ಪುತ್ತೂರು, ಉಡುಪಿ ಹಾಗೂ ಕಾಪು ಇಲ್ಲಿ ಕಾಲೇಜುಗಳು ಬೇಕೆಂದು ಕೇಳುತ್ತಿದ್ದಾರೆ. ಕಾಲೇಜುಗಳನ್ನು ಕೊಡಬೇಕು, ಆದರೆ ಹಿಂದೆ ಇದ್ದ ಕಾಲೇಜುಗಳನ್ನು ಮುಚ್ಚುವ ಸ್ಥಿತಿಗೆ ಬರಬಾರದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ತಾವು ಮಾತನಾಡಲಿಕ್ಕೆ ಶುರು ಮಾಡಿ ೪೦ ನಿಮಿಷಗಳಾಯಿತು.

ಶ್ರೀ ಜಿ. ಎಸ್. ಆಚಾರ್.—ಇನ್ನೊಂದು ೧೦ ನಿಮಿಷಗಳಲ್ಲಿ ಮುಗಿಸುತ್ತೇನೆ. ಖಾಸಗಿ ಕಾಲೇಜುಗಳ ನೇಮಕಾತಿಯಲ್ಲಿಯೂ ಸಹ ಕೆಲವು ಕಡೆ ರಾಜಕೀಯ ಕೈವಾಡವಾಗಿದೆ ಎನ್ನುವ ಸಂಶಯ ಇದೆ. ಗದಗ್‌ನ ಜೆ. ಟಿ. ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗಕ್ಕೆ ೧೧ ಹುದ್ದೆಗಳನ್ನು ನೇಮಕ ಮಾಡುವಾಗ ೧೨೩ ಅರ್ಜಿಗಳು ಬಂದಿದ್ದವು. ಆಯ್ಕೆ ಸಮಿತಿಯಲ್ಲಿ ಸರ್ಕಾರಿ ಪ್ರತಿನಿಧಿಗಳೂ ಸಹ ಇದ್ದರು ಒಳ್ಳೆಯ ರೀತಿಯ ಸಂದರ್ಶನ ಆಯಿತು, ಆಯ್ಕೆ ಮಾಡಿದಾಗ ಎಸ್. ವಿ. ಹಿರೇಮಠ ಎಂಬುವರನ್ನು ಹೊರತುಪಡಿಸಿ ಉಳಿದವರಿಗೆ ಸರ್ಕಾರದ ಅನುಮೋದನೆ ದೊರಕಿದೆ. ಹಿರೇಮಠ ಅವರನ್ನು ಹೊರತುಪಡಿಸಿ ಅಂದರೇನು ? ಆಯ್ಕೆ ಸಮರ್ಪಕವಾಗಿ ಆಗಿದೆ. ಅಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಅಂತಹದ್ದು ಇದ್ದರೂ ಇವರೊಬ್ಬರನ್ನು ಹೊರತುಪಡಿಸಿ ಎನ್ನುವುದರ ಹಿಂದೆ ಯಾವ ಶಕ್ತಿ ತನ್ನ ಕೈ ಆಡಿಸಿದೆ ? ಖಾಸಗಿ ಕಾಲೇಜುಗಳಲ್ಲಿ ಇದು ಆಗಬಾರದು.

ಇನ್ನು ಮಂಗಳೂರು ವಿಶ್ವವಿದ್ಯಾಲಯ ಕುರಿತು ಹೇಳಬೇಕಾದರೆ, ಎರಡು ಉಪನ್ಯಾಸಕರ ಹುದ್ದೆಗೆ ಸಂದರ್ಶನ ನಡೆಯಿತು. ಒಂದು ಹುದ್ದೆಗಾಗಿ ಷೆಡ್ಯೂಲ್ಡ್ ಕಾಸ್ಟ್ ಹಾಗೂ ಷೆಡ್ಯೂಲ್ ಟ್ರೈಬ್ಸ್ ಅಭ್ಯರ್ಥಿಗಳು ಬಂದಿದ್ದರೂ ಸಹ ಅವರ ನೇಮಕ ಆಗಲಿಲ್ಲ. ಜನರಲ್ ಮೆರಿಟ್‌ನಲ್ಲೂ ಸಹ ಹೆಚ್ಚಿಗೆ ಅಂಕಗಳನ್ನು ಪಡೆದ ಉತ್ಕೃಷ್ಟ ಅಭ್ಯರ್ಥಿಯನ್ನು ಬಿಟ್ಟು ಉಪಕುಲಪತಿಗಳ ಮಂಗನ ನೇಮಕ ವಾಯಿತು. ಮಂಗಳೂರು ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯಗಳನ್ನು ಕುರಿತು ಹೇಳುವುದಾದರೆ, ಕರ್ನಾಟಕ ಯೂನಿವರ್ಸಿಟಿ ಆಕ್ಟ್‌ಗೆ ತಿದ್ದುಪಡಿಯಾಗದೆ ಆರು ವರ್ಷದಿಂದ ಯು. ಜಿ. ಸಿ. ಗ್ರಾಂಟ್ ಸಿಗಲಿಲ್ಲ. ಇತ್ತೀಚೆಗೆ ಆಕ್ಟ್‌ಗೆ ತಿದ್ದುಪಡಿ ಆಯಿತು. ಈ ಪರಿಸ್ಥಿತಿ ಬರಬಾರದು. ಹೊಸ ವಿಶ್ವ ವಿದ್ಯಾಲಯದ ಬಗ್ಗೆ ಘೋಷಣೆ ಮಾಡುತ್ತಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ೧೫ ವಿಭಾಗ ಗಳಿವೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ೩೫ ವಿಭಾಗಗಳಿವೆ. ಕರ್ನಾಟಕದಲ್ಲಿರತಕ್ಕ ವಿದ್ಯಾರ್ಥಿಗಳು ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಸೇರಬಹುದೆಂದು ಒಂದು ತಿದ್ದುಪಡಿಯನ್ನು ತರಬೇಕ

(ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

೩–೦೦ ಪಿ. ಎಂ.

ಮಂಗಳೂರು, ಕೊಡಗಿನವರೂ ಮಂಗಳೂರು ವಿಶ್ವವಿದ್ಯಾನಿಲಯಕ್ಕೇ ಹೋಗಬೇಕು. ಅಲ್ಲಿರುವಂಥಾದ್ದು ಬರೀ ೧೫ ವಿಷಯಗಳು. ಒಂದು ವಿಚಾರವನ್ನು ತಿಳಿಸಬೇಕಾದರೆ ಈ ಟೆರಿಟೋರಿಯಲ್ ಜೂರಿಸ್ಡಿಕ್ಷನ್ ಇಲ್ಲದೇ ವಿದ್ಯಾರ್ಥಿಗಳು ಕಲಿಯುವ ವ್ಯವಸ್ಥೆ ಆಗಬೇಕು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಅಂತಿಮ ಬಿ. ಕಾಂ ಪರೀಕ್ಷೆಯಲ್ಲಿ ಏನು ಆಯಿತು ಎನ್ನುವುದು ಮಾನ್ಯ ಸಚಿವರ ಗಮನಕ್ಕೆ ಬಂದಿರಬೇಕು. ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಕಾಸ್ಟ್ ಅಕೌಂಟ್ಸ್ ಮತ್ತು ಇನ್‌ಕಮ್ ಟ್ಯಾಕ್ಸ್ ಪ್ರಶ್ನೆ ಪತ್ರಿಕೆ ಬಯಲಾಯಿತು. ಫಲಿತಾಂಶದಲ್ಲಿ ಅಪಾರ ತಾರತಮ್ಯವಾಗಿ ಈಗ ಅದನ್ನು ತಡೆಹಿಡಿಯಲಾಗಿದೆ. ಹಾಗೆಯೇ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿ ತಾರತಮ್ಯ ಮತ್ತು ಪ್ರಶ್ನೆ ಪತ್ರಿಕೆ ಬಯಲಾಗಿದೆ. ಇದರ ಬಗ್ಗೆ ಎಲ್ಲಾ ಸಮಗ್ರವಾಗಿ ತನಿಖೆಯಾಗಬೇಕು. ಅವರ ಸ್ವಾಯತ್ತವಾದ ಬಾಡಿಗಳು ಎಂಬಂತಹ ಅಭಿಪ್ರಾಯ ಇದ್ದರೂ ಕೂಡ ಇಂಥಾದ್ದು ವಿಶ್ವವಿದ್ಯಾನಿಲಯಗಳಲ್ಲಿ ನಡೆಯಬಾರದು ಎಂಬ ವಿಚಾರದಿಂದ ಹೇಳುತ್ತಿದ್ದೇನೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ೩೬ ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿದ್ದಾರೆ. ಇದರಲ್ಲಿ ೨೬ ಹುದ್ದೆಗಳು ಎಸ್‌ಸಿ ಎಸ್‌ಟಿ ಅಭ್ಯರ್ಥಿಗಳಿಗೆ ಮೀಸಲಾಗಿವೆ. ಅದು ಆಗುತ್ತದೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ನಮ್ಮ

೨೧ ಮಂದಿ ಶಾಸಕರು ಶ್ರೀ ಬಂಗಾರಪ್ಪನವರ ನೇತೃತ್ವದಲ್ಲಿ ಗವರ್ನರ್ ಅವರನ್ನು ಭೇಟಿಯಾಗಿ ಮನವಿಯನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ತೊಂದರೆ ಆಗದೇ ಇದ್ದ ಹಾಗೆ ಕಾದಿಟ್ಟ ಸ್ಥಾನಗಳನ್ನು ತುಂಬುವಂತೆ ನೋಡಿಕೊಳ್ಳಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಇದೆ. ಇದು ೧೯೬೯ರಲ್ಲಿ ಸ್ಥಾಪನೆ ಆಯಿತು. ಇದಕ್ಕೆ ಸರ್ಕಾರದಿಂದ ವಿಶ್ವವಿದ್ಯಾನಿಲಯದಿಂದ ಯು.ಜಿ.ಸಿ.ಯಿಂದ ಧನಸಹಾಯ ಇಲ್ಲ. ಆದರೂ ಕೂಡ ೧೯೮೫-೮೬ರಲ್ಲಿ ೭೨,೯೩,೩೨೮ ರೂಪಾಯಿಗಳ ಆದಾಯವನ್ನು ಇದು ಮಾಡಿದೆ. ವೆಚ್ಚ ಕಳೆದು ಖಾಯಂ ಠೇವಣಿ ೪೩,೯೫,೦೦೦ ರೂಪಾಯಿಗಳು ಇವೆ. ೨ ಕೋಟಿ ೫೧ ಲಕ್ಷ ೨೦ ಸಾವಿರ ಮೂಲನಿಧಿ ಇದೆ. ೧,೪೦,೧೮,೫೩೧ ರೂಪಾಯಿಗಳಷ್ಟು ಆಸ್ತಿ ಇದೆ. ಈ ಸಂಸ್ಥೆ ಬೆಳೆಯಲು ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯವರು ಬಿಡುವುದಿಲ್ಲ. ಈ ಶೋಷಣೆ ನಿಲ್ಲಬೇಕು. ಆಡಳಿತ ಸ್ವಾತಂತ್ರ್ಯ, ಶೈಕ್ಷಣಿಕ ಸ್ವಾತಂತ್ರ್ಯ ಈ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗೆ ಸಿಗಬೇಕು. ಕರ್ನಾಟಕದಲ್ಲಿ ಮುಕ್ತ ವಿಶ್ವವಿದ್ಯಾನಿಲಯ ರಚಿಸಲು ಒಂದು ಸಮಿತಿ ರಚನೆಯಾಗಿದೆ. ಈ ಸಮಿತಿಯ ವರದಿ ಏನಾಯಿತು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಇಂಗ್ಲೆಂಡಿನ ಬ್ರಿಟಿಷ್ ಮುಕ್ತ ವಿಶ್ವವಿದ್ಯಾನಿಲಯ ಮಾದರಿಯಲ್ಲಿದೆ ಅಲ್ಲಿ ೬೦೦ ವಿವಿಧ ಕೋರ್ಸುಗಳು ಇವೆ. ಆ ರೀತಿಯಲ್ಲಿ ನವೀನ ಶಿಕ್ಷಣ ಯೋಜನೆಯನ್ನು ನಮ್ಮಲ್ಲಿ ಹಾಕಿಕೊಂಡು ಜಾರಿಗೆ ತರಬೇಕು. ಅಟಾನಮಸ್ ಕಾಲೇಜ್ ಬದಲು ಅಟಾನಮಸ್ ಯೂನಿವರ್ಸಿಟಿ ಕಲ್ಪನೆಯನ್ನು ತಾವು ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ೧೯೮೩ರಲ್ಲಿ ಜನತಾಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಕ್ಯಾಪಿಟೇಶನ್ ಫೀಸ್ ಅನ್ನು ವಜಾ ಮಾಡುತ್ತೇವೆ ಎಂದು ಇದೆ. ೧೯೮೪ರಲ್ಲಿ ಅವರು ಅಧಿಕಾರಕ್ಕೆ ಬಂದಾಗ ಮಸೂದೆಯನ್ನು ತಂದರು. ಅದು ಪಾಸ್ ಆಗಿದೆ. ಇನ್ನು ಮುಂದೆ ಕ್ಯಾಪಿಟೇಶನ್ ಫೀಸ್ ಇಲ್ಲ, ಮತ್ತು ಎಲ್ಲಾ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಕೊಡುತ್ತಾರೆ ಎನ್ನತಕ್ಕಂಥ ಭಾವನೆ ಜನರಲ್ಲಿ ಬಂತು ಮತ್ತು ಕರ್ನಾಟಕದ ಜನ ಸಂತುಷ್ಟರಾದರು ಆದರೆ ಪ್ರಾಥಮಿಕ ಶಿಕ್ಷಣದಲ್ಲಿ ಅಭಿವೃದ್ಧಿ ಆದದ್ದು ಏನು ಎಂದರೆ ಬರೇ ಬಟ್ಟೆ, ಪುಸ್ತಕ ಸ್ಲೇಟುಗಳನ್ನು ಪುಕ್ಕಟೆಯಾಗಿ ಕೊಡುವುದರಲ್ಲಿ ಮಾತ್ರ ಅಷ್ಟೆ. ಕ್ಯಾಪಿಟೇಶನ್ ಫೀ ಎನ್ನುವಂಥದ್ದು ಮುಂದುವರೆಯುತ್ತಲೇ ಇದೆ. ಯಾರು ಮೌಲ್ಯಾಧಾರಿತವಾದದ ಹಿನ್ನೆಲೆಯಲ್ಲಿ ೮೩ರಲ್ಲಿ ಅಧಿಕಾರಕ್ಕೆ ಬಂದರು. ಅವರು ಎಂದರೆ ನಮ್ಮ ಮುಖ್ಯಮಂತ್ರಿಗಳು ೧೯೮೬ರ ಅಕ್ಟೋಬರ್ ಮೂರನೇ ವಾರದಲ್ಲಿ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ಫಂಕ್ಷನ್‌ನಲ್ಲಿ ಒಂದು ಭಾಷಣ ಮಾಡಿದರು. ೩೦-೧೦-೮೬ರಂದು ಅದು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದೆ. "More Engineering and Medical Colleges are necessary since they give boost to export of talent, technical and professional skill." ನಮ್ಮ ಮಕ್ಕಳಿಗೆ ಇಲ್ಲಿ ವಿದ್ಯಾಭ್ಯಾಸ ಕೊಡಬೇಕು, ಕಷ್ಟದಲ್ಲಿರುವ ಮಕ್ಕಳು ಕಲಿಯಬೇಕು ಎನ್ನುವ ಧೋರಣೆಗೆ ಬದಲಿಗೆ ಹೊರದೇಶದಲ್ಲಿ ದುಡಿಯುವ ನಾವು ಮಕ್ಕಳನ್ನು ಸಾಗಹಾಕಲಿಕ್ಕಾಗಿರುವ ಮೌಲ್ಯಾಧಾರಿತ ರಾಜಕೀಯ ಇದು. ಹಣವನ್ನು ಲೂಟಿ ಮಾಡುವಂಥ ಕ್ಯಾಪಿಟೇಶನ್ ಕಾಲೇಜುಗಳನ್ನು ಮಾಡುವಂಥದ್ದು ಬಹಳ ಅನ್ಯಾಯ ಹಿಂದೆ ೮ ಮೆಡಿಕಲ್ ಕಾಲೇಜುಗಳು ಇದ್ದದ್ದು ಈಗ ೧೮ ಆಗಿದೆ.

ಅಧ್ಯಕ್ಷರು.—ಇನ್ನು ಐದು ನಿಮಿಷಗಳಲ್ಲಿ ನೀವು ಮುಗಿಸಬೇಕು. ಐದು ಗಂಟೆಗೆ ಚರ್ಚೆ ಮುಗಿಯಲೇಬೇಕು. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ,

ಶ್ರೀ ಜಿ. ಎಸ್. ಆಚಾರ್.—ಆಯಿತು ಬೇಗ ಮುಗಿಸುತ್ತೇನೆ ಈ ಮೆಡಿಕಲ್ ಕಾಲೇಜುಗಳಲ್ಲಿ ಸರ್ಕಾರದ್ದು ಬರೇ ನಾಲ್ಕು ಕಾಲೇಜುಗಳು ಇವೆ ಸರ್ಕಾರಿ ಕಾಲೇಜುಗಳ ಗತಿ ಏನಾಗಿದೆ ?. ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಇಲ್ಲ, ೧೫ ಪ್ರೊಫೆಸರ್ಸ್ ಪೋಸ್ಟ್‌ಗಳು ವೇಕೆಂಟ್ ಇವೆ. ೨೭ ಮಂದಿ ಅಸಿಸ್ಟೆಂಟ್ ಪ್ರೊಫೆಸರ್ಸ್ ಇಲ್ಲ, ೫೭ ಲೆಕ್ಚರರ್ಸ್ ಇಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಅನೇಕ ಉಪನ್ಯಾಸಕರಿಲ್ಲವೆಂದು ಶ್ರೀರಾಮಪ್ಪನವರು ಹೇಳುತ್ತಿದ್ದರು ಒಟ್ಟು ೨೭೨೦ ಮೆಡಿಕಲ್ ಸೀಟ್ಸ್ ಇವೆ. ೧೦೭೧ ಗವರ್ನಮೆಂಟ್ ಕೋಟಾ ಅದರಲ್ಲಿ ೫೫೦ ಗವರ್ನಮೆಂಟ್ ಕಾಲೇಜಿನದ್ದು. ಮತ್ತು ಪ್ರೈವೇಟ್ ಕಾಲೇಜಿನದ್ದು ೫೨೧ ಮ್ಯಾನೇಜ್‌ಮೆಂಟ್ ಕೋಟಾ ೧೬೪೯ ಇದೆ,

೧೯೮೬-೮೭ರಲ್ಲಿ ೨೩೮ ಹಾಗೂ ೧೯೮೭-೮೮ರಲ್ಲಿ ೧೮೪೫ ಸೀಟುಗಳು ಹೆಚ್ಚಿಗೆ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಆಗಿದೆಯೆಂದು ಮಾನ್ಯ ಆರೋಗ್ಯ ಸಚಿವರಾದ ರಾಚಯ್ಯನವರು ಇತ್ತೀಚೆಗೆ

ವಿಧಾನ ಪರಿಷತ್ತಿನಲ್ಲಿ ಒಪ್ಪಿಕೊಂಡಿದ್ದಾರೆ. ೧೧ ವೈದ್ಯಕೀಯ ಕಾಲೇಜುಗಳು ಹೆಚ್ಚಿಗೆ ಅಡ್‌ಮಿಷನ್ ಮಾಡಿಕೊಂಡಿವೆ ಈ ಕಾಲೇಜುಗಳ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾನು ತಿಳಿಯಬಯಸುತ್ತೇನೆ. ಹಾಗೆಯೇ ಇಂಜಿನಿಯರಿಂಗ್ ಕಾಲೇಜುಗಳಲ್ಲಿ, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ, ಡೆಂಟಲ್ ಕಾಲೇಜುಗಳಲ್ಲಿ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಶಿಕ್ಷಣವೆಂಬುದು ಒಂದು ವ್ಯಾಪಾರಿ ಸರಕು ಆಗಿ ಬಿಟ್ಟಿದೆ, ಇನ್ನು ೨೬ ವೈದ್ಯಕೀಯ ಕಾಲೇಜುಗಳ ಅರ್ಜಿಗಳು ಸರ್ಕಾರದ ಮುಂದೆ ಇದೆ. ಸರ್ಕಾರದವರು ಏನು ಮಾಡುತ್ತಾರೋ ಮಾಡಲಿ, ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಈ ಸರ್ಕಾರದ ನೀತಿ ಏನು ಎಂದು ಕರ್ನಾಟಕದ ಜನರು ತಿಳಿಯಬಯಸುತ್ತಾರೆ ಕ್ಯಾಪಿಟೇಷನ್ ಶುಲ್ಕವನ್ನು ಕೈಬಿಟ್ಟು ಬೇರೆ ಶುಲ್ಕವನ್ನು ಜಾಸ್ತಿಮಾಡಿದಾಗ, ಇದರ ಪರಿಣಾಮ ಪ್ರೈವೇಟ್ ಕಾಲೇಜಿಗೂ ಆಗುತ್ತದೆ ಎಂಬ ಅನುಮಾನ ಇದೆ. ಇದರ ಪರಿಣಾಮವಾಗಿ ಬಡವರಿಗೆ ಸೀಟುಗಳು ಸಿಗುವ ಅವಕಾಶವಿರುವುದಿಲ್ಲ. ಅಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದವರಿಗೆ ಅವಕಾಶವಿರುವುದಿಲ್ಲ. ಹಣ ಇರುವವರು ಮಾತ್ರ ಸೀಟುಗಳನ್ನು ಪಡೆಯಲು ಶುರು ಮಾಡುತ್ತಾರೆ. ಆದುದರಿಂದ ಸರ್ಕಾರದ ಪಾಲಿಸಿ ಏನು ಎಂಬುದನ್ನು ನಿರ್ದಿಷ್ಟವಾಗಿ ಪ್ರಚಾರ ಪಡಿಸಬೇಕು. ವಯಸ್ಕರ ಶಿಕ್ಷಣದ ಬಗ್ಗೆ ಹೇಳುವುದಾದರೆ, ಕೇಂದ್ರದ ನೆರವು ಇದ್ದೂ ಕೂಡ, ಈ ಬಗ್ಗೆ ನಾವು ಗುರಿಮುಟ್ಟಿಲ್ಲ ಅಕ್ಷರಸೇನೆ ಸಂಪೂರ್ಣವಾಗಿ ವಿಫಲವಾಗಿದೆ. ಚೀನ ದೇಶದಲ್ಲಿ ೩೦ ವರ್ಷಗಳಲ್ಲಿ ಸಂಪೂರ್ಣ ಸಾಧನೆಯಾಗಿದ್ದರೂ ಕೂಡ ನಮ್ಮ ದೇಶದಲ್ಲಿ ಈ ವಯಸ್ಕರ ಶಿಕ್ಷಣದಲ್ಲಿ ಏಕೆ ಸಾಧನೆ ಆಗಿಲ್ಲವೆಂದು ನಾವು ಯೋಚನೆ ಮಾಡಬೇಕಾಗಿದೆ. ಹಿಂದೆ ಮಾಡಿದಂತಹ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಈಗ ಅಸಮರ್ಪಕವಾಗಿದೆ ಡಾನಿಶ್ ಏಡ್ ಪಡೆದು ಹಿಂದೆ ಉತ್ತಮ ರೀತಿಯಲ್ಲಿ ಕೆಲಸ ಆಗುತ್ತಿತ್ತು, ಅಂತಹ ವಿದ್ಯಾಪೀಠಗಳಿದ್ದವು ಈ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾರ ವಿದ್ಯಾಪೀಠದ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಿಂಟಿಂಗ್ ಪ್ರೆಸ್ ಬಗ್ಗೆ ಹಿಂದು ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಪ್ರಿಂಟಿಂಗ್ ಪ್ರೆಸ್‌ನಲ್ಲಿ ವರ್ಕ್‌ಲೋಡ್ ಜಾಸ್ತಿ ಇದೆ. ಅಲ್ಲಿ ಸ್ಟಾಫ್ ಅನ್ನು ಜಾಸ್ತಿ ಮಾಡಿಲ್ಲ. ಈ ಬಗ್ಗೆ ಸರ್ಕಾರದವರು ಗಮನವನ್ನು ಹರಿಸಬೇಕು.

ಇನ್ನು ಬೆಂಗಳೂರು ನಗರ್ತಪೇಟೆಯಲ್ಲಿ ಶ್ರೀ ವಿದ್ಯಾ ನರ್ಸರಿ ಮತ್ತು ಪ್ರೈಮರಿ ಶಾಲೆ ಇದೆ. ಇದಕ್ಕೆ ಸರ್ಕಾರದವರು ಅನುದಾನವನ್ನು ಕೊಡುತ್ತಿದ್ದಾರೆ. ಈ ಶಾಲೆಯ ಆಡಳಿತ ಮಂಡಲಿಯಲ್ಲಿ ನಂದಕುಮಾರ್ ಎಂಬುವರು ಒಬ್ಬರಿದ್ದಾರೆ. ಇವರು ಸರ್ಕಾರಿ ಮುದ್ರಣಾಲಯದಲ್ಲಿ ಕಂಪೋಸರ್ ಆಗಿ ಕೆಲಸಮಾಡುತ್ತಿದ್ದಾರೆ, ೫ನೇ ತಾರೀಖು ಇವರು ಮೊದಲನೇ ಶಿಫ್ಟಿನಲ್ಲಿದ್ದರು ಆದರೂ ಸಹ ಆತ ಪ್ರತಿದಿನವೂ ಶಾಲೆಗೆ ಬಂದು ನರ್ಸರಿ ಶಿಕ್ಷಕಿಯರಿಗೆ ಹಾಗೂ ಆಯಾಗಳಿಗೆ ಬಾಯಿಗೆ ಬಂದ ಹಾಗೆ ಏಕವಚನದಲ್ಲಿ ಬಯ್ಯುತ್ತಾನೆ. ಈತನು ಸರ್ಕಾರಿ ನೌಕರನಾಗಿದ್ದು. ಈ ಅನುದಾನ ಪಡೆಯುವ ಶಾಲೆಯ ಆಡಳಿತ ಮಂಡಲಿಯಲ್ಲಿ ಹೇಗೆ ಇದ್ದಾನೆ ಈ ಶಾಲೆಯ ಮೀಟಿಂಗ್‌ಗಳಲ್ಲಿ ಹೇಗೆ ಭಾಗವಹಿಸುತ್ತಾನೆ. ಕೆಲಸಕ್ಕೆ ಹಾಜರಾಗಿ ಹಾಜರಿ ನೀಡಿ ಈ ಶಾಲೆಗೆ ಬಂದು ಶಿಕ್ಷಕರಿಯರಿಗೆ ಕಿರುಕುಳ ಕೊಡುತ್ತಿದ್ದಾನೆ. ನನ್ನನ್ನು ಅಲ್ಲಾಡಿಸಲು ಯಾರು ಇಲ್ಲವೆಂದು ಹೇಳಿದ್ದಾನೆ. ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ಸರಿಮಾಡಿಕೊಂಡಿದ್ದಾನೆ. ಅಲ್ಲದೆ ಶಾಲೆಗೆ ಬೇಕಾದ ಪ್ರಿಂಟೆಡ್ ಫಾರಂ ಮುಂತಾದವುಗಳನ್ನು ಮುದ್ರಣಾಲಯದಿಂದ ತಂದು ಅದಕ್ಕೆ ಹಣ ಪಡೆಯುತ್ತಾನೆ ಎಂಬ ದೂರು ಕೇಳಿದ್ದೇನೆ ಆದ್ದರಿಂದ ಕೂಡಲೇ ಇವರನ್ನು ಈ ಶಾಲೆಯ ಆಡಳಿತ ಮಂಡಲಿಯಿಂದ ಕಿತ್ತು ಹಾಕಬೇಕು ಈತನು ಜಾಯಿಂಟ್ ಸೆಕ್ರೆಟರಿಯಾಗಿ ಈ ಶಾಲೆಯ ಆಡಳಿತ ಮಂಡಲಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಇವನನ್ನು ಕೂಡಲೇ ತೆಗೆದುಹಾಕಬೇಕು ಎಂದು ಹೇಳುತ್ತೇನೆ.

ವೇಗದಿಂದ ಬದಲಾಗುತ್ತಿರುವ ವಿಶ್ವದಲ್ಲಿ ವಿಜ್ಞಾನ ತಂತ್ರಜ್ಞಾನದ ಯುಗದಲ್ಲಿ ೨೧ನೇ ಶತಮಾನವನ್ನು ಪ್ರವೇಶಿಸುವ ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವಿಕಾಸಕ್ಕಾಗಿ ಸೃಜನ ಶಕ್ತಿಯ ವಿಕಸನಕ್ಕಾಗಿ ಶಿಕ್ಷಣ ಕ್ಷೇತ್ರ ಮುಂದುವಾಗಿರಲಿ, ಎಲ್ಲ ನ್ಯೂನತೆಗಳನ್ನು ಬಗೆಹರಿಸಿ ಶಿಕ್ಷಕರ ಮತ್ತು

ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿ ವಿದ್ಯಾ ವಿಕಾಸದ ರೈಲುಗಾಡಿ ನೇರವಾಗಿ ಮುನ್ನಡೆಯಲಿ. ಇಲ್ಲ ವಾದರೆ.

ಹಳಿತಪ್ಪುವುದು ಶಿಕ್ಷಣದ ರೈಲುಗಾಡಿ
ಸರಿದಾರಿಯಲಿ ಸಾಗದಿರೆ ಸಂಕಟವು ನೋಡಿ
ಈ ಲೇಖಾನುದಾನಗಳಿಗೆ ನಾವು ನೀಡುವ ಒಪ್ಪಿಗೆ
ಆಗುವುದು ಕುರುಡು ಸಮ್ಮತಿ ಸರ್ಕಾರದ ಸರ್ವ ತಪ್ಪಿಗೆ.
ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಒಂದೇ ದಿವಸ ಈ ರೀತಿ ಹತ್ತಾರು ಬೇಡಿಕೆಗಳನ್ನು ಇಟ್ಟು, ಒಂದೇಸಾರಿ ಮಂಜೂರಾತಿ ಪಡೆಯುವುದಕ್ಕಿಂತ, ಒಂದೇ ದಿನ ಎಲ್ಲಾ ಬೇಡಿಕೆಗಳನ್ನು ಇಟ್ಟು ಮಂಜೂರಾತಿ ಪಡೆಯುವುದಿದ್ದರೆ ಅದು ಇನ್ನೂ ಒಳ್ಳೆಯದಿತ್ತು. ಇವತ್ತು ಬೇಡಿಕೆ ಸಂಖ್ಯೆ ೨೯, ೨೩, ೧೧, ೧೨, ೧೫, ೧೬, ೨೧ ಮತ್ತು ೨೮ ಹೀಗೆ ಇವಿಷ್ಟನ್ನೂ ಒಂದೇ ದಿವಸದಲ್ಲಿ ಇಟ್ಟಿರುವುದರಿಂದ, ನಾವು ಯಾವ ಇಲಾಖೆಯ ಬಗ್ಗೆಯೂ ವಿವರವಾಗಿ ಮಾತನಾಡುವುದಕ್ಕಾಗುವುದಿಲ್ಲ. ಹಿಂದೆ ಎಷ್ಟೋಸಾರಿ ಪ್ರಶ್ನೆಗಳನ್ನು ಹಾಕಿದಾಗ, ೩೩ನೇ ನಿಯಮದಡಿ ಪ್ರಶ್ನೆ ಹಾಕಿದಾಗ ತಾವೇ ಅರ್ಜಿ ಮಾಡುತ್ತಿದ್ದಿರಿ. ಇಲಾಖೆ ಮೇಲೆ ಚರ್ಚೆ ಬಂದಾಗ ವಿವರವಾಗಿ ಮಾತನಾಡಬಹುದು ಎಂದು ಹೇಳುತ್ತಿದ್ದಿರಿ. ಆದರೂ ಕೂಡ ಇವತ್ತು ಅನಿವಾರ್ಯವಾಗಿ ಇರತಕ್ಕಂಥ ಅವಕಾಶವನ್ನು ನಾವು ತೆಗೆದುಕೊಂಡು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇವತ್ತು ಅರಣ್ಯ ಇಲಾಖೆಯ ಮೇಲಿನ ಬೇಡಿಕೆಯನ್ನು ನಾನು ವಿರೋಧಿಸುತ್ತಾ, ಅರಣ್ಯ ಇಲಾಖೆ ಈ ದೇಶಕ್ಕೆ ಬಹಳ ಪ್ರಾಮುಖ್ಯವಾದ ಮತ್ತು ಅಷ್ಟೇ ಅವಶ್ಯಕವಾದ ಒಂದು ಇಲಾಖೆ ಇದು ಒಂದು ಕಡೆ ಪರಿಸರವನ್ನು ಕಾಪಾಡಿದರೆ, ಇನ್ನೊಂದು ಕಡೆ ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತದೆ. ಈ ಅರಣ್ಯ ಇಲಾಖೆ ಎಷ್ಟರಮಟ್ಟಿಗೆ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರೆ, ನನಗೆ ಈಗತಾನೆ ಕೆಲವು ದಾಖಲೆಗಳು ಸಿಕ್ಕಿದವು. ಅರಣ್ಯ ಇಲಾಖೆ ಅರಣ್ಯವನ್ನು ರಕ್ಷಣೆ ಮಾಡುವುದಕ್ಕೆ ಹೋಗುವುದರ ಬದಲು, ಅರಣ್ಯವನ್ನು ನಾಶ ಮಾಡುವ ಪರಿಸ್ಥಿತಿ ಇದೆ. ಯಾರೋ ಒಬ್ಬರು ಅಥವಾ ಇಬ್ಬರು ನಿಷ್ಠಾವಂತ ಅಧಿಕಾರಿಗಳು ಇರಬಹುದು. ಮೊನ್ನೆ ತೀರಿಕೊಂಡಂತಹ ಹೆಗಡೆಯವರು ಅಥವಾ ಇನ್ಯಾರಾದರೂ ಒಳ್ಳೆಯವರು ಇದ್ದರೆ ಇಲಾಖೆಯವರು ಅವರನ್ನು ಸಾಯಿಸುತ್ತಾರೆ. ಕಳ್ಳಸಾಗಾಣಿಕೆದಾರರನ್ನು ಸಾಯಿಸುಂವುದಕ್ಕೆ ಮುಂಚಿತವಾಗಿ, ಇಂಥವರನ್ನು ಇಲಾಖೆಯವರು ಸಾಯಿಸುತ್ತಾರೆ. ಸರಿಯಾಗಿ ಕೆಲಸ ಮಾಡತಕ್ಕಂಥವರಿಗೆ, ತೊಂದರೆಯನ್ನು ಕೊಡತಕ್ಕಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಇದರಿಂದ ಅರಣ್ಯ ಇಲಾಖೆಯವರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂಬ ಬೇಜಾರು ನಮಗೆ ಸದಾ ಇದ್ದೇ ಇದೆ. ಈ ಅರಣ್ಯ ಇಲಾಖೆಯ ಬಗ್ಗೆ ಹಲವಾರು ವಿಚಾರಗಳನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅರಣ್ಯವನ್ನು ಬೆಳಸತಕ್ಕಂಥಾದ್ದು ಉಳಿಸತಕ್ಕಂಥಾದ್ದು, ಈ ಎರಡು ಕಾರ್ಯಕ್ರಮಗಳಲ್ಲೂ ಇವತ್ತು ಅರಣ್ಯ ಇಲಾಖೆ ವಿಫಲವಾಗಿದೆ. ಗಿಡ ಬೆಳೆಸತಕ್ಕ ವಿಚಾರದಲ್ಲಿ, ಈ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕೊಟ್ಟಿರತಕ್ಕ ಹಣ ವ್ಯವಸ್ಥಿತವಾಗಿ ಮುಟ್ಟುತ್ತಿಲ್ಲ. ಊರಿನ ಒಳಗಡೆ ಅಥವಾ ಊರಿನ ಹೊರಗಡೆ ರಸ್ತೆಯ ಬದಿಯಲ್ಲಿ ನೆಡತಕ್ಕ ಗಿಡಗಳ ರಕ್ಷಣೆಯನ್ನು ನೋಡಿಕೊಳ್ಳುತ್ತಿಲ್ಲ. ಇದರ ಬಗ್ಗೆ ಹಲವಾರು ಸಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಜೊತೆಗೆ ಈ ಇಲಾಖೆಗೆ ಕೊಟ್ಟ ಹಣವನ್ನು ವ್ಯವಸ್ಥಿತವಾಗಿ ಖರ್ಚು ಮಾಡುತ್ತಿಲ್ಲ. ಮತ್ತೆ ಸಾರ್ವಜನಿಕರಿಗೆ ಇರತಕ್ಕ ಕಾಳಜಿ, ಅವರಿಗೆ ಇರತಕ್ಕ ಆಶೆ ಆಕಾಂಕ್ಷೆ ಈ ಇಲಾಖೆಯವರಿಗೆ ಇಲ್ಲ. ಇಲ್ಲಿ ೩೩ನೇ ನಿಯಮದಡಿ ಒಂದು ಪ್ರಶ್ನೆಯನ್ನು ಹಾಕಿದ್ದೆ. ಈ ಪ್ರಶ್ನೆಯನ್ನು ಒಂದು ಸಾರಿ ಅಲ್ಲ, ಎರಡು ಸಾರಿ ಅಲ್ಲ, ಮೂರು ಸಾರಿ ಅಲ್ಲ, ೯ ಬಾರಿ ಹಾಕಿದ್ದೇನೆ. ಇದು ಯಾವುದು ಎಂದು ತಾವು ಕೇಳಬಹುದು. ಚಕ್ರಾ, ವಾರಹಿಯಲ್ಲಿ ಮರಮುಟ್ಟುಗಳು ಬಹಳ ದುರುಪಯೋಗ ಮಾಡಿದ್ದಾರೆ ಎನ್ನತಕ್ಕ ವಿಚಾರದಲ್ಲಿ, ೩೩ರ ರಲ್ಲಿ ಪ್ರಶ್ನೆಯನ್ನು ಹಾಕಿದ್ದೆ. ಇದಕ್ಕೆ, ಇದುವರೆಗೆ ನನಗೆ ಉತ್ತರ ಬಂದಿಲ್ಲ. ಅದರಲ್ಲಿರತಕ್ಕ ಅಧಿಕಾರಿಗಳು ೬೬ ಜನ ಭ್ರಷ್ಟ ಅಧಿಕಾರಿಗಳು. ಉನ್ನತ ಅಧಿಕಾರಿಗಳಿಂದ ಹಿಡಿದು ಗಾರ್ಡ್‌ವರೆಗೆ ಒಟ್ಟು ೬೬ ಜನ ಇದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಈ ಸದನದಲ್ಲಿ ಚರ್ಚೆಯಾಗಿದೆ. ಇವರ ಮೇಲೆ ಕ್ರಮ ತೆಗೆದುಕೊಂಡಿಲ್ಲ, ಇವರಿಗೆ ಪ್ರಮೋಷನ್ ಕೊಟ್ಟು, ಉನ್ನತ ಹುದ್ದೆಗಳಿಗೆ ಹಾಕಿದ್ದಾರೆ. ಅವರಲ್ಲಿ ಕೆಲವರು ನಿವೃತ್ತಿಯಾಗಿದ್ದಾರೆ. ಇಷ್ಟಾದರೂ ಕೂಡ, ಈ ಪ್ರಶ್ನೆಗೆ ಸರಿಯಾದ ಉತ್ತರ ಮಾತ್ರ ಬಂದಿಲ್ಲ. ಕೋಟ್ಯಾಂತರ ರೂಪಾಯಿ

ಅವ್ಯವಹಾರ ಮಾಡಿರತಕ್ಕ ಚಕ್ರಾ ವಾರಾಹಿ ನಾಟ ಇವತ್ತಿಗೂ ಪತ್ತೆ ಮಾಡಿಲ್ಲ. ಇನ್ನೊಂದು ವಿಚಾರ ಹೇಳಬೇಕೆಂದರೆ, ತೀರ್ಥಹಳ್ಳಿ ಹತ್ತಿರ ಮರಬಿನಕಣ ವಾರಾಹಿ ಮುಳುಗಡೆ ಯಾಗುತ್ತಿದೆ, ಬೆಲೆ ಬಾಳತಕ್ಕ ನಾಟವನ್ನು ಲಾಟ್ ಮಾಡಿದ್ದಾರೆ. ಈ ರೀತಿ ಲಾಟ್ ಸುಮಾರು ಮೂರು ಮೈಲಿ ಉದ್ದ ಇದೆ. ಅಷ್ಟು ನಾಟ್ ಮಾಡಿದ್ದಾರೆ. ಇದನ್ನು ಯಾರು ಯಾರಿಗೆ ಬೇಕೋ ಅವರು ತುಂಬಿಕೊಂಡು ಹೋದರು, ಹೇಳುವವರು, ಕೇಳುವವರು ಯಾರೂ ಇಲ್ಲ. ಕೊನೆಗೆ ಸಾರ್ವಜನಿಕರೇ ಹೋಗಿ ಹಿಡಿದರು. ಲಾರಿಯಲ್ಲಿ ಸಾಗಿಸುತ್ತಿದ್ದುದನ್ನು ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಹಿಡಿದು ಕೊಟ್ಟರು. ಅದನ್ನು ಹಿಡಿದುಕೊಟ್ಟರೂ ಅವರಿಗೆ ಏನೂ ಆಗಲಿಲ್ಲ. ಈ ಸದನದಲ್ಲಿ ನಾನು ಪ್ರಸ್ತಾಪ ಮಾಡಿದೆ. ಇಂತಹ ತಾರೀಖಿನಲ್ಲಿ, ಇಂತಹ ಲಾರಿ, ಅದರ ನಂಬರ್ ಇಷ್ಟು, ಹೆಸರು ಇದು ಎಂದು ಎಲ್ಲಾ ಮಾಹಿತಿಯನ್ನು ಈ ಸದನಕ್ಕೆ ಕೊಟ್ಟೆ, ಆದರೆ ಅವರಿಗೆ ಏನೇನೂ ಮಾಡಲಿಲ್ಲ. ಸಭ್ಯಕ್ಕೆ ನಮಗೆ ತೊಂದರೆ ಕೊಟ್ಟರು. ಒಂದು ಕಟ್ಟಿಗೆ ತೆಗೆದುಕೊಂಡು ಹೋಗುವುದಕ್ಕೆ ಬಿಡಲಿಲ್ಲ ಒಂದು ಬೇಲಿ ಮುಳ್ಳನ್ನು ತೆಗೆದುಕೊಂಡು ಹೋಗುವುದಕ್ಕೆ ಬಿಡಲಿಲ್ಲ. ನಮಗೇ ತೊಂದರೆ ಕೊಟ್ಟರು. ಈ ಕಠಿಣ ಪರಿಸ್ಥಿತಿಯಲ್ಲಿ ಕಾಡನ್ನು ನಾಡಿನ ಸಂಪತ್ತನ್ನು ಹೇಗೆ ಉಳಿಸುವುದಕ್ಕೆ ಆಗುತ್ತದೆ ? ಮಲೆನಾಡಿನ ಭಾಗದಲ್ಲಿ ಬ್ರಿಟಿಷರ ಕಾಲದಲ್ಲಿ ಒಂದು ಕಾಡು ಇತ್ತು. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನೂರಾರು ಎಕರೆ, ಸಾವಿರಾರು ಎಕರೆ ಕಾಡು ಇರತಕ್ಕಂಥದನ್ನು ಆಗಿನ ಜಮೀನುದಾರರ ಕೈಯಲ್ಲಿ ಕೊಟ್ಟುಬಿಟ್ಟು ಪಹಣಿಯನ್ನು ಅವರ ಹೆಸರಿಗೆ ಕೊಡುತ್ತಿದ್ದರು, ಪ್ರತಿಯೊಂದು ಎಕರೆಗೆ ಒಂದಾಣೆ ಕಂದಾಯ ಕಟ್ಟುತ್ತಿದ್ದರು. ಇದು ಖೇತವಾರಿನಲ್ಲಿ, ಮಲೆನಾಡಿನ ಎಲ್ಲಾ ದಾಖಲೆಗಳಲ್ಲಿ ಇದೆ. ಒಂದು ಎಕರೆ ಕಾಡಿಗೆ ಒಂದಾಣೆ ಕಂದಾಯ ಫಿಕ್ಸ್ ಮಾಡಿ ಕಾಡಿನ ರಕ್ಷಣೆ ಮಾಡತಕ್ಕಂಥ ಅಧಿಕಾರವನ್ನು ಮಾಲೀಕರಿಗೆ ಅಥವಾ ಜಮೀನುದಾರರಿಗೆ ಕೊಡುತ್ತಿದ್ದರು. ಅವರು ಕಾಡಿನಲ್ಲಿ ಸಿಗತಕ್ಕಂಥ ಹಣ್ಣುಹಂಪಲು ಬೆತ್ತ, ಬಳ್ಳಿ, ತರಗೆಲೆ, ಕಟ್ಟಿಗೆ, ಮೆಣಸು, ಏಲಕ್ಕಿ ಅಥವಾ ಇನ್ನಾವುದಾದರೂ ಕಾಡಿನ ಉತ್ಪತ್ತಿ ಇದ್ದರೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಇತ್ತು. ಆ ದಾಖಲೆಗಳು ಇವತ್ತೂ ಇವೆ. ಪಹಣಿಯಲ್ಲಿ ಒಂದಾಣೆ ಎಂದು ಇತ್ತು, ಅದರ ಪಕ್ಕದಲ್ಲಿ ಇನ್ನೊಂದನ್ನು ಸೇರಿಸಿ ಹನ್ನೊಂದು ಆಣೆ ಎಂದು ಮಾಡಿದರು. ನಾಲ್ಕಾಣೆಗಿಂತ ಮೇಲ್ಪಟ್ಟು ಕಂದಾಯ ಇದ್ದರೆ ಎಲ್ಲಾ ಹಕ್ಕೂ ತಮಗೇ ಬರುತ್ತದೆ ಎಂದು ಅರಣ್ಯಾಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಮತ್ತು ಕಳ್ಳಸಾಗಾಣಿಕೆದಾರರು ಮೂರು ಜನರೂ ಶಾಮೀಲಾಗಿ ಒಂದು ಎಂದು ಇರತಕ್ಕಂಥಾದ್ದನ್ನು ಹನ್ನೊಂದು ಎಂದು ಮಾಡಿ ತಿದ್ದಿ ಮಲೆನಾಡಿನಲ್ಲಿರತಕ್ಕಂಥ ಲಕ್ಷಾಂತರ ಎಕರೆ ಕಾಡುಗಳಲ್ಲಿ ಇರತಕ್ಕ ಮರಗಳನ್ನು ಕಡಿಯುವ ಹಕ್ಕು ಲೂಟಿ ಮಾಡುವ ಹಕ್ಕನ್ನು ಪಡೆದುಕೊಂಡಿದ್ದಾರೆ. ಈ ರೀತಿ ಬಹಳ ಲೂಟಿಯಾಗುತ್ತಿದೆ. ಮೊನ್ನೆ ತಾನೆ ನಾನು ನಿಯಮ ೩೩೪ ರಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇರುವ ಸಿಂಧವಾಡಿ ಗ್ರಾಮದಲ್ಲಿನ ೫೧–೫೭ನೇ ಸರ್ವೆ ನಂಬರ್‌ನಲ್ಲಿರುವುದು ಇದೇ ತರಹದ ಕಾಡು. ಅದರ ಪಹಣಿ ನನ್ನ ಹತ್ತಿರ ಇದೆ. ಇದರಲ್ಲಿ ಒಂದಾಣೆ ಕಾಡು ಎಂದು ಇದೆ. ಇದನ್ನು ಡಿ. ಸಿ. ಯವರೂ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರೂ ಎಲ್ಲಾ ಸೇರಿ ನಾಗರಾಜ್ ಮತ್ತು ಶ್ರೀಮತಿ ಕೃಷ್ಣಮ್ಮ ಎಂಬುವರಿಗೆ ಖಾತೆ ಮಾಡಿಕೊಟ್ಟಿದ್ದಾರೆ. ಆದಕ್ಕೆ ಅವರು ಫೆಲ್ಲಿಂಗ್ ಆರ್ಡರ್ ತೆಗೆದುಕೊಂಡಿದ್ದಾರೆ. ಇದಕ್ಕೆ ಅರಣ್ಯಾಧಿಕಾರಿಗಳು ಸಮ್ಮತಿ ಕೊಟ್ಟಿದ್ದಾರೆ. ಅಲ್ಲಿ ೨೦೪ ಎಕರೆ ಜಮೀನು ಇದೆ. ಈ ೨೦೪ ಎಕರೆ ಜಮೀನು ಎಂದು ಹೇಳಿದರೆ ಅದರಲ್ಲಿ ದೊಡ್ಡ ದೊಡ್ಡ ಹೆಮ್ಮರಗಳು ಇವೆ. ಒಂದೊಂದು ಮರದಲ್ಲಿ ೨೦೦-೩೦೦ ಹೆಜ್ಜೇನು ಗೂಡುಗಳು ಕಟ್ಟುತ್ತವೆ, ಅಷ್ಟು ದೊಡ್ಡ ಮರಗಳು. ಅದನ್ನು ಇವತ್ತು ಕಂಟ್ರಾಕ್ಟರ್‌ಗಳು ಕಬಳಿಸಬೇಕೆಂದು ಆದಕ್ಕೆ ಫೆಲ್ಲಿಂಗ್ ಆರ್ಡರ್ ತೆಗೆದುಕೊಂಡಿದ್ದಾರೆ. ಅಲ್ಲಿ ಸುಮಾರು ೩–೪ ಕೋಟಿ ರೂಪಾಯಿಗಳಾಗುವಷ್ಟು ನಾಟಾ ಇದೆ. ಯಾವ ಅಧಿಕಾರಿಗಳಿಗೂ ನೋಡುವುದಿಲ್ಲ, ಇದಕ್ಕೆ ಏನು ಮಾಡಬೇಕು ? ನಾವು ಯಾವ ರೀತಿ ಇದನ್ನು ಬಗೆಹರಿಸಬೇಕು ? ಅಷ್ಟೇ ಅಲ್ಲ, ಹೊಸನಗರ ತಾಲ್ಲೂಕಿನಲ್ಲಿ ಮುತ್ತೂರು, ಸಂಕೂರು ಮತ್ತು ಬಸವಾಪುರ ಎನ್ನತಕ್ಕಂಥ ಊರುಗಳಲ್ಲೂ ಸಹ ಒಂದು ಸಾವಿರ ಎಕರೆ ಜಮೀನು ಇದೇ ತರಹ ಮಾಡಿ ಪಹಣಿ ತಿದ್ದಿ, ಒಂದಾಣೆಯನ್ನು ಹನ್ನೊಂದು ಆಣೆ ಎಂದು ಮಾಡಿರುತ್ತಾರೆ. ಇದರಿಂದ ಸಾಕಷ್ಟು ಗಲಾಟೆಯಾಗಿದೆ. ನಾನು ಹಿಂದೆ ಮಾನ್ಯ ಜೀವಿಜಯರವರು ಇದ್ದಾಗಲೂ ಕೂಡಾ ಈ ಸದನದಲ್ಲಿ ಪ್ರಸ್ತಾಪ ಮಾಡಿದೆ, ಮತ್ತೆ ಪತ್ರಿಕೆಗಳ ಮೂಲಕ ಹೇಳಿ ಈ ವಿಚಾರದಲ್ಲಿ ಉಗ್ರವಾದ ಚಳುವಳಿಯನ್ನು ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದರಿಂದ ಇವತ್ತಿನ ದಿವಸ ಅದನ್ನು ನಿಲ್ಲಿಸಿದ್ದಾರೆ. ಮೊನ್ನೆ ಮೊನ್ನೆ ಸಾಗರ ತಾಲ್ಲೂಕಿನ

ಆನಂದಪುರದಲ್ಲಿ ಕೂಡಾ ಇದೇ ರೀತಿಯಾದ ಒಂದು ದಾಖಲೆಯನ್ನು ತಿದ್ದಿದ್ದಾರೆ. ಇಡೀ ದೇಶವನ್ನು ಲೂಟಿ ಹೊಡೆಯಂತಕ್ಕಂಥ ಪರಿಸ್ಥಿತಿ ಬಂದಿದೆ. ಯಾರೋ ಒಬ್ಬ ಪಾಪ ಒಳ್ಳೆಯ ಮನುಷ್ಯ. ಶಿವಮೊಗ್ಗ ತಾಲ್ಲೂಕಿನ ಚೋರಡಿ ಎಂಬ ಪ್ರದೇಶದಲ್ಲಿ ಒಬ್ಬ ರೇಂಜ್ ಆಫೀಸರ್ ಇದ್ದಾರೆ. ಅವರಿಗೆ ಯಾವ ದೇವರು ಬುದ್ಧಿ ಕೊಟ್ಟಿದ್ದಾನೋ ಗೊತ್ತಿಲ್ಲ, ಅವರು ಬಂದು ನಿಮ್ಮ ತಾಲ್ಲೂಕಿನಲ್ಲಿ ಬಹಳ ದೊಡ್ಡ ಅನ್ಯಾಯ ಆಗುತ್ತಿದೆ. ಯಾವ ಅಧಿಕಾರಿಗಳು ಏನು ಹೇಳಿಕೊಟ್ಟಿದ್ದಾರೋ ಗೊತ್ತಿಲ್ಲ. ಹೀಗೆಲ್ಲಾ ಮಾಡುತ್ತಿದ್ದಾರೆ, ನೀವು ಪ್ರಸ್ತಾಪ ಮಾಡಿ, ಕಾಡನ್ನು ಉಳಿಸಿಕೊಡಿ ಎಂದು ಹೇಳಿದರು. ಈ ರೀತಿಯಾಗಿ ಅರಣ್ಯಾಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ದಾಖಲೆಗಳನ್ನು ತಿದ್ದಿ, ಇವತ್ತಿನ ದಿವಸ ಬಹಳ ದೊಡ್ಡ ಪ್ರಮಾಣದಲ್ಲಿ ಲೂಟಿ ಮಾಡುತ್ತಿದ್ದಾರೆ. ಈ ಲೂಟಿಯನ್ನು ತಡೆಯುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕದೇ ಹೋದರೆ ಕಷ್ಟವಾಗುತ್ತದೆ. ತೀರ್ಥಹಳ್ಳಿ ತಾಲ್ಲೂಕಿನ ಸಿಂಧವಾಡಿ ಸರ್ವೆ ನಂಬರ್ ೫೧–೫೪, ಹೊಸನಗರ ತಾಲ್ಲೂಕಿನ ಮುತ್ತೂರು, ಬಸವನಪುರ ಮತ್ತು ಸಾಗರ ತಾಲ್ಲೂಕಿನ ಆನಂದಪುರ ಹೋಬಳಿಗಳಲ್ಲಿ ಏನಾದರೂ ಒಂದು ಶಿವ ಮಾಡಿ ನಿಮ್ಮ ಜಮೀನು ಎಂದು ಹೇಳಿ, ಕಾಡನ್ನು ಕಡಿಯತಕ್ಕ ಪರಿಸ್ಥಿತಿಯನ್ನು ಅಧಿಕಾರಿಗಳು ಉಂಟುಮಾಡಿದ್ದಾರೆ. ಇದೊಂದು ಹಣ ಗಳಿಸುವುದಕ್ಕೆ ಸುಲಭ ಉಪಾಯವಾಗಿ ಇದನ್ನು ಇವತ್ತಿನ ದಿವಸ ಮಾಡುತ್ತಿದ್ದಾರೆ. ಇವತ್ತು ಹಣ ಗಳಿಸುವುದಕ್ಕೆ ಸುಲಭ ಉಪಾಯವಾಗುತ್ತಿದೆ. ಇವತ್ತಿನ ದಿವಸ ಅವರೇನು ಮಾಡುತ್ತಿದ್ದಾರೆ, ಆ ಬಗ್ಗೆ ತಾವು ಕ್ರಮಗಳನ್ನು ತೆಗೆದುಕೊಂಡು ಈ ಕುಖ್ಯಾತ ಕಳ್ಳತನವನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕು. ಇದರಲ್ಲಿ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆ. ನಮ್ಮ ಹೊಸನಗರ ತಾಲ್ಲೂಕಿನ ಮುತ್ತೂರಿಗೆ ಒಬ್ಬ ವ್ಯಕ್ತಿ ಚಿಕ್ಕಮಗಳೂರಿನಿಂದ ಬಂದು ಅವರು ಜನತಾ ಪಕ್ಷದ ಹೆಸರು ಹೇಳಿಕೊಂಡು ನಾನು ಮಾನ್ಯ ಜೀವಿಜಯರವರ ಸಂಬಂಧಿಕನೆಂದು ಹೇಳಿಕೊಂಡು ಅವನ ಹತ್ತಿರ ಒಂದು ಬಂದೂಕ ಇಟ್ಟುಕೊಂಡು ಅಲ್ಲಿರತಕ್ಕಂಥ ಕಾಡಿಗೆ ಬೇಲಿ ಹಾಕಿ ರಸ್ತೆ ಮಾಡಿ ಜೀಪಿನಲ್ಲಿ ಓಡಾಡುತ್ತಾನೆ. ಅಷ್ಟೇ ಅಲ್ಲ. ಅವನು ಇಟ್ಟುಕೊಂಡಿರತಕ್ಕಂಥ ಬಂದೂಕಿನಿಂದ ಒಂದು ಹುಲಿಯನ್ನು ಹೊಡೆದು ಸಾಯಿಸಿದ್ದಾನೆ. ಮತ್ತು ರಾಷ್ಟ್ರೀಯ ಪಕ್ಷಿ ನವಿಲನ್ನೂ ಸಹ ಹೊಡೆದಿದ್ದಾನೆ. ಈ ರೀತಿ ಇದ್ದರೂ ಸಹ ಅವನ ಬಗ್ಗೆ ಇದುವರೆವಿಗೂ ಕ್ರಮ ತೆಗೆದುಕೊಂಡಿಲ್ಲ. ಪ್ರತಿಯೊಂದು ಪ್ರಕರಣವನ್ನು ಕೂಡ ನಾನು ಸರ್ಕಾರಕ್ಕೆ, ಸಂಬಂಧಪಟ್ಟವರಿಗೆ ಬರೆದಿದ್ದರೂ ಏನೂ ಆಗಿಲ್ಲ. ಮಾನ್ಯ ಅಧ್ಯಕ್ಷರೇ, ಇನ್ನು ನನಗೆ ಅವಮಾನವಾಯಿತು. ನಾನು ಅವನನ್ನು ಏನೂ ಮಾಡುವುದಕ್ಕಾಗಲಿಲ್ಲ. ಆ ಎಂ.ಎಲ್.ಎ. ಸ್ವಾಮಿರಾವ್ ನನ್ನನ್ನು ಏನು ಮಾಡಿದ ಎಂದು ಮೀಸೆ ತಿರುವಿಕೊಂಡು ಓಡಾಡುತ್ತಿದ್ದಾನೆ. ನಾನು ಎಲ್ಲವನ್ನು ಸರ್ಕಾರಕ್ಕೆ ತಿಳಿಸಿದ್ದೇನೆ. ಇದುವರೆವಿಗೂ ಏನು ಮಾಡಿಲ್ಲ ? ಚಿಂತೆ ಇಲ್ಲ ನಾನು ಹೋರಾಟ ಮಾಡಿ ನಾಲ್ಕು ಮರ ಉಳಿಸಿದರೆ ಸಾಕು ಎನ್ನುವ ಹೆಮ್ಮೆ ನನಗಿದೆ. ಇನ್ನು ಹೊಸನಗರ ತಾಲ್ಲೂಕಿನಲ್ಲಿ ಒಂದು ಗುಳಮಾವು ಹೆಮ್ಮರವಿದೆ. ನಾನು ಹೇಳುವುದನ್ನು ಪತ್ರಿಕೆಗಳವರು ನಂಬುವುದಿಲ್ಲ, ತಾವು ಸಹ ನಂಬುವುದಿಲ್ಲ. ಈ ಮರದ ಸುತ್ತಳತೆ ಸುಮಾರು ೨೫ ಅಡಿ ಇದೆ. ಎತ್ತರ ಸುಮಾರು ೨೦೦–೫೦ ಅಡಿಗಳು ಇದೆ. ಇಷ್ಟು ದೊಡ್ಡ ಮರವನ್ನು ತಾವ್ಯಾರು ನೋಡಿರಲಿಕ್ಕಿಲ್ಲ. ಇಷ್ಟೊಂದು ದೊಡ್ಡ ಗುಳಮಾವು ಮರದಿಂದ ಲಾರಿಗಟ್ಟಲೆ ಚಕ್ಕೆಯನ್ನು ತೆಗೆದುಕೊಂಡು ಹೋದರು. ಈ ಮರದ ಚಕ್ಕೆ ಕೇರಳಕ್ಕೆ ಹೋಯಿತು, ಬೆಂಗಳೂರಿಗೂ ಸ್ವಲ್ಪ ಬಂತು. ಈ ಚಕ್ಕೆ ಬಹಳ ಬೆಲೆ ಬಾಳತಕ್ಕಂಥಾದ್ದು. ಊದುಬತ್ತಿ ಸೆಂಟ್, ಮತ್ತು ಅಂಟು ತಯಾರು ಮಾಡುವುದಕ್ಕೆ ಗುಳಮಾವು ಮರದ ಚಕ್ಕೆಯನ್ನು ಉಪಯೋಗಿಸುತ್ತಾರೆ. ಈ ಪ್ರಕರಣದಲ್ಲಿ ತಾವು ಸಸ್ಪೆಂಡ್ ಮಾಡಿರುವುದು ಒಬ್ಬ ಗಾರ್ಡನ್ನು, ಇಬ್ಬರು ಫಾರೆಸ್ಟ್ ಆಫೀಸರ್ಸ್‌ನ್ನು. ಈ ಪ್ರಕರಣಕ್ಕೆ ಆರ್ಡರ್ ಮಾಡಿದ ಅಧಿಕಾರಿಗೆ ತಾವು ಪ್ರಮೋಷನ್ ಕೊಟ್ಟು ಒಳ್ಳೆಯ ಜಾಗಕ್ಕೆ ಹಾಕಿ ಕೊಟ್ಟಿದ್ದೀರಿ. ಇದು ಯಾವ ನ್ಯಾಯ ತಾವೇ ಹೇಳಿ ಅಧ್ಯಕ್ಷರೇ. ಸಸ್ಪೆಂಡ್ ಮಾಡಿದ ಗಾರ್ಡ್‌ನ್ನು ಇದುವರೆವಿಗೂ ಸರ್ಕಾರದವರು ರಿವೋಕ್ ಮಾಡಿಲ್ಲ. ಆದರೆ ಯಾವ ರೇಂಜ್ ಆಫೀಸರ್ ಆರ್ಡರ್ ಮಾಡಿದರೋ ಅವರನ್ನು ಒಳ್ಳೆಯ ಜಾಗಕ್ಕೆ ಪ್ರಮೋಷನ್ ಮಾಡಿದ್ದೀರಿ. ಆ ಆರ್ಡರ್ ಕಾಪಿಯನ್ನು ಬೇಕಾದರೆ ನಾನು ಮಂತ್ರಿಗಳಿಗೆ ಕೊಡುತ್ತೇನೆ, ಗುಳುಮಾವು ಚಕ್ಕೆಯನ್ನು ತೆಗೆಯುವುದಕ್ಕೆ ಅವರು ಪರವಾನಿಗೆಯನ್ನು ಕೊಟ್ಟಿದ್ದಾರೆ. ಒರಿಜಿನಲ್ ಆರ್ಡರ್ ನನ್ನ ಹತ್ತಿರ ಇದೆ. ಇವೆಲ್ಲಾ ಕೊಟ್ಟಿದ್ದೇನೆ. ಆದರೂ ಏನೂ ಆಗಿಲ್ಲ. ಪ್ರಮೋಷನ್ ಮಾಡಿಸಿಕೊಂಡು ಹೋದ ಅಧಿಕಾರಿ, ಅಲ್ಲಿಂದಲೇ ಸ್ವಾಮಿರಾವ್ ನನ್ನನ್ನು ಏನು ಮಾಡಿದರು ಎಂದು ಮೀಸೆ ತಿರುಗಿಸುತ್ತಿದ್ದಾರೆ. ಈ ಚಕ್ಕೆ ತೆಗೆಯುವುದರಿಂದ ಏನಾಗುತ್ತದೆ ಎಂದರೆ ಗುಳಮಾವು ಮರ ಸಾಯುತ್ತದೆ.

ಆಗ ಮರವನ್ನು ಸಹ ಕಡಿದು ಹಾಕಬಹುದು. ಮರ ಸತ್ತ ಮೇಲೆ ಕಾಡು ಸಹ ಹೋಗುತ್ತದೆ. ಕಾಡು ಹೋದಮೇಲೆ ಏನಿದೆ ? ಇಲ್ಲಿ ಡೆಡ್ ಅಂಡ್ ವಾಲ್ ಎರಡೂ ಆಯಿತು. ಇದರಿಂದ ಕೂಡ ಅವರಿಗೆ ಲಾಭವಾಗುತ್ತದೆ. ಹೊಸನಗರ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಹೆಮ್ಮರಗಳು ಈ ಗೋಳಮಾವು ಮರಗಳು ಸತ್ತು ಒಣಗಿ ನಿಂತಿವೆ. ತಾವು ಒಂದು ಸದನದ ಸಮಿತಿ ಮಾಡಿ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅಥವಾ ಬೇರೆ ಇಲಾಖೆಯವರನ್ನು ಕಳುಹಿಸಿ ಕೊಡಿ ನಾನು ಅವರಿಗೆ ತೋರಿಸುತ್ತೇನೆ. ಅದೇ ಇಲಾಖೆಯವರು ಮಾತ್ರ ಬೇಡ. ಕಾರಣ ಅವರು ಅವರನ್ನು ರಕ್ಷಣೆ ಮಾಡುತ್ತಾರೆ. ಪೋಲೀಸ್ ಇಲಾಖೆಯವರು ಹೋದರೆ ಅವರಿಗೆ ಸಂಬಂಧಪಟ್ಟಿದ್ದು ಇದ್ದರೆ ಅವರು ರಕ್ಷಣೆ ಕೊಡುವುದಿಲ್ಲವೇ ಹಾಗೆ. ಅರಣ್ಯ ಇಲಾಖೆಯವರು ಹೋದರೆ ಅವರ ಇಲಾಖೆಯವರೆಂದು ರಕ್ಷಣೆ ಮಾಡುತ್ತಾರೆ. ಆದ್ದರಿಂದ ಬೇರೆ ಇಲಾಖೆಯವರನ್ನು ಕಳುಹಿಸಿ ಕೊಡಿ ನಾನು ತೋರಿಸುತ್ತೇನೆ. ಇಲ್ಲವೇ ಸದನದ ಸಮಿತಿ ಮಾಡಿ ನಾನು ತೋರಿಸುತ್ತೇನೆ. ಈ ರೀತಿ ಮಾಡಿದಂತಹ ಒಬ್ಬ ರೇಂಜ್ ಆಫೀಸರ್‌ನ್ನು ತಾವು ಸಸ್‌ಪೆಂಡ್ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ. ತಾವು ಚೆಕ್ ತೆಗೆಯುವುದಕ್ಕೆ ಆರ್ಡರ್ ಮಾಡಿದ ಅಧಿಕಾರಿಗಳಿಗೆ ಪ್ರಮೋಷನ್ ಮಾಡಿ ಇನ್ನೂ ಒಳ್ಳೆಯ ಜಾಗಕ್ಕೆ ಹಾಕಿಕೊಟ್ಟಿದ್ದೀರಿ. ಇಂತಹ ಅಧಿಕಾರಿಯಿಂದ ತಾವು ಅರಣ್ಯ ಸಂರಕ್ಷಣೆಯನ್ನು ಮತ್ತು ಪರಿಸರ ಸಂರಕ್ಷಣೆಯನ್ನು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಸ್ಪಷ್ಟವಾಗಿ ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾನು ಹಲವಾರು ವಿಚಾರಗಳನ್ನು ಹೇಳಬೇಕಾಗಿದೆ. ಮತ್ತೆ ಯಾರಾದರೂ ಒಬ್ಬರು ಒಳ್ಳೆ ಅಧಿಕಾರಿ ಇದ್ದರೆ ಅವನನ್ನು ಟ್ರಾನ್ಸ್‌ಫರ್ ಮಾಡಿಸುವುದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡುತ್ತಾರೆ. ಕೆಲವು ದಿನಗಳ ಹಿಂದೆ ಒಬ್ಬ ಒಳ್ಳೆ ರೇಂಜ್ ಆಫೀಸರ್ ಅರವಿಂದ ಹೆಗಡೆಯವರು ಕಳ್ಳ ಸಾಗಣಿಕೆ ಹಿಡಿಯುವುದಕ್ಕೆ ಹೋಗಿ ಸತ್ತೇ ಹೋದರು. ಒಬ್ಬ ಒಳ್ಳೆಯ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿಸುವುದಕ್ಕೆ ಕಳ್ಳಸಾಗಾಣಿಕೆದಾರರು ಮತ್ತು ಬೇರೆ ಬ್ಯಾರಿಯವರು ಚಂದಾ ವಸೂಲಿ ಮಾಡುತ್ತಾರೆ. ಈ ಚಂದಾ ಹಣವನ್ನು ಯಾರಿಗೆ ಕೊಡುತ್ತಾರೋ? ಎಲ್ಲಿಗೆ ಹೋಗುತ್ತದೋ ನನಗೆ ಗೊತ್ತಿಲ್ಲ. ಒಬ್ಬ ಒಳ್ಳೆಯ ಅಧಿಕಾರಿ ಬಂದ ಎಂದರೆ ಅವನನ್ನು ಅಲ್ಲಿ ಇರುವುದಕ್ಕೆ ಬಿಡುವುದಿಲ್ಲ. ಈ ವಿಷಯವನ್ನು ನಾನು ಮಂತ್ರಿಗಳ ಜೊತೆಯಲ್ಲೂ ಹೇಳಿದ್ದೇನೆ. ಅನೇಕ ಸಂದರ್ಭಗಳಲ್ಲಿ ಕಳ್ಳಸಾಗಾಣಿಕೆಯಲ್ಲಿ ನಾಟವನ್ನು ಸಾಗಿಸುತ್ತಿರುವಾಗ ಸಾರ್ವಜನಿಕರೇ ಕಳ್ಳಸಾಗಾಣಿಕೆದಾರರನ್ನು ಪೋಲೀಸಿನವರಿಗೆ ಹಿಡಿದುಕೊಟ್ಟಿದ್ದಾರೆ. ಸಾರ್ವಜನಿಕರು ಕಳ್ಳಸಾಗಣೆದಾರರನ್ನು ಹಿಡಿದುಕೊಟ್ಟಿದ್ದರೂ ಕೂಡ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ನಾಟವನ್ನು ಯಾವ ಲಾರಿಯಲ್ಲಿ ಸಾಗಿಸುತ್ತಿದ್ದರು ಎಂಬ ಬಗ್ಗೆ ಆ ಲಾರಿಯ ನಂಬರೆಲ್ಲ ಕೊಟ್ಟಿದ್ದರೂ ಕ್ರಮ ತೆಗೆದುಕೊಂಡಿಲ್ಲ ಎಂದರೆ ಹೇಗೆ? ನನ್ನ ಕ್ಷೇತ್ರದ ಆಯನೂರು ಎಂಬಲ್ಲಿ ಹೋದ ವರ್ಷ ಘಟನೆ ನಡೆಯಿತು. ಅವರ ಹೆಸರನ್ನೇ ನಾನು ಇಲ್ಲಿ ಹೇಳಿಬಿಡುತ್ತೇನೆ. ಬಿ.ಕೆ. ಸಿಂಗ್ ಎಂದು ಒಬ್ಬರು ಇದ್ದಾರೆ ಅವರು ಬೆಂಗಳೂರಿನಲ್ಲಿ ಕಟ್ಟಿಸತಕ್ಕಂಥ ಮನೆಗೆ ಸಾಗವಾನಿ ನಾಟವನ್ನು ಅಂದರೆ ಹಸಿ ನಾಟವನ್ನು ಕಳ್ಳಸಾಗಾಣಿಕೆಯಲ್ಲಿ ಸಾಗಿಸುತ್ತಿದ್ದಾಗ ಸಾರ್ವಜನಿಕರೇ ಹಿಡಿದುಕೊಟ್ಟಿದ್ದರು. ಇವರು ಅರಣ್ಯ ಇಲಾಖೆಯ ಅಧಿಕಾರಿಯೇ ಆಗಿದ್ದಾರೆ. ಯಾರು ಅರಣ್ಯವನ್ನು ರಕ್ಷಿಸಬೇಕೋ ಅವರೇ ಅರಣ್ಯವನ್ನು ಭಕ್ಷಿಸುವುದಕ್ಕೆ ಹೋದರೆ ಕಷ್ಟವಾಗುತ್ತದೆ. ಇವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಮತ್ತೆ ಅರಣ್ಯ ಇಲಾಖೆಯವರು ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ. ಇವರು ಎಲ್ಲಿ ಗಿಡಗಳನ್ನು ನಡೆಸುವುದಕ್ಕೆ ಹೋಗುತ್ತಾರೆಂದರೆ, ಯಾರು ಬಡ ರೈತರು ಬಗರ್‌ಹುಕುಂ ಸಾಗುವಳಿ ಮಾಡಿರುತ್ತಾರೋ ಅಂಥ ಜಮೀನುಗಳಲ್ಲಿ ಗಿಡಗಳನ್ನು ನೆಡುತ್ತಾರೆ. ರೈತರುಗಳು ಕಷ್ಟಪಟ್ಟು ಸಾಗುವಳಿ ಮಾಡಿರುವ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ನೆಟ್ಟರೆ ರೈತರುಗಳ ಗತಿ ಏನು? ಉದ್ಯೋಗ ಇಲ್ಲದೇ ಇರತಕ್ಕವರು ಸರ್ಕಾರದ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಜಾಗದಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದಾರೆ. ಮಾನ್ಯ ಅರಣ್ಯ ಸಚಿವರು ಕೂಡಲೇ ಒಂದು ಆದೇಶವನ್ನು ಹೊರಡಿಸಿ ಎಲ್ಲೆಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ರೈತರು ಮಾಡಿರುತ್ತಾರೋ ಅಂಥಾ ಜಾಗಗಳಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ನೆಡಬಾರದೆಂದು ತಿಳಿಸಬೇಕು. ಹೋದ ಸಾರಿ ಅರಣ್ಯ ಇಲಾಖೆಯ ಮಂತ್ರಿಯವರು ಮತ್ತು ಮುಖ್ಯ

ಮಂತ್ರಿಯವರು, ರಾಜ್ಯದಲ್ಲಿ ಎಲ್ಲೆಲ್ಲಿ ರೈತರುಗಳು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೋ ಅದನ್ನು ಪತ್ತೆ ಹಚ್ಚುವುದಕ್ಕೆ ಒಂದು ಸದನದ ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದರು. ಸಮಿತಿಯನ್ನು ಇನ್ನು ೮ ದಿನಗಳಲ್ಲಿ ಮಾಡುತ್ತೇವೆ, ೧೦ ದಿನಗಳಲ್ಲಿ ಮಾಡುತ್ತೇವೆ. ಅಸೆಂಬ್ಲಿ ಮುಗಿಯುವುದರೊಳಗೆ ಮಾಡುತ್ತೇವೆಂದು ಹೋದ ಸಲವೇ ಹೇಳಿದ್ದರು. ಇದುವರೆಗೆ ಸಮಿತಿಯನ್ನು ಏಕೆ ಮಾಡಲಿಲ್ಲ. ಸರ್ಕಾರವು ಹೇಳಿದಂತೆ ಸದನದ ಸಮಿತಿಯನ್ನು ಈ ಸಾರಿ ಮಾಡದೇ ಹೋದರೆ, ಈ ಅಧಿವೇಶನವನ್ನು ಮುಗಿಸಿಕೊಂಡು ನಮ್ಮ ಕ್ಷೇತ್ರಕ್ಕೆ ಹೋದಾಗ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ರೈತರು ಬಗರ್‌ಹುಕುಮ್ ಸಾಗುವಳಿ ಮಾಡಿರುತ್ತಾರೋ ಅಂಥ ಜಾಗಗಳಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಗಿಡಗಳನ್ನು ನೆಡುವುದಕ್ಕೆ ಬಂದರೆ ನಾವು ಪ್ರತಿಭಟನೆಯನ್ನು ಮಾಡಬೇಕಾಗುತ್ತದೆ. ಹೋರಾಟ ಮಾಡುವ ಕಾಲದಲ್ಲಿ ನಮ್ಮನ್ನು ಅರೆಸ್ಟ್ ಮಾಡಬಹುದು. ನಾವು ಪ್ರತಿಭಟನೆಯನ್ನು ಮಾಡುವಾಗ ಅಧಿಕಾರಿಗಳ ಜೀವವನ್ನು ನಾವೇ ತೆಗೆಯಬೇಕಾಗುತ್ತದೋ ಅಥವಾ ನಮ್ಮ ಜೀವವನ್ನು ಅವರು ತೆಗೆಯಬೇಕಾಗುತ್ತದೋ ಎಂಬುದು ಗೊತ್ತಾಗುವುದಿಲ್ಲ. ಪರಿಸ್ಥಿತಿ ಹೆಚ್ಚು ಕಡಿಮೆ ಆದಾಗ ಏನಾಗುತ್ತದೆ ಎಂದು ಈಗ ಹೇಳುವುದಕ್ಕಾಗುವುದಿಲ್ಲ. ಬಗರ್‌ಹುಕುಂ ಸಾಗುವಳಿಯು ಬರೀ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಆಗಿಲ್ಲ, ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ರೈತರುಗಳು ಬಗರ್‌ಹುಕುಂ ಸಾಗುವಳಿಯನ್ನು ಮಾಡಿದ್ದಾರೆ, ಆದುದರಿಂದ ಎಲ್ಲೆಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ಮಾಡಿದ್ದಾರೆ ಎಂಬುದನ್ನು ಪತ್ತೆ ಹಚ್ಚುವುದಕ್ಕೆ ತಕ್ಷಣ ಸದನದ ಸಮಿತಿಯನ್ನು ಮಾಡಬೇಕು. ಇಲ್ಲದೆ ಹೋದರೆ ಬಹಳ ತೊಂದರೆಯಾಗುತ್ತದೆ. ಈಗ ಮಳೆಗಾಲ ಪ್ರಾರಂಭವಾಗಿದೆ. ಮಳೆಗಾಲ ಪ್ರಾರಂಭವಾಗಿರುವುದರಿಂದ ಅರಣ್ಯ ಇಲಾಖೆಯವರು ಎಲ್ಲೆಲ್ಲಿ ಬಗರ್‌ಹುಕುಂ ಸಾಗುವಳಿಯಾಗಿದೆಯೋ ಅಲ್ಲೆಲ್ಲಾ ಗಿಡಗಳನ್ನು ನೆಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅವರು ಗಿಡ ನೆಡುವುದಕ್ಕೆ ತಡೆ ಹಾಕುವುದಕ್ಕೆ ನಾವು ಹೋಗಬೇಕಾಗುತ್ತದೆ. ಆದ್ದರಿಂದ ತಾವು ಕೂಡಲೇ ಒಂದು ಆದೇಶವನ್ನು ಹೊರಡಿಸಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಜಾಗದಲ್ಲಿ ಗಿಡಗಳನ್ನು ನೆಡಬಾರದೆಂದು ಅರಣ್ಯ ಇಲಾಖೆಯವರಿಗೆ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗಿಡಗಳನ್ನು ನೆಡಿ ಅದನ್ನು ನಾವು ಬೇಡ ಎನ್ನುವುದಿಲ್ಲ. ಎಲ್ಲಿ ಪಾಳು ಭೂಮಿ ಇವೆಯೋ ಅಂಥ ಕಡೆ ಗಿಡಗಳನ್ನು ನೆಟ್ಟರೆ ಯಾರಿಗೂ ತೊಂದರೆಯಾಗುವುದಿಲ್ಲ, ಅದು ಬಿಟ್ಟು ರೈತರು ಸಾಗುವಳಿ ಮಾಡಿರುವ ಜಮೀನಿನಲ್ಲಿ ಗಿಡಗಳನ್ನು ನೆಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ. ಆ ರೀತಿ ಅವಕಾಶ ಮಾಡಿಕೊಟ್ಟರೆ ಗೊಂದಲವುಂಟಾಗುತ್ತದೆ. ಗೊಂದಲಕ್ಕೆ ಅವಕಾಶ ಮಾಡಿಕೊಡಬಾರದೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತೆ ಕಾಡು ಪ್ರಾಣಿಗಳಿಂದ ಮನುಷ್ಯರನ್ನು ರಕ್ಷಣೆ ಮಾಡತಕ್ಕಂಥದ್ದು ಇದೆ. ಇವತ್ತು ಕಾಡುಪ್ರಾಣಿಗಳಿಂದ ಮನುಷ್ಯರಿಗೆ ರಕ್ಷಣೆ ಇಲ್ಲದಂತಾಗಿದೆ. ಇದರ ಬಗ್ಗೆ ನಾನು ೩೩ರ ನಿಯಮದ ಕೆಳಗೆ ಸಹಾ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ತರಿಸಿ ಕೊಡುತ್ತೇನೆಂದು ಹೇಳಿದ್ದರು. ಆದರೆ ಉತ್ತರ ಬರಲಿಲ್ಲ. ಯಾವ ೩೩ರ ವಿಷಯಕ್ಕೂ ಉತ್ತರವನ್ನು ತರಿಸಿಕೊಡುತ್ತೇನೆ. ತರಿಸಿಕೊಡುತ್ತೇನೆ ಎಂದು ಹೇಳುತ್ತಾರೆಯೇ ಹೊರತು ಉತ್ತರವನ್ನು ಮಾತ್ರ ತರಿಸಿಕೊಡುವುದಿಲ್ಲ. ಎಲ್ಲಾ ಖಾತೆಗೂ ಒಬ್ಬ ಮಂತ್ರಿಯವರೇ ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳುತ್ತಾರೆ. ಅವರು ಚಿತ್ರಗುಪ್ತರು, (ಶ್ರೀ ಲಕ್ಷ್ಮೀಸಾಗರ್‌ರವರನ್ನು ಉದ್ದೇಶಿಸಿ) ಆದರೆ ನಿಯಮ ೩೩ರ ಒಂದು ವಿಷಯಕ್ಕೂ ಉತ್ತರವನ್ನು ಇದುವರೆಗೂ ತರಿಸಿಕೊಟ್ಟಿಲ್ಲ. ನನ್ನ ಕ್ಷೇತ್ರದಲ್ಲಿ ಶೆಟ್ಟಿಹಳ್ಳಿ, ಪುರದಾಳ, ಗಾಡಿಕೊಪ್ಪ ಈ ಹಳ್ಳಿಗಳಲ್ಲಿ ಆನೆಗಳು ಮೂರು ಜನರನ್ನು ಕೊಂದುಹಾಕಿವೆ. ಇದರ ಬಗ್ಗೆ ನಾನು ಅಧಿಕಾರಿಗಳಲ್ಲಿ ವಿಚಾರ ಮಾಡಿದಾಗ

೩–೩೦ ಪಿ.ಎಂ.

ಅವನು ಕಳ್ಳ ನಾಟಾ ಸಾಗಾಣಿಕೆಗೆ ಹೋಗಿದ್ದ, ಆಗ ಅವನನ್ನು ಆನೆಯು ಕೊಂದು ಹಾಕಿತು ಎಂದು ಹೇಳಿದ್ದಾರೆ. ಇದು ಬಹಳ ದ್ರೋಹದ ಕೆಲಸ. ಇದು ಸತ್ಯಕ್ಕೆ ದೂರವಾದ ಸಂಗತಿಯೂ ಆಗಿದೆ. ಅದೇ ರೀತಿಯಲ್ಲಿ ಒಂದು ಮಗುವನ್ನು ಕೂಡ ಕೊಂದು ಹಾಕಿದೆ. ಹಾಗೆಯೇ ಒಬ್ಬ ಎಮ್ಮೆ ಕಾಯುತ್ತಿದ್ದವನನ್ನು ಕೊಂದು ಹಾಕಿದೆ. ಮತ್ತೊಬ್ಬ ಉರುವಲು ಕಟ್ಟಿಗೆ ತೆಗೆಯುತ್ತಿದ್ದವನನ್ನು ಕೊಂದು ಹಾಕಿದೆ. ಆ ಪ್ರದೇಶದ ಮಂಜರಿಕೊಪ್ಪ ಎಂಬಲ್ಲಿ ಎಲ್ಲಾ ಬೆಳೆಗಳನ್ನು ನಾಶ ಮಾಡಿದೆ ಕಬ್ಬು, ತೆಂಗು, ಮುಂತಾದ ಎಲ್ಲಾ ಫಸಲಿಗೂ ಹಾನಿ ಮಾಡಿದೆ. ನಿಮಗೆ ಉಣಕಲ್‌ಬಡಿಕೆ ವಿಚಾರ ಗೊತ್ತಿದೆ. ಹೀಗೆ ಉಣಕಲ್ ಬಡಿಕೆಯನ್ನು ಬಿಸಾಡಿದ್ದಕ್ಕೆ ಒಮ್ಮೆಗೆ ಮೂರು ನಾಯಿಗಳು ಸತ್ತು ಹೋಗಿವೆ

ಹೀಗಾದರೆ ಅಲ್ಲಿಯ ಜನರು ಬದುಕುವುದಾದರೂ ಹೇಗೆ ? ಮಾನ್ಯ ಮಂತ್ರಿಯವರು ಸದನದಲ್ಲಿ ಈ ವಿಚಾರದ ಬಗ್ಗೆ ಹೇಳುತ್ತಾ, ಆನೆಗಳು ಒಳಗಡೆ ಬಾರದಿದ್ದ ಹಾಗೆ ಟ್ರೆಂಚನ್ನು ಹಾಕುವಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆ ಒಂದು ಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂದು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ.

ಇನ್ನು ನಮ್ಮ ಭಾಗದಲ್ಲಿ ಪ್ರಾಣಿಗಳು ಇದ್ದಾವೆ. ಈ ಪ್ರಾಣಿಗಳನ್ನು ಅಲ್ಲಿಯ ಜನರು ಶಿಕಾರಿ ಮಾಡಿ ತಿನ್ನುವುದಕ್ಕಿಂತಲ್ಲೂ ಹೆಚ್ಚಿಗೆ ಇಲಾಖೆಯ ಅಧಿಕಾರಿಗಳು ಕೊಂದು ತಿನ್ನುತ್ತಿದ್ದಾರೆ. ಅಧಿಕಾರಿಗಳು ಕಾಡಿನಲ್ಲಿರತಕ್ಕಂಥ ಬಂಗಲೆಯಲ್ಲಿ ಕುಳಿತುಕೊಂಡು ತಮಗೆ ಬೇಕಾದ ಪ್ರಾಣಿಗಳನ್ನು ಕೊಂದು ತಿನ್ನುವುದಲ್ಲದೇ ಇತರರಿಗೂ ಹಂಚುತ್ತಿದ್ದಾರೆ. ನಿಮ್ಮ ಅಧಿಕಾರಿಗಳು, ಯಾವನಾದರೂ ರೈತನು ತನ್ನ ಗದ್ದೆಗಳಿಗೆ ಬಂದ ಕಾಡು ಹಂದಿಯನ್ನು ಕೊಂದರೆ, ಅವನ ಮೇಲೆ ಕೇಸ್ ಹಾಕಿ ಅವನ ಬಂದೂಕನ್ನು ಕಸಿದುಕೊಂಡು ಹೋಗುತ್ತಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳು ಮಾಡುವ ಅನ್ಯಾಯವನ್ನು ಯಾರೂ ಹೇಳುವ ಹಾಗಿಲ್ಲದಾಗಿದೆ. ಅಲ್ಲಿಯ ನೈಮುದ್ದೀನ್ ಎಂಬ ಆರ್. ಎಫ್. ಓ.ಒಬ್ಬರು ತಾನು ಮತ್ತು ತನ್ನವರು ಕಾಡುಕೋಣಗಳನ್ನು ಕೊಂದ ಮಾಂಸವನ್ನು ತಿಂದು ಹಾಕುವುದಲ್ಲದೆ ಗುಲ್ಬರ್ಗಕ್ಕೆ ಪಾರ್ಸಲ್ ಮಾಡುತ್ತಿರುತ್ತಾನೆ. ನನ್ನ ಹತ್ತಿರ ಮೊನ್ನೆ ಒಂದು ನಿಯೋಗ ಬಂದಿತ್ತು. ಶಿವಮೊಗ್ಗ ಜಿಲ್ಲೆಯಲ್ಲಿ ಅರಸಾಳು ಎಂಬಲ್ಲಿ ಒಂದು ರೇಂಜ್ ಫಾರೆಸ್ಟ್ ಆಫೀಸ್ ಇದೆ. ಅಲ್ಲಿ ನಿಮ್ಮ ಜನತಾ ಸರಕಾರದವರು ಮಾಡಿಲ್ಲವಾದ ಒಂದು ಒಳ್ಳೆಯ ಸಾಗುವಾನಿ ಪ್ಲಾಂಟೇಷನ್ ಬಹಳ ಹಿಂದಿನ ಕಾಲದಿಂದಲೂ ಇದೆ. ಅದನ್ನು ಅಧಿಕಾರಿಗಳು ಕಡಿದು, ಅನಂತರ ಅದನ್ನು ಬೇರೆಯವರು ಕಡಿದಿದ್ದಾರೆ ಎಂದು ಸೀಲ್ ಮಾಡಿ ಒಂದು ಪ್ರಕರಣವನ್ನು ಸೃಷ್ಟಿಸಿ ಬೇರೆಯವರಿಗೆ ಕೊಟ್ಟಿದ್ದಾರೆ. ಊರಿನವರು ಏನಾದರೂ ಹೆಚ್ಚಿಗೆ ಮಾತನಾಡಿದರೆ, ಅಥವಾ ದೂರು ಕೊಟ್ಟರೆ ಆರೀತಿ ದೂರು ಕೊಟ್ಟಂಥವರ ಮೇಲೆ ಕೇಸ್ ಹಾಕಿ ಹೆದರಿಕೆ ಹುಟ್ಟಿಸುತ್ತಿದ್ದಾರೆ. ಇದು ಆ ಭಾಗದಲ್ಲಿ ನಡೆಯುತ್ತಾ ಇದೆ. ಈ ಬಗ್ಗೆ ಅಲ್ಲಿಯವರು ಈಗಾಗಲೇ ಡಿ.ಎಫ್.ಓ ರವರಿಗೆ ದೂರನ್ನು ಕೊಟ್ಟಿದ್ದಾರೆ. ಸಿ.ಎಫ್. ರವರಿಗೆ ದೂರು ಕೊಟ್ಟಿದ್ದಾರೆ. ಸ್ಪೆಷಲ್ ಸ್ಕ್ವಾಡ್‌ನವರಿಗೆ ನಾನೇ ಒಂದು ದೂರನ್ನು ಬರೆದುಕೊಟ್ಟು ಒಬ್ಬರ ಮೂಲಕ ಕಳುಹಿಸಿ ಕೊಟ್ಟಿದ್ದೆನು. ಅವನಿಗೆ ಅಧಿಕಾರಿಗಳು ಹೆದರಿಸಿ, ಯಾರೋ ಒಬ್ಬ ಎಂ. ಎಲ್. ಎ. ಕೊಟ್ಟ ಕಾಗದವನ್ನು ನಮಗೆ ತಂದು ಕೊಡುತ್ತಿದ್ದಾನೆ ಎಂದು ಬೈದು ಕಳುಹಿಸಿಕೊಟ್ಟಿದ್ದಾರೆ. ಇಂತಹ ಒಂದು ಪರಿಸ್ಥಿತಿಯು ನಮ್ಮ ಭಾಗದಲ್ಲಿ ನಡೆಯುತ್ತಾ ಇದೆ. ಇದನ್ನೆಲ್ಲಾ ನೋಡಿದರೆ ಈ ಅಧಿಕಾರಿಗಳಿಂದ ಈ ಅರಣ್ಯ ಭೂಮಿಯನ್ನು, ಅರಣ್ಯವನ್ನು ಉಳಿಸುವುದಕ್ಕೆ ಆಗುವುದಿಲ್ಲ ಎಂದು ಕಾಣುತ್ತದೆ. ಅದರ ಬದಲಾಗಿ ಜನರಿಗೆ ಆ ಭೂಮಿಯನ್ನು ಕೊಟ್ಟು ಇದು ನಿಮ್ಮ ಭೂಮಿ, ಕಾಡನ್ನು ನೀವೇ ಕಾಪಾಡಿಕೊಂಡು ಹೋಗಿ, ಅದಕ್ಕಾಗಿ ನಿಮಗೆ ಹೆಸರು ಕೊಡುತ್ತೇವೆ, ಬಹುಮಾನ ಕೊಡುತ್ತೇವೆ ಎಂದರೆ ಬಹುಶಃ ಅವರೇ ಅದನ್ನು ಕಾಯ್ದುಕೊಂಡು ಹೋಗುತ್ತಾರೆ. ಅಂದರೆ ಈ ಬಗ್ಗೆ ಜನರಿಗೆ ಇರತಕ್ಕಂಥ ಕಾಳಜಿ ನಿಮ್ಮ ಅಧಿಕಾರಿಗಳಿಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳ ಬೇಕಾಗಿದೆ. ಈ ಅಧಿಕಾರಿಗಳು ತಮ್ಮ ಸ್ವಂತಕ್ಕೆ ಬೇಕಾದರೆ ಬೇಕಾದಷ್ಟು ಮರಮುಟ್ಟುಗಳನ್ನು ಕಡಿದು ಉಪಯೋಗವನ್ನು ಮಾಡಿಕೊಳ್ಳುವುದರಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಅದರ ಬಗ್ಗೆ ಒಂದು ಸರ್ವೆ ಬೇಕಾದರೂ ಮಾಡೋಣ. ನಮ್ಮ ಕಡೆಯಿಂದ ಮತ್ತು ನಿಮ್ಮ ಕಡೆಯಿಂದ ಶಾಸಕರನ್ನು ಹಾಕಿ ಒಂದು ಸಮಿತಿಯನ್ನು ಮಾಡೋಣ. ಎರಡೂ ಕಡೆಯ ಶಾಸಕರು ಇದ್ದರೆ ಯಾವುದೇ ಲೋಪದೋಷಗಳನ್ನು ಮುಚ್ಚುವುದಕ್ಕಾಗುವುದಿಲ್ಲ. ಆ ಸಮಿತಿಯ ಮೂಲಕ ಬೆಂಗಳೂರು ಮತ್ತು ಇತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕಂಥ ದೊಡ್ಡ ದೊಡ್ಡ ಕಟ್ಟಡಗಳು, ಬಂಗಲೆಗಳನ್ನು ವೀಕ್ಷಣೆ ಮಾಡೋಣ. ಇದು ಯಾವ ಯಾವ ಅರಣ್ಯ ಅಧಿಕಾರಿಗಳಿಗೆ ಸೇರಿದೆ ಎಂದು ತಿಳಿದುಕೊಳ್ಳಬಹುದು. ಆ ಮೂಲಕ ಅವರು ಉಪಯೋಗಿಸಿದ ಮರದ ಅಂದಾಜನ್ನು ಗೊತ್ತು ಮಾಡಿಕೊಳ್ಳ ಬಹುದಾಗಿದೆ. ಈ ಜಂಟಿ ಸರ್ವೆ ಮೂಲಕ ಪತ್ತೆ ಹಚ್ಚುವ ಕಾರ್ಯವನ್ನು ಮಾಡಬಹುದು. ಇದನ್ನೆಲ್ಲಾ ನೋಡಿದರೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅರಣ್ಯವನ್ನು ಲೂಟಿ ಮಾಡಲು ಸರಕಾರದವರು ಪರವಾನಿಗೆಯನ್ನು ಕೊಟ್ಟಿದ್ದಾರೋ ಏನೋ ಎನ್ನುವ ಭಾವನೆಯು ಜನರಲ್ಲಿ ಬರುತ್ತದೆ. ಇಂತಹ ಒಂದು ಅವ್ಯವಸ್ಥೆಯನ್ನು ಕೂಡಲೇ ನಿಲ್ಲಿಸದಿದ್ದಲ್ಲಿ ಖಂಡಿತಾ ಅರಣ್ಯವನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೆಚ್ಚು ಒತ್ತಾಯ ಮಾಡಿ ಹೇಳಬೇಕಾಗುತ್ತದೆ.

ಇನ್ನು ಹಳ್ಳಿಗಾಡು ಪ್ರದೇಶಗಳಲ್ಲಿನ ಜನರಿಗೆ ಕಟ್ಟಿಗೆಯು ಸಿಕ್ಕುವುದಿಲ್ಲ. ಇವರು ಕೊಡುವ ಕಟ್ಟಿಗೆಗೆ ಒಂದೊಂದು ಊರಿನಲ್ಲಿ ಒಂದೊಂದು ರೇಟ್‌ನ್ನು ಇಟ್ಟಿದ್ದಾರೆ. ಈ ರೇಟ್‌ನಲ್ಲಿ ೫೦ ಪೈಸೆಗಳಷ್ಟು ವ್ಯತ್ಯಾಸ ಇದ್ದರೆ ಸುಧಾರಿಸಬಹುದು. ಆದರೆ ಅದು ಹಾಗಿಲ್ಲ, ಹೊಸನಗರದಲ್ಲಿ ಒಂದು ರೇಟ್, ತೀರ್ಥಹಳ್ಳಿಯಲ್ಲಿ ಒಂದು ರೇಟ್. ಸಾಗರದಲ್ಲಿ ಒಂದು ರೇಟ್ ಹೀಗೆ ಬೇರೆಬೇರೆ ರೇಟ್‌ಗಳು ಇವೆ. ಕೆಲವು ಕಡೆಗಳಲ್ಲಿ ಕಟ್ಟಿಗೆಯೇ ಇಲ್ಲ. ಮೊನ್ನೆ ನಮ್ಮ ಊರಿನವರು ಒಂದು ನಿಯೋಗ ಬಂದಿದ್ದರು. ನಮ್ಮ ಹೊಳಲೂರಿನಲ್ಲಿ ಒಂದು ಓ.ಬಿ.ಸಿ. ಹಾಸ್ಟೆಲ್ ಇದೆ. ಇಲ್ಲಿ ಕಟ್ಟಿಗೆ ಇಲ್ಲದೆ ಹುಡುಗರಿಗೆ ಎರಡು ದಿವಸ ಊಟವೇ ಸಿಗಲಿಲ್ಲ ಕಾರಣ ಕೇಳಿದಾಗ, ಸಂಬಂಧಪಟ್ಟವರು ತೀರ್ಥಹಳ್ಳಿಯಲ್ಲಿ ರೈತಸಂಘದವರು ತಡೆ ಹಿಡಿದ್ದರಿಂದ ಹೀಗಾಯ್ತು ಎಂದು ಸಮಜಾಯಿಸಿ ಮಾಡಿದರು ಆ ಹಾಸ್ಟೆಲ್‌ನಲ್ಲಿ ಮಕ್ಕಳಿಗೆ ಕಟ್ಟಿಗೆ ಇಲ್ಲದೆ ಊಟವೇ ಇಲ್ಲದ ಪರಿಸ್ಥಿತಿ ಉಂಟಾಗುವಂತಾಯಿತು. ಆದ್ದರಿಂದ ಆ ಹಾಸ್ಟೆಲ್‌ಗೆ ಕಟ್ಟಿಗೆಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಕಟ್ಟಿಗೆಯನ್ನು ಉಳಿಸುವ ದೃಷ್ಟಿಯಿಂದ ಮಲೆನಾಡಿನ ಕಡೆ ಗೋಬರ್ ಗ್ಯಾಸ್ ಯಂತ್ರಕ್ಕೆ ಸಬ್ಸಿಡಿ ಏನಿದೆ ಅದನ್ನು ಜಾಸ್ತಿ ಮಾಡಬೇಕು. ಆಗ ಜನ ಕಟ್ಟಿಗೆಯನ್ನು ಕಡಿಮೆ ಬಳಸುತ್ತಾರೆ, ಪರಿಸರವೂ ಉಳಿಯುತ್ತದೆ. ಈ ಗೋಬರ್ ಗ್ಯಾಸ್‌ಗೆ ಕೇಂದ್ರ ನೀಡುತ್ತಿರುವ ಸಬ್ಸಿಡಿ ಬಗ್ಗೆ ನನಗೆ ಬಂದಿರುವ ವರದಿ ಪ್ರಕಾರ ಆ ಸಬ್ಸಿಡಿಯನ್ನು ರಾಜ್ಯ ಸರ್ಕಾರದಲ್ಲಿ ಬಿಡುಗಡೆ ಮಾಡದಿರುವುದರಿಂದ ಬ್ಯಾಂಕಿನಲ್ಲಿ ಸಾಲಗಳ ಮೇಲೆ ಬಡ್ಡಿ ಪ್ರಮಾಣ ಅದಕ್ಕಿಂತ ಜಾಸ್ತಿಯಾದ್ದರಿಂದ ನಮ್ಮ ಶಿವಮೊಗ್ಗ, ಸಾಗರ, ತೀರ್ಥಹಳ್ಳಿ ಕಡೆ ರೈತರು ಒಂದು ಮೆರವಣಿಗೆ ಮಾಡಿದರು. ಮೊದಲು ಮಾಡುವಾಗ ೬೫ ಪರ್ಸೆಂಟ್ ಸಬ್ಸಿಡಿ ಬರುತ್ತದೆಂದು ಎಲ್ಲ ಮಾಡಿದರು. ಇದು ಒಳ್ಳೆಯ ಕೆಲಸ ದೇಶಕ್ಕೂ ಇದರಿಂದ ಉಪಯೋಗವಾಗುತ್ತದೆಂದು ಮಾಡಿದರು. ಒಂದೊಂದು ಬ್ಯಾಂಕಿನಲ್ಲಿ ನೂರಾರು ಜನ ಗೋಬರ್‌ಗ್ಯಾಸ್ ಲೋನ್ ತೆಗೆದುಕೊಂಡರು. ಆದರೆ ಇನ್ನೂ ಸಬ್ಸಿಡಿ ಬಂದಿಲ್ಲ. ಅದನ್ನು ಬೇಗ ಕೊಡಿಸುವ ವ್ಯವಸ್ಥೆ ಮಾಡಬೇಕು, ಪರಿಸರ ಕಾಪಾಡುವ ಹಿನ್ನೆಲೆಯಲ್ಲಿ ಇದು ಅತ್ಯವಶ್ಯ. ಈ ಇಲಾಖೆ ಮೇಲೆ ಜಾಸ್ತಿ ಮಾತನಾಡಬೇಕೆಂದು ಅಂದುಕೊಂಡರೂ ಒಟ್ಟಿನಲ್ಲಿ ಅಧಿಕಾರಿಗಳನ್ನು ಸರಿ ಮಾಡಿದರೆ ಎಲ್ಲಾ ಸರಿಹೋಗುತ್ತದೆ. ಹಣವನ್ನು ವಿವೇಚನೆಯಿಂದ ಖರ್ಚು ಮಾಡಬೇಕು. ಅನೇಕ ನರ್ಸರಿಗಳಲ್ಲಿ ಬರೀ ಸುಳ್ಳು ಲೆಕ್ಕ ಬರೆಯುತ್ತಾರೆ. ೫ ಲಕ್ಷ ಸಸಿಗಳನ್ನು ವಿತರಣೆ ಮಾಡಲಾಯಿತು. ೧೦ ಲಕ್ಷ ಸಸಿಗಳನ್ನು ವಿತರಣೆ ಮಾಡಲಾಯಿತು ಎನ್ನುತ್ತಾರೆ, ಆದರೆ ಯಾರೂ ಲೆಕ್ಕ ಮಾಡಿದವರಿಲ್ಲ. ಲೆಕ್ಕ ಇಲ್ಲ ಜಮಾ ಇಲ್ಲ, ಬರೀ ಸುಳ್ಳು ಲೆಕ್ಕ. ಆದ್ದರಿಂದ ದುಡ್ಡನ್ನು ಉಳಿಸುವುದಕ್ಕಾಗಿ ಅಧಿಕಾರಿಗಳ ಮೇಲೆ ಒಂದು ಕಣ್ಣು ಇಡಬೇಕಾಗುತ್ತದೆ, ಇಲ್ಲದಿದ್ದರೆ ಅವರು ಸುಳ್ಳು ಲೆಕ್ಕ ಬರೆಯುತ್ತಾರೆ. ನಮ್ಮ ಕಡೆ ಕಾಡು ಬೆಳೆಸುವುದಕ್ಕಾಗಿ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಅವರಿಗೆ ಗೊಬ್ಬರ ಕೊಡುತ್ತಾರೆ, ಆದರೆ ಅದೆಲ್ಲ ರೈತರ ಮನೆಗೆ ಮಾರಾಟವಾಗುತ್ತಿದೆ, ವಿಜಯಾ, ಕಿಸಾನ, ಯೂರಿಯಾ ಎಲ್ಲ ಶ್ರೀಮಂತರ ಮನೆಗೆ ಹೋಗಿದೆ ಬಹಳಷ್ಟನ್ನು ಅರ್ಧ ರೇಟಿಗೆ ಕೊಟ್ಟಿದಾರೆ. ಇಲಾಖೆಯವರು ಬುಲ್‌ಡೋಜರ್ ಇದೆ ಅದಕ್ಕೆ ಉಪಯೋಗಿಸಲು ಪೀಪಾಯಿಗಟ್ಟಲೆ ಡೀಸೆಲ್ ಕೊಟ್ಟರೆ ಅಧಿಕಾರಿಗಳು ಅದನ್ನು ಮೋಸ ಮಾಡಿ ಮಾರುತ್ತಿದ್ದಾರೆ. ನಮ್ಮ ಭಾಗದ ರೈತರೆಲ್ಲ ಇದನ್ನು ಉಪಯೋಗಿಸುತ್ತಿದ್ದಾರೆ. ನನ್ನನ್ನೇ ಕೊಂಡುಕೊಳ್ಳಲು ಕೇಳುವುದಕ್ಕೆ ಬಂದಿದ್ದರು. ಬ್ಯಾರೆಲ್‌ಗಟ್ಟಲೆ ಡೀಸೆಲ್ ಇದೆ, ಗೊಬ್ಬರ ಇದೆ, ಬೇಕಾ ಎಂದಿದ್ದರು, ಬಹುಶಃ ನಾನು ಬೇಡ ಎನ್ನುತ್ತೇನೆ ಎಂದು ಅವರಿಗೆ ಗೊತ್ತಿರಲಿಲ್ಲ. ನಾನು ಬೇಡ ಎಂದೆ. ಹೀಗೆ ಗೊಬ್ಬರ, ಡೀಸೆಲ್ ದುರುಪಯೋಗವಾಗುತ್ತಿದೆ. ಬುಲ್‌ಡೋಜರ್ ಕೂಡ ಅಲ್ಲಿನ ರೈತರ ಜಮೀನುಗಳನ್ನು ಪಾಟ್ಟು ಮಾಡುತ್ತಿದೆ. ಮತ್ತೆ ಗಿಡ ನೆಡುವುದಕ್ಕೆ ಒಂದು ಗುಣಿಗೆ ಇಷ್ಟು ೧೦ ಗುಣಿಗೆ ಇಷ್ಟು ಎಂತ ಲೆಕ್ಕ ಇದ್ದರೆ, ಒಂದು ತೋಡಿ ೧೦ರ ಲೆಕ್ಕ ತೋರಿಸುತ್ತಿದ್ದಾರೆ. ಇದನ್ನೆಲ್ಲ ಸಮಗ್ರವಾಗಿ ತನಿಖೆ ಮಾಡಿಸದಿದ್ದರೆ, ಪ್ರಾಮಾಣಿಕ ಕಾಳಜಿ ತೋರದಿದ್ದರೆ ಆಗುವುದಿಲ್ಲ, ಪರಿಸರವನ್ನು ಉಳಿಸುವುದಕ್ಕಾಗುವುದಿಲ್ಲ. ಮತ್ತೆ ಸುಮ್ಮನೆ ಭಾಷಣ ಮಾಡಿ. ಇಲ್ಲೊಂದಿಷ್ಟು ತೂರಿದು ಸಮಯ ಕಳೆದು ಹೋಗುತ್ತಿದ್ದೇವೆಯೇ ಹೊರತು ಏನೂ ರಿಪೇರಿ ಆಗುತ್ತಿಲ್ಲ. ಈ ದುರ್ವ್ಯವಹಾರಗಳನ್ನೆಲ್ಲಾ ನಿಲ್ಲಿಸುವುದಾದರೆ ಮಾತ್ರ ದಿನಾದರೂ ಒಳ್ಳೆಯದಾಗಲು ಸಾಧ್ಯ. ಇಲ್ಲದೇ ಹೋದರೆ, ಈ ಕಾಡನ್ನು ಉಳಿಸುವುದಕ್ಕಾಗುವುದಿಲ್ಲ, ಬೆಳೆಸುವುದಕ್ಕಾಗುವುದಿಲ್ಲ, ಮತ್ತೆ ಬರಗಾಲಕ್ಕೆ ತುತ್ತಾಗುತ್ತೇವೆ. ಗಿಡ ಬೆಳೆಸತಕ್ಕಂತಹ ಸಂದರ್ಭದಲ್ಲಿ ನೀಲಗಿರಿ ಮರವನ್ನು ಬೆಳೆಸಬಾರದು ಅದು ಸರಿಯಲ್ಲ ಮತ್ತು ಹವಾಮಾನವನ್ನು ಅದು ಹಾಳು ಮಾಡುತ್ತದೆ. ಇದರ ಬಗ್ಗೆ ಇಲ್ಲಿ ಮತ್ತು ಬೇರೆ ಕಡೆಯಲ್ಲಿ ಕೂಡ ಚರ್ಚೆಯಾಗಿದೆ. ನೀಲಗಿರಿಯನ್ನು ಬಿಟ್ಟು ಬೇರೆ ಮರಗಳನ್ನು ಬೆಳೆಸಬೇಕು.

ಇನ್ನೊಂದು ವಿಚಾರ ವೇನೆಂದರೆ, ಕಟ್ಟಿಗೆಗೆ ಬಹಳ ಕಡಿಮೆ ಬೆಲೆ ಇದೆ, ಗಿಡ ನೆಟ್ಟು ಪ್ಲಾಂಟೇಷನ್ನು ಮಾಡಿ ಸಾಕಿ ಸಲಹಿ ಅದಕ್ಕೋಸ್ಕರವೇ ಬೆಳೆಸಿರುತ್ತಾರೆ. ಅಂತಹ ನೀಲಗಿರಿಯನ್ನು ಫ್ಯಾಕ್ಟರಿಗೆ ಪಲ್ಪ್ ಮಾಡುವುದಕ್ಕಾಗಿ ಕಟ್ಟಿಗೆಗಿಂತ ಕಡಿಮೆ ರೇಟಿನಲ್ಲಿ ಕೊಡತಕ್ಕಂಥದು ಸರಿಯಲ್ಲ. ಬೆಲೆಯನ್ನು ಜಾಸ್ತಿ ಮಾಡಬೇಕು. ನಿಗದಿಯಾದ ಮಾರುಕಟ್ಟೆ ಮತ್ತು ಸರಿಯಾದಂಥಹ ಬೆಲೆ ಸಿಕ್ಕದೇ ಹೋದರೆ ಈ ರಾಜ್ಯದ ಬೊಕ್ಕಸಕ್ಕೆ ಲುಕ್ಸಾನಾಗುತ್ತದೆ. ಹಣಕಾಸಿನ ಪರಿಸ್ಥಿತಿ ಕೂಡ ಕೆಟ್ಟು ಹೋಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತಾ, ಅಧಿಕಾರಿಗಳು ಸತ್ಯವಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡಿ ಕಾಡನ್ನು ಬೆಳೆಸಿ ಕಾಡಿನಲ್ಲಿರತಕ್ಕಂತಹ ಪ್ರಾಣಿಗಳನ್ನು ಮತ್ತು ಜನಗಳನ್ನು ಉಳಿಸದೇ ಹೋದರೆ ಬಹಳ ದೊಡ್ಡ ತಪ್ಪಾಗುತ್ತದೆ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಒತ್ತಾಯಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI J. A. FERNANDEZ (Nominated).—Mr. Speaker Sir, in supporting demand Nos. 12 and 15 – Higher Education and Primary Education respectively. I would like to make a few points. To begin with the Zilla Parishads and the Government control of the educational administration there appears to be a kind of dichotomy here because, it is not very clear who actually controls the Primary and Secondary education in the State. The conflict is there between the administration and the Government on the jurisdiction of the Zilla Parishads as to who really has the powers to administer these institutions. The powers of transfer and appointment are to be clearly spelt out. I have no doubt that the Government will apply its mind to see that there will be no overlapping on the one hand and no conflict on the other.

In the administration of the department, I think, a considerable degree of decentralisation is necessary. There are too many offices situated in Bangalore. As our State has a large territory to cover it is impossible for institutions or managements to visit Bangalore frequently to get their jobs done. Very often I have seen some of our friends from Gulbarga, Bidar and other distant places waiting in Bangalore to meet the officers or the ministers concerned. I think a lot of valuable time is lost in the process.

Coming back again to the administration, I think there must be a process of decentralisation. The decentralisation process could be based on the Revenue Divisions and autonomous Directorotes can be established in the five divisions that are operating in Karnataka State. Each may be kept under the control of a Director of Public Instruction and on the other hand, necessary staff can be transferred to take care of the requirements in the education sector.

Similarly, promotional avenues and responsibilities too can be decentralised. This will obviously remove a certain degree of stagnation and frustration which have crept into the department as a result of centralisation. It should also make for improvement in and the efficient administration of the department. It is unfortunate

that today over 29 lakh children in the age group of 5 to 15 years have never seen the inside of a school. If we continue in the manner as we are at present, how is it possible for us to take care of our rural brothers and sisters ?

This subject has been brought up many times and discussed in the House, but improvement of the schools appears to be something which is beyond the capacity of our Government for the time being. Many of the schools in rural areas are ill-equipped. Many are there just in name They have no teachers, no buildings and even if there are buildings they are in a dilapidated condition with no proper sanitation. There are no playgrounds, no visual aids and audio systems. how can we bring up our education system in rural Karnataka unless something concrete is really done, unless some positive steps are taken ? Perhaps, each Zilla Parishad could apply itself to this task to ensure that they fulfill some part of our educational objectives.

In the sphere of administration again I would think that many of our education officers are not sufficiently mobile. Even at the taluk level they are not provided with proper means of conveyance. They are unable to visit various institutions thereby standards have dropped. I think adequate opportunity and loans should be given to such officers to purchase their own vehicles and the Government should reimburse the mileage so that they can effectively cover more territories.

Another point that comes to my mind is the travel concession offered by KSRTC. It has been a great boon to the students in Karnataka State. Put as you may have seen in today's papers many of the students themselves have to go to the KSRTC counters to get these travel passes. I think that both the Hon. Ministers for Education and Transport should get together and insist on the management of the schools and other institutions to take the responsibility of issuing these passes to the students. I would not think it is too much additional burden on them. If the schools accept the responsibility I am sure passes can be issued in the class-room itself. This will obviate lot of time wasted on the part of the students standing near the counters of the KSRTC. in long queues, just to get their bus passes.

Another interesting point is that, many institutions, in Bangalore particularly, go by "Christian" names. I have nothing against this practice as we are secular state, but they tend to give a bad name in some respects because, everybody knows Christian institutions play a leading role, if not a pioneering role, in the

education system of this country in general and Karnataka State in particular. Therefore, misleading names can create problems. So I would request the Hon'ble Minister concerned to ensure that if an institution wishes to call itself by a Christian name it should maintain its true Christain character, I have seen so many schools being derecognised with many Christian names. All these institutions are *not* run by Christian organisations They bring us a bad name. I think some legislation is necessary or restrictions can be imposed upon the registration of societies who claim Christian names but don't have the Christian character or whatever. I just wish to quote from the judgment of the Andhra Pradesh High Court, where it is clearly mentioned that there has to be some nexus between the management of the institution and the comunity it serves whether religious or linguistic.

It would therefore be not out of the way for our Government to insist upon any society that has registered itself as also societies already registered with Christian names, to remove the Christian name from that institution so long as the character of that institution doesn't have any direct relationship to the Christian community.

I also wish to bring to your notice that there is a lot of talk today that Christian institutions are accepting donations from the public. This is possibly one of the reasons why a bad name comes to us for no fault of ours because, as far as I know, Christian schools run in the State by Christian Churches do not take donations. Here I may refer to the Supreme Court Judgment, In Frank Anthony Public School Employees Association Vs Union of India and others, the court has clearly mentioned that "funds of the institutions should be spent for the purposes of education or for the betterment of education, not for extraneous purposes. Regulations may also contain provisions to prevent the diversion of funds of these institutions into pockets of those in charge of the management or their embezzlement in any other manner ;

This is the judgment which is applicable to minority institutions. Since every institution in this State must be a registered society, I have no doubt our Government can ensure that the funds generated by these institutions will be used exclusively for the purpose of development of education and not transfer them either out of the State or use them for other purposes. This will help to clear any doubt that may be in the minds of the public in regard to the activities of the Christian institutions.

In regard to English medium schools in the State there is a vast gap between the harsh reality and what the Government is trying to practise. Pardon me for saying so. There should be a clear cut policy on this very vital matter for the progress of our citizens. Many English medium schools which are sanctioned or recognised have classes only up to the 7th standard. From the 8th standard onwards there is limbo Where are the students who have passed the 7th standard to go ? There is a tremendous demand for English medium schools from the 8th standard and students passing the 7th standard are not getting admitted into these schoo's because of tremendous pressure on the existing institutions. In every English medium school for every seat the demand is in the ratio of 100/1 and the teacher pupil average ratio is 65/70. How can any school accommodate the students who have passed the 7th standard ? It not only applies to Government examination (schools or aided schools, but also to other English medium schools Some of the students are asked to move to SSLC pattern as the school management feels they are not fit enough to complete the ICSE syllabus successfully.) I am not very sure whether our Government or our Education Minister has made a comparative study of the syllabus of the CBSE, ICSE and SSLC. But we made a study on that. There is not much difference. Therefore, if it is possible, I think the Government should insist on modification curriculum and syllabus of the ICSE and CBSE to suit the students of Karnataka State and make them sufficiently eligible for college courses without going for "elitist" educrtion as run by some private organisations. This will help to reduce the drop-out level at the 7th standard which is a dangerous period in t he life of a student.

At that level if he is unable to go beyond, his whole career is frustrated.

Mr. Speaker Sir, we are in a democracy. I can tell you every day legislators. Hon. Ministers and Government Officers are issuing letters to various English medium recognised schools requesting for seats in their schools. Many of their Children are also studying in these English medium schools. Then why should we have an ostrich-like attitude towards English medium schools ? Don't you think a time has come when we need to develop our children and bring them up to the extent we can and open up the frontiers of higher learning capabilities ? Otherwise, you will be stultifying their growth. How can there be progress ? We cannot confine ourselves only to Karnataka State. We have to move out. We have to learn and we have to progress. Nobody can expect to confine himself in a water-

tight compartment especially in the field of education. I therefore. appeal to the Government and the Hon'ble Minister to be a little more generous towards English medium schools as this is one of the means by which our students can really progress and go beyond the confines of Karnataka State.

In the field of administration again, I would think it is necessary for our administrators to lay down what is known as Management by Objectives. What should be the average performance standards in education and what should be their special tasks? All these factors should be evaluated properly and should be mentioned in the confidential reports of the Officers. As we see it today, we have another problem, i.e. tremendous decline in our education standards. The dedication of our earlier educationists appears to be totally lacking in today's atmosphere.

We have also another difficulty in regard to my own community. Because of our mother tongue being English many of our young ladies even before they pass the High School Examination are grabbed by some educational institutions. They don't have teacher's training, but their basic knowledge of English is enough to coach the Nursery, 1st, 2nd and 3rd standards. But, because they don't have the qualifications prescribed by the Grant-in Aid code they have no security of service. They can be hired and fired at the whims and fancies of the managements. There is nobody to protect this very weak section of society. Therefore, some means should be found with educational authorities to protect the services of these brothers and sisters in Karnataka State who are left completely at the mercy of the management of these institutions. They nave no carrier prospects no P.F., no gratuity, nothing.

There is a Supreme Court judgment to the effect that schools, particularly recognised high schools, have to maintain certain standards, and must be made to pay salaries and other retirement benefits as paid by the Government to its teachers. I would suggest to the Government that an Ordinance can be passed after the session is over so that all recognised institutions, especially those catering to elitist education, must pay salaries as paid by the Government to its teachers and also extend to them the Triple Benefit Scheme.

Sir, it is also necessary to have a look at the administration of the entire Education Department. In this Department, about 1.5 lakh employees are involved. Inter departmental training as well as practical training, possibly on-the-job training for teachers, should be imparted. Another factor which comes to my mind is, many teachers by virtue of their experience are able to manage

teaching job in various schools, but, because of this lack of training they have no security. The institutions must be persuaded to train these teachers during the vacation so that they can qualify for regular posts and accompanying retirement benefits.

In regard to appointment of teachers in aided institutions, they are unable to recruit teachers because of economy measures. The Hon'ble Minister for Education mentioned recently that economy orders would not apply to Government institutions for appointing teachers, but these economy measures still apply to aided institutions. May I request the Government kindly to remove this restriction and permit the aided institutions also to remain outside the scope of the economy measures.

There is a gradation list for the staff in the Education Department. I think this must be finalised and published as early as possible so that temporary staff will have no problem. With regard to temporary employees recruited under Article 32, there seems to be some conflict in the Department about promotional aspects. Some of the temporary employees appointed under Article 32 cannot become permanent till they retire. This anomaly must be corrected immediately.

There is another interesting point, I think which should be considered i.e. about a 5-day week in schools. Some years back schools used to close on Thursdays and Sundays. This will be an advisable move because there will be a gap of at least two days in between for students to prepare themselves. It will also help them to devote more time to studies as they would have had a certain degree of refreshment to break the monotony. This was in practice in South Kanara for some time. 6 days a week study for school children will cause a great strain on young minds. It will not develop their outlook. Therefore, a new look should be given to the education sphere.

At present there is recently formed a Directorate for Urdu and Minority Languages Institutions. I suggest that this should be a Directorate to combine all minority languages and the nomenclature has to be changed. It should be called the Directorate of Minority Languages Institutions.

Most of the minorities would prefer English as their medium of instruction. Along with Kannada, English should also be developed side by side. You should allow English to grow. You must allow minorities to open English medium schools and even Government should do so in the areas where they are in large numbers. Since English is a universal language which is prevalent in all parts of the

world it is better to give impetus to it. (Even China and Japan are giving importance to the study of English.) If English medium schools are opened it will also provide jobs to minority community people. With this I thank the Hon. Speaker for having given me a chance to speak and conclude my speech.

೪.೦೧ ಪಿ.ಎಂ.

† ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಜೈಲಿನ ಬಗ್ಗೆ ಒಂದೆರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಜೈಲಿನಲ್ಲಿ ಇದ್ದು ಬಂದವರೆಲ್ಲಾ ಬಹಳ ಜನ ಮಂತ್ರಿಗಳಾಗಿ ಇದ್ದೀರಿ. ಈ ಜೈಲಿನಲ್ಲಿ ಇರತಕ್ಕಂಥ ಜನರ ಬಗ್ಗೆ ಸ್ವಲ್ಪ ನಾವು ಗಮನಹರಿಸಬೇಕಾದುದು ಅಗತ್ಯ. ಏಕೆಂದರೆ, ಅವರನ್ನು ಯಾರನ್ನೂ ನಾವು ಕಾಣಲಿಕ್ಕೆ ಆಗುವುದಿಲ್ಲ. ಯಾರನ್ನೂ ಕೇಳಲಿಕ್ಕೂ ಆಗುವುದಿಲ್ಲ. ಅಧ್ಯಕ್ಷರೆ. ಸಾಮಾನ್ಯವಾಗಿ ಜೈಲಿಗೆ ಹೋಗತಕ್ಕವರು ಅನೇಕ ಅಪರಾಧಗಳನ್ನು ಮಾಡಿ ಹೋಗಿದ್ದಾರೆ ಎನ್ನತಕ್ಕಂಥ ಭಾವನೆ ಇರುತ್ತದೆ, ಕೆಲವರು ಅಪರಾಧಗಳನ್ನು ಮಾಡದೇ ಇರಬಹುದು, ಆದರೂ ಮಾಡಿದ್ದಾರೆ ಎನ್ನುವ ಅಭಿಪ್ರಾಯದ ಮೇಲೆ ಹೋಗಿರುತ್ತಾರೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಜೈಲಿನಲ್ಲಿ ಇರತಕ್ಕವರು ಏನಿದ್ದಾರೆ ಅವರಿಗೆ ಶಿಕ್ಷೆಯಾಗಿದ್ದರೂ ಕೂಡ ಸಮಾಜದಲ್ಲಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡಬೇಕು ಎನ್ನುವ ಉದ್ದೇಶ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಇವತ್ತು ಅವರಿಗಾಗಿ ನಾವು ಅನೇಕ ವಿಧದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತೇವೆ. ಖರ್ಚು ಮಾಡುತ್ತೇವೆ ಅಂತಹ ಜನರನ್ನು ಸಾಯುವವರೆಗೂ ಅಲ್ಲೇ ಇಟ್ಟುಕೊಂಡು ಅವರನ್ನು ಸಮಾಜ ಸುಧಾರಕರನ್ನಾಗಿ, ಸತ್ಪ್ರಜೆಗಳನ್ನಾಗಿ ಮಾಡುವುದಾದರೆ ಹೇಗೆ, ಅದು ಅಸಾಧ್ಯ. ಅಂತಹ ಜನರ ಬಗ್ಗೆ ಆದಷ್ಟು ಅವರ ನಡೆವಳಿಕೆ ಮತ್ತಿತರ ವಿಷಯಗಳನ್ನು ನಾವು ಅಲ್ಲಿ ಅಧಿಕಾರಿಗಳ ಮೂಲಕ ತಿಳಿದುಕೊಂಡು ಜೀವಾವಧಿ ಶಿಕ್ಷೆ ಎಂದು ಹೇಳುತ್ತೀರಿ, ಅದರಲ್ಲಿ ಕನಿಷ್ಟ ೧೦ ವರ್ಷಗಳ ಒಳಗೆ ಅವರನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಒಂದೊಂದು ಸಾರಿ ಕಮಿಟಿ ಇರುತ್ತದೆ, ಆ ಕಮಿಟಿಯವರು ಸೇರಿರುವುದಿಲ್ಲ, ಆ ಕಮಿಟಿ ಇದೆಯೋ ಇಲ್ಲವೋ ಗೊತ್ತಿಲ್ಲ. ೧೦ ವರ್ಷಗಳಿಗೂ ಮೇಲ್ಪಟ್ಟು ಶಿಕ್ಷೆಯನ್ನು ಅನುಭವಿಸಿರತಕ್ಕ ಜನ ಅನೇಕರು ಇದ್ದಾರೆ. ಕಮಿಟಿ ಇದ್ದರೆ ಸರಿ, ಇಲ್ಲದೇ ಇದ್ದರೆ, ತಕ್ಷಣ ಕಮಿಟಿಯನ್ನು ನೇಮಕ ಮಾಡಿ ಹತ್ತು ವರ್ಷಗಳು ಶಿಕ್ಷೆ ಅನುಭವಿಸಿ ಒಳ್ಳೆಯ ನಡವಳಿಕೆಯುಳ್ಳವರನ್ನು ಜಾಗ್ರತೆ ಹೊರಗಡೆ ಬಿಟ್ಟು ಸತ್ಪ್ರಜೆಗಳಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೈಲುಗಳಲ್ಲಿ ಅನೇಕ ಕುಶಲ ಕರ್ಮಿಗಳು ಇದ್ದಾರೆ, ಜೈಲಿನಲ್ಲಿ ಅವರು ಬಟ್ಟೆ ನೇಯುತ್ತಾರೆ. ಬಡಗಿ ಕೆಲಸ ಮಾಡುವವರಿದ್ದಾರೆ, ಕೆಲವರು ಜಮಖಾನೆ ಕೆಲಸ ಮಾಡುವವರು ಇದ್ದಾರೆ. ಬೆತ್ತದ ಕುರ್ಚಿಗಳನ್ನು ಮಾಡುವವರು ಇದ್ದಾರೆ, ಪ್ಲಾಸ್ಟಿಕ್ ಕುರ್ಚಿ ಕೆಲಸಗಳನ್ನು ಮಾಡತಕ್ಕವರು ಇದ್ದಾರೆ. ಹೀಗೆ ಹಲವಾರು ಕಸಬುಗಳನ್ನು ಮಾಡುತ್ತಿದ್ದಾರೆ. ಅವರಿಗೆ ಕೊಡುತ್ತಿರುವ ಸಂಭಾವನೆ ಕೇವಲ ೨-೩ ರೂಪಾಯಿಗಳನ್ನು ಮಾತ್ರ. ಈಗಿನ ಕಾಲದಲ್ಲಿ ಇದು ಬಹಳ ಕಡಿಮೆ. ಒಂದು ಕಟ್ಟು ಗಣೇಶ ಬೀಡಿಯ ಬೆಲೆ ಒಂದು ಕಾಲು ರೂಪಾಯಿ ಇದೆ. ಪದಾರ್ಥಗಳ ಬೆಲೆ ಜಾಸ್ತಿಯಿರುವುದು ನಿಮಗೆಲ್ಲಾ ಗೊತ್ತಿದೆ. ಅವರು ಒಳ್ಳೆಯ ಕುಶಲಕರ್ಮಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ. ಹೊರಗಡೆ ಅವರು ಕೆಲಸ ಮಾಡಿದರೆ ದಿನಕ್ಕೆ ೪೦-೫೦ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ. ಇದರ ಬಗ್ಗೆ ವಿಚಾರ ಮಾಡಿ ಕನಿಷ್ಟ ಐದು ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ವಯಸ್ಸಾದವರನ್ನು ಕೂಡ ಯಾವುದೋ ಕಾರಣದಿಂದ ಜೈಲಿನಲ್ಲಿಟ್ಟಿರುತ್ತಾರೆ. ನಿಜ ಮತ್ತು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ವಯಸ್ಸಾದವರ ವಿಚಾರದಲ್ಲಿ ಒಂದು ಕಾಲಮಿತಿಯನ್ನು ಹಾಕಬೇಕು. ೫೫-೬೦ ವರ್ಷ ವಯಸ್ಸಾದ ಮೇಲೆ ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳ ಜೊತೆಯಲ್ಲಿ ಸ್ವಲ್ಪ ಕಾಲ ಇರಬೇಕಾಗುತ್ತದೆ. ಅವರೊಂದಿಗೆ ಜೀವನ ಸಾಗಿಸಬೇಕಾಗುತ್ತದೆ. ನಾನು ಬಳ್ಳಾರಿ ಜೈಲಿನಲ್ಲಿ ಸುಮಾರು ೭೦ ವರ್ಷದ ಒಬ್ಬ ಮುದುಕನನ್ನು ನೋಡಿದೆ. ಇಂತಹವರನ್ನು ಜೈಲಿನಲ್ಲಿ ಇಟ್ಟುಕೊಂಡರೆ ಏನು ಪ್ರಯೋಜನ. ಅನಾವಶ್ಯಕವಾಗಿ ಇಟ್ಟುಕೊಳ್ಳುವುದರಿಂದ ಅವರಿಗೂ ತೊಂದರೆ ಮನೆಯವರಿಗೂ ವ್ಯಸನವಾಗುತ್ತದೆ. ತಪ್ಪು ಮಾಡಿರಬಹುದು ಆದರೆ ವಯಸ್ಸಾದವರ ವಿಚಾರದಲ್ಲಿ ಒಂದು ಮಿತಿಯನ್ನು

ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಸುಮಾರು ೧೦ ವರ್ಷಗಳು ಜೈಲು ಶಿಕ್ಷೆ ಅನುಭವಿಸಿ ಒಳ್ಳೆಯ ಕೆಲಸಗಳನ್ನು ಮಾಡಿ ಹೊರಗಡೆ ಬರುತ್ತಾರೆ. ಅವರು ಹೊರಗಡೆ ಬಂದ ವೇಳೆ ಏನು ಕೆಲಸ ಮಾಡಬೇಕು. ಅಂತಹವರು ಬಹಳ ತೊಂದರೆಯಲ್ಲಿರುತ್ತಾರೆ. ಇಂತಹ ಜನರಿಗೆ ಸರ್ಕಾರ ಹಣ ಒದಗಿಸುವುದರ ಮೂಲಕ, ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದರ ಮೂಲಕ ಅವರು ಜೀವನವನ್ನು ಸಾಗಿಸುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಅವರು ಸಮಾಜದ ಸತ್ಪ್ರಜೆಗಳಾಗಿ ಬಾಳಬೇಕಾದರೆ ಈ ಎಲ್ಲಾ ಅನುಕೂಲಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ಇರುವವರೆಗೆ ಊಟ ಹಾಕಿದ್ದೇವೆ. ನಿಮ್ಮ ಸಜಾ ಅವಧಿ ಮುಗಿದಿದೆ ಹೊರಗಡೆ ಹೋಗಿ ಅಂದರೆ ಅವರು ಹೇಗೆ ಜೀವನ ಮಾಡಬೇಕು? ಮತ್ತೆ ಅಪರಾಧಿಗಳಾಗಿ ಒಳಗಡೆ ಬರುವಂತಹ ಪರಿಸ್ಥಿತಿ ಬಂದರೂ ಆಶ್ಚರ್ಯ ಇಲ್ಲ. ಅವರು ಒಳ್ಳೆಯ ರೀತಿಯಲ್ಲಿ ಸಾಗಿಸುವುದಕ್ಕೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಚಿವರನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಇನ್ನು ನಮ್ಮ ಆಹಾರ ಇಲಾಖೆಯ ಬಗ್ಗೆ ಏನೂ ಹೇಳಬೇಕಾದ್ದು ಇಲ್ಲ. ಈಗ ಹಳ್ಳಿಗಳಲ್ಲಿ ಹಸಿರು ಕಾರ್ಡ್ ಎಂದು ಕೊಟ್ಟಿದ್ದೀರಿ ಅದರ ಮೂಲಕ ಬಡ ಜನರಿಗೆ ಅನುಕೂಲ ಒದಗಿಸುತ್ತೀರಿ ಅದೇ ರೀತಿ ಪಟ್ಟಣ ಪ್ರದೇಶದಲ್ಲಿರತಕ್ಕ ಕೊಳಚೆ ಪ್ರದೇಶದಲ್ಲಿ ವಾಸಮಾಡತಕ್ಕ ಜನರಿಗೂ ಸಹ ಹಸಿರು ಕಾರ್ಡಿನ ಮುಖಾಂತರ ಸಿಕ್ಕತಕ್ಕ ಅನುಕೂಲತೆಗಳನ್ನು ತಾವು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಉನ್ನತ ಶಿಕ್ಷಣ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಹೇಳಬೇಕಾಗಿದೆ, ರಾಜ್ಯ ಶಿಕ್ಷಣ ಮಂತ್ರಿಗಳ ಬಗ್ಗೆ ಏನೂ ಹೇಳಬೇಕಾಗಿಲ್ಲ ಈಗ ದಾವಣಗೆರೆಯಲ್ಲಿ ಸೀತಮ್ಮ ಪ್ರೌಢಶಾಲೆ ಇದೆ ಅದು ಐದು ವರ್ಷಗಳ ಹಿಂದೆ ಪದವಿಪೂರ್ವ ಕಾಲೇಜು ಆಗಿದೆ. ಈಗ ಅದು ಕಾಲೇಜು ಆಗಿ ಪರಿವರ್ತನೆಯಾಗಬೇಕು. ಈಗ ಸರ್ಕಾರಿ ಕಾಲೇಜು ಹೆಣ್ಣು ಮಕ್ಕಳಿಗೆ ಇಲ್ಲ ಇರುವುದು ಒಂದೇ ಕಾಲೇಜು ಆದ್ದರಿಂದ, ನಾನು ದಯಮಾಡಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸೀತಮ್ಮ ಪ್ರೌಢಶಾಲೆಯನ್ನು ತಾವು ಏನು ಪದವಿ ಪೂರ್ವ ಕಾಲೇಜ್ ಎಂದು ಮಾಡಿದ್ದೀರಿ ಅದನ್ನು ಕಾಲೇಜು ಆಗಿ ಪರಿವರ್ತನೆ ಮಾಡಬೇಕು. ಇತ್ತೀಚಿಗೆ ಹೆಣ್ಣುಮಕ್ಕಳು ಓದತಕ್ಕ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ತಂದೆ-ತಾಯಿಗಳಲ್ಲಿಯೂ ಸಹ ಹೆಣ್ಣು ಮಕ್ಕಳನ್ನು ಓದಿಸಬೇಕೆಂಬ ಭಾವನೆ ಬಂದಿದೆ. ಆದ್ದರಿಂದ ಈಗ ಮಕ್ಕಳಿಗೆ ಓದತಕ್ಕಂಥ ಅನುಕೂಲತೆಯನ್ನು ಕಲ್ಪಿಸಿಕೊಡಬೇಕಾದುದು ಅಗತ್ಯ. ಇವೊತ್ತು ನಾವು ರಾಜ್ಯದಲ್ಲಿ ಅವಿದ್ಯಾವಂತರಿದ್ದಾರೆಂದು ಹೇಳುತ್ತೇವೆ. ಹಾಗೆಯೇ ಅವಿದ್ಯಾವಂತರು ಇದ್ದಾರೆ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅವರಿಗೆ ವಿದ್ಯಾವಂತರನ್ನಾಗಿ ಮಾಡತಕ್ಕ ಪ್ರಯತ್ನದಲ್ಲಿ ನಾವು ಸ್ವಲ್ಪ ಹಿಂದೆ ಬಿದ್ದಿದ್ದೇವೆಂದು ಹೇಳಿದರೆ ತಪ್ಪು ಅಲ್ಲ. ಆದ್ದರಿಂದ ಹೆಣ್ಣು ಮಕ್ಕಳಿಗೆ ವಿದ್ಯಾವಂತರಾಗಿ ಮಾಡಲಿಕ್ಕೆ ಇವೊತ್ತು ತಾವು ಪ್ರಯತ್ನವನ್ನು ಮಾಡಬೇಕು ಕೆಲವು ಕಾಲೇಜುಗಳಲ್ಲಿ ಗಂಡುಮಕ್ಕಳಜೊತೆಯಲ್ಲಿ ಹೆಣ್ಣು ಮಕ್ಕಳನ್ನು ಸೇರಿಸಲಿಕ್ಕೆ ಜನರು ಹಿಂದುಮುಂದು ನೋಡುತ್ತಾರೆ. ನೀನು ಆ ಕಾಲೇಜಿಗೆ ಹೋಗಬೇಡಮ್ಮ ಎಂದು ಶಾಲೆಗೆ ಹೋಗುವುದನ್ನು ಬಿಡಿಸಿಬಿಡುತ್ತಾರೆ. ಆದ್ದರಿಂದ ಹೆಣ್ಣುಮಕ್ಕಳ ಶಾಲೆ. ಕಾಲೇಜು ಇದ್ದರೆ ಹೆಣ್ಣು ಮಕ್ಕಳು ಕಾಲೇಜು ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ತಾವು ದಯಮಾಡಿ ಸೀತಮ್ಮ ಪದವಿ ಪೂರ್ವ ಕಾಲೇಜು ಏನು ಇದೆ ಅದನ್ನು ಉನ್ನತಮಟ್ಟದ ಕಾಲೇಜ್ ಆಗಿ ಪರಿವರ್ತನೆ ಮಾಡಲಿಕ್ಕೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ ಮತ್ತೊಂದು ವಿಚಾರವನ್ನು ತಿಳಿಸಬೇಕೆಂದರೆ ಈಗ ಶಾಲಾ ಅಭಿವೃದ್ಧಿ ಸಮಿತಿ ಎಂದು ಇರುತ್ತದೆ ಸರ್ಕಾರದಿಂದಲೂ ಸಹ ಇದಕ್ಕೆ ಪ್ರೋತ್ಸಾಹ ಇದೆ. ನಾವು ಕೂಡ ಈ ಶಾಲೆಯ ಅಭಿವೃದ್ಧಿಗೋಸ್ಕರ ಶಾಲೆಗೆ ಬೇಕಾದಂಥ ಅನುಕೂಲತೆಗಳನ್ನು ಪಡೆದುಕೊಳ್ಳುವುದಕ್ಕೋಸ್ಕರ ಸಾರ್ವಜನಿಕರಿಂದ ಹಣವನ್ನು ಪಡೆದುಕೊಳ್ಳಬೇಕೆಂದು ಅವರಿಗೆ ತಿಳಿಸಿರುತ್ತೇವೆ ಯಾರು ಬಂದರೂ ಕೂಡ ಹಣವನ್ನು ಕೇಳಿ ಪಡೆಯಿರಿ ಎಂದು ಹೇಳಿರುತ್ತೇವೆ ಇದರಿಂದ ಶಾಲೆಯ ಮಕ್ಕಳಿಗೆ ಬೇಕಾದಂಥ ಅನುಕೂಲತೆಗಳನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಒಳ್ಳೆಯ ಉಪಾಧ್ಯಾಯರು ಯಾರಾದರೂ ಇದ್ದರೆ ಅವರಿಗೆ ಆಗದೇ ಇದ್ದವರು ಇವನನ್ನು ಹೇಗಾದರೂ ಮಾಡಿ ಇಲ್ಲಿಂದ ಎತ್ತಿಸಬೇಕು ಇಲ್ಲಿಂದ ಹೇಗೆ ಕೆಲಸದಿಂದ ತೆಗೆಸಬೇಕು ಹೇಗೆ ಸಸ್ಪೆಂಡ್ ಮಾಡಿಸಬೇಕು ಎಂದು ಯೋಚನೆ ಮಾಡಿ ಯಾರಾದರೂ ಒಬ್ಬರ ಕೈಲಿ ನೂರು ರೂಪಾಯಿಗಳನ್ನು ಕೊಟ್ಟು ಕಳುಹಿಸಿ ಕೊಡಿಸುತ್ತಾರೆ ಅವರು ಇದನ್ನು ಶಾಲಾ ಅಭಿವೃದ್ಧಿ ಸಮಿತಿಗೆ ಎಂದು ತಿಳಿದುಕೊಂಡು ತೆಗೆದುಕೊಳ್ಳುತ್ತಾರೆ. ತಕ್ಷಣವೇ ಇವರು ಲಂಚ ತೆಗೆದುಕೊಂಡಿದ್ದಾರೆ ಎಂದು ಹೇಳಿ

ಪೊಲೀಸಿನವರ ಕೈಯಲ್ಲಿ ಹಿಡಿಸಿ ಅವರು ಲಂಚ ತೆಗೆದುಕೊಂಡಿದ್ದಾರೆ ಎಂದು ಸಸ್ಪೆಂಡ್‌ನಲ್ಲಿಡಿಸತಕ್ಕದ್ದು ನಡೆಯುತ್ತಿದೆ ಇವೊತ್ತು ಲಂಚ ತೆಗೆದುಕೊಂಡಿದ್ದರೆ ಅಂತಹವರ ಮೇಲೆ ತಾವು ಕ್ರಮ ತೆಗೆದುಕೊಳ್ಳಿ ಆದರೆ ಶಾಲೆಯ ಅಭಿವೃದ್ಧಿಗೆ ಸಹಾಯ ಪಡೆದಾಗ ಅದನ್ನು ಲಂಚ ಎಂದು ಪರಿವರ್ತನೆ ಮಾಡಿ ಹಿಡಿಸಿದರೆ ಇದು ಬಹಳ ಅನ್ಯಾಯವಾಗುತ್ತದೆ ತಾವು ಇದರ ಬಗ್ಗೆ ಪರಿಶೀಲಿಸಿ ಅದಕ್ಕೆ ಅವಕಾಶ ಕೊಡದಂತೆ ತಾವು ಅವರ ಮೇಲೆ ಕರುಣೆ ತೋರಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಅವರು ಹಣವನ್ನು ಪಡೆಯುವುದಿಲ್ಲ. ಶಾಲಾ ಅಭಿವೃದ್ಧಿ ಮಾಡುವುದಕ್ಕೆ ಹೋಗುವುದಿಲ್ಲ. ಇದರಿಂದ ಶಾಲಾಭಿವೃದ್ಧಿಗೆ ತೊಂದರೆಯಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ರಸ್ತೆಗಳಲ್ಲಿ ಹೋಗುವಾಗ ತಾವು ನೋಡಬಹುದು. ಎಲ್ಲಾ ಕಡೆ ಸೈನಿಂಗ್ ಬೋರ್ಡ್‌ಗಳನ್ನು ಹಾಕಿದ್ದೀರಿ ಅದರಲ್ಲಿ ಕಾಡು ಬೆಳೆಸಿ, ನಾಡು ಉಳಿಸಿ, ಎಂದು ಬರೆಸಿರುತ್ತಾರೆ ಬೋರ್ಡು ನೋಡುವುದಕ್ಕೆ ಬಹಳ ಚೆನ್ನಾಗಿರುತ್ತದೆ. ''ಕಾಡು ಬೆಳೆಸಿ. ನಾಡು ಉಳಿಸಿ'' ಎಂದು ಬರೆಸಿದ್ದು ಅದರ ಕೆಳಗೆ ಒಬ್ಬ ರೈತ ಕೂತಿರುತ್ತಾನೆ. ಆದರೆ ರಸ್ತೆಯಲ್ಲಿ ಮರಗಳೇ ಇರುವುದಿಲ್ಲ ಆ ಬೋರ್ಡ್‌ನಲ್ಲಿರುವುದನ್ನು ನೋಡಿ ನಾವು ತೃಪ್ತಿಯನ್ನು ಪಟ್ಟುಕೊಳ್ಳಬೇಕು ಅಷ್ಟೆ. ನಾನು ಹೇಳುತ್ತೇನೆ ನೀವು ಬೋರ್ಡ್‌ಗೆ ಏನು ಖರ್ಚು ಮಾಡುತ್ತೀರಿ ಅದೇ ದುಡ್ಡನ್ನು ಕಾಡು ಬೆಳೆಸುವುದಕ್ಕೆ ಖರ್ಚು ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ. ಕೇವಲ ಕಾಡು ಬೆಳೆಸಿ. ನಾಡು ಉಳಿಸಿ ಎನ್ನತಕ್ಕ ನಿಮ್ಮ ಘೋಷಣೆಯಿಂದ ನಿಮ್ಮ ಕಾಡು ಬೆಳೆಯುವುದಿಲ್ಲ. ಕಾಡನ್ನು ಬೆಳೆಸಿದರೆ ನಮಗೆ ಬಹಳ ಸಂತೋಷ ಆದರೆ ಕಾಡೇ ಇರುವುದಿಲ್ಲ ನಾವು ಒಂದು ಮಾತನ್ನು ಹೇಳುತ್ತೇನೆ. ಕಾಡಿಲ್ಲದಿರತಕ್ಕ ಪ್ರದೇಶದಿಂದ ಬಂದಿರತಕ್ಕವರೇ ಇಂದು ಅರಣ್ಯ ಮಂತ್ರಿಗಳಾಗಿರುವುದರಿಂದ ಅವರ ಪ್ರದೇಶದಲ್ಲಿ ಹೆಚ್ಚಿನ ಕಾಡನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅವರು ಊರಿನ ಕಡೆಗೆ ಹೋದರೆ ಅವರ ಪ್ರದೇಶದಲ್ಲಿ ಎಲ್ಲಿಯವರೆಗೆ ನೋಡಿದರೂ ಬರೀ ಜಾಲಿ ಮರಗಳೇ ಕಾಣಿಸುತ್ತವೆಯೇ ವಿನಃ ಒಂದು ಬೇವಿನ ಮರವೂ ಕೂಡ ಕಾಣಿಸುವುದಿಲ್ಲ. ಆದ್ದರಿಂದ ಮಾನ್ಯ ಅರಣ್ಯ ಸಚಿವರು ಅವರ ಭಾಗದಲ್ಲಿ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಬೇಕು. ಸುಮಾರು ೫೦ ಮೈಲಿ ದೂರ ಹೋದರೂ ಒಂದೇ ಒಂದು ದೊಡ್ಡ ಗಿಡವೂ ಕೂಡ ಇಲ್ಲ. ಆದ್ದರಿಂದ ಮಾನ್ಯ ಅರಣ್ಯ ಮಂತ್ರಿಗಳು ಆ ಕಡೆಗೆ ಹೆಚ್ಚಿನ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ, ಕೇವಲ ಕಾಡು ಬೆಳೆಸುವುದೇ ಅಲ್ಲ, ರಸ್ತೆಗಳಲ್ಲೂ ಕೂಡ ಗಿಡಗಳನ್ನು ಬೆಳೆಸಬೇಕು. ಈ ಕೆಲಸವನ್ನು ಅರಣ್ಯ ಇಲಾಖೆಯವರು ಮಾಡಬೇಕೋ, ಲೋಕೋಪಯೋಗಿ ಇಲಾಖೆಯವರು ಮಾಡಬೇಕೋ ನನಗೆ ಗೊತ್ತಿಲ್ಲ. ಆದರೆ ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸುವ ಯೋಚನೆ ಮಾಡಬೇಕು. ಇತ್ತೀಚೆಗೆ ನಿಮ್ಮ ಅರಣ್ಯ ಇಲಾಖೆಯವರು ಗಿಡಗಳಿಗೆ ಗಾರ್ಡ್‌ಗಳನ್ನು ಒದಗಿಸುತ್ತಿದ್ದಾರೆ ಇದು ಬಹಳ ಒಳ್ಳೆಯ ಕೆಲಸ ಏಕೆಂದರೆ ಪ್ರಾಣಿಗಳಿಂದ ಈ ಗಿಡಗಳನ್ನು ರಕ್ಷಿಸಬಹುದು. ಇದಕ್ಕೆ ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ. ಹೆಚ್ಚು ಹೆಚ್ಚು ಗಾರ್ಡ್‌ಗಳನ್ನು ಕೊಟ್ಟು ನೆಟ್ಟ ಗಿಡಗಳು ಪ್ರಾಣಿಗಳಿಂದ ಹಾಳಾಗದಂತೆ ನೋಡಿಕೊಳ್ಳಲು ಅವಕಾಶ ಮಾಡಿಕೊಡಬೇಕು ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನೂ ಅಂದರೆ ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಅರಣ್ಯ ಇಲಾಖೆಯ ಅಧಿಕಾರಿಗಳು, ಮುಂತಾದವರನ್ನು ಕರೆದು ತಿಳುವಳಿಕೆಯನ್ನು ಕೊಡಬೇಕು. ಗಿಡಗಳ ರಕ್ಷಣೆಗೆ ಬೇಕಾದ ಗಾರ್ಡ್‌ಗಳನ್ನು ಕೊಟ್ಟು ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಇದರ ಅನುಭವ ಇಲ್ಲ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಎಲ್ಲ ವಿಚಾರಗಳನ್ನೂ ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ವಿಚಾರವನ್ನು ಮಾತ್ರ ನಾನು ಹೇಳದೇ ವಿಧಿಯಿಲ್ಲ. ಕಾರಣ ಏನೆಂದರೆ, ನಾವು ಯಾವುದೇ ಸಕ್ಕರೆ ಕಂಪೆನಿಗಳನ್ನು ತೆಗೆದುಕೊಂಡರೂ ಲಾಸ್‌ನಲ್ಲಿವೆಯೆಂದು ಕೇಳಿಬರುತ್ತಿದೆ. ಕಾರ್ಮಿಕರಿಗೆ ಬೋನಸ್ ಕೇಳಿದರೂ ಲಾಸ್‌ನಲ್ಲಿದೆ. ಸಂಬಳವನ್ನು ಕೇಳಿದರೂ ಲಾಸ್‌ನಲ್ಲಿದೆ ಎಂದು ಹೇಳುತ್ತಾರೆ ಇದು ಏತಕ್ಕೆ ಹೀಗೆ ಎಂದು ನೋಡಿದರೆ ಗೊತ್ತಾಗುತ್ತದೆ. ಸಕ್ಕರೆ ಕಂಪೆನಿಗಳಲ್ಲಿ (ಕಾರ್ಖಾನೆಗಳಲ್ಲಿ) ೧ ಟನ್ ಕಬ್ಬನ್ನು ಅರೆದರೆ ಸುಮಾರು ೪೦-೪೨ ಕೆ.ಜಿ. ಮೊಲಾಸೆಸ್ ಬರುತ್ತದೆ. ಒಂದು ಟನ್‌ಗೆ ೪೨ ಕೆ.ಜಿ. ಬಂದರೆ ಅದರಿಂದ ಕನಿಷ್ಠ ೧೨ ಲೀಟರ್ ಸ್ಪಿರಿಟ್‌ನ್ನು ತೆಗೆಯಬಹುದು ಇದಕ್ಕೆ ಬೇರೆ ಇನ್ನೇನಾದರೂ ಮಿಶ್ರಣ ಮಾಡಿದರೆ ಸುಮಾರು ೫೦-೬೦ ಲೀಟರ್ ಸಾರಾಯಿ ಆಗುತ್ತದೆ ಆದರೆ ಈ ಮೊಲಾಸೆಸ್‌ನ್ನು ನೀವು ೧೨೦ ರೂಪಾಯಿಗಳಿಗೆ ಕೊಡುತ್ತೀದ್ದೀರಿ ಇದನ್ನು ತೆಗೆದು

ಕೋಡು ಹೋದವರು ಇದರಿಂದ ಸುಮಾರು ಮೂರು ಸಾವಿರ ರೂಪಾಯಿಗಳವರೆಗೂ ಸಂಪಾದನೆಯನ್ನು ಮಾಡಿಕೊಳ್ಳುತ್ತಾರೆ. ಇಂಥವರಿಗೆ ನೀವು ಕೇವಲ ೧೨೦ ರೂಪಾಯಿಗೆ ಕೊಡುತ್ತಿದ್ದೀರಿ ಏತಕ್ಕೆ ಈ ರೀತಿ ಮಾಡುತ್ತೀರಿ ?

ಮೊಲಾಸಸ್ ತಯಾರಾಗುವ ಸಕ್ಕರೆ ಕಾರ್ಖಾನೆಗಳಲ್ಲಿಯೇ ಡಿಸ್ಟಲರಿಯನ್ನು ತಯಾರು ಮಾಡಲು ಅನುಮತಿಯನ್ನು ಕೊಟ್ಟರೆ ಅಲ್ಲಿ ಲಾಭ ಹೆಚ್ಚಾಗುತ್ತದೆ. ಕೈಗಾರಿಕೆಯೂ ಅಭಿವೃದ್ಧಿಯಾಗುತ್ತದೆ. ಅಲ್ಲಿಯ ಕಾರ್ಮಿಕರಿಗೆ ಅನುಕೂಲತೆಗಳನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ, ರೈತರಿಗೆ ಇನ್ನೂ ಹೆಚ್ಚಿನ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ, ಮತ್ತು ಅವರಿಗೆ ಹೆಚ್ಚಿನ ಬೆಲೆಯನ್ನೂ ಕೂಡ ಕೊಡಲು ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಏತಕ್ಕೆ ಮಾಡಬಾರದು ಎಂದು ಕೇಳುತ್ತೇನೆ. ಬೇರೆಯವರಿಗೆ ಕೊಡುವ ಬದಲಾಗಿ ಸಕ್ಕರೆ ಕಾರ್ಖಾನೆಗಳಿಗೆ ಏತಕ್ಕೆ ಕೊಡಬಾರದು ? ಮಾನ್ಯ ಶ್ರೀನಿವಾಸ್‌ರವರು ಮಾತನಾಡುವಾಗ ಅದರಲ್ಲಿ ಅವ್ಯವಹಾರಗಳು ನಡೆಯುತ್ತವೆಂದು ಹೇಳಿದರು. ಆ ಅವ್ಯವಹಾರವನ್ನೂ ಕೂಡ ತಡೆಗಟ್ಟಲೂ ಸಾಧ್ಯವಾಗುತ್ತದೆ. ನಮ್ಮಲ್ಲಿ ಬೇಕಾದಷ್ಟು ಸಹಕಾರಿ ಸಂಸ್ಥೆಗಳು ಇವೆ. ವಾಣಿವಿಲಾಸ ಸಕ್ಕರೆ ಕಾರ್ಖಾನೆ ಇದೆ. ಅಲ್ಲಿ ಕಬ್ಬಿಲ್ಲ ಷುಗರ್ ಇಲ್ಲ ಮೊಲಾಸಿಸ್ ಇಲ್ಲ. ಅಲ್ಲಿ ಡಿಸ್ಟಲರಿ ನಡೆಸುತ್ತಿದ್ದಾರೆ. ಬೇರೆ ಕಡೆಯಿಂದ ತಂದು ಡಿಸ್ಟಲರಿಯನ್ನು ನಡೆಸಿ ಅವರು ಆದರಿಂದ ಲಾಭವನ್ನು ಪಡೆಯುತ್ತಿದ್ದಾರೆ. ಖಾಸಗಿ ವ್ಯಕ್ತಿಗಳು ಲಾಭವನ್ನು ಪಡೆಯುತ್ತಿದ್ದಾರೆ. ಲುಕ್ಸಾನು ಅನುಭವಿಸುತ್ತಿರತಕ್ಕಂಥ ಕೈಗಾರಿಕೆಗಳು ಲುಕ್ಸಾನನ್ನು ಅನುಭವಿಸುತ್ತಲೇ ಇರುತ್ತವೆ. ಇದನ್ನು ತಡೆಗಟ್ಟಲು ಅನೇಕ ಕಾರ್ಖಾನೆಗಳಲ್ಲಿ ಈ ಮೊಲಾಸಸ್ ಎಲ್ಲಿ ತಯಾರಾಗುತ್ತದೋ ಅಲ್ಲಿ ಡಿಸ್ಟಲರಿಯನ್ನು ತಯಾರು ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕು. ದಾವಣಗೆರೆ ಷುಗರ್ ಕಂಪನಿಯವರು ಸುಮಾರು ೧೯೮೪-೮೫ರಿಂದ ಅನುಮತಿಯನ್ನು ಕೇಳುತ್ತಲೇ ಇದ್ದಾರೆ. ಅವರಿಗೆ ಇಲ್ಲಿಯವರೆಗೆ ಅನುಮತಿಯನ್ನು ಕೊಟ್ಟಿಲ್ಲ. ಅವರಿಗೆ ಅನುಮತಿಯನ್ನು ಕೊಡಬೇಕು, ಅವರಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟು ಸಹಾಯ ಮಾಡಿದರೆ ಡಿಸ್ಟಿಲರಿಯನ್ನು ತಯಾರು ಮಾಡಲು ಅನುಕೂಲವಾಗುತ್ತದೆ. ಇದರಿಂದ ಆ ಕೈಗಾರಿಕೆಗೆ ಸಹಾಯ ಮಾಡಿದಂತಾಗುತ್ತದೆ. ಅಲ್ಲಿರತಕ್ಕಂಥ ರೈತರಿಗೆ ಇನ್ನೂ ಹೆಚ್ಚಿನ ಕಬ್ಬನ್ನು ಬೆಳೆದು ಹೆಚ್ಚಿನ ಬೆಲೆಯನ್ನು ಕೊಡುವುದಕ್ಕೆ ಸಹಾಯವಾಗುತ್ತದೆ. ಖಾಸಗಿ ವ್ಯಕ್ತಿಗಳು ಹೆಚ್ಚು ಲಾಭ ಸಂಪಾದನೆ ಮಾಡುವುದಕ್ಕೆ ಈ ಒಂದು ವ್ಯವಸ್ಥೆ ಏನು ಇದೆ ಅದನ್ನು ತಪ್ಪಿಸಬೇಕು. ನೀವು ತಪ್ಪಿಸಿದರೆ ಇದರಿಂದ ಖಂಡಿತವಾಗಿಯೂ ಕೂಡ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಇದರಿಂದ ಕಾರ್ಮಿಕರಿಗೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ರೈತರಿಗೆ ಹೆಚ್ಚು ಬೆಲೆಯನ್ನು ಕೊಟ್ಟು ಹೆಚ್ಚು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ದಯವಿಟ್ಟು ಇದನ್ನು ಮಾಡಬೇಕೆಂದು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಷ್ಟನ್ನು ಹೇಳುತ್ತಾ ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದ್ದುದನ್ನು ಬರೆದುಕೊಂಡಿದ್ದೆ. ಆದರೆ ಮಾನ್ಯ ಅಧ್ಯಕ್ಷರು ಬೆಲ್ ಮಾಡುತ್ತಿರುವುದರಿಂದ ಹೆಚ್ಚು ಮಾತನಾಡಿದರೆ ಅವರು ಸಿಟ್ಟು ಮಾಡಿಕೊಳ್ಳುತ್ತಾರೆ, ಆದ್ದರಿಂದ ಬಹಳಷ್ಟು ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಮೊಲಾಸಿಸ್ ವಿಚಾರದಲ್ಲಿ ಬೇಕಾದರೆ ಬರೆದು ಕಳುಹಿಸಿಕೊಡುತ್ತೇನೆ. ಇದರಲ್ಲಿ ಒಂದು ವಿಷಯ ಹೇಳುವುದಾದರೆ ೧೯೭೪-೭೫ರಲ್ಲಿ ೨,೯೦೦ ಟನ್ ಉತ್ಪಾದನೆಯಾಗಿತ್ತು, ೧೯೭೫-೭೬ರಲ್ಲಿ ೪,೨೦೦ ಟನ್ ೧೯೭೬-೭೭ರಲ್ಲಿ ೬,೪೦೦ ಟನ್, ೧೯೭೭-೭೮ರಲ್ಲಿ ೧೧,೬೦೦ ಟನ್ ಉತ್ಪಾದನೆಯಾಗಿದೆ, ೧೯೭೯-೮೦ರಲ್ಲಿ ೮,೯೮೮ ಟನ್, ೧೯೮೦-೮೧ರಲ್ಲಿ ೨,೫೦೦ ಟನ್ ಉತ್ಪಾದನೆಯಾಗಿದೆ. ಈ ವರ್ಷದಲ್ಲಿ ಕಬ್ಬಿನ ಬೆಳೆ ಇಲ್ಲದ ಕಾರಣ ಬೆಂಕಿಹಾಕಿ ಸುಟ್ಟುಬಿಟ್ಟಿದ್ದಾರೆ. ೧೯೮೧-೮೨ರಲ್ಲಿ ೭,೬೦೦ ಟನ್ ೧೯೮೨-೮೩ರಲ್ಲಿ ೭,೪೪೦ ಟನ್, ೧೯೮೩-೮೪ರಲ್ಲಿ ೩,೮೦೦ ಟನ್, ೧೯೮೪-೮೫ರಲ್ಲಿ ೩,೨೦೦ ಟನ್, ೧೯೮೫-೮೬ರಲ್ಲಿ ೬,೯೦೦ ಟನ್, ೧೯೮೬-೮೭ರಲ್ಲಿ ೯,೩೦೦ ಟನ್ ಉತ್ಪಾದನೆಯಾಗಿದೆ. ಅನೇಕ ಕಡೆಯಲ್ಲಿ ಡಿಸ್ಟಿಲರಿಯನ್ನು ತಯಾರು ಮಾಡಲು ಪ್ರಾರಂಭ ಮಾಡಿದರೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಯಾವುದಾದರೂ ಒಂದೊಂದು ಕೈಗಾರಿಕೆಯನ್ನು ಇನ್ನೊಂದು ಕೈಗಾರಿಕೆಯ ಜೊತೆಯಲ್ಲಿ ಜೋಡಿಸಿ ಮೊಲಾಸಿಸ್ ಉತ್ಪಾದನೆ ಮಾಡಲು ಅನುಕೂಲ ಮಾಡಿದರೆ ಸಕ್ಕರೆ ಕಾರ್ಖಾನೆಯೂ ಅಭಿವೃದ್ಧಿಯಾಗುತ್ತದೆ. ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ; ಕಾರ್ಮಿಕರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಆದ್ದರಿಂದ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೆಂದರೆ, ಹೆಂಡವನ್ನು ತೆಗೆಯತಕ್ಕಂಥ ವಿಚಾರ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಇದನ್ನು ನಿಲ್ಲಿಸಿರುತ್ತೀರಿ. ಈರೀತಿ ಹೆಂಡವನ್ನು ತೆಗೆಯುವುದು ನಿಲ್ಲಿಸಿರುವುದರಿಂದ ನಿಜವಾಗಿಯೂ ಕಲಬೆರಿಕೆ ಹೆಂಡ ಬರುತ್ತಿದೆ. ಇದರಿಂದ ಮನುಷ್ಯನ ಆರೋಗ್ಯ ಕೆಡುತ್ತಿದೆ. ಹೆಂಡ ಮಾರತಕ್ಕಂಥ ಜನ ಈವತ್ತು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಅವರ ನಿರುದ್ಯೋಗವನ್ನು ನಿವಾರಣೆ ಮಾಡಲು ಏನು ವ್ಯವಸ್ಥೆಯನ್ನು ಮಾಡಿದ್ದೀರೆಂದು ಕೇಳುತ್ತೇನೆ. ಹೆಂಡ ಇಳಿಸುವುದನ್ನು ನಿಲ್ಲಿಸಿದ್ದು ಒಳ್ಳೆಯದೆಂದು ನಾನು ಮೊದಲೇ ಹೇಳಿದೆ. ಅವರೆ ಹೆಂಡ ಇಳಿಸತಕ್ಕ ಜನರಿಗೆ ಉದ್ಯೋಗ ಒದಗಿಸಿಕೊಡತಕ್ಕದ್ದು ಬಹಳ ಮುಖ್ಯ. ಏಕೆಂದರೆ ಅವರು ತಲೆ ತಲಾಂತರಗಳಿಂದ ಹೆಂಡ ಇಳಿಸಿಕೊಂಡು ಬಂದ ಜನ. ಅವರಿಗೆ ಬೇರೆ ಉದ್ಯೋಗ ಗೊತ್ತಿಲ್ಲ. ಅವರಿಗೆ ಈಚಲು ಮರಗಳನ್ನು ಬೆಳೆಸಲು ೨-೩ ಎಕರೆ ಜಾಗ ಕೊಟ್ಟರೆ ಚೆನ್ನಾಗಿ ಬೆಳೆಸುತ್ತಾರೆ ಮತ್ತು ನೀರಾವನ್ನು ತೆಗೆಯುತ್ತಾರೆ. ಅದನ್ನು ಕುಡಿದರೆ ಆರೋಗ್ಯವು ಚೆನ್ನಾಗಿರುತ್ತದೆ. ಅದರಿಂದ ಬೆಲ್ಲ ತೆಗೆಯಬಹುದು, ಚಾಕಲೇಟ್ ಮಾಡಬಹುದು. ಹೀಗೆ ಹಲವಾರು ಕೆಲಸಗಳನ್ನು ಕೇರಳ ರಾಜ್ಯದಲ್ಲಿ ಮಾಡಿದ್ದಾರೆಂದು ಕೇಳಿದ್ದೇನೆ. ಅದನ್ನು ತಿಳಿದುಕೊಂಡು ನಿರುದ್ಯೋಗಿಗಳಾಗತಕ್ಕ ಜನರಿಗೆ ಉದ್ಯೋಗ ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಈಗಿನಿಂದಲೇ ಯೋಚಿಸಬೇಕು. ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡಿ ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆಂದು ಹೇಳುವುದಕ್ಕಿಂತಲೂ .....

ಅಧ್ಯಕ್ಷರು.—ಪಂಪಾಪತಿಯವರೆ, ಆ ಕಡೆ ನೋಡಿದರೆ ಕೇಳುವುದಿಲ್ಲ, ಮುಕ್ತಾಯ ಮಾಡಿ.

ಶ್ರೀ ಪಂಪಾಪತಿ.—ಮುಂದಿನ ವರ್ಷ ಯಾವ ಯಾವ ಜಿಲ್ಲೆಗಳಲ್ಲಿ ಹೆಂಡ ಇಳಿಸತಕ್ಕದ್ದನ್ನು ನಿಲ್ಲಿಸಬೇಕೆಂದು ತೀರ್ಮಾನ ಮಾಡುತ್ತೀರೋ ಅಂಥ ಕಡೆ ತೀರ್ಮಾನ ಮಾಡುವುದಕ್ಕೆ ಮುಂಚೆ ಎಷ್ಟು ಜನ ಹೆಂಡ ಇಳಿಸುವವರು ಇದ್ದಾರೆ ಮತ್ತು ಅದನ್ನು ಮಾರಾಟ ಮಾಡುವವರು ಇದ್ದಾರೆ ಅವರಿಗೆ ಮರು ವಸತಿ ಮತ್ತು ಉದ್ಯೋಗ ಒದಗಿಸುವುದಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸರ್ಕಾರ ಈಗಿನಿಂದಲೇ ಯೋಚನೆ ಮಾಡಿದರೆ ಖಂಡಿತವಾಗಿ ಆ ಜನರಿಗೆ ಅನುಕೂಲ ಮಾಡಿ ಕೊಟ್ಟಂತಾಗುತ್ತದೆ. ಅವರು ಅಡಿಯಲ್ಲಿರತಕ್ಕ ಜನ, ಬಡವರು. ಅವರಿಗೆ ಬೇರೆ ಯಾವುದೇ ಭೂಮಿ ಇಲ್ಲ ಮನೆ ಇಲ್ಲ, ಕೆಲಸ ಇಲ್ಲ. ಅಂಥ ಜನರಿಗೆ ತಾವು ಸಹಾಯ ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡಬೇಕು, ಅವರಿಗೆ ಉದ್ಯೋಗ ಕಲ್ಪಿಸಿಕೊಡಬೇಕು ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಂಡು ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಅವರು ೪ ಮಂದಿ ಪಾರ್ಟಿ ಎಂದು ೨೦ ನಿಮಿಷ ಕೊಟ್ಟಿದ್ದೆ, ನೀವು ಎರಡೇ ಮಂದಿ ಇರುವುದರಿಂದ ೧೫ ನಿಮಿಷ ಕೊಟ್ಟಿದ್ದೇನೆ. ಶುರು ಮಾಡಿ ರಾಮಯ್ಯನವರೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ವಿದ್ಯಾಭ್ಯಾಸ ಇಲಾಖೆಯ ಬಗ್ಗೆ ಚರ್ಚೆ ಮಾಡುವಾಗ ಹೇಳುವುದಾದರೆ ಅವರು ಈ ಖಾತೆಗೆ ಕೊಟ್ಟಿರುವುದು ಈ ವರ್ಷ ೬೧೧೮ ಕೋಟಿ ರೂಪಾಯಿ ಮಾತ್ರ. ಅದು ಕಡಿಮೆ. ಮೊದಲು ಹಳೇ ಮೈಸೂರಿನವರಿಗೆ ೪೦ ಪರ್ಸೆಂಟ್‌ವರೆಗೆ ಕೊಡುತ್ತಿದ್ದರು ಈಗ ೮-೯ ಪರ್ಸೆಂಟ್ ಕೂಡ ವರ್ಕ್‌ಔಟ್ ಆಗುವುದಿಲ್ಲ. ಅದು ಜಾಸ್ತಿಯಾಗಬೇಕಾಗಿತ್ತು. ಅಪ್ಪರನರು ವಿದ್ಯಾ ಮಂತ್ರಿಗಳಾದಾಗ ಮಾಡುತ್ತಾರೆಂದು ತಿಳಿದುಕೊಂಡಿದ್ದೆ. ಅವರು ಕೊಟ್ಟಿರುವುದು ಕಡಿಮೆ. ಜೊತೆಗೆ ವಿದ್ಯಾ ವ್ಯವಸ್ಥೆ ಎಲ್ಲಿಗೆ ಹೋಗುತ್ತಿದೆ ಎಂದು ಅರ್ಥವಾಗುತ್ತಿಲ್ಲ. ಈ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕಾಗುವುದಿಲ್ಲ. ಏಕೆಂದರೆ ಸಮಯ ಇಲ್ಲ. ಮೆಡಿಕಲ್ ಕಾಲೇಜ್ ಸೀಟ್ಸ್ ಏನಿದೆ ಇದನ್ನು ಖಾಸಗಿ ಕಾಲೇಜುಗಳಿಗೆ ೫೦ ಪರ್ಸೆಂಟ್ ಕೊಡುತ್ತಿದ್ದರು ಅದನ್ನು ಈ ಸಾರಿ ರದ್ದು ಮಾಡಬೇಕೆಂದು ವಿಚಾರ ಮಾಡಿರುವುದರಿಂದ ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ಗೊತ್ತಾಗುತ್ತದೆ. ಡೊನೇಷನ್ಸ್ ಫೀಸ್ ಇತ್ಯಾದಿಗಳ ಬಗ್ಗೆ ಅವರು ಇವರು ಒಂದಾಗಿ ಅವರಿಗೇ ಪೂರ್ತಿ ಕೊಡುತ್ತಾರೆಂಬ ಯೋಜನೆ ಇದೆ. ಅದನ್ನು ದಯವಿಟ್ಟು ಮಾಡಬೇಡಿ. ಇದು ಆರೋಗ್ಯ ಇಲಾಖೆಗೂ ಬರುತ್ತದೆಯಾದ್ದರಿಂದ ಹೇಳುತ್ತಿದ್ದೇನೆ. ಇದರಿಂದ ಮೆರಿಟೆಡ್ ಸ್ಟೂಡೆಂಟ್ಸ್‌ಗೆ ಏನು ಅನುಕೂಲ ಸಿಗುತ್ತಿತ್ತು ಅದನ್ನು ತಪ್ಪಿಸಿದಂತಾಗುತ್ತದೆ. ಅದನ್ನು ತಾವು ಯೋಚನೆ ಮಾಡಿ. ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಹೇಳುವುದಾದರೆ, ಈಗಲೂ ಕೂಡ ಕರ್ನಾಟಕದಲ್ಲಿ ಲೆಕ್ಕವಿಲ್ಲದಷ್ಟು ಇಂಜಿನಿಯರಿಂಗ್ ಕಾಲೇಜುಗಳನ್ನು ತೆಗೆದು ಫ್ಯಾಕ್ಟರಿಗಳ ಹಾಗೆ

ಮಾಡಿದ್ದಾರೆ. ಪಾಲಿಟೆಕ್ನಿಕ್‌ಗಳಿಗಂತೂ ಲೆಕ್ಕವೇ ಇಲ್ಲ. ವಿದ್ಯಾಭ್ಯಾಸದ ಮಟ್ಟ ಇಲ್ಲ. ಈ ಬಗ್ಗೆ ಸರ್ಕಾರ ಕಂಟ್ರೋಲ್ ಮಾಡಬೇಕು. ತಾಂತ್ರಿಕ ಶಾಲೆಗಳನ್ನು ಪ್ರಾರಂಭ ಮಾಡುವುದಾದರೆ ಸರ್ಕಾರದ ವತಿಯಿಂದ ಮಾಡಿ, ಖಾಸಗಿಯವರಿಗೆ ಅನುಮತಿ ಕೊಡಬೇಡಿ. ಅವು ದುಡ್ಡು ಮಾಡುವ ಸಂಸ್ಥೆಗಳಾಗಿವೆಯೇ ಹೊರತು ವಿದ್ಯಾಭ್ಯಾಸ ಕೊಡುವ ಅನುಕೂಲ ಅವುಗಳಲ್ಲಿ ಇಲ್ಲ. ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ವಿದ್ಯಾ ಇಲಾಖೆ ಇದೆಯೋ ಎಂದು ಅನುಮಾನವಾಗಿದೆ. ಸರ್ಕಾರೀ ಶಾಲೆಗಳಿಗೆ ಕಟ್ಟಡಗಳೇ ಇಲ್ಲ ೨೦೦-೩೦೦ ವಿದ್ಯಾರ್ಥಿಗಳಿಗೆ ಒಬ್ಬರೇ ಟೀಚರ್ ಇರುತ್ತಾರೆ. ಟೀಚರ್ಸ್ ಜಾಸ್ತಿ ಕೊಡಿ ಎಂದು ಪ್ರತಿ ವರ್ಷ ಹೇಳುತ್ತಲೇ ಇದ್ದೇವೆ. ಸರ್ಕಾರಿ ಶಾಲೆಗಳಲ್ಲಿ ಟೀಚರ್ಸ್ ಇಲ್ಲದಿದ್ದರೆ ತಂದೆ ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸಲು ಮುಂದೆ ಬರುವುದಿಲ್ಲ.

೪-೩೦ ಪಿ. ಎಂ.

ಪ್ರತಿಯೊಂದು ಸಲ ಟೀಚರ್ಸ್ ಕೊಡುತ್ತೇವೆ, ರೆಕ್ರೂಟ್‌ಮೆಂಟ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ರೆಕ್ರೂಟ್‌ಮೆಂಟ್ ಮಾಡಿಸಿದ್ದು ನೋಡಿಲ್ಲ. ಇನ್ನೂ ಆ ಕೆಲಸ ಆಗಿಲ್ಲ. ಮಾಡುವುದರಲ್ಲಿದ್ದಾರೆ. ಆ ಕಟ್ಟಡಗಳನ್ನು ನೀವು ನೋಡಿದರೆ ಗೊತ್ತಾಗುತ್ತದೆ. ಮಕ್ಕಳು ನಿಜವಾಗಿಯೂ ಭಯದಿಂದ ಹೋಗಿ ಕುಳಿತುಕೊಳ್ಳುತ್ತಾರೆ. ಏಕೆಂದರೆ ಅಂಥ ಹಳೇ ಬಿಲ್ಡಿಂಗ್. ಇವತ್ತು ೭೫ ಪರ್ಸೆಂಟ್ ವಿದ್ಯಾಭ್ಯಾಸ ಎಲ್ಲಾ ಕಾನ್‌ವೆಂಟ್ ವಿದ್ಯಾಭ್ಯಾಸ ಆಗುತ್ತಿದೆ. ಬೆಂಗಳೂರಿನಲ್ಲಿ ಮೈಸೂರಿನಲ್ಲಿ ಮಾತ್ರವಲ್ಲದೆ ತಾಲ್ಲೂಕು ಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲೂ ಪ್ರೈವೇಟ್ ಕಾನ್‌ವೆಂಟ್ ಎಜುಕೇಷನ್ ಹೆಚ್ಚಾಗಿದೆ. ಅವರು ಕೇಳಿದಷ್ಟು ಡೊನೇಷನ್ ಕೊಡಬೇಕು. ಕೆಲವು ಕಡೆ ೫ ಸಾವಿರ ರೂಪಾಯಿ ಡೊನೇಷನ್ ತೆಗೆದುಕೊಳ್ಳುತ್ತಾರೆ. ಸರ್ಕಾರಿ ಶಾಲೆಗಳು ಯಾವಾಗ ಸರಿಯಾಗಿ ವಿದ್ಯಾಭ್ಯಾಸ ಕೊಡುವುದರಲ್ಲಿ ಫೈಲ್ ಆಯಿತೋ ಆಗಿನಿಂದ ಕಾನ್‌ವೆಂಟ್ ಸ್ಕೂಲ್‌ನವರು ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ವ್ಯಾಪಾರ ನಡೆಸುತ್ತಿದ್ದಾರೆ. ಮೆಡಿಕಲ್ ಕಾಲೇಜುಗಳನ್ನು ನಡೆಸುವುದಕ್ಕಿಂತ ಹೈಸ್ಕೂಲ್‌ವರೆಗೆ ಸ್ಕೂಲ್ ನಡೆಸುವುದು ಅನುಕೂಲವಾಗಿದೆ. ಅಷ್ಟೊಂದು ಫೀಸ್ ವಸೂಲು ಮಾಡುತ್ತಾರೆ. ಅಷ್ಟೊಂದು ತೋಂದರೆ ಕೊಡುತ್ತಾರೆ. ಶಾಲೆ ನಡೆಸುವವರು ರಾಜಮಹಾರಾಜರುಗಳು ಬದುಕಿದಹಾಗೆ ಬದುಕುತ್ತಿದ್ದಾರೆ. ಇದು ತಪ್ಪಬೇಕು. ಇಲ್ಲದೇಹೋದರೆ ಸೆಕೆಂಡರಿ ಎಜುಕೇಷನ್ ವರೆಗಾದರೂ ನ್ಯಾಷನಲೈಸ್ ಮಾಡಬೇಕು. ಪ್ರತಿ ದಿನ ಹೊಸ ಹೈಸ್ಕೂಲುಗಳನ್ನು ಕೊಡುತ್ತಿದ್ದಾರೆ. ಈಗ ಜಿಲ್ಲಾ ಪರಿಷತ್ ಬಂದಿದೆ. ಒಂದೊಂದು ತಾಲ್ಲೂಕಿಗೆ ನಾಲ್ಕೈದು ಹೈಸ್ಕೂಲ್‌ಗಳನ್ನು ಕೇಳುತ್ತಿದ್ದಾರೆ. ಕೊಡುವುದರಲ್ಲಿ ತಪ್ಪಿಲ್ಲ. ಆದರೆ ಯೋಚನೆ ಮಾಡಿ ನಿಜವಾಗಿ ಅವಶ್ಯಕತೆ ಇದೆಯೇ ನೋಡಿ ಕೊಡಬೇಕು. ಯಾರೋ ಪ್ರತಿಷ್ಠಿತ ವ್ಯಕ್ತಿಗಳು ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಪ್ಲಾನ್ ಇದೆಯೋ ನೋಡಿ ನಿಜವಾಗಿ ನೆಸೆಸಿಟಿ ಇದ್ದರೆ ಕೊಡಬೇಕು. ಇಲ್ಲದೇ ಹೋದರೆ ಕೊಡಬಾರದು. ಸರ್ಕಾರ ಕಂಟ್ರೋಲ್ ಇಟ್ಟುಕೊಳ್ಳಬೇಕು. ಇಲ್ಲದೇ ಹೋದರೆ ವಿದ್ಯಾರ್ಥಿಗಳಿಗೆ ಮಾಡುವ ಅನುಕೂಲಕ್ಕಿಂತ ತೊಂದರೆ ಜಾಸ್ತಿಯಾಗುತ್ತದೆ. ಮಾನ್ಯ ಸಚಿವರಿಗೆ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಜಾಸ್ತಿ ಹೊತ್ತು ಮಾತನಾಡುವುದಕ್ಕೆ ಅವಕಾಶ ಇಲ್ಲ. ಹಿಂದೆ ವಿಶ್ವವಿದ್ಯಾನಿಲಯಗಳು ಅಂದರೆ ಹೈ ಸ್ಟ್ಯಾಂಡರ್ಡ್ ಇತ್ತು. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿರುವ ಎಗ್ಸಾಮಿನೇಷನ್ ಸಿಸ್ಟಂ ಅನ್ನು ದೇವರೇ ಕಾಪಾಡಬೇಕು. ಪಾಸಾಗುವವರು ಫೇಲಾಗುತ್ತಾರೆ, ಫೇಲಾಗುವವರು ಪಾಸಾಗುತ್ತಾರೆ. ಗುಲ್ಬರ್ಗ ವಿಶ್ವವಿದ್ಯಾನಿಲಯದ ಹಗರಣ ಪೇಪರ್‌ನಲ್ಲಿ ಬಂದಿದೆ. ಮಾರ್ಕ್ಸ್ ಕಾರ್ಡ್ ಹಗರಣದಿಂದ ವಸ್ತ್ರದ ಎಂಬ ಶಿಕ್ಷಕರು ಆತ್ಮಹತ್ಯೆ ಮಾಡಿಕೊಂಡರು. ಅದು ಆಳ್ವ ಅವರಿಗೆ ಗೊತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಂಥ ಹಗರಣ ಜರುಗಿದೆ. ನಾನೇ ಮೊನ್ನೆ ಒಂದು ವಿಚಾರ ಹೇಳಿದೆ. ಜೊತೆಗೆ ಒಂದು ದುರಾದೃಷ್ಟ ಎಂದರೆ ಎಗ್ಸಾಮಿನೇಷನ್ ಸಿಸ್ಟಂ ಇದೆಯಲ್ಲ ಇದರಲ್ಲಿ ಕಂಟ್ರೋಲೇ ಇಲ್ಲ. ಮಾಸ್ ಕಾಪಿಯಿಂಗ್ ಎಂದು ಹೇಳಿ ಒಳ್ಳೆಯ ವಿದ್ಯಾರ್ಥಿಗಳು ಚೆನ್ನಾಗಿ ಓದಿರುವವರು ಕಾಪಿ ಹೊಡೆಯದೇ ಇರುವವರು ಅವರನ್ನೂ ಫೇಲ್ ಮಾಡಿಸುತ್ತಿದ್ದಾರೆ. ಈರೀತಿ ಎಲ್ಲರನ್ನೂ ಫೇಲ್ ಮಾಡಿಸುವುದು ಅನ್ಯಾಯ. ನಿಜವಾಗಿ ಕಾಪಿ ಮಾಡುವವರನ್ನು ಫೇಲ್ ಮಾಡಿಸುವುದು ಬಿಟ್ಟು ಮಾಸ್ ಕಾಪಿಯಿಂಗ್ ಎಂದು ಕಾಲೇಜಿನಲ್ಲಿರುವ ಎಲ್ಲಾ ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿಸುತ್ತಿದ್ದಾರೆ. ಇದು ಅನ್ಯಾಯ. ಇದು ತಪ್ಪಬೇಕು. ಜೊತೆಗೆ ಎಗ್ಸಾಮಿನೇಷನ್ ಸಿಸ್ಟಂ ಅನ್ನು ಸರಿಪಡಿಸಬೇಕು. ಇವತ್ತು ೨೦ ಪರ್ಸೆಂಟ್ ೧೦ ಪರ್ಸೆಂಟ್ ಪಾಸಾಗಿ ಮುಂದೆ

ಓದುತ್ತಿದ್ದಾರೆ. ೮೫ ಪರ್ಸೆಂಟ್ ಡ್ರಾಪ್ ಔಟ್ಸ್ ಆಗುತ್ತಿದೆ. ಕಾಲೇಜಿಗೆ ಬರುವ ಹೊತ್ತಿಗೆ ೮೫ ರಷ್ಟು ಜನ ಎಲಿಮಿನೇಟ್ ಆಗುತ್ತಿದ್ದಾರೆ. ಇದರ ಬಗ್ಗೆ ಸೀರಿಯಸ್ಸಾಗಿ ಯೋಚನೆ ಮಾಡಿ ಎಗ್ಸಾಮಿನೇಷನ್ ಸಿಸ್ಟಂ ಬಗ್ಗೆ ಬೇಸಿಕ್ ಛೇಂಜಸ್ ಮಾಡಬೇಕು. ಮಕ್ಕಳಿಗೆ ಪರೀಕ್ಷೆ ಅಂದರೆ ಈಗ ಭಯ ಹುಟ್ಟುತ್ತಿದೆ. ಕಾಪಿ ಹೊಡೆಯಬೇಕು ಇಲ್ಲದೇ ಹೋದರೆ ಚೆನ್ನಾಗಿ ಓದಿ ಪಾಸ್ ಮಾಡಬೇಕು ಎಂಬ ಭಾವನೆ ಇದೆ. ಎಗ್ಸಾಮಿನೇಷನ್ ಎನ್ನುವುದು ಭೂತ, ದೆವ್ವ ಎಂದು ಕುಳಿತುಕೊಳ್ಳುವಂತಿರಬಾರದು. ಈಗಲೇ ಮಕ್ಕಳು ಪರೀಕ್ಷೆ ಬಂದರೆ ಇನ್ನು ೮ ದಿವಸಕ್ಕೆ ದೆವ್ವ ಹಿಡಿಯುತ್ತಪ್ಪ ಎಂದು ಹೇಳುತ್ತಾರೆ. ಆ ರೀತಿ ಮಾಡಬೇಡಿ. ಸುಧಾರಣೆ ಮಾಡಬೇಕು. ಬ್ರಿಟಿಷರ ಪದ್ಧತಿಯನ್ನು ಪರೀಕ್ಷಾ ಪದ್ಧತಿಯಲ್ಲಿ ಇನ್ನೂ ಅನುಸರಿಸಿಕೊಂಡು ಬರುತ್ತಿದ್ದಾರೆ. ಸ್ವಂತ ಏನೂ ಇಲ್ಲ. ಅದನ್ನು ತಪ್ಪಿಸಿ ಸ್ವಲ್ಪ ಸುಧಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಾಸ್ ಆಗುವವರು ಫೇಲಾಗುವುದು, ಫೇಲಾಗುವವರು ಪಾಸಾಗುವುದು ಇಂಥ ಅನ್ಯಾಯಗಳನ್ನು ತಪ್ಪಿಸಬೇಕು. ಟೆಕ್ನಿಕಲ್ ಎಜುಕೇಷನ್‌ನಲ್ಲಿ ಅನ್ಯಾಯಕ್ಕೆ ಇತಿಮಿತಿ ಇಲ್ಲ. ಯಾರಾದರೂ ಪಾಸಾಗಬಹುದು ಯಾರಾದರೂ ಫೇಲಾಗಬಹುದು. ಟೆಕ್ನಿಕಲ್ ಎಜುಕೇಷನ್ ಬೋರ್ಡ್‌ನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಕೆಲವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಅಲ್ಲಿ ೨೦೦ ರೂಪಾಯಿ ಬೆಲೆ ಬಾಳುವ ಮಲ್ಟಿ ಮೀಟರನ್ನು ೩೪೫೦ ರೂಪಾಯಿಗೆ ಕೊಂಡುಕೊಂಡಿದ್ದಾರೆ. ಒಂದು ಜನರೇಟರನ್ನು ೧೧,೧೭೦ ರೂಪಾಯಿ ಬೆಲೆ ಇರುವುದನ್ನು ೨೭೯೫ ರೂಪಾಯಿ ಕೊಟ್ಟು ತೆಗೆದುಕೊಂಡಿದ್ದಾರೆ. ಇನ್ನೊಂದು ೩,೨೦೦ ರೂಪಾಯಿ ಬೆಲೆ ಇರುವುದನ್ನು ೧೧,೨೦೦ ರೂಪಾಯಿಗೆ ಕೊಂಡುಕೊಂಡಿದ್ದಾರೆ.

ಅದೇ ರೀತಿ ಕಾಪರ್ ವೈರ್. ಇಂತಹದ್ದು ಬೇಕಾದಷ್ಟು ನಡೆದಿದೆ. ಆದರೆ ಅಲ್ಲಿರುವ ಆಫೀಸರ್ಸ್ ಏನು ಇದ್ದಾರೆ, ಅವರನ್ನು ಕೇಳುವವರು ಹೇಳುವವರು ಇಲ್ಲದಂತಾಗಿದ್ದಾರೆ. ಈ ಇಲಾಖೆಯಲ್ಲಿ ಸತ್ಯನಾರಾಯಣ ಶೆಟ್ಟಿ ಎಂಬುವವರು ಇದ್ದರು, ಈಗ ಅವರನ್ನು ವರ್ಗಾವಣೆಯನ್ನು ಮಾಡಿದ್ದಾರೆ. ಆಗ ಅವರ ಕೈಕೆಳಗೆ ಇದ್ದಂತಹ ಅಧಿಕಾರಿಗಳು ಏನು ಇದ್ದಾರೆ, ಅವರು ಎಷ್ಟು ಬೇಕೋ ಅಷ್ಟನ್ನು ಮಾಡಿಕೊಂಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ಸ್‌ಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಇಂತಹ ಅಕ್ರಮಗಳು ಅದೆಷ್ಟೋ ನಡೆದಿವೆ. ಇಂತಹ ತಪ್ಪನ್ನು ಮಾಡಿದಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದೇ ರೀತಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಕಟ್ಟಡದ ೩ನೇ ಅಂತಸ್ತಿನಿಂದ ಕೆಳಗಡೆಗೆ ಪೇಪರ್ ಬಂಡಲ್ಲನ್ನು ಇಳಿಸುವುದಕ್ಕೆ ೧೦೦ ರೂಪಾಯಿಗಳ ಓಚರನ್ನು ಹಾಕಿದ್ದಾರೆ, ಪ್ರತಿಯೊಂದರಲ್ಲೂ ಈ ರೀತಿ ಮಾಡಿದ್ದಾರೆ. ಹೆಡ್ ಕ್ವಾರ್ಟರ್ಸ್‌ನಿಂದ ರೈಲ್ವೇ ನಿಲ್ದಾಣಕ್ಕೆ ಕಳುಹಿಸುವುದಕ್ಕೆ ೧೦೦ ರೂ. ೧೫ ರೂ. ಈ ರೀತಿ ಓಚರ್ ಹಾಕಿ ಹಣವನ್ನು ತೆಗೆದುಕೊಂಡಿದ್ದಾರೆ. ಇದರಂತೆ ಇರುವ ಇನ್ನೂ ಅನೇಕ ಓಚರ್ಸ್ ಇವೆ. ಅವುಗಳೆಲ್ಲವನ್ನೂ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವ ಸಲುವಾಗಿ ತಮ್ಮ ಮೂಲಕ ಅವುಗಳನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಡುತ್ತಿದ್ದೇನೆ.

ಇನ್ನು ಅಬಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದರ ಬಗ್ಗೆ ನಾನೂ ಹೇಳುವುದು ಅಷ್ಟೊಂದು ಸಮಂಜಸವಾದುದಲ್ಲ. ಅಬ್ಕಾರಿ ಇಲಾಖೆಯ ಏನೂ ಹೇಳಬೇಕೆಂಬುದು ಗೊತ್ತಾಗುತ್ತಿಲ್ಲ. ತೆಲುಗಿನಲ್ಲಿ ಒಂದು ಗಾದೆ ಇದೆ. ಊರಿನಲ್ಲಿರೋವರೆಲ್ಲರೂ ಬ್ರಾಹ್ಮಣರೇ ಆದರೆ ದಿನವೂ ಕೋಳಿಗಳ ಕಳ್ಳತನವಾಗುತ್ತಿದೆ ಎಂದು ಇದು ಆ ರೀತಿ ಆಗಿದೆ. ಅಲ್ಲಿ ಆಗುತ್ತಿರುವಂತಹ ಕಳ್ಳತನದ ಬಗ್ಗೆ ನಾನು ಇಲ್ಲಿ ಹೇಳುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಏಕೆಂದರೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿದೆ. ಹೋದ ಸಾರಿಯೇ ಹೇಳಿದ್ದೇನೆ ಸೆಕೆಂಡ್ಸ್ ನಿಂದ ಒಂದು ದಿವಸಕ್ಕೆ ೧ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ. ಇದನ್ನು ಕಂಟ್ರೋಲ್ ಮಾಡಿ ಅಂತ ಹೇಳಿದ್ದೇನೆ. ಇದನ್ನು ಕಂಟ್ರೋಲ್ ಮಾಡುವುದಕ್ಕಾಗುದಿಲ್ಲ. ನಿಮ್ಮವರಿಂದ ಆ ಕೆಲಸ ಆಗುವುದಿಲ್ಲ. ಅವಕ್ಕೆ ಸಾಧ್ಯವೇ ಇಲವೆಂದು ಸ್ಪಷ್ಟವಾಗಿ ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದಾರೆ. ಅದರಿಂದಾಗಿ ಆ ಬಗ್ಗೆ ಏನೇ ಹೇಳಿದರೂ ಪ್ರಯೋಜನವಿಲ್ಲ. ರೆಕ್ಟಿಫೈಡ್‌ಸ್ಪಿರಿಟ್ ಬಗ್ಗೆ ಸ್ವಲ್ಪ ಹೇಳಬೇಕು. ಅದರ ಬಗ್ಗೆಯೂ ಕೂಡ ಮಾನ್ಯ ಮಿತ್ರರಾದ ಶ್ರೀನಿವಾಸ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದರಲ್ಲಿ ಬೋಗಸ್ ಫರ್ಮ್ಸ್ ಎಷ್ಟು ಎಂಬುದನ್ನು ಅವರೆ ಲೆಕ್ಕ ಹಾಕಿ ಹೇಳಿದ್ದಾರೆ. ಅವರ ಪ್ರಕಾರ ೪೫ ಇವೆ. ಇವರಿಗೆ ಕೊಡುತ್ತಿರುವಂತಹ ರೆಕ್ಟಿಫೈಡ್ ಸ್ಪಿರಿಟ್‌ನ್ನು ಲೆಕ್ಕ ಹಾಕಿ ಹೇಳುವುದಾದರೆ, ಮಾನ್ಯ ಶ್ರೀನಿವಾಸ್

ರವರು ಹೇಳಿದ ಪ್ರಕಾರ ಅವರಿಗೆ ನೀವು ರೆಕ್ಟಿಫೈಡ್ ಸ್ಪಿರಿಟ್‌ನ್ನು ಕೊಡದೆ ನೀವೇ ಮಾರಾಟ ಮಾಡಿದ್ದೇ ಆದರೆ ಸರ್ಕಾರಕ್ಕೆ ೧೫ ಕೋಟಿ ರೂಪಾಯಿಗಳ ಲಾಭ ಬರುತ್ತದೆ ಇಂತಹ ೮೬ ಫರ್ಮ್ಸ್‌ಗಳು ಇರುವ ಬಗ್ಗೆ ನನಗೆ ಮಾಹಿತಿಯನ್ನು ನೀಡಲಾಗಿದೆ. List of alcohol based chemical industries during the Excise year 86–87 ಅದರ ಪೈಕಿ ಎಷ್ಟು ಮೋಸ ನಡೆಯುತ್ತಿದೆ ಎಂಬುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ಮೋಸ ಮಾಡುತ್ತಿರಂತಕ್ಕಂತಹ ೨೦ ಫರ್ಮ್ಸ್‌ಗಳ ಹೆಸರುಗಳನ್ನು ಬೇಕಾದರೆ ನಾನು ಹೇಳುತ್ತೇನೆ, ಅದರಲ್ಲಿ ಅಶೋಕ ಡ್ರೈಸ್ ಪ್ರೈವೇಟ್ ಲಿಮಿಟೆಡ್ ಅಂತ ಒಂದು ಫರ್ಮ್ ಇದೆ. ಇವರದೇ ಆದ ಇನ್ನೊಂದು ಫಾರ್ಮಾ ಡ್ರೈಸ್ ಅಂತ ಬೇರೆ ಇದೆ. ಇವರಿಗೆ ಒಟ್ಟು ಎಷ್ಟು ಸ್ಪಿರಿಟ್ ಕೊಟ್ಟಿದ್ದೀರೆಂದರೆ ೧ ೦೨,೦೨೫ ಲೀಟರ್‌ಗಳಷ್ಟು ಒಂದು ಫರ್ಮಿಗೆ ಕೊಟ್ಟಿದ್ದರೆ, ಇನ್ನೊಂದು ಫರ್ಮ್‌ಗೆ ೧೧,೧೫,೦೦೦ ಲೀಟರ್‌ನಷ್ಟು ರೆಕ್ಟಿಫೈಡ್ ಸ್ಪಿರಿಟ್‌ನ್ನು ಕೊಟ್ಟಿದ್ದಾರೆ. ಇವರು ಸರ್ಕಾರಕ್ಕೆ ಎಷ್ಟು ಮೋಸ ಮಾಡಿದ್ದಾರೆಂದರೆ, ಸರ್ಕಾರಕ್ಕೆ ಕೊಡಬೇಕಾಗಿರುವಂತಹದ್ದು according to the notice issued by the Superintendent of Excise ಅವರಿಂದ ೪೮,೫೫,೫೦೦ ರೂಪಾಯಿಗಳು ಬರಬೇಕಾಗಿದೆ ಎಂಬುದಾಗಿ ನೋಟೀಸ್ ಕೊಟ್ಟಿದ್ದಾರೆ, ೨೬-೨-೧೯೮೭ರಂದು ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಬೆಂಗಳೂರು ಡಿಸ್ಟ್ರಿಕ್ಟ್ ಇವರು ನೋಟೀಸನ್ನು ಸರ್ವೆ ಮಾಡಿದ್ದಾರೆ. ಈ ರೀತಿ ಒಬ್ಬರಿಂದಲೇ ಸರ್ಕಾರಕ್ಕೆ ಬರಬೇಕಾಗಿರುವಂತಹದ್ದು ೭.೫ ಕೋಟಿ ರೂಪಾಯಿಗಳ ನಷ್ಟವಾಗಿದೆ. ಆದರೆ ಇಂತಹದು ೮೬ ಫರ್ಮ್ಸ್ ಇದೆ. ಇದರಿಂದ ಒಟ್ಟು ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಗಮನಿಸಬೇಕು. ಈ ಸರ್ಕಾರದ ಹಣ ಯಾವ ರೀತಿ ಲೂಟಿಯಾಗುತ್ತದೆಂಬುದು ಇದರಿಂದ ಅರ್ಥವಾಗುತ್ತದೆ. ಇವರು ಕೊಡುವ ರೇಟಿನಲ್ಲೇ ಅವರಿಗೂ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಾರೆ. ಈಗಲೂ ೧ ಲಕ್ಷ ೩೫ ಸಾವಿರ ಲೀಟರ್ ಅಲ್ಲಿದೆ. ಅದರಲ್ಲಿ ಕೆಮಿಕಲ್ಸ್, ಸ್ವಲ್ಪ ಎಸೆನ್ಸ್ ಹಾಕಿ, ಇನ್‌ಟಾಕ್ಸಿಕೇಟ್ ಹಾಕಿ ಬ್ರಾಂದಿ ಮಾಡುತ್ತಾರೆ. ೧ ಲೀಟರ್‌ಗೆ ೪ ಲೀಟರ್ ನೀರು ಹಾಕಿ ಮಾಡುತ್ತಾರೆ. ಮತ್ತು ೧ ಲೀಟರ್‌ಗೆ ೬ ಲೀಟರ್ ನೀರು ಹಾಕಿ ಸಾರಾಯಿ ಮಾಡುತ್ತಾರೆ. ಒಂದು ಲೀಟರ್‌ಗೆ ೩೫ ರೂಪಾಯಿ ಇದಾಗುತ್ತದೆ. ಮಾನ್ಯ ಶ್ರೀನಿವಾಸ್ ಅವರು ಹೇಳಿದ ಹಾಗೆ ಇದು ೧೦ ರೂಪಾಯಿ ಅಲ್ಲ, ಅದರಲ್ಲಿ ೧೨ ರೂಪಾಯಿ ಡಿಫರೆನ್ಸ್ ಇರುತ್ತದೆ. ಇದನ್ನು ಡಿಸ್ಟಿಲರಿಗಳಿಗೆ ಕೊಡುತ್ತಾರೆ. ಇವರು ಸೆಕೆಂಡ್ಸ್ ವಿಸ್ಕಿ, ಬ್ರಾಂದಿ ಮಾಡಿ ಮಾರುತ್ತಾರೆ. ಇವತ್ತು ಸರ್ಕಾರಕ್ಕೆ ಸಬ್ಸಿಡೈಸ್ ರೇಟ್‌ನಲ್ಲಿ ಕೊಡುವುದು ಒಂದು ನಷ್ಟವಾದರೆ ಎಕ್ಸೈಸ್ ಡ್ಯೂಟಿನಲ್ಲಿ ಇನ್ನೊಂದು ನಷ್ಟ. ಇವತ್ತು ಇದರಿಂದ ಸರ್ಕಾರಕ್ಕೆ ಸ್ಟೇಜ್ ಸ್ಟೇಜ್‌ಗಳಲ್ಲಿ ನಷ್ಟ ಆಗುತ್ತಾ ಇದೆ. ಈ ರೀತಿಯ ೮೬ ಫರ್ಮ್ಸ್ ಇವೆ ಎಂದು ಅವರೇ ಒಪ್ಪಿಕೊಂಡಿದ್ದಾರೆ ಈಗಲೂ ಕೂಡಾ ಏಕೆ ಪರವಾನಗಿಯನ್ನು ಕೊಟ್ಟಿದ್ದೀರಿ ? ಎಷ್ಟೋ ಫರ್ಮ್‌ಗಳಲ್ಲಿ ಬರೀ ಬೋರ್ಡ್ ಹಾಕಿರುತ್ತಾರೆ. ಅವರ ಹತ್ತಿರ ಏನೂ ಇರುವುದಿಲ್ಲ. ಇಂತಹವನ್ನು ಕ್ಯಾನ್ಸಲ್ ಮಾಡಿದರೆ ಸರ್ಕಾರಕ್ಕೂ ೧೫ ಕೋಟಿ ರೂಪಾಯಿ ಬರುತ್ತದೆ. ನೀವೇ ಡೈರೆಕ್ಟಾಗಿ ಮಾಡಿದರೆ ಸರ್ಕಾರಕ್ಕೆ ೧೫ ಕೋಟಿ ರೂಪಾಯಿ ಲಾಭ ಬರುತ್ತದೆ. ರೆಕ್ಟಿಫೈಡ್ ಸ್ಪಿರಿಟ್ ಹಾಗೂ ಮಿನಿಮಾಮ್ ಗ್ರೇಡ್ ಆಲ್ಕೋಹಾಲ್ ಎಂದು ಎರಡು ಗ್ರೇಡ್ ಮಾಡಿದ್ದೀರಿ. ಅದಕ್ಕೂ ಇದಕ್ಕೂ ೨ ರೂಪಾಯಿ ಡಿಫರೆನ್ಸ್ ಇದೆ ಫ್ಯಾಕ್ಟರಿಯಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರ್ ಕಲ್ಯೂಡ್ ಆಗಿ ರೆಕ್ಟಿಫೈಡ್ ಸ್ಪಿರಿಟ್‌ನ್ನು ಮಿನಿಮಮ್ ಗ್ರೇಡ್ ಆಲ್ಕೋಹಾಲ್ ಎಂದು ಮಾಡಿದರೆ ಸರ್ಕಾರಕ್ಕೆ ೨ ಕೋಟಿ ರೂಪಾಯಿ ನಷ್ಟವಾಗುತ್ತದೆ. ಅಧ್ಯಕ್ಷರೇ, ಇದರಲ್ಲಿ ಮೋಸ ಆಗುತ್ತಿದೆ. ಇದನ್ನು ತಾವು ಗಮನಿಸಬೇಕು. ಆ ರೀತಿ ಸೆಕೆಂಡ್ಸ್ ಬಗ್ಗೆ ಕಂಟ್ರೋಲ್ ಮಾಡಿದರೆ ನಮ್ಮ ಸರ್ಕಾರದ ಚೆಕ್‌ಗಳು ಬೌನ್ಸ್ ಆಗುವುದು ತಪ್ಪುತ್ತದೆ ನೀವು ಸ್ಟ್ರಿಕ್ಟಾಗಿ ಕಂಟ್ರೋಲ್ ಮಾಡಿ. ಮಾನ್ಯ ಶ್ರೀನಿವಾಸ್ ಅವರು ಹೇಳಿದ ಹಾಗೆ ಏನು ಮಾಡಿದರೂ ಕೂಡಾ ನೀವು ಸ್ಟ್ರಿಕ್ಟ್ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಹೈಯರ್ ಅಪ್ಸ್ ಇನ್ವಾಲ್ವ್ ಆಗಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಇದನ್ನು ಹೀಗೆ ಎಕ್ಸೈಸ್ ಬಿಟ್ಟರೆ ಲಾಬಿಗೆ ನೀವು ಗುಲಾಮರಾಗಬೇಕಾಗುತ್ತದೆ. ಈಗಾಗಲೇ ಗುಲಾಮರಾಗಿದ್ದೀರಿ. ನೀವು ಫರ್ದರ್ ಗುಲಾಮರಾಗುವುದು ಬೇಡ. ನೀವು ಕಂಟ್ರೋಲ್ ಮಾಡಿ ಎಂದು ಸ್ಪಷ್ಟವಾಗಿ ಸರ್ಕಾರಕ್ಕೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಾನು ಇದನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳುತ್ತೇನೆ, ಏಕೆಂದರೆ ನಾನು ಮಾನ್ಯ ಇನಾಮ್‌ದಾರ್‌ರವರಿಗೆ ಈ ಬಗ್ಗೆ ಹೇಳುವುದಿಲ್ಲ. ಕಾರಣ ಇವರು ಬಹಳ ಮೃದು ಸ್ವಭಾವದವರು ಇದ್ದಾರೆ. ಹೆಂಡದ ಬಗ್ಗೆ ನಾನು ಹೋದಸಾರಿಯೇ

ಹೇಳಿದ್ದೇನೆ. ಇದು ಕ್ಲೋರಲ್ ಹೈಡ್ರೇಟ್‌ನ್ ಮಿಶ್ರಣದಿಂದ ಕೂಡಿರುವುದರಿಂದ ಪಾಪ ಬಡಜನರು ೭-೮ ವರ್ಷ ಇದನ್ನು ಕುಡಿದರೆ ಡೆಬಲಿಟಿ ಒಂದು ಎಂದರೆ ಅದೂ ಬಂದು ಸಾಯುತ್ತಾರೆ. ಇದನ್ನು ಏಕೆ ಮಾರುತ್ತೀರಿ? ಈ ಹಣದಲ್ಲಿ ಸರ್ಕಾರ ಉದ್ಧಾರ ಆಗುವುದು ಅಷ್ಟರಲ್ಲೇ ಇದೆ. ಹೆಂಡವನ್ನು ಪೂರ್ತಿ ನಿಲ್ಲಿಸಿ. ಈ ಬಡವರ ಹೆಣ್ಣುಮಕ್ಕಳು ಶಪಿಸುವುದನ್ನು ತಾವು ತಪ್ಪಿಸಿ, ಇದನ್ನು ಕೊಟ್ಟು ಅವರಿಗೆ ಮೋಸ ಮಾಡುತ್ತಿದ್ದೀರಿ ಎಂದು ನಾನು ಹೇಳ ಬೇಕಾಗುತ್ತದೆ. ಇನ್ನು ಮತ್ತೆ ಫಾರೆಸ್ಟ್ ಇಪಾರ್ಟ್‌ಮೆಂಟ್ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಇವತ್ತು ನಮ್ಮ ಸಿ ಅಂಡ್ ಡಿ ಲ್ಯಾಂಡ್ ಏನಿದೆ ಅದನ್ನು ಸಾಮಾಜಿಕ ಅರಣ್ಯ ಇಲಾಖೆಯವರು ಅತಿಕ್ರಮಿಸುವುದು ಬೇಡ. ಇವತ್ತು ಫಾರೆಸ್ಟ್ ಲ್ಯಾಂಡನ್ನು ಯಾರು ಉತ್ತಿದ್ದಾರೆ ಅದನ್ನು ದಯಮಾಡಿ ಅವರಿಗೇ ಗ್ರಾಂಟ್ ಮಾಡಿಸಿ. ಈ ಸಿ ಅಂಡ್ ಡಿ ಲ್ಯಾಂಡನ್ನು ಆ ಬಡವರು ೨೦-೩೦ ವರ್ಷಗಳಿಂದ ಉತ್ತಿದ್ದಾರೆ. ಆದರೆ ಸಾಮಾಜಿಕ ಅರಣ್ಯ ಇಲಾಖೆಯವರು ಬಲಾತ್ಕಾರವಾಗಿ ಅತಿಕ್ರಮಿಸಲು ಪ್ರಯತ್ನಿಸುತ್ತಿದ್ದಾರೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಅದನ್ನು ಬಡವರಿಗೇ ಬಿಟ್ಟುಬಿಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—೧೫ ನಿಮಿಷ ಆಯಿತು. ಕೊನೇ ಐಟಂ ಹೇಳಿ ಮುಗಿಸಿ.

ಆಹಾರ ಮಂತ್ರಿಗಳಲ್ಲಿ ಒಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ ಸ್ವಾಮಿ, ಅರ್ಬನ್ ಪೂರ್ ಯಾರಿದ್ದಾರೆ ಅವರಿಗೂ ಕೂಡ ಗ್ರೀನ್ ಕಾರ್ಡ್ ಕೊಡುತ್ತೇವೆಂದು ಹೇಳಿದ್ದೀರಿ, ದಯವಿಟ್ಟು ಬೇಗ ಕೊಡಿ. ಗ್ರೀನ್ ಕಾರ್ಡ್ ಕೊಡುವುದಕ್ಕೆ ಮೊದಲು ಏನು ಕೊಡುತ್ತಾ ಇದ್ರಿ ಅದನ್ನು ಕಂಟಿನ್ಯೂ ಮಾಡಿ. ಸ್ಯಾಪರೂನ್ ಕಾರ್ಡ್ ಮೊದಲು ಏನು ಕೊಟ್ಟಿದ್ದೀರಿ ಅದಕ್ಕೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ ಅದನ್ನು ಜಾಸ್ತಿ ಕೊಡಬೇಕು.

ಮಾನ್ಯ ಸಣ್ಣ ಉಳಿತಾಯ ಮಂತ್ರಿಗಳಾದ ವೀರಣ್ಣನವರಿಗೆ ಹೇಳುವುದೇನೆಂದರೆ ಅವರು ಲಾಟರಿ ಯಿಂದ ಎರಡು ಕೋಟಿ ರೂಪಾಯಿ ಲಾಭ ಬರುತ್ತಿದೆಯೆಂದು ಹೇಳಿದ್ದಾರೆ. ಮೊದಲು ಲಾಟರಿ ಯನ್ನು ಅಬಾಲಿಷ್ ಮಾಡಿ. ಈಗ ಲಾಟರಿ, ರೇಸ್ ಹಬ್ಬಿದಹಾಗೆ ಹಬ್ಬುತ್ತಿದೆ. ಲಾಟರಿಯನ್ನು ಅಬಾಲಿಷ್ ಮಾಡಬೇಕು.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ ಕೂಡ್ರಿ.

ಶ್ರೀ ಆರ್. ವೆಂಕಟರಾಮಯ್ಯ.—ಆಯಿತು ಸ್ವಾಮಿ ಒಂದೇ ಒಂದು ನಿಮಿಷ. ಮೊದಲು ನೀವು ಕಂಟ್ರೋಲ್ ಮಾಡುವುದಿಲ್ಲ ಕಡೆ ಕಡೆಯಲ್ಲಿ ಕಂಟ್ರೋಲ್ ಮಾಡುತ್ತೀರಿ. ಜೈಲಿನಲ್ಲಿ ದಿನಕ್ಕೆ ನಾಲ್ಕು ರೂಪಾಯಿ ಕೊಡುತ್ತಾರೆ. ಅದು ಅವರ ತಿಂಡಿಗೂ ಸಾಕಾಗುವುದಿಲ್ಲ ಅದನ್ನು ಜಾಸ್ತಿ ಮಾಡಬೇಕು, ನಾನು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ ಎಸ್. ರಾಣೆ (ಕಾರವಾರ).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಂಡಿಸಿದ ವಿವಿಧ ಇಲಾಖೆಗಳ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ವಿಶೇಷವಾಗಿ ಶಿಕ್ಷಣ ಮತ್ತು ಅರಣ್ಯ ಇಲಾಖೆಗಳ ಮೇಲೆ ನನ್ನ ಎರಡು ವಿಚಾರಗಳನ್ನು ಮಂಡಿಸಬಯಸುತ್ತೇನೆ. ಈ ದಿನ ಯಾವ ಒಂದು ಶಿಕ್ಷಣದಿಂದ ದೇಶದಲ್ಲಿ ಅಮೂಲಾಗ್ರವಾಗಿ ಬದಲಾವಣೆ ಆಗಬೇಕು, ಈ ದೇಶದ ಉನ್ನತಿಗೆ ಗ್ರಾಮಗಳ ಅಭಿವೃದ್ಧಿಗೆ ಶಿಕ್ಷಣವೇ ನಾಂದಿಯಾಗಬೇಕೆನ್ನುವ ಕನಸನ್ನು ರಾಷ್ಟ್ರಪಿತಾಮಹರು ಏನು ಕಂಡಿದ್ದರು ಆ ಕನಸು ಇವತ್ತು ನನಸಾಗಿಲ್ಲವೆಂದು ಹೇಳುವುದಕ್ಕೆ ವಿಷಾದವಾಗಿದೆ. ಅದರಲ್ಲೂ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಶಿಕ್ಷಣ ಇಲಾಖೆಯಲ್ಲಿ ಏನು ಕಾರ್ಯಕ್ರಮಗಳು ನಡೆದಿವೆ ಅವು ಶಿಕ್ಷಣ ಇಲಾಖೆ ಯನ್ನು ಸಂಪೂರ್ಣವಾಗಿ ಅವ್ಯವಸ್ಥೆಗೊಳಿಸಿವೆ ಅಷ್ಟೇ ಅಲ್ಲ ಗೊಂದಲದಿಂದ ತುಂಬಿಸಿದೆ. ನಾವು ಒಂದು ಕಾಲಕ್ಕೆ ಶಿಕ್ಷಣ ಸಂಸ್ಥೆ ಅಂದರೆ ಪವಿತ್ರ ದೇವಾಲಯಕ್ಕೆ ಸಮಾನವೆಂದು ತಿಳಿದುಕೊಂಡಿದ್ದೆವು. ಆದರೆ ಇವತ್ತು ಶಿಕ್ಷಣದ ಮಟ್ಟವನ್ನು ಸುಧಾರಿಸಬೇಕಾಗಿದೆ. ಯಾವ ಶಿಕ್ಷಣದಿಂದ ಯುವಕರ ನೈತಿಕತೆಯನ್ನು ಬೆಳೆಸಬೇಕು ಯಾವ ಶಿಕ್ಷಣದಿಂದ ವಿಚಾರ ಕ್ರಾಂತಿಯಾಗಬೇಕೆಂದು ಬಯಸಿದ್ದೆವೋ ಅದಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾದ ಕಾರ್ಯ ಶಿಕ್ಷಣ ಇಲಾಖೆಯಲ್ಲಿ ನಡೆಯುತ್ತಾ ಇದೆ. ಇವತ್ತು ಶಿಕ್ಷಣ ಅಂದರೆ ಅದೊಂದು ವ್ಯಾಪಾರ ಆಗಿ ಬಿಟ್ಟಿದೆ. ಜನತಾ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕ್ಯಾಪಿಟೇಷನ್ ಫೀಯನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆಂದು ಹೇಳಿದೆ. ಆದರೆ ಇದೇ ಸರ್ಕಾರ ಇವತ್ತು ಕ್ಯಾಪಿಟೇಷನ್ ಫೀಯನ್ನು ಕ್ರಮಬದ್ಧಗೊಳಿಸಿದ್ದನ್ನು ನೋಡಿದರೆ ನಿಜವಾಗಿಯೂ ವಿಷಾದವಾಗುತ್ತದೆ ಹಾಗೂ ಆತಂಕವಾಗುತ್ತದೆ. ಯುವಕರಲ್ಲಿ ರಾಷ್ಟ್ರದ ಬಗ್ಗೆ

ಅಭಿಮಾನವನ್ನು ಬೆಳೆಸಿ ಅನ್ಯಾಯದ ವಿರುದ್ಧ ಪ್ರತಿಭಟನಾ ಪ್ರವೃತ್ತಿಯನ್ನು ಈ ಶಿಕ್ಷಣದಿಂದ ಬೆಳೆಸಬೇಕೆಂದು ಹಿರಿಯರು ಹೇಳಿದ್ದಾರೆ. ಆದರೆ ಇವತ್ತು ಯುವಕರಲ್ಲಿ ಸಂಪೂರ್ಣವಾಗಿ ಅನೈತಿಕತೆಯನ್ನು ಬೆಳೆಸಿ ರಾಷ್ಟ್ರದ ಬಗ್ಗೆ ಅನಾದಾರಣೆಯನ್ನು ಬೆಳೆಸುವಂತಹ ಪದ್ಧತಿ ಈ ಶಿಕ್ಷಣದಿಂದ ಉಂಟಾಗಿದೆಯೆಂದು ಹೇಳುವುದಕ್ಕೆ ವ್ಯಸನವಾಗುತ್ತದೆ. ಇವತ್ತು ಪ್ರಾಥಮಿಕ ಶಿಕ್ಷಣವನ್ನು ಹಾಗೂ ಮಾಧ್ಯಮಿಕ ಶಿಕ್ಷಣವನ್ನು ತೆಗೆದುಕೊಂಡರೆ ನಮ್ಮ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಮಾಡುವಂತಹ ಕಾರ್ಯವನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ. ರಾಜ್ಯ ಸರ್ಕಾರದವರು ಶಾಲಾ ಕಾಲೇಜುಗಳನ್ನು ತೆರೆಯಬೇಕಾದರೆ ಏನೊಂದು ಕಾರ್ಯಾವಧಿ ಇದೆ ಅದರ ಪ್ರಕಾರ ಮಾಡುತ್ತಿಲ್ಲ. ಶಾಲಾ ಕಾಲೇಜುಗಳು ಯಾವಾಗ ಪ್ರಾರಂಭವಾಗಬೇಕು ಯಾವಾಗ ಶೈಕ್ಷಣಿಕ ವರ್ಷ ಮುಗಿಯಬೇಕು, ಪರೀಕ್ಷೆಗಳನ್ನು ಯಾವಾಗ ನಡೆಸಬೇಕು, ಎಷ್ಟು ಸಲ ನಡೆಸಬೇಕು ಎನ್ನುವ ಬಗ್ಗೆ ಇವರು ಕೈಗೊಂಡಂತಹ ನಿರ್ಣಯ ನಿಜವಾಗಿಯೂ ಹಾಸ್ಯಾಸ್ಪದವಾದ ನಿರ್ಣಯವಾಗಿದೆ. ಸರ್ಕಾರ ತನ್ನ ಯಾವುದೇ ನೀತಿಯಲ್ಲಿ ಬದಲಾವಣೆ ಮಾಡಬೇಕಾದರೆ ಅದರ ಬಗ್ಗೆ ಜನರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಶಿಕ್ಷಣ ತಜ್ಞರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕಾಗುತ್ತದೆ. ಆದರೆ ಇವತ್ತು ಆಶ್ಚರ್ಯಕರವಾದ ಒಂದು ಸಂಗತಿ ಏನೆಂದರೆ ಶಿಕ್ಷಣ ಇಲಾಖೆಯಲ್ಲಿ, ಕರ್ನಾಟಕ ಸರ್ಕಾರದಲ್ಲಿ ಯಾವುದೇ ನಿರ್ಣಯಗಳು ದಿಢೀರನೆ ಆಗುತ್ತವೆ. ಇದಕ್ಕೆ ಯಾವುದೇ ತಳಹದಿ ಇಲ್ಲ, ಯಾವ ಬುನಾದಿಯೂ ಇಲ್ಲ. ಯಾವ ತತ್ವದ ಮೇಲೆಯೂ ಆಧಾರಿತವಾಗಿಲ್ಲವೆಂದು ಹೇಳುವುದಕ್ಕೆ ಬಹಳಷ್ಟು ವಿಷಾದವಾಗುತ್ತದೆ. ಇವತ್ತು ಶಾಲಾಕಾಲೇಜುಗಳ ಪುನರಾರಂಭದ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೋಡಿದಾಗ ಮೊದಲು ಮೇ ೧೬ಕ್ಕೆ ಶಾಲಾಕಾಲೇಜುಗಳು ಪ್ರಾರಂಭ ಆಗಬೇಕೆಂದು ಹೇಳಿ ಪ್ರಕಟಣೆಯನ್ನು ಸರ್ಕಾರ ಹೊರಡಿಸಿತ್ತು. ಅದನ್ನು ಯಾವ ಆಧಾರದ ಮೇಲೆ ಹೊರಡಿಸಿತೋ ಯಾರಿಗೂ ಗೊತ್ತಾಗಲಿಲ್ಲ, ಅದಾದ ಕೆಲವು ದಿವಸಗಳ ನಂತರ ಜೂನ್ ೧ಕ್ಕೆ ಪುನರಾರಂಭ ಮಾಡುತ್ತೇವೆ ಎಂದು ಪ್ರಕಟಣೆಯನ್ನು ಹೊರಡಿಸಿದರು. ಆ ಪ್ರಕಟಣೆ ಹೀಗೆ ಇದೆ.

''ಸರ್ಕಾರ ೧೯೮೮-೮೯ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಶಾಲಾಕಾಲೇಜುಗಳ ದಿನಗಳು ಹಾಗೂ ರಚನೆಯನ್ನು ಬದಲಿಸಿ ಹೊಸ ಆಜ್ಞೆಯನ್ನು ಹೊರಡಿಸಿದೆ. ಇದು ಈ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರುವುದು. ಶಾಲಾಕಾಲೇಜುಗಳ ಆರಂಭ ಜೂನ್ ೧ ರಿಂದ ಆಗುವುದು. ಪ್ರಾಥಮಿಕ, ಪ್ರೌಢ, ಸಂಯುಕ್ತ ಕಿರಿಯ ಕಾಲೇಜು, ಉಪಾಧ್ಯಾಯರ ತರಬೇತಿ ಕೇಂದ್ರ, ದೈಹಿಕ ಶಿಕ್ಷಣ ಶಿಕ್ಷಕರ ತರಬೇತಿ ಕೇಂದ್ರಗಳು ಪುನರಾರಂಭದ ದಿನಾಂಕ ಪ್ರತಿವರ್ಷ ಜೂನ್ ೧ನೇ ತಾರೀಕು ಆಗಿರುತ್ತದೆ. ಪ್ರಥಮ ಶೈಕ್ಷಣಿಕ ಅವಧಿಯು ಜೂನ್ ೧ ರಿಂದ ಅಕ್ಟೋಬರ್ ೧ನೇ ತಾರೀಕಿನವರೆಗೆ ಇರುತ್ತದೆ, ಗಾಂಧಿ ಜಯಂತಿಯನ್ನು ಅಕ್ಟೋಬರ್ ೨ ರಂದು ಆಚರಿಸಲಾಗುವುದು...

ಸರಕಾರಕ್ಕೆ ಆಶ್ಚರ್ಯವಾಗುವುದು ಏನೆಂದರೆ, ಅಕ್ಟೋಬರ್ ೨ರಂದು ಅಲ್ಲದೆ ಬೇರೆ ಯಾವುದಾದರೂ ದಿನ ಗಾಂಧಿಜಯಂತಿಯನ್ನು ಆಚರಿಸಬೇಕೆಂಬ ವಿಚಾರ ಇದೆಯೋ ಹೇಗೆ? ಇವತ್ತು ಗಾಂಧೀಜಿ ಫೋಟೋವನ್ನು ತೋರಿ ಗಾಂಧಿ ಸಮಾಧಿ ಹತ್ತಿರ ಪ್ರತಿ ಮಾಡಿ ಅಧಿಕಾರಕ್ಕೆ ಬಂದಂಥ ಜನ ಗಾಂಧಿಜಯಂತಿಯನ್ನು ಆಚರಿಸುವುದಕ್ಕೆ ಒಂದು ದಿವಸ ಶೈಕ್ಷಣಿಕ ವರ್ಷವನ್ನು ಮುಂದೂಡುವಿಕೆಯನ್ನು ಮಾಡುವಂಥ ವಿಚಾರ ಏಕೆ ಇವರಿಗೆ ಬರಲಿಲ್ಲವೆಂದು ನೋಡಿ ಆಶ್ಚರ್ಯವಾಗುತ್ತದೆ. ನಾನು ಹೇಳುವುದು ಇಷ್ಟೆ ಈ ಒಂದು ರೀತಿಯನ್ನು ನೋಡಿದಾಗ ಸಂಪೂರ್ಣಗೊಂದಲ ಇವತ್ತು ಈ ಇಲಾಖೆಯಲ್ಲಿ ಉಂಟಾಗಿದೆ. ಇಷ್ಟೇ ಅಲ್ಲ, ಇವರು ಈ ಟಿ. ಸಿ. ಹೆಚ್. ಕಾಲೇಜಿಗೆ ಪ್ರವೇಶ ಅರ್ಹತೆಯನ್ನು ಎಸ್. ಎಸ್. ಎಲ್. ಸಿ. ಆದವರಿಗೆ ಮೊದಲಿದ್ದಂಥ ಕನಿಷ್ಟ ಅರ್ಹತೆಯನ್ನು ಬದಲಾಯಿಸಿ ಈಗ ಪಿ.ಯು.ಸಿ. ಆದವರಿಗೆ ಮಾತ್ರ ಅದರಲ್ಲಿ ಪ್ರವೇಶಕ್ಕೆ ಅರ್ಹತೆ ಇದೆಯೆಂದು ಪ್ರಕಟಣೆ ಮಾಡಿದ್ದಾರೆ. ಇಷ್ಟೇ ಅಲ್ಲ, ಮೊನ್ನೆ ಮೊನ್ನೆ ಸಿ.ಪಿ.ಎಡ್. ಕಾಲೇಜುಗಳಿಗೆ ಸಹ ಇವರು ಪ್ರವೇಶ ಅರ್ಹತೆ ಎಸ್.ಎಸ್.ಎಲ್.ಸಿ. ಇದ್ದುದನ್ನು ಪಿ ಯು. ಸಿ. ಎಂದು ಮಾಡಿ ಜೊತೆಗೆ ಅದರಲ್ಲಿ ಶೇಕಡಾ ೪೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕೆಂದು ಪ್ರಕಟಣೆ ಮಾಡಿದ್ದಾರೆ. ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಈ ಸರ್ಕಾರಕ್ಕೆ ಯಾವುದೇ ದುರ್ಬಲವರ್ಗದ ಜನತೆಯ ಬಗ್ಗೆ, ಯಾರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೋ, ಆ ಜನರ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇವತ್ತು ಹಿಂದುಳಿದ ವರ್ಗಗಳಿಗೆ ಸೇರಿದಂಥ ಜನ, ಹರಿಜನ ಗಿರಿಜನ ವರ್ಗಗಳಿಗೆ ಸೇರಿದಂಥ ಜನ ಈ ಒಂದು ಕನಿಷ್ಟ ಅರ್ಹತೆಯನ್ನು ಗಳಿಸುವುದು ಕಷ್ಟವಾದಂಥ ಮಾತು. ಕೇವಲ ಎಸ್.ಎಸ್.ಎಲ್.ಸಿ. ಯನ್ನು ಮುಟ್ಟ

ಬೇಕಾದರೆ ಅನೇಕ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಅಲ್ಲಿಗೆ ಮುಟ್ಟುವಂಥ ದುರ್ಬಲ ವರ್ಗದ ಜನ ಪಿ.ಯು.ಸಿ. ವರೆಗೆ ಮುಟ್ಟಬೇಕೆಂದರೆ ಅವರು ಈ ತರಬೇತಿಯನ್ನು ಪಡೆಯುವುದಕ್ಕೆ ಹೇಗೆ ಸಾಧ್ಯವೆಂದು ಸರ್ಕಾರ ನಿಜವಾಗಿಯೂ ಯೋಚನೆ ಮಾಡಬೇಕಿತ್ತು, ಆದರೆ ದುರ್ದೈವದಿಂದ ಸರ್ಕಾರ ವಿಚಾರ ಮಾಡುತ್ತಿಲ್ಲ. ಏನೋ ಒಣ ಪ್ರತಿಷ್ಠೆಯಿಂದ ನಾವು ಮಾಡಿದ್ದೇ ನಿಜ, ನಾವು ಹೇಳಿದ್ದೇ ಪೂರ್ವ, ಪಶ್ಚಿಮ ಎಂದು ಹೋದರೆ ನಿಜವಾಗಿಯೂ ಜನತೆಯ ಉದ್ಧಾರವಾಗುವುದಿಲ್ಲ, ವಿದ್ಯಾರ್ಥಿಗಳು ಉದ್ಧಾರವಾಗುವುದಿಲ್ಲ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಯಾವಾಗಲೂ ಬರುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಅಭಿಪ್ರಾಯ ಪಡಬೇಕಾಗುತ್ತದೆ. ಅಧ್ಯಕ್ಷರೇ, ಇಷ್ಟೇ ಅಲ್ಲ, ಇವತ್ತು ಇವರು ಕೈಗೊಂಡಂಥ ಪ್ರತಿಯೊಂದು ಕಾರ್ಯದಲ್ಲಿಯೂ ಇದೇ ರೀತಿಯ ಅವಾಂತರ, ಇದೇ ರೀತಿಯ ಗೊಂದಲ ಉಂಟಾಗಿದೆ. ಕ್ಯಾಪಿಟೇಷನ್ ಫೀಯನ್ನು ರದ್ದು ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದಂಥ ಸರ್ಕಾರ ಅನಂತರ ಒಂದು ಕಾನೂನನ್ನು ಮಾಡಿತು, ಇದರಿಂದ ಕ್ಯಾಪಿಟೇಷನ್ ಶುಲ್ಕ ಕಡಿಮೆ ಆಗಬಹುದು, ರದ್ದು ಆಗಬಹುದು ಎಂದು ಜನ ತಿಳಿದುಕೊಂಡಿದ್ದರೆ, ಅದು ಮತ್ತೂ ಹೆಚ್ಚಾಯಿತು. ಕ್ಯಾಪಿಟೇಷನ್ ಶುಲ್ಕವನ್ನು ಆಧರಿಸಿ ಪ್ರಾರಂಭವಾದಂಥ ಅನೇಕ ಕಾಲೇಜುಗಳಿಗೆ ಇವರು ಮಾನ್ಯತೆ ಕೊಟ್ಟರು. ವಿಶೇಷವಾಗಿ ಮೆಡಿಕಲ್, ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗಳಿಗೆ ಇವರು ಮಂಜೂರಾತಿ ಕೊಟ್ಟು ಅವುಗಳು ನಾಯಿ ಕೊಡೆಗಳಂತೆ ಬೆಳೆಯುವುದಕ್ಕೆ ಆಸ್ಪದವನ್ನು ಕೊಟ್ಟರು. ಮತ್ತೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ. ಮೇಲಿಂದ ಮೇಲೆ ಮುಖ್ಯ ಮಂತ್ರಿಗಳು, ಶಿಕ್ಷಣ ಮಂತ್ರಿಗಳು ಆದಿಯಾಗಿ ಎಲ್ಲರೂ ಸಾರ್ವಜನಿಕ ಸಮಾರಂಭಗಳಲ್ಲಿ ಹೇಳುತ್ತಲೇ ಇರುತ್ತಾರೆ.

ಕ್ಯಾಪಿಟೇಷನ್ ಶುಲ್ಕವನ್ನು ನಾವು ರದ್ದು ಮಾಡುತ್ತೇವೆ. ಕ್ಯಾಪಿಟೇಷನ್ ಶುಲ್ಕವನ್ನು ತತ್ವಶಃ ವಿರೋಧಿಸುತ್ತೇವೆಂದು ಹೇಳುತ್ತಿದ್ದರು. ತತ್ವಶಃ ವಿರೋಧಿಸಿದಂಥ ಜನ, ಕಾರ್ಯರೂಪಕ್ಕೆ ತರುವುದಕ್ಕೆ ಏಕೆ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸುತ್ತಿಲ್ಲ ಎಂದು ಇಲ್ಲಿ ನಾವು ಪ್ರಶ್ನಿಸಬೇಕಾಗುತ್ತದೆ. ಇವರು ಒಂದು ಆಜ್ಞೆಯನ್ನು ಮಾಡಿದ್ದಾರೆ, ಜುಲೈ ೧೫ರ ನಂತರ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳಬಾರದು ಎಂದು. ಇಂತಹ ಒಂದು ಆಜ್ಞೆಯಿಂದ ಇಡೀ ರಾಜ್ಯದ ಜನತೆ, ಇವರನ್ನು ಹಾಡಿ ಹೊಗಳಿ ಕೊಂಡಾಡಬಹುದು. ಜುಲೈ ೧೫ರ ನಂತರ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದರೆ, ಜುಲೈ ೧೫ರ ವರೆಗೂ ಖಾಸಗಿ ಮೆಡಿಕಲ್ ಕಾಲೇಜುಗಳು, ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು, ತಮಗೆ ಬೇಕಾದಹಾಗೆ ಲೂಟಿ ಮಾಡಲು ಅಲ್ಲಿಯವರೆಗೆ ಪರ್ಮಿಟ್ ಕೊಟ್ಟಿದ್ದಾರೆ. ನನಗೆ ಒಂದು ಸಂಶಯ ಬರುತ್ತದೆ. ಜುಲೈ ೧೫ರ ನಂತರ ಸಂಪೂರ್ಣವಾಗಿ ರದ್ದಾಗುತ್ತದೆಯೋ ಅಥವಾ ಮತ್ತೆ ಮೇ ತಿಂಗಳವರೆಗೆ ಸಡಿಲಗೊಳಿಸುತ್ತಾರೋ ಎಂಬ ಬಗ್ಗೆ ಹೇಳುವುದಕ್ಕೆ ಬರುವುದಿಲ್ಲ. ಇದರ ಅರ್ಥ ಒಂದೇ ಆಗುತ್ತದೆ, ಇವರಿಗೆ ಯಾವ ವಿಷಯದಲ್ಲೂ ಪ್ರಾಮಾಣಿಕತೆ ಇಲ್ಲ, ಭಾರಿ ನಯನಾಜೂಕಿನಿಂದ ಪ್ರತಿಯೊಂದು ಸಾರ್ವಜನಿಕ ವೇದಿಕೆಯಲ್ಲೂ ಜನರಿಗೆ ಬೇಕಾದ್ದನ್ನು ಹೇಳುತ್ತಾರೆ. ಇವರು ಜನರಿಗೆ ವಿರೋಧವಾದುದನ್ನು ಯಾವುದೂ ಹೇಳುವುದಿಲ್ಲ. ಅತ್ಯಂತ ನಯನಾಜೂಕು ತನದಿಂದ ಜನರಿಗೆ ಹೇಳುವುದರಲ್ಲಿ ತುಂಬಾ ಪರಿಣತರಾಗಿದ್ದಾರೆ. ಯಾರಾದರೂ ನಯನಾಜೂಕಿನಲ್ಲಿ, ಮೋಸ ಮಾಡುವುದರಲ್ಲಿ ನೊಬೆಲ್ ಪಾರಿತೋಷಕವನ್ನು ಇಟ್ಟರೆ, ಅದು ಈ ಸರ್ಕಾರಕ್ಕೆ ಸಲ್ಲುತ್ತದೆಯೇ ಹೊರತು ಬೇರೆ ಯಾರಿಗೂ ಸಲ್ಲುವುದಿಲ್ಲ. ನಾನು ಈ ವಿಷಯವನ್ನು ಕುಚೇಷ್ಟೆಯಿಂದ ಹೇಳುತ್ತಿಲ್ಲ, ಸಂಪೂರ್ಣವಾಗಿ ಮನನೊಂದು ಈ ವಿಷಯವನ್ನು ಹೇಳಬೇಕಾಗಿದೆ. ಇವತ್ತು ಶಿಕ್ಷಣ ಇಲಾಖೆ ಎಂದರೆ, ಶಿಕ್ಷಣ ಸಚಿವರ ಖಾಸಗಿ ಆಸ್ತಿ ಎನ್ನುವಂಥ ಕಾರ್ಯ ನಡೆಯುತ್ತಿದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಕಳೆದ ಸಲ ಇಲ್ಲಿ ಒಂದು ಗಲಾಟೆಯಾಯಿತು. ಕಾರವಾರದಲ್ಲಿ ಸದಾಶಿವಗಡ ಕಾಲೇಜಿನ ಅನುಮತಿ ಬಗ್ಗೆ ಗಲಾಟೆಯಾಯಿತು. ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ನಾಲ್ಕು ಕಾಲೇಜುಗಳಿಗೆ ಮಾನ್ಯತೆಯನ್ನು ರದ್ದು ಮಾಡಿದರು. ಅನಂತರ, ಇನ್ನೊಂದು ಸ್ವಲ್ಪ ದಿವಸದ ನಂತರ, ಇಲ್ಲಿ ಗಲಾಟೆಯಾದ ನಂತರ, ಕೋರ್ಟಿನಲ್ಲಿ ಇದರ ಬಗ್ಗೆ ಪ್ರಶ್ನೆ ಮಾಡಲಾಯಿತು. ನಂತರ ಇನ್ನುಳಿದ ಮೂರು ಕಾಲೇಜುಗಳಿಗೂ ಮಾನ್ಯತೆಯನ್ನು ರದ್ದುಮಾಡಿದರು. ಮೊದಲು ಅನುಮತಿ ಕೊಟ್ಟವರೂ ಇವರೇ. ಅನಂತರ ಈ ಕಾಲೇಜುಗಳಿಗೆ ರದ್ದತಿ ಆಜ್ಞೆ ಮಾಡಿದರೂ ಇವರೇ. ಒಂದೇ ಒಂದು ಕಾಲೇಜಿಗೆ ಮಾತ್ರ ಇದುವರೆಗೆ ಮಾಡಿಲ್ಲ. ನಾನು ಈ ವಿಚಾರವಾಗಿ, ಖಾಸಗಿಯಾಗಿ ಶಿಕ್ಷಣ ಮಂತ್ರಿಗಳನ್ನು ಕೇಳಿದಾಗ, ಅವರು ನನ್ನ ಮನಸ್ಸಿಗೆ ಬಹಳಷ್ಟು ನೋವಾಗಿದೆ ಎಂದು ತಿಳಿಸಿದರು. ಈ ವಿಚಾರವಾಗಿ ಜಿಲ್ಲಾ ಮಂತ್ರಿಗಳನ್ನು ಕೇಳಿ, ಮಾಜಿ ಲೋಕಸಭಾ ಸದಸ್ಯರಿದ್ದಾರೆ, ಅವರನ್ನು ಕೇಳಿ,

ಮುಖ್ಯಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ಇವರೆಲ್ಲಾ ಈ ಕೆಲಸ ಮಾಡುವುದಾದರೆ, ಶಿಕ್ಷಣ ಮಂತ್ರಿಗಳಾಗಿ ಇವರು ಏಕೆ ಇದ್ದಾರೆ. ಇವರು ಶಿಕ್ಷಣ ಇಲಾಖೆಯ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು. ಈ ಕಾಲೇಜುಗಳ ಮಾನ್ಯತೆಯನ್ನು ರದ್ದು ಮಾಡಿದ್ದು ಅನ್ಯಾಯದ ಕೆಲಸ ಎಂದು ತಿಳಿದೂ ಸಹ ಈ ರೀತಿ ಏಕೆ ರದ್ದು ಮಾಡಿದರು ? ಈ ರೀತಿ ಶಿಕ್ಷಣ ಇಲಾಖೆಯಲ್ಲಿ ಸಿಗತಕ್ಕ ನ್ಯಾಯದ ಬಗ್ಗೆ ಯುವಕರಲ್ಲಿ ಪ್ರತಿಭಟನೆ ಉಂಟಾಗಬೇಕಾಗಿದೆ. ನಾನು ಇಲ್ಲಿ ಹೆಚ್ಚಿನ ಆರೋಪ ಮಾಡುವ ಪ್ರಸಂಗಕ್ಕೆ ಹೋಗುವುದಿಲ್ಲ. ಇವತ್ತು ವೃತ್ತಿ ಶಿಕ್ಷಣದ ಬಗ್ಗೆ ಯಾವ ಒಂದು ರೀತಿಯ ಮಹತ್ವ ಕೊಡಬೇಕೋ, ಆ ರೀತಿಯಲ್ಲಿ ಮಹತ್ವ ಕೊಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕೇಂದ್ರ ಸರ್ಕಾರ ರಾಷ್ಟ್ರಕ್ಕೆ ಹೊಸ ಶೈಕ್ಷಣಿಕ ನೀತಿಯನ್ನು ಕೊಟ್ಟು, ಅದರ ಮುಖಾಂತರ ವೃತ್ತಿಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ರಾಜ್ಯಸರ್ಕಾರದವರು ಹಿಂದೇಟು ಹಾಕುತ್ತಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ೧೯೮೬–೮೭ರಲ್ಲಿ ಒಂದು ನೂರು ಪ್ರೌಢಶಾಲೆಗಳಲ್ಲಿ ವೃತ್ತಿಶಿಕ್ಷಣವನ್ನು ಪ್ರಾರಂಭಿಸುವುದಕ್ಕೆ ಅನುಮತಿಯನ್ನು ಕೊಟ್ಟರು.

೫–೦೧ ಪಿ. ಎಂ.

ಪ್ರತಿಯೊಂದು ಶಾಲೆಗೆ ನಾಲ್ಕುಸಾವಿರ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದರು. ಆದರಿಂದ ವೃತ್ತಿಶಿಕ್ಷಣ ಹಾಗೂ ಬೇರೆ ಕೆಲವು ಕೆಲಸಗಳನ್ನು ಮಾಡುವುದಕ್ಕೆ ಸಹಾಯವಾಗುತ್ತಿತ್ತು. ಆದರೆ ಇವತ್ತು ಪ್ರತಿಯೊಂದು ಪ್ರೌಢಶಾಲೆಗೆ ವೃತ್ತಿಶಿಕ್ಷಣಕ್ಕಾಗಿ ಕೊಡುತ್ತಿದ್ದ ನಾಲ್ಕುಸಾವಿರ ರೂಪಾಯಿಗಳ ಅನುದಾನವನ್ನು ಎರಡುಸಾವಿರ ರೂಪಾಯಿಗಳಿಗೆ ಇಳಿಸಿದ್ದಾರೆ. ನಿಜವಾಗಿಯೂ ವರ್ಷದಿಂದ ವರ್ಷಕ್ಕೆ ಆಗುತ್ತಿರುವ ಬೆಲೆಗಳ ತುಟ್ಟಿಗ್ರತೆಯಲ್ಲಿ ಅನುದಾನ ಹೆಚ್ಚಾಗಬೇಕಾಗಿತ್ತು. ಆದರೆ ದುರ್ದೈವದಿಂದ ಇದನ್ನು ಎರಡುಸಾವಿರ ರೂಪಾಯಿಗಳಿಗೆ ಇಳಿಸಿರುತ್ತಾರೆ. ಇದರಿಂದ ಇವರು ವೃತ್ತಿಶಿಕ್ಷಣಕ್ಕೆ ಯಾವರೀತಿ ಮಹತ್ವ ಕೊಡುತ್ತಿದ್ದಾರೆ ಎಬುದನ್ನು ತಿಳಿದುಕೊಳ್ಳಬಹುದಾಗಿದೆ. ಇವತ್ತು ಪ್ಲಸ್ ಟು ಎಂದರೆ ಪದವಿಪೂರ್ವ ಶಿಕ್ಷಣ ಮಟ್ಟದಲ್ಲಿ ಅನೇಕ ಕಾಲೇಜುಗಳವರು ಈ ವೃತ್ತಿಶಿಕ್ಷಣವನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರುತ್ತಿರುವುದಾಗಿ ವರದಿಯಲ್ಲಿ ಹೇಳಿದ್ದೀರಿ, ಆದರೆ ಅವರಿಗೆ ತಾವು ನೀಡುತ್ತಿರುವ ಪ್ರೋತ್ಸಾಹ ಎಷ್ಟು ಎಂದರೆ ಅದು ನಿರುತ್ಸಾಹದಾಯಕವಾಗಿದೆ. ಇವತ್ತು ಮೂರು ವರ್ಷಗಳ ಹಿಂದೆ ಇದ್ದಂಥ ಪದವಿಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ವೃತ್ತಿಶಿಕ್ಷಣಕ್ಕೆ ನೆರವನ್ನು ಕೊಡುತ್ತಿದ್ದೀರಿ. ಅದರ ನಂತರ ಯಾವುದೇ ಖಾಸಗಿ ವಿದ್ಯಾಸಂಸ್ಥೆಯವರಿಗೂ ಕೂಡಾ ಈ ನೆರವನ್ನು ಮುಂದುವರಿಸಿಲ್ಲ. ಇಲಾಖೆಗೆ ಹೋಗಿ ಇದರ ಬಗ್ಗೆ ಚೌಕಾಶಿ ಮಾಡಿದಾಗ ನಾವು ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ಸ್ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಕೇಂದ್ರ ಸರಕಾರಕ್ಕೆ ಪ್ರಪೋಸಲ್ ಕಳುಹಿಸಿದ್ದೇವೆ ಎಂದು ನೀವು ವರ್ಷಗಟ್ಟಲೆ ಕಾಲಹರಣ ಮಾಡಿದರೆ ಇದನ್ನು ಏನಾದರೂ ಉದ್ಧಾರ ಮಾಡಿದಂತಾಗುತ್ತದೆಯೋ ಎಂದು ನಾನು ಕೇಳುತ್ತೇನೆ. ಇವತ್ತು ವೃತ್ತಿಶಿಕ್ಷಣದಿಂದ ನಮ್ಮ ಯುವಕರಿಗೆ ಬಹಳಷ್ಟು ಸಹಾಯವಾಗುವ ಸಂದರ್ಭ ಇದೆ, ಇಂತಹ ಸಂದರ್ಭದಲ್ಲಿ ನೀವು ಈ ರೀತಿ ಅಲಕ್ಷ್ಯ ಮಾಡಿದರೆ ಹೇಗೆ ನಾವು ಪ್ರಗತಿಯನ್ನು ಅಪೇಕ್ಷೆ ಪಡುವುದು ಎಂದು ಕೇಳಬೇಕಾಗುತ್ತದೆ. ಇದು ಕೇವಲ ವೃತ್ತಿಶಿಕ್ಷಣದಲ್ಲೆಷ್ಟೇ ಅಲ್ಲ, ಇವತ್ತು ಕೇಂದ್ರ ಸರಕಾರದವರು ಪ್ರತಿಯೊಂದು ಬ್ಲಾಕ್‌ನಲ್ಲೂ ಒಂದು ಪ್ರೌಢಶಾಲೆಯನ್ನು ಆರಿಸಿ, ಅದಕ್ಕೆ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಅದರ ಅಭಿವೃದ್ಧಿಗೆ ಕೊಡುತ್ತೇವೆಂದು ಜಾಹೀರಾತು ಪಡಿಸಿದ್ದಾರೆ. ಇದರ ಬಗ್ಗೆ ಅನೇಕ ಜಿಲ್ಲೆಗಳಿಂದ ಇವತ್ತು ಪ್ರಸ್ತಾವನೆಗಳು ಶಿಕ್ಷಣ ಇಲಾಖೆಗೆ ಬಂದಿವೆ, ಆದರೆ ಅವೆಲ್ಲಾ ಶಿಕ್ಷಣ ಇಲಾಖೆಯಲ್ಲಿ ಕೊಳೆಯುತ್ತಿವೆಯೇ ಹೊರತಾಗಿ ಕೇಂದ್ರ ಸರಕಾರಕ್ಕೆ ಇನ್ನೂ ಹೋಗಿಲ್ಲ. ತಾವು ಇದರ ಬಗ್ಗೆ ನಿಜವಾದ ಆಸಕ್ತಿಯನ್ನು ವ್ಯಕ್ತಪಡಿಸಿದಾಗ ಮಾತ್ರ ಪ್ರೌಢಶಾಲಾ ಶಿಕ್ಷಣದಲ್ಲಾಗಲೀ, ಪದವಿಪೂರ್ವ ಶಿಕ್ಷಣದಲ್ಲಾಗಲೀ ಪ್ರಗತಿ ಆಗುತ್ತದೆ. ಇದಕ್ಕೆ ಪ್ರಾಮಾಣಿಕ ಪ್ರಯತ್ನ ಬೇಕು ಎಂದು ಹೇಳುತ್ತೇನೆ. ಇವತ್ತು ಜಿಲ್ಲೆಗಳಿಂದ ಬಂದಂಥ ಪ್ರಸ್ತಾವನೆಗಳು ಏತಕ್ಕೆ ಕೊಳೆಯುತ್ತಾ ಇವೆ, ಏತಕ್ಕೆ ಇದನ್ನು ಕೇಂದ್ರಕ್ಕೆ ಕಳುಹಿಸಿಲ್ಲ, ಇದರ ಬಗ್ಗೆ ನಿಮ್ಮ ಅಧಿಕಾರಿಗಳ ಕಿವಿ ಹಿಂಡುವಂತಹ ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು ಮುಕ್ತಾಯ ಮಾಡಿ.

ಶ್ರೀ ಪಿ. ಎಸ್. ರಾಣೆ.—ಪ್ರಾಥಮಿಕ ಶಿಕ್ಷಣದ ದುಸ್ಥಿತಿಯ ಬಗ್ಗೆ ಮಾನ್ಯ ಆಚಾರ್‌ರವರು ಚೆನ್ನಾಗಿ ಹೇಳಿದ್ದಾರೆ. ಅನೇಕ ತಾಲ್ಲೂಕುಗಳಲ್ಲಿ ವಿಶೇಷವಾಗಿ ನನ್ನ ಕ್ಷೇತ್ರವಾದ ಸೂಪಾ ತಾಲ್ಲೂಕಿನಲ್ಲಿ ಇನ್ನೂ ಅನೇಕ ಹಳ್ಳಿಗಳಲ್ಲಿ ಶಾಲೆಗಳೇ ಇಲ್ಲ. ಶಾಲೆಗಳು ಇದ್ದಲ್ಲಿ ಇಮಾರತಿಗಳು ಇಲ್ಲ, ಇಮಾರತಿಗಳು (ಬಿಲ್ಡಿಂಗ್ಸ್) ಇದ್ದಲ್ಲಿ ಶಿಕ್ಷಕರಿಲ್ಲ ಎಂಬಂತೆ ಆಗಿದೆ. ವಿಶೇಷವಾದ ಅಂಶ ಎಂದರೆ ಕಾಲುಭಾಗಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ಶಾಲೆಗಳೇ ಇಲ್ಲ. ಇವತ್ತು ಏನೋ ಕೇಂದ್ರ ಸರಕಾರ ಕಪ್ಪುಹಲಗೆ ಯೋಜನೆಯ ಮುಖಾಂತರ ಏಕ ಶಿಕ್ಷಕರು ಇರುವ ಶಾಲೆಗಳಿಗೆ ಇನ್ನೊಬ್ಬ ಶಿಕ್ಷಕರನ್ನು ಕೊಡುವ, ಇಮಾರತಿಗಳನ್ನು ಮಂಜೂರು ಮಾಡುವ ಕೆಲಸ ಮಾಡಿದ್ದಾರೆ. ಆದರೆ ಹಿಂದುಳಿದ ತಾಲ್ಲೂಕುಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ, ಶಿಕ್ಷಣದ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿದಾಗ ಮಾತ್ರ ಅಲ್ಲಿ ಜನರಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನಗನ್ನಿಸುತ್ತದೆ. ಇಷ್ಟೇ ಅಲ್ಲ ಇವತ್ತು ಶಿಕ್ಷಕರ ವರ್ಗಾವಣೆ ಬಗ್ಗೆ, ಹಾಗೂ ನೇಮಕಾತಿ ಬಗ್ಗೆ ಈ ಸದನದಲ್ಲಿ ಈಗಾಗಲೇ ಅನೇಕ ಸಾರಿ ಕಾವೇರಿದ ಚರ್ಚೆಯಾಗಿದೆ. ನಾವು ಅನೇಕ ಸಲ ಪತ್ರಿಕೆಗಳಲ್ಲಿ ಓದುತ್ತೇವೆ. ೭ ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯನ್ನು ಮಾಡುತ್ತೇವೆ ಎಂಬ ಶಿಕ್ಷಣ ಸಚಿವರ ಹೇಳಿಕೆಯನ್ನು ನಾವು ಪತ್ರಿಕೆಯಲ್ಲಿ ನೋಡುತ್ತೇವೆ. ಆದರೆ ಕಳೆದ ಎರಡು ವರ್ಷಗಳಿಂದ ಒಬ್ಬ ಶಿಕ್ಷಕರ ನೇಮಕಾತಿ ಮಾಡುವಂತಹ ಪ್ರಸಂಗ ಬಂದಿಲ್ಲ ಎಂದರೆ ಇದು ನಿಜವಾಗಿಯೂ ನಾಚಿಕೆಗೇಡಿನ ವಿಷಯ. ಶಿಕ್ಷಕರ ನೇಮಕಾತಿಗಾಗಿ ನೇಮಕ ಸಮಿತಿ ಮಾಡುತ್ತೀರಿ. ಆ ಸಮಿತಿಗಳಲ್ಲಿ ನಮಗೂ ಚಾನ್ಸ್ ಸಿಗಬಹುದೆಂದು ಅನೇಕ ಜನ ನಿಮ್ಮ ಪಕ್ಷದ ಸದಸ್ಯರು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಅವರ ಸಲುವಾಗಿಯಾದರೂ ನೀವು ನೇಮಕಾತಿ ಸಮಿತಿಗಳನ್ನು ಮಾಡಿ ಶಿಕ್ಷಕರ ನೇಮಕ ಮಾಡುವುದನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ. ಶಿಕ್ಷಕರ ವರ್ಗಾವರ್ಗಿಯಲ್ಲಿ ಯಾವ ರೀತಿ ಅಧಿಕಾರ ದುರುಪಯೋಗ ಮಾಡಿದ್ದಾರೆ, ಯಾವ ರೀತಿ ಹಸ್ತಕ್ಷೇಪ ಮಾಡಿದ್ದಾರೆಂದು ನೋಡಿದರೆ ನಿಜವಾಗಿಯೂ ನಮಗೆಲ್ಲಾ ಆಶ್ಚರ್ಯ ಮತ್ತು ಆತಂಕವುಂಟಾಗುತ್ತದೆ. ಇವತ್ತು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಅನೇಕ ಶಿಕ್ಷಕರು ವರ್ಗಾವರ್ಗಿಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎನ್ನುವುದಕ್ಕೆ ಆಧಾರವಿದ್ದು ಅನ್ಯಾಯವಾದ ಶಿಕ್ಷಕರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ಸಹ ತಂದಿದ್ದಾರೆ......

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರು ಮಾತನಾಡುತ್ತಾ ನನ್ನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ ಅವರು ಒಂದೇ ಒಂದು ಉದಾಹರಣೆ ಕೊಡಬೇಕು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹಸ್ತಕ್ಷೇಪ ಮಾಡಿರುವ ಬಗ್ಗೆ ಯಾರಾದರೂ ವರ್ಗಾವರ್ಗಿಗೆ ಅರ್ಜಿ ಕೊಟ್ಟರೆ ಅಂತಹ ಅರ್ಜಿಯನ್ನು ಪರಿಶೀಲನೆ ಮಾಡಿ ಎಂದು ನಾನು ಜಿಲ್ಲಾ ಪರಿಷತ್ತಿಗೆ ಕಳುಹಿಸಿಕೊಟ್ಟಿರಬಹುದು ಅದು ಬಿಟ್ಟು ಶಿಕ್ಷಕರ ವರ್ಗಾವರ್ಗಿಯಲ್ಲಿ ನನ್ನ ಹಸ್ತಕ್ಷೇಪವಿದ್ದರೆ ದಯಮಾಡಿ ಅವರು ಒಂದನ್ನಾದರೂ ಪ್ರೂ ಮಾಡಬೇಕು ಇಲ್ಲದಿದ್ದರೆ ಅವರ ಹೇಳಿಕೆಯನ್ನು ವಿತ್ ಡ್ರಾ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಮುಕ್ತಾಯ ಮಾಡಿ. ತಾವು ಕೊನೆಯದಾಗಿ ಒಳ್ಳೆಯ ಸಲಹೆ ಕೊಡಿ, ಕಾಂಟ್ರವರ್ಸಿ ಬೇಡ.

ಶ್ರೀ ಪಿ. ಎಸ್. ರಾಣೆ.—ಏಕೆ ಅಧ್ಯಕ್ಷರೇ, ಕಾಂಟ್ರವರ್ಸಿ ಎಂದರೆ ಹೆದರುತ್ತೀರಿ ? ಕಾಂಟ್ರವರ್ಸಿ ಅಂದರೆ ತಮಗೆ ಆಗುವುದೇ ಇಲ್ಲವಲ್ಲಾ.

ಅಧ್ಯಕ್ಷರು.—ಆಯಿತು ಮುಗಿಸಿ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಒಂದೇ ಒಂದು ಉದಾಹರಣೆ ಕೊಡಿ ಎಂದು ಕೇಳಿದ್ದಾರೆ ನಾನು ಎರಡು ಉದಾಹರಣೆ ಕೊಡುತ್ತೇನೆ.

ಅಧ್ಯಕ್ಷರು.—ನೀವು ಎರಡಲ್ಲ ಹತ್ತು ಕೊಟ್ಟರೂ ಅವರು ಉತ್ತರ ಹೇಳುತ್ತಾರೆ.

ಶ್ರೀ ಪಿ. ಎಸ್. ರಾಣೆ.—ಈಗ ಹುಳಿಯಾಳದಿಂದ ದಾಂಡೇಲಿಗೆ ಒಬ್ಬ ಶಿಕ್ಷಕರನ್ನು ವರ್ಗಾವಣೆ ಮಾಡಿದರು. ಆ ಶಿಕ್ಷಕರು ದಾಂಡೇಲಿಗೆ ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಂಡ ನಂತರ ಕೇವಲ ೮ ದಿವಸಗಳಲ್ಲಿ ಮತ್ತೆ ಆ ಶಿಕ್ಷಕರನ್ನು ದೂರದ ಭಟ್ಕಳ ತಾಲ್ಲೂಕಿಗೆ ವರ್ಗಾವಣೆ ಮಾಡಿದರು. ಯಾವ ಕಾರಣವೂ ಇಲ್ಲ. ಒಂದು ಸಲ ವರ್ಗಾವಣೆಯಾದ ಮೇಲೆ ಮತ್ತೆ ೮ ದಿವಸದಲ್ಲಿ ಮತ್ತೆ ವರ್ಗಾವಣೆ ಆಯಿತು......

ಅಧ್ಯಕ್ಷರು.—ಆಯಿತು ಮುಗಿಸಿ.

ಶ್ರೀ ಪಿ. ಎಸ್. ರಾಣೆ.—ನಿಯಮದ ಪ್ರಕಾರ ಒಂದು ಸಲ ವರ್ಗಾವಣೆ ಮಾಡಿದರೆ ಮತ್ತೊಮ್ಮೆ ವರ್ಗಾವಣೆ ಮಾಡಲು ಅದು ಅವಧಿಪೂರ್ವ ವರ್ಗಾವಣೆಯಾಗುತ್ತದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಅನುಮತಿ ಪಡೆಯಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳ ಅನುಮತಿ ಇಲ್ಲ. ಆ ಶಿಕ್ಷಕರ ವರ್ಗಾವಣೆಯನ್ನು ಬೇರೆ ತಾಲ್ಲೂಕಿಗೆ ಮಾಡಿದರು. ಅದೇ ರೀತಿ ಇನ್ನೊಬ್ಬ ಶಿಕ್ಷಕರಿಗೂ ಆಯಿತು ಅವರು ಕೋರ್ಟಿಗೆ ಕೂಡ ಹೋದರು ಅದರಲ್ಲಿ ಮಾನ್ಯ ಸಚಿವರನ್ನು ಪಾರ್ಟಿಯನ್ನಾಗಿ ಮಾಡಿದರು. ಅವರಿಗೆ ತಡೆಯಾಜ್ಞೆ ಸಹ ಸಿಕ್ಕಿತು. ಆಮೇಲೆ ಹಳಿಯಾಳದಲ್ಲಿರತಕ್ಕಂಥ ಕಾಂಪೋಸಿಟ್ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರ ಕಥೆ ಇದೆ ಆಯಿತು. ಅವರನ್ನು ವರ್ಗಾವಣೆ ಮಾಡಿದಾಗ ಅವರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು, ಮಾನ್ಯ ಸಚಿವರನ್ನು ಸಹ ಪಾರ್ಟಿಯನ್ನಾಗಿ ಮಾಡಿದ್ದಾರೆ. ನಾನು ಎಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ ಅವರು ಬಂದು ಹೇಳಿ ಎಂದು ಕೇಳಿದರು ನಾನು ಎರಡು ಉದಾಹರಣೆಗಳನ್ನು ಹೇಳಿದ್ದೇನೆ.......

ಶ್ರೀ ಆರ್. ವಿ. ದೇಶಪಾಂಡೆ.—ನನ್ನ ಮಿತ್ರರು ಈ ವರ್ಷದ ಶಿಕ್ಷಕರ ವರ್ಗಾವಣೆಯಲ್ಲಿ ಉಸ್ತುವಾರಿ ಮಂತ್ರಿಗಳ ಹಸ್ತಕ್ಷೇಪವಿದೆ ಎಂದು ಹೇಳಿದರು, ಆದರೆ ಅವರು ಹಿಂದಿನ ವರ್ಷದ ಬಗ್ಗೆ ಮಾತನಾಡುತ್ತಿದ್ದಾರೆ. ಆದರೂ ನಾನು ಉತ್ತರ ಕೊಡುತ್ತೇನೆ. ನಾನು ಹಿಂದಿನ ವರ್ಷದ ವರ್ಗಾವಣೆಯಲ್ಲಿ ಕೂಡ ಹಸ್ತಕ್ಷೇಪ ಮಾಡಿಲ್ಲ. ನನಗೆ ಬಂದ ಮನವಿ ಪತ್ರಗಳನ್ನು ನಾನು ಜಿಲ್ಲಾ ಪರಿಷತ್ತಿಗೆ ಕಳುಹಿಸಿದ್ದೆ. ಜಿಲ್ಲಾ ಪರಿಷತ್ತಿನವರು ವರ್ಗಾವಣೆ ಮಾಡಿದ್ದನ್ನು ಕ್ಯಾನ್ಸಲ್ ಮಾಡಿ ರೀ ಟ್ರಾನ್ಸ್‌ಫರ್ ಮಾಡಿದ್ದಾರೆ. ಅದು ನನಗೆ ಸಂಬಂಧಪಟ್ಟಿದ್ದು ಅಲ್ಲ. ನನ್ನ ಜವಾಬ್ದಾರಿಯೂ ಅಲ್ಲ. ಒಂದು ಕೇಸ್‌ನಲ್ಲಿ ನನ್ನನ್ನು ಪಾರ್ಟಿ ಮಾಡಿದ್ದಾರೆ. ಅದು ತಪ್ಪಲ್ಲ. ಮಾನ್ಯ ರಾಣೆಯವರನ್ನು ಬೇಕಾದರೂ ಮಾಡಬಹುದು. ನಾನು ಹಸ್ತಕ್ಷೇಪ ಮಾಡಿರುವುದಕ್ಕೆ ಮಾನ್ಯ ಸದಸ್ಯರಲ್ಲಿ ಪುರಾವೆ ಬೇಕಲ್ಲಾ. ನಾನು ಈ ವರ್ಷದಲ್ಲಿ ಏನಾದರೂ ಹಸ್ತಕ್ಷೇಪ ಮಾಡಿದ್ದು ಹೇಳಿ ಎಂದರೆ ಅವರು ಹಿಂದಿನ ವರ್ಷದ್ದು ಹೇಳುತ್ತಿದ್ದಾರೆ. ಒಂದು ಕೇಸ್‌ನಲ್ಲಿ ನನ್ನನ್ನು ಪಾರ್ಟಿ ಮಾಡಿರುವುದು ನಿಜ. ನಾಳೆ ಅವರನ್ನು ಬೇಕಾದರೂ ಮಾಡಬಹುದು. ವರ್ಗಾವರ್ಗಿ ಬಗ್ಗೆ ತಾವು ಜಿಲ್ಲಾ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಬಹುದಾಗಿತ್ತು. ಅಲ್ಲಿ ಏತಕ್ಕೆ ಕೇಳಲಿಲ್ಲ ?

ಶ್ರೀ ಪಿ. ಎಸ್. ರಾಣೆ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಾವು ಬೇಕಾದರೆ ರೆಕಾರ್ಡ್ ತರಿಸಿ ನೋಡಿ. ರಾಜಕೀಯ ಹಸ್ತಕ್ಷೇಪವಾಗುತ್ತದೆಂದು ಮಾತ್ರ ಹೇಳಿದ್ದೇನೆ. ಈ ವರ್ಷ ಆ ವರ್ಷ ಎಂದು ಹೇಳಿಲ್ಲ. ಹೋದ ವರ್ಷವಾದರೂ ಮಾನ್ಯ ಸಚಿವರು ಹಸ್ತಕ್ಷೇಪ ಮಾಡಿದ್ದಾರಲ್ಲಾ ಸಾಕು ಬಿಡಿ......

ಅಧ್ಯಕ್ಷರು.—ಇನ್ನೊಂದು ಮಾತ್ರ ನಂತಹ ಮಾತು ಹೇಳಿ ಮುಗಿಸಿ ಸಾಕು.

ಶ್ರೀ ಪಿ. ಎಸ್. ರಾಣೆ.—ಇವತ್ತು ಯಾವ ರೀತಿ ಗೊಂದಲಮಯವನ್ನುಂಟು ಮಾಡಿದ್ದಾರೆ ಎನ್ನುವುದಕ್ಕೆ ನಾನೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಸರ್ಕಾರದವರು ಪ್ರೌಢಶಾಲೆಗಳಿಗೆ ಅನುದಾನವನ್ನು ಶೇಕಡ ೧೦೦ರಷ್ಟು ಕೊಡುತ್ತಿದ್ದರು. ಈ ಮಧ್ಯೆ ಒಂದು ಪ್ರಕಟಣೆಯನ್ನು ಹೊರಡಿಸಿ ಶೇಕಡ ೭೫ ಪರ್ಸೆಂಟ್‌ನಷ್ಟು ಮಾತ್ರ ಅನುದಾನವನ್ನು ಕೊಡುತ್ತೇವೆಂದು ಹೇಳಿದರು. ಆಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದರು, ಏನಾಯಿತು ಎನ್ನುವುದು ಗೊತ್ತಾಗಲಿಲ್ಲ. ಈ ರೀತಿಯಾದರೆ ಯಾವ ರೀತಿ ಶಿಕ್ಷಣ ಕ್ಷೇತ್ರ ಉದ್ಧಾರವಾಗುತ್ತದೆ ? ಈ ಬಗ್ಗೆ ಮಾನ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮುಕ್ತಾಯ ಮಾಡಿ, ತಾವು ಚೆನ್ನಾಗಿ ಮಾತನಾಡುತ್ತೀರೆಂದು ೧೦ ನಿಮಿಷ ಕೊಟ್ಟಿದ್ದೇನೆ. ಮುಕ್ತಾಯ ಮಾಡಿ.

ಶ್ರೀ ಪಿ. ಎಸ್. ರಾಣೆ.—ನಾಳೆ ನಮಗೆ ಮತ್ತೆ ಅವಕಾಶ ಸಿಗುವುದಿಲ್ಲ. ಇನ್ನು ಈ ಸಹಶಿಕ್ಷಕರ ಬಗ್ಗೆ ಹೇಳುವುದಾದರೆ, ಇವರ ವೇತನದಲ್ಲಿ ಅನ್ಯಾಯವಾಗಿದೆ ಎಂದು ಅನೇಕ ಸಲ ಚಳುವಳಿ ಮಾಡಿದರು.

ಆ ಸಹ ಶಿಕ್ಷಕರು ಬೇಡಿಕೆ ಈಡೇರುವವರೆಗೂ ಮೌಲ್ಯಮಾಪನ ಮಾಡುವುದಿಲ್ಲವೆಂದು ಬಹಿಷ್ಕಾರ ಹಾಕಿದ್ದರು. ನಿಮ್ಮ ಬೇಡಿಕೆಯನ್ನು ಕೂಡಲೇ ಈಡೇರಿಸುತ್ತೇವೆಂದು ಸರ್ಕಾರ ಭರವಸೆ ಕೊಟ್ಟಿತ್ತು.

ಆದರೆ, ಇದುವರೆಗೂ ಅವರ ಬೇಡಿಕೆಗಳನ್ನು ಈಡೇರಿಸಲಿಲ್ಲ. ಆದಷ್ಟು ಬೇಗ ಈ ಸಹ ಶಿಕ್ಷಕರ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಆಮೇಲೆ ವಿಶ್ವವಿದ್ಯಾನಿಲಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇಬೇಕಾಗುತ್ತದೆ.

ಅಧ್ಯಕ್ಷರು.— ಬೇಗ ಮುಗಿಸ್ರಿ.

ಶ್ರೀ ಪ್ರಭಾಕರ್ ಎಸ್. ರಾಣೆ.— ತಮ್ಮ ಅನುಗ್ರಹದಿಂದ ನಾನು ಸಿಂಡಿಕೇಟ್ ಸದಸ್ಯನಾಗಿದ್ದೇನೆ. ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳು ಎಂದು ಹೇಳುತ್ತಾರೆ. ಆದರೆ, ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳು ಆಗಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ವಿಶ್ವವಿದ್ಯಾನಿಲಯಗಳು ಸ್ವಾಯತ್ತ ಸಂಸ್ಥೆಗಳಾಗಿರದೇ ಅವುಗಳು ಸರ್ಕಾರದ ಇಲಾಖೆಗಳಾಗಿ ಮಾರ್ಪಾಡಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರದಿಂದ ಏನು ಅನುದಾನ ಬಿಡುಗಡೆಯಾಗಬೇಕೋ, ವಿಶ್ವವಿದ್ಯಾನಿಲಯಗಳ ವಿವಿಧ ಕಾರ್ಯಕ್ರಮಗಳಿಗೆ ಏನು ಸಹಾಯವನ್ನು ನೀಡಬೇಕೋ ಅದಕ್ಕೆ ಸರ್ಕಾರ ಅನೇಕ ಸಲ ವಿಪರೀತ ವಿಳಂಬ ಮಾಡಿದೆ. ಅನುದಾನವನ್ನು ಪಡೆಯುವುದಕ್ಕಾಗಿ ಮತ್ತು ಇತರೆ ಸಹಾಯಗಳನ್ನು ಪಡೆಯುವುದಕ್ಕಾಗಿ ವಿಶ್ವವಿದ್ಯಾನಿಲಯಗಳ ಉಪ ಕುಲಪತಿಗಳೇ ಶಿಕ್ಷಣ ಇಲಾಖೆಯ ಕೋಣೆಯಿಂದ ಕೋಣೆಗೆ ಓಡಾಡಿ ಕೆಲಸವನ್ನು ಮಾಡಿಸಿಕೊಂಡು ಹೋಗುವುದನ್ನು ನೋಡಿದ್ದೇವೆ. ಈ ರೀತಿ ಮಾಡುವುದರಿಂದ ವಿಶ್ವವಿದ್ಯಾನಿಲಯಗಳಿಗೆ ಏನು ಮರ್ಯಾದೆ ಇರುತ್ತದೆ ? ವಿಶ್ವವಿದ್ಯಾನಿಲಯಗಳ ಉಪ ಕುಲಪತಿಗಳಿಗೆ ಏನು ಮರ್ಯಾದೆ ಇರುತ್ತದೆ ? ಆಮೇಲೆ ಕಾರವಾರ ಮತ್ತು ಬಿಜಾಪುರದಲ್ಲಿ ಪಿ.ಜಿ. ಸೆಂಟರ್‌ಗಳನ್ನು ಓಪನ್ ಮಾಡುತ್ತೇನೆಂದು ಮಾನ್ಯ ಮಂತ್ರಿಯವರು ಭರವಸೆ ಕೊಟ್ಟಿದ್ದರು, ಹೋದ ವರ್ಷವೇ ಪಿ.ಜಿ ಸೆಂಟರ್‌ಗಳನ್ನು ಓಪನ್ ಮಾಡುತ್ತಿದ್ದೆವು ಆದರೆ ಆರ್ಥಿಕ ಅಡಚಣೆಯಿಂದ ಓಪನ್ ಮಾಡುವುದಕ್ಕಾಗಲಿಲ್ಲವೆಂದು ಹೇಳಿದ್ದರು. ಆದರೆ, ಇವತ್ತಿನವರೆಗೂ ಅದರ ಬಗ್ಗೆ ಸುದ್ದಿಯೇ ಇಲ್ಲ. ಪಿ ಜಿ ಸೆಂಟರ್‌ಗಳನ್ನು ತೆರೆಯುವುದಕ್ಕೆ ಬೇಕಾದ ಸಹಕಾರವನ್ನು ಕೊಡಲಾಗುತ್ತದೆಂದು ಸಂಬಂಧಪಟ್ಟ ಕಾಲೇಜುಗಳವರು ತಾತ್ಪೂರ್ತಿಕವಾಗಿ ಒಪ್ಪಿಕೊಂಡಿದ್ದರು. ಆದ್ದರಿಂದ, ಶಿಕ್ಷಣ ಸಚಿವರು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಿ ಇದೇ ಶೈಕ್ಷಣಿಕ ವರ್ಷದಲ್ಲಿ ಬಿಜಾಪುರ ಮತ್ತು ಕಾರವಾರದಲ್ಲಿ ಪಿ.ಜಿ.ಸೆಂಟರ್‌ನ್ನು ಓಪನ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಶಿಕ್ಷಣ ಸಚಿವರು ಈ ಕೆಲಸವನ್ನು ಮಾಡುತ್ತಾರೆಂದು ನಾನು ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಇದೂ ಅಲ್ಲದೆ ಮೈನಾರಿಟೀಸ್ ಬಗ್ಗೆ,...

ಅಧ್ಯಕ್ಷರು.— ಎಷ್ಟು ಸಾರಿ ಇದೂ ಅಲ್ಲದೇ ಇದೂ ಅಲ್ಲದೆ ಎಂದು ಹೇಳ್ತೀರಿ ? ಬೇಗ ಮುಗಿಸ್ರಿ.

ಶ್ರೀ ಪ್ರಭಾಕರ್ ಎಸ್. ರಾಣೆ.— ಅಲ್ಪ ಸಂಖ್ಯಾತರ ಬಗ್ಗೆ ಬಹಳಷ್ಟು ಕಾಳಜಿಯನ್ನು ವ್ಯಕ್ತಪಡಿಸುವ ಈ ಸರ್ಕಾರ, ಬಹಳ ವರ್ಷಗಳಿಂದಲೂ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉರ್ದು ಡಿಪಾರ್ಟ್‌ಮೆಂಟ್‌ನ್ನು ತೆರೆಯಬೇಕೆಂಬ ಬೇಡಿಕೆ ಇದ್ದರೂ ಅದರ ಬಗ್ಗೆ ಗಮನ ಹರಿಸಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಬರುವ ಕಾಲೇಜುಗಳಲ್ಲಿ ಕೇವಲ ಉರ್ದು ವಿಷಯಗಳನ್ನು ಮಾತ್ರ ಕಲಿಸುತ್ತಾರೆಯೇ ಹೊರತು ಒಂದು ಉರ್ದು ಡಿಪಾರ್ಟ್‌ಮೆಂಟ್‌ನ್ನು ಮಾಡುವುದಕ್ಕೆ ಆಗಲಿಲ್ಲ. ಉರ್ದು ಡಿಪಾರ್ಟ್‌ಮೆಂಟ್‌ನ್ನು ತೆರೆಯುವುದರಿಂದ ಸರ್ಕಾರಕ್ಕೆ ದೊಡ್ಡ ರೀತಿಯಲ್ಲಿ ಆರ್ಥಿಕ ಭಾರ ಬರುವುದಿಲ್ಲ. ಉರ್ದು ಡಿಪಾರ್ಟ್‌ಮೆಂಟ್‌ನ್ನು ತೆರೆಯುವ ಬಗ್ಗೆ ಕರ್ನಾಟಕ ವಿಶ್ವವಿದ್ಯಾನಿಲಯವು ಈಗಾಗಲೇ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಆದಷ್ಟು ಬೇಗ ಈ ಡಿಪಾರ್ಟ್‌ಮೆಂಟ್‌ನ್ನು ಪ್ರಾರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಆಗ್ರಹಪಡಿಸುತ್ತೇನೆ. ಇವತ್ತು ಅರಣ್ಯ ಇಲಾಖೆ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು.— ಮಾನ್ಯ ರಾಣೆಯವರೇ, ನೀವು ದಯವಿಟ್ಟು ಕುಳಿತುಕೊಳ್ಳಿ. ನೀವು ಅರ್ಧ ತಾಸು ಮಾತನಾಡಿದ ಹಾಗೆ ಆಯಿತು.

ಶ್ರೀ ಪ್ರಭಾಕರ್ ಎಸ್. ರಾಣೆ.— ಅರಣ್ಯ ಇಲಾಖೆಗೆ ಏನಾದರು ಜೀವ ಬಂದಿದ್ದರೆ ಅದು ಸಾಮಾಜಿಕ ಅರಣ್ಯ ಇಲಾಖೆ ಯೋಜನೆಯಿಂದ ಮಾತ್ರ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಾಮಾಜಿಕ ಅರಣ್ಯ ಯೋಜನೆಯು ದುರ್ದೈವದಿಂದ ಬರೀ ರಸ್ತೆ ಬದಿಗೆ ಗಿಡಗಳನ್ನು ಬೆಳೆಸುವುದಕ್ಕೆ

ಮಾತ್ರ ಸೀಮಿತವಾಗಿದೆ. ಸಾಮಾಜಿಕ ಅರಣ್ಯ ಯೋಜನೆ ಎಂದರೆ, ಸಮಾಜದಲ್ಲಿರುವ ಎಲ್ಲಾ ಜನರಿಗೂ ಅರಣ್ಯ ಬೆಳೆಸುವ ಬಗ್ಗೆ ತಿಳುವಳಿಕೆ ಕೊಟ್ಟು ಎಲ್ಲಾ ಜನರು ಗಿಡಗಳನ್ನು ಬೆಳೆಸುವ ಕಡೆ ಹೆಚ್ಚು ಗಮನ ವನ್ನು ಕೊಡುವಂತೆ ಮಾಡುವುದೇ ಸಾಮಾಜಿಕ ಅರಣ್ಯ ಯೋಜನೆ. ಜನಗಲ್ಲಿ ಅರಣ್ಯವನ್ನು ಬೆಳೆಸು ವುದಕ್ಕೆ ಒಲವು ಬೆಳೆಸಬೇಕು. ಆಮೇಲೆ ಮಾನ್ಯ ಸದಸ್ಯರಾದ ಸ್ವಾಮಿರಾವ್ ಹೇಳಿದಂತೆ ನರ್ಸರಿ (ಗಿಡಗಳನ್ನು ಬೆಳೆಸುವ ಜಾಗ)ಗಳನ್ನು ಮಾಡುವುದರಲ್ಲಿ ಮತ್ತು ಇನ್ನೂ ಅನೇಕ ವಿಷಯಗಳಲ್ಲಿ ಅಂದರೆ, ಹೊಂಡಗಳನ್ನು ತೋಡುವುದರಲ್ಲಿ ಮತ್ತಿತರ ಕೆಲಸಗಳನ್ನು ಮಾಡಿಸುವುದರಲ್ಲಿ ಅರಣ್ಯ ಇಲಾಖೆಯಲ್ಲಿ ಬಹಳಷ್ಟು ಅವ್ಯವಹಾರಗಳು ನಡೆದಿವೆ. ಗೊಬ್ಬರಗಳನ್ನು ಹಾಕಿ ಗಿಡಗಳನ್ನು ಅರಣ್ಯ ಇಲಾಖೆಯವರು ಬೆಳೆಸುತ್ತಿದ್ದಾರೆ. ಹಿಂದಿನ ಕಾಡುಗಳಲ್ಲಿ ಯಾವ ಗೊಬ್ಬರವನ್ನೂ ಹಾಕಿ ಅರಣ್ಯಗಳನ್ನು ಬೆಳೆಸಿರಲಿಲ್ಲ. ಗೊಬ್ಬರ ಹಾಕುವುದರಲ್ಲೂ ಅವ್ಯವಹಾರ, ದುರ್ವ್ಯವಹಾರ ಮಾಡಿಕೊಂಡು ತಾವು ಬೆಳೆಯುತಕ್ಕಂಥ ದುರುದ್ದೇಶ ಏನಾದರೂ ಮಾಡಿದ್ದಾರೋ ಎಂದು ಸಂಶಯ ನನಗೆ ಬರುತ್ತದೆ. ಇವತ್ತು ಅರಣ್ಯ ಮೃಗಗಳ ಹಾವಳಿಯಿಂದ ಜನರಿಗೆ ಏನಾದರೂ ತೊಂದರೆಯಾದರೆ ನೀವು ಪರಿಹಾರವನ್ನು ಕೊಡುತ್ತೀರಿ. ಇದರ ಬಗ್ಗೆ ಆಗಿರುವಂಥ ಅನ್ಯಾಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಅಧ್ಯಕ್ಷರು — ಬೇಗ ಮುಗಿಸಿ. ಈಗಾಗಲೇ ನಿಮಗೆ ೩೦ ಮಿನಿಟ್ ಅವಕಾಶ ಕೊಟ್ಟಿದ್ದೇನೆ. ನಾನು ಅರಣ್ಯ ಪ್ರದೇಶದ ಕ್ಷೇತ್ರದಿಂದ ಬಂದವನು.

ಅಧ್ಯಕ್ಷರು.— ನಿಮಗೆ ನಾನು ೨೦ ನಿಮಿಷಗಳ ಅವಧಿಯನ್ನು ಕೊಟ್ಟಿದ್ದು. ಈಗಾಗಲೇ ನೀವು ೩೦ ನಿಮಿಷಗಳ ಕಾಲ ಮಾತನಾಡಿದ್ದೀರಿ. ದಯಮಾಡಿ ತಾವು ಮುಕ್ತಾಯ ಮಾಡಬೇಕು.

ಶ್ರೀ ಪ್ರಭಾಕರ ಎಸ್. ರಾಣೆ.— ಅಧ್ಯಕ್ಷರೆ, ಅರಣ್ಯದಲ್ಲಿರುವ ಕಾಡಾನೆಗಳು ಇವೊತ್ತಿನ ದಿವಸ ಅವುಗಳಿಗೆ ಕಾಡುಗಳಲ್ಲಿ ನೀರು ಸಾಕಷ್ಟು ಸಿಗದಿರುವುದರಿಂದಾಗಿ ಊರಿಗೆ ಹೊಕ್ಕಿವೆ. ಇದು ಮಾನ್ಯ ದೇಶಪಾಂಡೆಯವರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಸುಪಾ ತಾಲ್ಲೂಕಿನ ಜನರು ಇವೊತ್ತು ನಿರ್ಭೀತಿಯಿಂದ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿಲ್ಲ. ಕಳೆದ ಕೆಲವು ದಿನಗಳ ಹಿಂದೆ ಕುಂಬಾರ ಪೇಟೆ ಪ್ರದೇಶಕ್ಕೆ ಕಾಡಾನೆಯು ಬಂದ ಪ್ರಸಂಗ ನಡೆಯಿತು. ಆಗ ಒಬ್ಬ ಮನುಷ್ಯನೂ ಕಾಡ ಕಾಡಾನೆಗೆ ಬಲಿಯಾಗಿ ಸತ್ತಿದ್ದಾನೆ. ಆದರೆ ಅವನಿಗೆ ಸಿಕ್ಕಿರತಕ್ಕಂಥ ಪರಿಹಾರವು ೫ ಸಾವಿರ ರೂ.ಗಳು ಮಾತ್ರ. ಹಾಗಾದರೆ ಒಬ್ಬ ಸತ್ತ ಮನುಷ್ಯನಿಗೆ, ಅವನ ಕುಟುಂಬದವರಿಗೆ ೫ ಸಾವಿರ ಕೊಟ್ಟರೆ ಆ ಮನುಷ್ಯನ ಬೆಲೆ ಅಷ್ಟೆಯೇ ? ಆತನ ಕುಟುಂಬದವರಿಗೆ ಆ ಪರಿಹಾರ ಸಾಕಾಗುತ್ತದೆಯೇ ? ಒಂದು ಮೀಟಿಂಗ್‌ನಲ್ಲಿ ಅಲ್ಲಿಯ ಜನರು ನಮ್ಮ ಸಚಿವರಿಗೆ ಕೇಳಿದ್ದಾರೆ. ನಾವು ೧೦ ಸಾವಿರ ರೂಪಾಯಿ ಗಳನ್ನು ಕೊಡುತ್ತೇವೆ ಒಂದು ಆನೆಯನ್ನು ಕೊಲ್ಲುತ್ತೇವೆ, ಅಥವಾ ನಮ್ಮ ಮನುಷ್ಯನನ್ನು ನಮಗೆ ಕೊಡಿ ಎಂದು ಕೇಳಿದ್ದಾರೆ. ಇಂತಹ ಪರಿಹಾರವನ್ನು ಕೊಡುವಾಗ ಒಂದು ಪಂಚನಾಮೆ ಮಾಡುವ ಕ್ರಮ ಇದೆ. ಅದರಲ್ಲಿ ಸಾರ್ವಜನಿಕರು ಮತ್ತು ನಿಮ್ಮ ಅಧಿಕಾರಿಗಳು ಇರುತ್ತಾರೆ. ಆ ಪಂಚನಾಮೆಯ ಮೂಲಕ ಏನು ಬೆಲೆಯನ್ನು ನಿರ್ದಿಷ್ಟಪಡಿಸುತ್ತಾರೆ, ಆ ಬೆಲೆಯನ್ನಾದರೂ ಸರಕಾರದವರು ಕೊಡುವ ಒಂದು ನಿರ್ಧಾರವನ್ನು ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಆದಂಥ ಹಾನಿಯನ್ನು ಯಾರು ತುಂಬಿ ಕೊಡುತ್ತಾರೆ ? ಇವೊತ್ತು ರೈತರು ಸರ್ವತ್ಯಾಗ ಮಾಡಿ...

ಅಧ್ಯಕ್ಷರು.— ತಮಗೆ ಏನು ಆಗಬೇಕಾಗಿದೆ ಅದನ್ನು ಹೇಳಿ...

ಶ್ರೀ ಪ್ರಭಾಕರ ಎಸ್. ರಾಣೆ.— ಇವೊತ್ತು ಅಲ್ಲಿ ನಡೆಯುವ ಪಂಚನಾಮೆಯ ಪ್ರಕಾರವೇ ಪರಿಹಾರ ಮೊತ್ತವನ್ನು ನಿರ್ಧರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಕೊಟ್ಟಲ್ಲಿ ಮಾತ್ರ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.— ದಯವಿಟ್ಟು ತಾವು ಮುಗಿಸಬೇಕು. ಮುಗಿಸದಿದ್ದರೆ ಡಿಸ್‌ಕಂಟಿನ್ಯೂ ಮಾಡ ಬೇಕಾಗುತ್ತದೆ. ತಮಗೆ ಕೊಟ್ಟ ಸಮಯ ಆಗಲೇ ಮುಗಿದು ಹೋಗಿದೆ.

ಶ್ರೀ ಪ್ರಭಾಕರ ಎಸ್. ರಾಣೆ.— ಈ ನನ್ನ ಸಲಹೆಗಳನ್ನು ಸರಕಾರದ ಮುಂದಿಟ್ಟು, ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.— ಈ ಬೇಡಿಕೆಯ ಮೇಲಿನ ಚರ್ಚೆ ಮುಕ್ತಾಯವಾಯಿತು. ಮಾನ್ಯ ಮಂತ್ರಿಗಳಿಂದ ಉತ್ತರ. ಈಗ ಒಂದು ಪ್ರಕಟಣೆ ಇದೆ.

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಬೇಕು. ನಾವು ಬೆಳಿಗ್ಗೆ ೧೦ ಘಂಟೆಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ. ಇಷ್ಟು ದೀರ್ಘಕಾಲ ಕುಳಿತುಕೊಂಡು ಈಗಲೂ ನಮಗೆ ಅವಕಾಶ ಸಿಗದಿದ್ದರೆ ಹೇಗೆ ? ನೀವು ಒಂದು ದಿವಸಕ್ಕೆ ೧೦-೧೫ ಡಿಮ್ಯಾಂಡ್ಸ್‌ನ್ನು ಹಾಕಿ ಒಬ್ಬೊಬ್ಬರಿಗೆ ಅವಕಾಶ ಕೊಡುವುದಾದರೆ ಅದರಿಂದ ಚರ್ಚೆಗೆ ಏನು ಪ್ರಯೋಜನ? ಅದರ ಬದಲು ಒಮ್ಮೆಗೆ ಡಿಮ್ಯಾಂಡ್ಸ್‌ನ್ನು ಪಾಸ್ ಮಾಡಿಸಿಕೊಂಡು, ಹಣ ಖರ್ಚಾಗುವುದನ್ನಾದರೂ ಉಳಿಸಿ.

ಅಧ್ಯಕ್ಷರು.— ದಯ ವಿಟ್ಟು ತಾವು ಕುಳಿತುಕೊಳ್ಳಿ. ಕಾರ್ಯಕಲಾಪಗಳ ಅವಧಿಯ ಬಗ್ಗೆ The Committee also decided that the ಬಿಎಸಿಯಲ್ಲಿ ನಾವು ಡಿಸಿಷನ್ ಮಾಡಿದ್ದೇವೆ. House will meet at 10 A.M.on every day from 14th to 18th June.1988 Calling Attention Notice and Notice under rule 334 will not be taken up. Discussion on Demands will be taken up from 11.00 to 5-00 P.M. and reply by the concerned Minister will commence from 5-00PM.

ಶ್ರೀ ಕೆ. ವಿ. ಲಕ್ಕಪ್ಪ.— ಅದರಲ್ಲಿ ನನ್ನ ಹೆಸರೂ ಇದೆ, ನಾನು ಮಾತನಾಡಬೇಕಾಗಿದೆ...

ಶ್ರೀಮತಿ ಮುಕ್ತರುನ್ನೀಸಾ ಬೇಗಂ.— ಅಧ್ಯಕ್ಷರೇ ನಮಗೂ ಅವಕಾಶ ಬೇಡವೇ ? ಈ ಬೇಡಿಕೆಗಳ ಮೇಲೆ ನಮಗೆ ಮಾತನಾಡಬೇಕಾಗಿದೆ ಅವಕಾಶ ಮಾಡಿಕೊಡಿ ..

ಅಧ್ಯಕ್ಷರು.— ಈಗ ಒಂದು ಪ್ರಕಟಣೆ ಇದೆ. ಈ ಸಭೆಗೆ ಶ್ರೀಮಂತಿ ನಾಗರತ್ನಮ್ಮನವರು ಅಧ್ಯಕ್ಷಿಣಿಯಾರಾಗಿದ್ದಾಗ, ಅಂದರೆ ೧೩ ೭-೧೯೭೭ಕ್ಕೆ ೯ ಡಿಮ್ಯಾಂಡ್ಸ್‌ನ್ನು ಒಂದೇ ದಿವಸ ಇಟ್ಟಿದ್ದು ಅದರ ಮೇಲೆ ೭ ಜನ ಮಾನ್ಯ ಸದಸ್ಯರು ಭಾಷಣ ಮಾಡಿದರು. ಹಾಗೆಯೇ ೧೭--೮-೧೯೭೫ರಲ್ಲಿ ೫ ಡಿಮ್ಯಾಂಡ್ಸ್‌ನ್ನು ಇಟ್ಟಿದ್ದು ಒಬ್ಬರೇ ಮಾನ್ಯ ಸದಸ್ಯರು ಅದರ ಮೇಲೆ ಮಾತನಾಡಿದ್ದಾರೆ. ೨೫-೬-೭೭ರಲ್ಲಿನಾವು ಮಂತ್ರಿಗಳಾಗಿದ್ದು, ಶ್ರೀಮತಿ ನಾಗರತ್ನಮ್ಮನವರು ಅಧ್ಯಕ್ಷಿಣಿಯವರಾಗಿದ್ದಾಗ, ಒಂದೇ ದಿವಸದಲ್ಲಿ ೩ ಡಿಮ್ಯಾಂಡ್ಸ್ ಇಟ್ಟಿದ್ದು ಅವರ ಮೇಲೆ ೬ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆಮೇಲೆ ೩೧-೬-೭೭ಕ್ಕೆ ೩ ಡಿಮ್ಯಾಂಡ್ಸ್ ಇಟ್ಟು ೭ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈಗ ನಡೆದ ಚರ್ಚೆಯ ಮೇಲೆ ಉತ್ತರಿಸಲು ೬ ಜನ ಮಂತ್ರಿಯವರು ಇದ್ದಾರೆ. ಅವರಿಗೆ ಪ್ರತಿಯೊಬ್ಬರಿಗೂ ಅರ್ಧಘಂಟೆಯ ಅವಕಾಶವನ್ನು ಮಾತ್ರ ಕೊಟ್ಟಿದ್ದೇನೆ. ಅವರೆಲ್ಲರೂ ಮಾತನಾಡಿದರೆ ೩ ಘಂಟೆಯ ಸಮಯ ಬೇಕಾಗುತ್ತದೆ. ಈಗ ೫-೨೦ ಆಗಿದ್ದು, ೮-೨೦ಕ್ಕೆ ಮುಗಿಸ ಬಹುದಾಗಿದೆ. ಆದುದರಿಂದ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು, ಮಾನ್ಯ ಸಚಿವರು ಉತ್ತರವನ್ನು ಕೊಡಲಿ...

(ಗೊಂದಲ)

ಅಧ್ಯಕ್ಷರು.— ಇದು ಬಿ. ಎ. ಸಿ. ಯಲ್ಲಿ ತೆಗೆದುಕೊಂಡ ನಿರ್ಣಯವಾಗಿದೆ. ಆ ಪ್ರಕಾರ ನಾನು ಕಾರ್ಯಕಲಾಪಗಳನ್ನು ನಡೆಸುತ್ತಿದ್ದೇನೆ.

ಶ್ರೀ ಬಿ. ಲಕ್ಕಪ್ಪ.— ಕಾಲಿಂಗ್ ಅಟೆನ್‌ಷನ್‌ಗೆ. ಪ್ರಶ್ನೆಗಳಿಗೆ ಕೂಡ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು.— ನೋಡ್ರಿ, ನಿಮ್ಮ ಮಾನ್ಯ ರಾಣೆಯವರಿಗೆ ೨೦ ಮಿನಿಟ್ ಕೊಟ್ಟಿದ್ದರೆ ಅವರು ಕುಳಿತುಕೊಳ್ಳಿ ಎಂದರೂ ಕೇಳದೆ ೩೦ ಮಿನಿಟ್ ಮಾತಾಡಿದರು. ಕಮಿಟಿ ಡಿಸಿಷನ್ ಪ್ರಕಾರ ನಾನು ನಡೆಸಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಒಬ್ಬೊಬ್ಬರಿಗೆ ೧೦ ಮಿನಿಟ್‌ನಂತೆ ೩೦ ಮಿನಿಟ್ ಆಗುತ್ತದೆ, ಅಷ್ಟು ಕೊಡಿ ಸಾಕು.

ಅಧ್ಯಕ್ಷರು.— ಒಳ್ಳೆಯ ಜನರಾದಿರಲ್ಲಾ, ನಿಮಗೆ ಕೊಟ್ಟರೆ ಈ ಕಡೆ ಕೂತಿರುವವರು ಜಗಳ ತೆಗೆಯುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಖರ್ಗೆಯವರು ಕಲಾಪ ಸಲಹಾ ಸಮಿತಿ ಸದಸ್ಯರು. ಆದರೂ ಅವರ ಕಡೆಯವರು ಜಾಸ್ತಿ ಮಾತಾಡದಂತೆ ಮಾಡಲು ಪ್ರಯತ್ನಿಸುವುದಿಲ್ಲ. ಈಗ ಸಮಯ ಇಲ್ಲದಿದ್ದಾಗ ಒತ್ತಾಯ ಮಾಡುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ೫೦ ದಿವಸ ನಡೆಸುತ್ತೇವೆ ಅಂತ ಹೇಳಿ ಈಗ ಕಟ್‌ಡೌನ್ ಮಾಡಿದ್ದೀರಲ್ಲಾ, ನಿಮ್ಮ ಇಚ್ಛೆಯನುಸಾರ ತಾನೇ ಆಗಿರುವುದು, ಹಿಂದಿನದೆಲ್ಲಾ ಬೇಡ, ಈಗ ಅವರಿಗೆ ಅವಕಾಶ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್,—ನಾಳೆ ಮಾತನಾಡಲಿ ಸ್ವಾಮಿ, ಈ ದಿವಸ ಯಾರು ಮಾತಾಡಲಿಲ್ಲವೋ ಅವರಿಗೆ ನಾಳೆ ಪ್ರಾಮುಖ್ಯತೆ ಕೊಡಿ.

ಅಧ್ಯಕ್ಷರು.— ಇವತ್ತೆಲ್ಲಾ ಮಾತಾಡಿರುವುದು ನಿಮ್ಮವರೇ, ಕೇವಲ ೨೩ ನಿಮಿಷ ಮಾತ್ರ ಜನತಾದವರು ಮಾತಾಡಿದ್ದಾರೆ. ಕಲಾಪ ಸಮಿತಿ ಡಿಸಿಷನ್ ಪ್ರಕಾರವೇ ನಾನು ಮಾಡುವುದು.

(ಗೊಂದಲ)

ಅಧ್ಯಕ್ಷರು.— ಈಗ ಮಿನಿಸ್ಟ್ರು ಉತ್ತರ ಕೊಡುತ್ತಾರೆ, ಚರ್ಚೆ ಮುಗಿದಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ನನಗೆ ಬರೀ ಐದು ನಿಮಿಷ ಕೊಡಿ ಸ್ವಾಮಿ ಸಾಕು.

ಅಧ್ಯಕ್ಷರು.— ಆಗುವುದಿಲ್ಲ, ನಾಳೆ ಬೇಕಾದರೆ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಇದೇ ವಿಷಯದ ಮೇಲೆ ನಾಳೆ ಕೊಡುತ್ತೀರಾ ?

ಅಧ್ಯಕ್ಷರು.— ನೋಡಿ. ನಾಳೆ ಬೇರೆ ಇರುತ್ತೆ, ಅದರ ಮೇಲೆ ಮಾತಾಡುವಿರಂತೆ. ನಿಮ್ಮ ನಾಯಕರು ಯಾರ್ಯಾರು ಮಾತಾಡುತ್ತಾರೆ ಎಂದು ಲಿಸ್ಟ್ ಕೊಟ್ಟು ಸೈನ್ ಮಾಡಿದ್ದಾರೆ. ಸ್ವಲ್ಪ ಕೇಳಿ. ನಿಮ್ಮವರಲ್ಲಿ ಫಸ್ಟ್ ಶ್ರೀನಿವಾಸ್. ಶಿವಸಂಜಪ್ಪ, ಆಚಾರ್, ಸ್ವಾಮಿರಾವ್, ಪ್ರಭಾಕರ ರಾಣೆ ಇವರಿಗೆಲ್ಲಾ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.— ಕೊಡುವುದಕ್ಕೆ ಸಾಧ್ಯವಿಲ್ಲ ತಾವು ಈಗ ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ನಾಳೆ ಇದೇ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ ?

(ಗೊಂದಲ)

ಅಧ್ಯಕ್ಷರು.—ನಾಳಿನ ವಿಷಯದ ಮೇಲೆ ಮಾತನಾಡಿ. ಈ ರೀತಿ ಮಧ್ಯೆ ಪ್ರವೇಶಿಸಿ ಸಭೆ ನಡೆಯುವುದಕ್ಕೆ ಅಡ್ಡಿ ಒಡ್ಡುವುದು ಸರಿಯಲ್ಲ. ಬೇರೆ ಡಿಮ್ಯಾಂಡ್‌ಗಳು ಇದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಒಂದೊಂದು ಡಿಮ್ಯಾಂಡಿಗೆ ಒಂದೊಂದು ಗಂಟೆಯಾದರೂ ಬೇಡವೇ ? ೧೨ ಗಂಟೆ ತನಕ ಮಾಡಿ ಬೇಡವೆಂದು ಯಾರು ಹೇಳುತ್ತಾರೆ. ಮಾತನಾಡುವುದಕ್ಕೆ ಅವಕಾಶ ಕೊಡಿ.

MR. SPEAKER.— You should not like this because you have attended the Business Advisory Committee meeting held yesterday and we have taken this decision...

(ಗೊಂದಲ)

ಶ್ರೀಮತಿ ಮುಕ್ತರುನ್ನೀಸಾ.— ಹತ್ತು ನಿಮಿಷ ಅವಕಾಶ ಕೊಡಿ ಬಹಳ ಮುಖ್ಯವಾದ ವಿಷಯಗಳು ಇವೆ,

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.— ಶ್ರೀಮತಿ ಮುಕ್ತರುನ್ನೀಸಾ ಬೇಗಂರವರು ಒನಕೆ ಓಬವ್ವನ ರೀತಿ ಯಲ್ಲಿ ತಾಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಈ ಕಡೆ ಶ್ರೀ ಚಿಕ್ಕಬೋರಯ್ಯ, ಶ್ರೀ ಕುಮಾರಸ್ವಾಮಿ, ಶ್ರೀ ತಿಪ್ಪೇಸ್ವಾಮಿ, ಶ್ರೀ ಬಿ. ಧರ್ಮಪ್ಪ ಮತ್ತು ಶ್ರೀ ಕಡಪಟ್ಟಿ ಅವರ ಹೆಸರು ಇದೆ. ಅವರೂ ಮಾತನಾಡುವುದು ಬೇಡ, ನೀವು ಮಾತನಾಡುವುದು ಬೇಡ, ನಿಮಗೆ ಕೊಟ್ಟರೆ ಅವರಿಗೂ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ಅವರ ಸುದ್ಧಿ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆಯೇ ಬೇಡ ಹಾಗೆಯೇ ಪಾಸ್ ಮಾಡಿ.

(ಗೊಂದಲ)

ಅಧ್ಯಕ್ಷರು.—ವೋಟಿಗೆ ಹಾಕೋಣವೇ ? ಅವರು ಉತ್ತರ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಬಿಜನೆಸ್ ಅಡ್ವೈಜರಿ ಕಮಿಟಿಯಲ್ಲಿ ಹಾಗೆ ಆಗಿಲ್ಲ ಹಾಗೆ ಆಗಿದ್ದರೆ ಹಾಗೇ ಮಾಡ ಬಹುದಾಗಿತ್ತು. ಅಲ್ಲಿ ಏನಾಗಿದೆ ಎಂದರೆ ೫ ಗಂಟೆಗೆ ಚರ್ಚೆ ಮುಗಿಯಬೇಕು ಮಂತ್ರಿಗಳಿಂದ ೫ಗಂಟೆಗೆ ಉತ್ತರ ಕೊಡಬೇಕು ಎಂದು ಆಗಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರೆಗ್ಯುಲೇಟ್ ಮಾಡಬೇಕು ಅದು ನಮ್ಮ ಕೆಲಸವೇ ? ಒಂದು ದಿವಸಕ್ಕೆ ಇಷ್ಟೊಂದು ಡಿಮ್ಯಾಂಡ್ಸ್ ಇಟ್ಟರೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—೧೫ ನಿಮಿಷ ಒಬ್ಬೊಬ್ಬರು ಮಾತನಾಡಿ ಎಂದು ಹೇಳಿದ್ದೇನೆ ಶ್ರೀ ಶ್ರೀನಿವಾಸ್ ರವರು ೮೦ ನಿಮಿಷ, ಶ್ರೀ ಶಿವನಂಜಪ್ಪನವರು ೫೦ ನಿಮಿಷ, ಶ್ರೀ ಸ್ವಾಮಿರಾವ್‌ರವರು ೩೦ ನಿಮಿಷ ಮಾನ್ಯ ರಾಣೆಯವರು ೩೦ ನಿಮಿಷ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಇನಿಷಿಯೇಟ್ ಮಾಡುವವರಿಗೆ ಒಂದೂವರೆ, ಎರಡು ಗಂಟೆ ಕೊಡುತ್ತೀರಿ ನಮಗೆ ಹತ್ತು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಅಲ್ಲಿ ಎಲ್ಲಾ ಒಪ್ಪಿಕೊಂಡು ಬಂದ ಇಲ್ಲಿ ಈ ರೀತಿ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಪಾಸ್ ಮಾಡಿಕೊಡುತ್ತೇವೆಂದು ಹೇಳಿದ್ದೇವೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ನಾಳೆ ಬೆಳಿಗ್ಗೆ ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು.—೧೧ ಗಂಟೆಗೆ ಪ್ರಶ್ನೋತ್ತರ ಮುಗಿದು ಚರ್ಚೆ ಪ್ರಾರಂಭವಾಗಿ ೫ ಗಂಟೆಗೆ ಮುಕ್ತಾಯ ಮಾಡಬೇಕೆಂದು ಆಗಿದೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—೫ ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ಆಗುವುದಿಲ್ಲ ನಿಮ್ಮೊಬ್ಬರಿಗೆ ಕೊಟ್ಟರೆ ಅವರೂ ಕೇಳುತ್ತಾರೆ ಎಲ್ಲರಿಗೂ ಕೊಡಬೇಕಾಗುತ್ತದೆ. ಅವರಿಗೂ ಕೊಡುವುದಿಲ್ಲ ಇವರಿಗೂ ಕೊಡುವುದಿಲ್ಲ,

ಶ್ರೀ ಗೋಪಾಲ ಮುಕುಂದ ಕಾನಡೆ.—೫ ನಿಮಿಷ ಕೊಡಿ.

(ಗೊಂದಲ)

ಶ್ರೀ ಬಿ. ಬಸವರಾಜ್.—ಅವರಿಗೆ ಕೊಟ್ಟರೆ ನಮಗೂ ಕೊಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವಾಗ ಮಾತನಾಡಿದರೂ ಕೂಡ ಡಿಮ್ಯಾಂಡ್ ಮೇಲೆ ಚರ್ಚೆಗೆ ಬಂದಾಗ ಮಾತನಾಡಿ ಎಂದು ಹೇಳುತ್ತೀರಿ ಈಗ ನೋಡಿದರೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ ಮಾನ್ಯ ಮಂತ್ರಿಗಳನ್ನು ಉತ್ತರ ಕೊಡಬೇಕೆಂದು ಕರೆದಿದ್ದೇನೆ.

(ಗೊಂದಲ)

ಶ್ರೀ ಪಿ. ಎಸ್. ರಾಣೆ.—ಎಲ್ಲರಿಗೂ ಅವಕಾಶ ಕೊಡಿ.

(ಗೊಂದಲ)

೫.೩೦ ಪಿ.ಎಂ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ನನ್ನ ಕಡೆ ನೋಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವಕಾಶ ಇಲ್ಲ ಎಂದು ಹೇಳಿದ್ದೇನೆ. ೫ ಗಂಟೆಗೆ ಕ್ಲೋಸ್ ಆಯಿತು. ಅದು ಮುಗಿದುಹೋಯಿತು.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ. ೫ ನಿಮಿಷ ಕೊಡಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡ್ರಿ.

(ಗೊಂದಲ)

ಅಧ್ಯಕ್ಷರು.—ಈಗ ಮಂತ್ರಿಗಳಿಂದ ಉತ್ತರ ತಾವು ಶುರುಮಾಡ್ರಿ.

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೇ, ಅಬಕಾರಿ ಇಲಾಖೆಯ ಮೇಲೆ ಮಾತನಾಡತಕ್ಕಂಥ......

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಿದ್ದಾರೆ, ದಯವಿಟ್ಟು ಎಲ್ಲರೂ ಕೂಡ್ರಿ.

ಶ್ರೀ ಡಿ. ಬಿ ಇನಾಂದಾರ್ (ಅಬ್ಕಾರಿ ಖಾತೆ ರಾಜ್ಯ ಸಚಿವರು).—ಈ ಅಬಕಾರಿ ಇಲಾಖೆಯ ಮೇಲೆ ಮಾತನಾಡತಕ್ಕಂಥ ವೇಳೆಯಲ್ಲಿ ಮುಖ್ಯವಾಗಿ ಪ್ರೊಹಿಬಿಷನ್ ಪಾಲಿಸಿ ಬಗ್ಗೆ ಮಾತನಾಡಿದರು. ಇಲ್ಲಿ ಕೂಡಾ ಕೆಲವೊಂದು ಜನ ಸದಸ್ಯರ ಅಭಿಪ್ರಾಯ ಇನ್ನಷ್ಟು ಟೋಟಲ್ ಪ್ರೊಹಿಬಿಷನ್ ಇರಬೇಕು ಅಥವಾ ಪೂರ್ತಿಯಾದಂಥ ಲಿಬರಲೈಜೇಷನ್ ಇರಬೇಕು ಎನ್ನುವ ದೃಷ್ಟಿಯಿಂದ ಒಹಳಷ್ಟು ಜನ

ಬಹಳ ಮಾತನಾಡಿದ್ದಾರೆ. ಇವತ್ತಿನ ದಿವಸ ಪ್ರೊಹಿಬಿಷನ್ has not been successful any where in the world ಆದ್ದರಿಂದ ಪ್ರೊಹಿಬಿಷನ್ ಮಾಡುವುದರಿಂದ illicit distillation ಜಾಸ್ತಿಯಾಗುತ್ತದೆ ಸ್ಮಗಲಿಂಗ್ ಜಾಸ್ತಿಯಾಗುತ್ತದೆ. ಅದಲ್ಲದೇ it will also corrupt various departments It will lead to increase in crime plus it will lead to loss in revenue to the Government substantially ಈ ದೃಷ್ಟಿಯಿಂದ we should adopt policy of moderation and induce temprance and use of over drinking–alco holism– ಈ ದೃಷ್ಟಿಯಿಂದ ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಒಂದು ಪ್ರೈವೇಟ್ ಮೆಂಬರ್ ರೆಸಲ್ಯೂಷನನ್ನು ಮೂವ್ ಮಾಡಿದ್ದರು ಅದರಲ್ಲಿ ಒಂದು ಹೈಪವರ್ ಕಮಿಟಿಯನ್ನು ರಚಿಸುವ ಒಂದು ಸಲಹೆಯನ್ನು ಕೊಟ್ಟಿದ್ದರು. ಆ ದೃಷ್ಟಿಯಿಂದ ಸರ್ಕಾರ ಒಪ್ಪಿಕೊಂಡಿದೆ. ಆದಷ್ಟು ತೀವ್ರವಾಗಿ ಹೈಪವರ್ ಕಮಿಟಿಯನ್ನು to go into the aspects of alcoholism ರಚಿಸುತ್ತೇವೆ ಇನ್ನೊಂದು ವಿಷಯ ಮುಖ್ಯವಾಗಿ ಮಾತನಾಡಿದ್ದರಲ್ಲಿ ಈ ಆದಾಯದ ಬಗ್ಗೆ ಅಥವಾ ರವಿನ್ಯೂದಿಂದಲೇ ಈ ಇಲಾಖೆಗಳು ಕೆಲಸ ಮಾಡುತ್ತಿವೆ ಎಂದು ಹೇಳಿದ್ದಾರೆ. ಒಂದು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ನಮ್ಮ ಸರ್ಕಾರ ಬಂದ ನಂತರ ನಾಲ್ಕು ಎಕ್ಸೈಜ್ years have been completed. ಇದರಲ್ಲಿ ನಮಗೆ ಬರತಕ್ಕಂಥ ಆದಾಯ ಸುಮಾರು it has doubled from what it was previously. ಅದೇ ರೀತಿಯಿಂದ ಹೋದ ವರ್ಷ ೮೬–೮೭ಕ್ಕಿಂತ ೮೭–೮೮ರಲ್ಲಿ ಸುಮಾರು ೧೬ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಮುಖ್ಯವಾಗಿ ಹೇಳಬೇಕು ಎಂದು ಹೇಳಿದರೆ ಅಬ್ಕಾರಿ ಕಂಟ್ರಾಕ್ಟರ್‌ಗಳ ಕಡೆಯಿಂದ ಬರತಕ್ಕಂಥ ಹಣವು ಪೂರ್ತಿಯಾಗಿ ವಸೂಲಾಗಿದೆ. ಹೋದ ವರ್ಷಕ್ಕಿಂತ 100% has been recovered There is still amount pending which is over due part of it stayed by various courts, part of it has been recovered under the Land Revenue Act as land revenue recovery. ಮುಖ್ಯವಾಗಿ ಇನ್ನೊಂದು ವಿಷಯವನ್ನು ಹೇಳಿದರು ಇವತ್ತು ದೇಸಾಯಿ ಕಮಿಷನ್ ವಿಷಯದಲ್ಲಿ ಮಾತನಾಡುತ್ತಾ ಆರ್‍ಯಾಕ್‌ನ ಬೆಲೆ ಕಡಿಮೆ ಮಾಡಬೇಕು. ಸ್ವಲ್ಪ ಮಟ್ಟಿಗೆ ಹೆಚ್ಚು ಮಾಡಿದ್ದೇವೆ. ಅದನ್ನು ಒಪ್ಪುತ್ತೇನೆ, ಆದರೆ ಇದರಲ್ಲಿ ಕೇಂದ್ರ ಸರ್ಕಾರದ ನೀತಿ ಅರ್‍ಯಾಕ್‌ನ ಬೆಲೆ ಜಾಸ್ತಿ ಮಾಡಲಿಕ್ಕೆ ಇನ್ನೊಂದು ಕಾರಣವಾಗಿದೆ. ಈ ವರ್ಷ ಹೊಸ ಸೆಕ್ಷನ್‌ಗಳು ೪೪ಎಸಿ ೨೦೬ of the Income-Tax Act have been enacted this year.

SRI D. B. INAMDAR. Fourty percent of the prices of arrack is taken as income and 20% of the price of arrack will have to be paid in advance under the Income-tax Act. This is almost like purchase tax which is being collected by the Central Government and by this the price of arrack will go up and the State Government will lose substantially by this policy of the Central Government in revenue which the State Government could accrue to get. We have protested against this. However, the Government of India is not prepared to accept. We don't have any other alternative except to challenge in a court of law and see that this Act is struckdown. ಇವೊತ್ತಿನ ದಿವಸ ಸೇಂದಿ ಬಗ್ಗೆ ಬಹಳ ಜನ ಸದಸ್ಯರು ಮಾತನಾಡಿದ್ದಾರೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮುಖ್ಯವಾಗಿ ಅಡಲ್ಟರೇಟೆಡ್ ಆಫ್ ಟಾಡಿ ಬಗ್ಗೆ ನನಗೆ ಗೊತ್ತಿದೆ ಬಹಳಷ್ಟು ಕಡೆ ಕ್ಲೋರಲ್ ಹೈಡ್ರೇಟ್ ಕುಡಿಸಿ, ಬಹಳ ಜನ ಕುಡಿದಿರುವ ದೂರುಗಳು ನಮ್ಮ ಮುಂದೆ ಬಂದಿದೆ. ಇವೊತ್ತು ಹೆಚ್ಚಿನ ಇನ್ಸ್‌ಪೆಕ್ಷನ್ ಅನ್ನು ಮಾಡುವಂತಹ ಒಂದು ಕಾರ್ಯವನ್ನು ಇಟ್ಟುಕೊಂಡಿದ್ದೇವೆ ಅದೂ ಅಲ್ಲದೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ನಮ್ಮ ಅಧಿಕಾರಿಗಳು ಮೈಸೂರು ಜಿಲ್ಲೆಯಲ್ಲಿ ಒಂದು ಸೇಂದಿಯನ್ನು ಹಿಡಿದರು. ಇದರಲ್ಲಿ ಕೂಡ ಕ್ಲೋರಲ್ ಹೈಡ್ರೇಟ್ ಬಹಳಷ್ಟು ಸಿಕ್ಕಿತು.

ಆದರ ಮಾರನೇ ದಿವಸ ಒಳ್ಳೆಯ ಸೇಂದಿ ಸಿಕ್ಕಿತಂ ಜನರಿಗೆ. I Just went and visited some shops. ನೀವು ಕುಡಿಯುತಕ್ಕ ಸೇಂದಿ ಹೇಗಿದೆ ಅಂದರೆ ಅಲ್ಲಿ ಜನ ಏನು ಹೇಳಿದರು ಅಂದರೆ ಇವೊತ್ತು ಪರವಾಗಿಲ್ಲ, ನಿನ್ನೆ ನೀರು ಕುಡಿಸಿದ್ದಾರೆ, ಅಂದರು. What I have to tell is this those people are addicated to drinking of chlora hydrate.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸ್ಥಿತಿಗೆ ತಂದು ಮುಟ್ಟಿಸಿದ್ದೀರಿ.

ಶ್ರೀ ಡಿ.ಬಿ. ಇನಾಂದಾರ್.—ಈ ಸ್ಥಿತಿಗೆ ನಾವು ಕಾರಣರಲ್ಲ. This is going on for the last 20 years. ನಾನು ಈ ಸಂದರ್ಭದಲ್ಲಿ ಹೇಳುವುದು ಅಂದರೆ Now, we have amended the Act. Section 32 and 45 of the Act has been amended and fines and punishments have been increased. About approximately 300 vehicles have been seized by the department. I think you will be surprised to note that we seized even a KSRTC Bus and a van of the Bangalore City Corporation which was carrying illicit taddy. ಇಲಾಖೆಯ ನಮ್ಮ ಅಧಿಕಾರಿಗಳು ಇಲಿಸಿಟ್ ಲಿಕ್ಕರ್ ಹಿಡಿಯುವಂತಹ ಎರಡು ಮೂರು ಪ್ರಸಂಗಗಳಲ್ಲಿ ಗಂಧದ ಕಟ್ಟಿಗೆಯನ್ನು ತೆಗೆದುಕೊಂಡು ಹೋಗತಕ್ಕ ವಾಹನವನ್ನು ಕೂಡ ಹಿಡಿದಿದ್ದಾರೆ. ಈ ಸಂದರ್ಭದಲ್ಲಿ ನಾನು ಆ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ದಿಸೆಯಲ್ಲಿ ಮುಖ್ಯವಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಅಲಾಟ್‌ಮೆಂಟ್ ಆಫ್ ಮೊಲಾಸಿಸ್ ಹೋದ ವರ್ಷ ಸ್ಟ್ರೀಮ್ ಲೈನ್ ಮಾಡಿದ್ದೇವೆ ಇಲ್ಲಿಯವರೆಗೆ ಏನು ಮಾಡುತ್ತಿದ್ದೇವು ಅಂದರೆ ಹಲವಾರು ಶುಗರ್ ಫ್ಯಾಕ್ಟರಿಗಳಲ್ಲಿ ಮೊಲಾಸಿಸ್ ತಯಾರು ಮಾಡುವುದೂ ಅಲ್ಲದೇ ಖಂಡಸಾರಿ ಯೂನಿಟ್‌ನಲ್ಲಿ ಸಹ ಮೊಲಾಸಿಸ್ ತಯಾರು ಆಗಿ ಇವೊತ್ತು ಡಿಸ್ಟಿಲರಿಗಳಿಗೆ ಎಲ್ಲಾ ಕಡೆ ಶುಗರ್ ಫ್ಯಾಕ್ಟರಿಗಳ ಕಡೆಯಿಂದ ಮೊಲಾಸಿಸ್ ಅಲಾಟ್‌ಮೆಂಟ್ ಅಗುತ್ತಾ ಇದೆ; There would have been competition between distilleries to get molasses from a particular sugar factory. This has been stopped from last year.. From last year molasses has been supplied from sugar factories close to distilleries as far aspossib'e. We have been alloting molasses to distilleries from sugar factories close to them and we have taken up production in advance from the sugar factories and this is being distributed annually once for all and if there is supplus in productions it will be allotted later on. ಕ್ಯಾಟಲ್ ಫೀಡ್ಸ್ ಯೂನಿಟ್‌ಗೆ ಅಷ್ಟು ಮೊಲಾಸಿಸ್ ಅನ್ನು ಖರ್ಚು ಮಾಡುತ್ತಾ ಇರಲಿಲ್ಲ. ಆದರೆ ಅನ್ನು ಯಲ್‌ಕೋಟಾ ಅನ್ನು ಈ ವರ್ಷದ ಮುಂಚೆ ಕೊಡುವ ಯೋಜನೆಯನ್ನು ಈಗಾಗಲೇ ತಂದಿದ್ದೇವೆ.

We have received complaints in respect of alocohal based chemical units. They complaint is they misutilise the spirit which has been allotted to them. We have come to know that many of these units are bogus. To eliminate such units we have formed an expert committee, on which officers of the Excise Department along with the officers of the Industries Department' Pollution Control Board, Drugs Control Department are there. These people visit each and every unit and find out the capacity of the unit to manufacture the product which is supposed to manufacture, For the last two years only 21 licences are renewed and the rest of them are not renewed. Besides this, utilisation of spirit is also examined. ಮತ್ತೆ ಮಾನ್ಯ ಶ್ರೀನಿವಾಸ್ ಅವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಕ್ಲೋರಲ್ ಹೈಡ್ರೇಟ್ ಬಗ್ಗೆ ಮತ್ತು ಸ್ಯಾಚೆಟ್ಸ್ ಬಗ್ಗೆ

ಹೇಳಿದರು. ಈ ಎರಡನ್ನು ಇನ್‌ಕಮ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು ಹಿಡಿದಿದ್ದಾರೆ ಮತ್ತು ನಮ್ಮ ಇಲಾಖೆಯವರು ಸಹ ಸಾಕಷ್ಟು ಪ್ರಮಾಣದಲ್ಲಿ ಹಿಡಿದಿದ್ದಾರೆ. ಇವನ್ನು ಅನಧಿಕೃತವಾಗಿ ಸ್ಟಾಕ್ ಮಾಡುವುದನ್ನು ತಪ್ಪಿಸಲು ನಮ್ಮ ಇಲಾಖಾ ಅಧಿಕಾರಿಗಳು ಸಾಕಷ್ಟು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಮತ್ತೆ ಎಕ್ಸೈಜ್ ವೆರಿಫಿಕೇಷನ್ ಸರ್ಟಿಫಿಕೇಟ್ಸ್ ಬಗ್ಗೆ ಹೇಳಿದ್ದಾರೆ. ೪೪೬ ಕೇಸ್‌ಗಳಲ್ಲಿ ಈ ಸರ್ಟಿಫಿಕೇಟ್ಸ್ ಕೊಟ್ಟಿಲ್ಲವೆಂದು ಹೇಳಿದರು. Excise verification certificates have been pending since 12 years. It is not something which has taken place since one or two years. They are overdue from 1976-77 also. ಈ ಬಗ್ಗೆ ನಾನು ಡಿಸ್ಟಿಲರಿಗಳ ಮತ್ತು ಬ್ರೂವರೀಸ್‌ಗಳ ಸಭೆ ಕರೆದು ಇಂತಿಷ್ಟು ಸಮಯದೊಳಗಾಗಿ ಈ ಸರ್ಟಿಫಿಕೇಟ್ಸ್‌ನ್ನು ತಂದು ಪ್ರೊಡ್ಯೂಸ್ ಮಾಡಬೇಕು, ಇಲ್ಲದಿದ್ದರೆ ಡ್ಯೂಟಿ ಕೊಡಬೇಕು ಎಂದು ಅವರಿಗೆ ಹೇಳಿದ್ದೇನೆ. Since 30-6-1986 there are 446 cases pending and in respect of 315 cases Rs. 2.90 crores are due. In case they do not give we will charge them duty. Duty vary from State to States. It is less in Gova, Pondicherry and other States. In case of export of liquor there is a difference of about Rs. 10/- per quarter ಆದ್ದರಿಂದ ಈ ಸ್ಥಳಗಳಿಗೆ ನಮ್ಮಲ್ಲಿಂದ ಐ.ಎಂ.ಎಲ್.ನ್ನು ರಫ್ತು ಮಾಡುವಂತಹ ಸಮಯದಲ್ಲಿ we escort at the cost of person who is exporting. On experimental basis we have started exporting this product on escort. They will reach the destination which is supposed to reach. Some of the hon. Memberes have said that the yield of rectified spirit from the molases has been lessened. There is difference of yield of rectified spirit each year, in each grade i.e., A,B,C. production of molases also is not steady. I was the Chairman of M.K. Hubli Sugar factory for some time. I had a meeting with the Minister in 1982. There was so much of molases at that time and I overed it free of cost because I did not have the place to store. It is a cycle, there is a year of plenty and so also of little production of molases. We cannot have a definite plan about the production of molases. In a year of plenty, we get deteriorated molasses and in a year of scarcity we get little molases and the demand will naturally be more from distilleries. This year is a year of plenty.

From the deteriorated molases there is possibility of yield of spirit being reduced. However we are checking it. It is under investgiation and in some of the sugar factories the steam is added on to the molases thereby quantity is increased. But the quality of production deteriorates. We have also received complaints stating that molases are being sold in black markete. They are under investigation. We have inspected some Khandasari units. We have also booked about 10-15 cases for showing lesser production. We have booked 10 cases of khandasari in Bidar, and in Mandaya 5 cases and finally in Tumkur it is 2. We have to regulate them The sugar factories come under the control of Central as well as State Government, but Khandasari units come directly under the control of the State

Government. We will see that they are accounted for and utilised properly. ಮಾಲ್ಟ್‌ನಿಂದ ಬೀರ್ ತಯಾರಾಗುತ್ತದೆ. ಒಂದು ಟನ್ ಮಾಲ್ಟ್‌ಗೆ ಇಂತಿಷ್ಟು ಬೀರ್ ಆಗಬೇಕು ಎನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದೇವೆ. ಅದರಲ್ಲಿ ಕಡಿಮೆ ಇತ್ತು ಅಂದರೆ ಸಂಬಂಧಪಟ್ಟವರ ಮೇಲೆ ನಾವು ಕ್ರಮ ಕೈಗೊಳ್ಳುತ್ತೇವೆ. ಇವತ್ತು ಈ ಪದ್ಧತಿಯನ್ನು ಅಂದರೆ ಆಕ್ಷನ್ ಆಫ್ ಅರಕ್ ಅಂಡ್ ಟಾಡಿ ಇದು ಒಂದು ಕೆಟ್ಟ ಪದ್ಧತಿ ಎಂದು ತಾವು ಹೇಳಿದಿರಿ. ಆದರೆ ಹೆಚ್ಚಿನ ಆದಾಯ ಬರಬೇಕಾದರೆ ಈ ಪದ್ಧತಿ ಇಟ್ಟರೇನೇ ಬರುವುದು, ಅರಕ್ ಸೇಂದಿ ಮಾರುವುದರಿಂದ ಹೆಚ್ಚಿನ ಆದಾಯ ಬರುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.— ಇವತ್ತು ಗಿಡಗಳಿಲ್ಲ.

ಶ್ರೀ ಡಿ. ಬಿ. ಇನಾಂದಾರ್.— ಹಂತಹಂತವಾಗಿ ಎಲ್ಲಾ ಜಿಲ್ಲೆಗಳಲ್ಲೂ ಬಂದ್ ಮಾಡುತ್ತೇವೆ.

ಶ್ರೀ ಕೆ.ಎಚ್. ಶ್ರೀನಿವಾಸ್.— ಆದಾಯ ಬರುವುದಕ್ಕೆ ಈ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೀರಿ. ಆದಾಯದ ಹುಚ್ಚು ಬಿಡಿ ಎಂದು ನಾವು ಹೇಳಿದೆವು. It is perfectly justified if the State is concerned only about the income and not the health of people.

SRI D. B. INAMDAR.— We are tring to give the best quality of liquor at a cheaper rate.

SRI K. H. SRINIVAS.— At what cost ?

SRI D. B. INAMDAR.— The present system of excise contract will have some negative points. They should also protect their revenue.

SRI K. H. SRINIVAS.— You have licenced them to do it themselves. ದೇಸಾಯಿ ಕಮಿಷನ್ ರಿಪೋರ್ಟ್‌ನಲ್ಲಿ ಏನು ಹೇಳಿದ್ದಾರೆ ಅದನ್ನು ನಾನು ಓದಿ ಹೇಳಿದ್ದೇನೆ.

SRI D. B. INAMDAR.— They will inform our officials and we will take care of illicit distilleries. In England they prepare whsky out of barley i.e., malt whisky which is a blend of corn and potato. Brandy is prepared from grapes. They also preare good quality wine. Cheaper variety of liquor is prepared out of spirit and the essence of whisky and brandy are added. We also prepare whisky from malt, not that we do not have the technology. ಒಳ್ಳೆಯ ಗ್ರೇಪ್ಸ್‌ನಿಂದ ಮಾಡತಕ್ಕಂಥ ಬ್ರಾಂದಿ ಕೂಡ ಇದೆ. ನಮ್ಮಲ್ಲಿ ರಮ್ ತಯಾರು ಮಾಡಲಾಗುವುದು. ಮಾನ್ಯ ಶ್ರೀನಿವಾಸ್ ಅವರು ಅರಾಕ್ ಬಗ್ಗೆ ಹೇಳಿದ್ದಾರೆ. Arrack is one of the best drinks that the country produce. It is better than other liquors because no essence is added to it. This is plain spirit, diluted, just matured for some time and therefore there is no better drink than arrack is available. This is perhaps one of the best drinks in our place.

ಶ್ರೀ ಕೆ.ಹೆಚ್. ಶ್ರೀನಿವಾಸ್.— ಇದೇ ಬೆಸ್ಟ್ ಇದನ್ನೇ ಕುಡಿಯಿರಿ ಎಂದು ಹೇಳುವುದಕ್ಕೆ ಹೋಗಬೇಡಿ, ಅದು ನನಗೆ ಗೊತ್ತಿದೆ.

ಶ್ರೀ ಡಿ.ಬಿ. ಇನಾಂದಾರ್.— ಈ ಸದರ್ಭದಲ್ಲಿ ಹೇಳಬೇಕೆಂದರೆ. To produce alcohol, molasses is not the only media. You can produce alcohol from anything vegetative. Countries like Brazil where production of alcohol depends on the rate of sugar, there are about a million

automobiles which run on alcohol. They call it "gasohol" Even in a country like United States, they mix petroleum and alcohol. In our country, we have surpluses and we have deficiencies. This year is one of the surplus years. Perhaps the Government of India could have thought of mixing little alchol to the petroleum products. We have not formulated a national policy on this. I think it is time when the Government of India could formulate a policy on this. They are trying to export alcohol but the price of international market for alcohol is low. It is time when we could ask petroleum companies to explore the possiblities of this. ಇವತ್ತಿನ ದಿವಸ. Alcohol could be produced out of tapioca. Even from grass from potatoes, from grapes, from fruits and from everything. Alcohol is a reprehensible source of constant energy. We could still utilise all our area under resources to produce alcohol which could make our life better in the future.

ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಇಲಾಖೆ ವಿಚಾರದಲ್ಲಿ ಹೇಳುವುದಾದರೆ, ಹೋದ ವರ್ಷ ನಮ್ಮ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ೧೯೭೧ರಿಂದಲೂ ಸಿ ಅಂಡ್ ಆರ್. ರೂಲ್ಸ್ ಅಮೆಂಡ್‌ಮೆಂಟ್ ಮಾಡಿರಲಿಲ್ಲ. ಇನ್ನು ಆರು ತಿಂಗಳಲ್ಲಿ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. A good Clerk will become a bad Sub-Inspector and a bad Sud-Inspector will become a good Clerk. A good Sub-Inspector can become a bad Clerk. ಇದರಿಂದ ಬಹಳಷ್ಟು ತೊಂದರೆಯಾಗುತ್ತಿತ್ತು. ಗಾರ್ಡ್ ಆಗಿ ನೇಮಕ ವಾದರೆ ಅವರಿಗೆ ಪ್ರೊಮೋಷನ್ ವ್ಯವಸ್ಥೆ ಇರಲಿಲ್ಲ. ಸಿ ಅಂಡ್ ಆರ್ ರೂಲ್ಸ್ ಅಮೆಂಡ್‌ಮೆಂಟ್ ಮಾಡಿ, ಎಲ್ಲರಿಗೂ ಅನುಕೂಲ ಸಿಗುವಂತಹ ಮತ್ತು ಉತ್ತೇಜನ ದೊರೆಯುವಂತಹ ರೀತಿಯಲ್ಲಿ ಅಮೆಂಡ್‌ಮೆಂಟ್ ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈ ವರ್ಷ ರೆವಿನ್ಯೂ ಕಲೆಕ್ಷನ್‌ನಲ್ಲಿ ೪.೮ ಪರ್ಸೆಂಟ್ ಇದೆ. The percentage of revenue collection is about 4.8% this year.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಅರಿಯರ್ಸ್ ಇರಬಹುದು.

ಶ್ರೀ ಡಿ. ಬಿ. ಇನಾಂದಾರ್.— ಅಲ್ಲ. ಅಲ್ಲ, After the Commercial Taxe. Department, we are the second largest revenue earning departments

ಶ್ರೀ ಕೆ. ಎಚ್. ಶ್ರೀನಿವಾಸ್.—ಲಾಭ ಅಂದರೆ ವರ್ಷೇ ವರ್ಷೇ ವಿಷ ಪಿರಿದಂತೆ ಏರುತ್ತಿದೆ.

ಶ್ರೀ ಡಿ ಬಿ. ಇನಾಂದಾರ್.- ನಮಗೆ ಇನ್ನೂ ಹೆಚ್ಚು ಲಾಭ ಬರುತ್ತಿತ್ತು, ಆದರೆ ಕೇಂದ್ರ ಸರ್ಕಾರದ ಪಾಲಿಸಿಯಿಂದ ಅಂದರೆ ಡೀಮ್ಯಾಂಡ್ ಇನ್‌ಕಮ್ ಎಂದು ಇನ್‌ಕಮ್ ಟ್ಯಾಕ್ಸ್‌ನವರು ಮಾಡಿದ್ದರಿಂದ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇಂದ ಸರ್ಕಾರದ ಪಾಲಿಸಿಯ ಬಗ್ಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾತ್ರ ಹೇಳುತ್ತಿದ್ದರು. ಈಗ ನಿಮಗೂ ಬಂದಿದೆ ಇದು.

SRI D. B INAMDAR.—Directly it is affecting me. ನೀವು ನಾಳೆ ಆಪಾದನೆ ಮಾಡುತ್ತೀರಿ, ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ೧೯೮೮-೮೯ರಲ್ಲಿ ಆದಾಯ ಕಡಿಮೆ ಬಂತು ಎಂದು. ಆದರೂ ಕೂಡ ಇಲ್ಲಿಯವರೆಗೂ ನಡೆದಿರತಕ್ಕ ಆ್ಯಕ್ಷನ್‌ಗಳಲ್ಲಿ We are plus 7.3 Crores as on to-day,

ಶ್ರೀ ಕೆ. ಎಚ್. ಶ್ರೀನಿವಾಸ್.—ಹುಚ್ಚಾಪಟ್ಟೆ ಆದಾಯ ಮಾಡುತ್ತಿದ್ದೀರಿ, ಬೇರೆಯವರು ಆದಾಯ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತೀದ್ದೀರಿ ಎನ್ನುವುದು ನನ್ನ ಆಪಾದನೆ.

ಶ್ರೀ ಡಿ.ಬಿ. ಇನಾಂದಾರ್.—ಯಾವರೀತಿಯಲ್ಲಿ ಒಂದು ಪಾಲಿಸಿಯನ್ನು ಮಾಡಬೇಕೋ ಅದನ್ನು ಮಾಡೋಣ. ಸರ್ಕಾರಕ್ಕೂ ಆದಾಯ ಬರಬೇಕು, ಜನರೂ ಕುಡಿಯುವುದು ಕಡಿಮೆಯಾಗಬೇಕು, ಯಾರಿಗೆ ಕುಡಿಯುವ ಚಟ ಇದೆ. ಅವರಿಗೆ ಒಂದು ಒಳ್ಳೆಯ ಸಾರಾಯಿ ಸಿಕ್ಕಬೇಕು. ಈ ದೃಷ್ಟಿಯಿಂದ ಎಲ್ಲರೂ ಕೂಡ ಒಂದು ಪಾಲಿಸಿ ಮಾಡೋಣ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಕಮಿಟಿಯನ್ನು ಯಾವಾಗ ಮಾಡುತ್ತೀರಾ ? ನೀವು ಇದ್ದ ಹಾಗೆಯೇ ಮಾಡುತ್ತೀರಾ ?

SRI D. B, INAMDAR.—Within about 8–10 days, the Committee will be formed.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ವಾರ ಆದರೂ ಗ್ಯಾರಂಟಿ ಇರುತ್ತೀರಾ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ರಾಜ್ಯದಲ್ಲಿ ಸೆಕೆಂಡ್ ಸೇಲನ್ನು ತಡೆಯಲಿಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ. ದಿವಸಕ್ಕೆ ಒಂದು ಕೋಟಿ ರೂಪಾಯಿ ಸೆಕೆಂಡ್ಸ್‌ನಲ್ಲಿ ಲಾಸ್ ಆಗುತ್ತಿದೆ. ಅದನ್ನು ತಡೆಯಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

SRI D. B. INAMDAR.—This Seconds, non-duty paid things are there in everything. In every trade and industry, it is there., This Seconds, i.e., non-duty paid liquors are there. I admit there is non-duty paid liquors. In retail outlets, in urban areas. We have fixed a minimum saleof 150 litres per month and in rural areas, a minimum of 125 bulklitres per month.

SRI K. H. SRINIVAS.—Laxity on the part of your department to administer these rules and regulations in respect of several things including molasses, everything is the main reason for this. ಸ್ಟೇಟ್ ಪ್ಯಾಟರ್‌ನೇಜ್ ಇದೆ ಎಂದು ಚಾರ್ಜ್ ಮಾಡಿದ್ದೇವೆ. ಏತಕೆಂದರೆ, ಇಷ್ಟೊಂದು ಸೆಕೆಂಡ್ಸ್ ಇರುವುದರಿಂದ.

SRI D.B INAMDAR.—We have caught non-duty paid liquors and People have been fined and we have collected enough fines from lot of people. ಇವೊತ್ತು ರೂರಲ್ ಏರಿಯಾನಲ್ಲಿ ಇದ್ದಂಥ ಸಿ ಎಲ್. ಟು ಔಟ್‌ಲೆಟ್‌ಗಳಲ್ಲಿ ೧೨೫ ಲೀಟರ್ ಮಿನಿಮಮ್ ಮಾಡಬೇಕೆಂದು ಮಾಡಿದ್ದೇವೆ. ಅಷ್ಟು ಮಾರಾಟ ಆಗದೇ ಹೋದರೆ ನಮ್ಮ ಇಲಾಖೆಯವರು ಇನ್ಸ್‌ಪೆಕ್ಷನ್ ಮಾಡುತ್ತಾರೆ, ಹಾಗೂ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಕೆಲವು ಅಂಗಡಿಗಳಲ್ಲಿ ಸಿ.ಎಲ್.ಟು ನಲ್ಲಿ ೫–೬ ಲೀಟರ್ ಮಾರಿರುವುದು ತಿಂಗಳಿಗೆ ತೋರಿಸುತ್ತಾ ಇದ್ದರು. ಈ ರೀತಿಯಲ್ಲಿ ಮಾಡಿದರೆ ಅವರು ವರ್ಷಕ್ಕೆ ೧೨ ಸಾವಿರ ರೂಪಾಯಿ ಲೈಸೆನ್ಸ್ ಫೀ ಯಾವರೀತಿಯಲ್ಲಿ ಕಟ್ಟುತ್ತಾರೆ ಎಂಬುದನ್ನು ಕಂಡುಹಿಡಿದು ಪಟ್ಟಣ ಪ್ರದೇಶದಲ್ಲಿರತಕ್ಕ ಅಂಗಡಿಗಳಲ್ಲಿ ೧೫೦ ಬಲ್ಕ್ ಲೀಟರ್‌ಗಳನ್ನು ಗ್ರಾಮಾಂತರ ಪ್ರದೇಶದ ಅಂಗಡಿಗಳಲ್ಲಿ ೧೨೫ ಲೀಟರ್‌ಗಳಿಗೆ ಕಡಿಮೆ ಇಲ್ಲದಂತೆ ಮಾಡಬೇಕೆಂದು ಕಾಯಿಂದೆ ಮಾಡಿದ್ದೇವೆ. ಯಾವ ಅಂಗಡಿಯಲ್ಲಿ ಮಾರುವುದಿಲ್ಲ. ಅಲ್ಲಿ ಇನ್ಸ್‌ಪೆಕ್ಷನ್ ಮಾಡಿ ಲೈಸೆನ್ಸ್ ಸಸ್ಪೆಂಡ್ ಮಾಡುವುದು, ರದ್ದು ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ,

ಶ್ರೀ ಕೆ.ಹೆಚ್. ಶ್ರೀನಿವಾಸ್.—ಬಾಟ್ಲಿಂಗ್‌ಗೆ ರೂ.೩.೫೦ ಪೈಸೆ ಅಲೋ ಮಾಡುತ್ತಿದ್ದೀರಿ. ಹೊಸ ಬಾಟಲನ್ನು ಯಾರು ಉಪಯೋಗಿಸುತ್ತಾರೆ ಅವರಿಗೆ ಮಾತ್ರ ಅಲೋ ಮಾಡುತ್ತೀರಿ. ಸೆಕೆಂಡ್‌ಹ್ಯಾಂಡ್ ಬಾಟಲ್ ಯಾರು ಉಪಯೋಗಿಸುತ್ತಿದ್ದಾರೆ ಅವರು ರೂ. ೩.೫೦ ಪೈಸೆ ಪಡೆಯುತ್ತಿದ್ದಾರೆ. ನೀವು ಮೈಸೂರು ಶುಗರ್ ಕಂಪನಿಗೆ ಕೊಟ್ಟಿದ್ದೀರಿ ಅವರು ಹೊಸ ಬಾಟಲ್ ಉಪಯೋಗಿಸುತ್ತಿದ್ದಾರೆ, ಆದರೆ ಬೇರೆ ಡಿಸ್ಟಿಲರಿಯವರು ಸೆಕೆಂಡ್ ಹ್ಯಾಂಡ್ ಬಾಟಲ್ ಉಪಯೋಗಿಸಿಕೊಂಡು ರೂ. ೩–೫೦ ಪೈಸೆ ತೆಗೆದುಕೊಳ್ಳುತ್ತಿದ್ದಾರೆ. ಇದು ದೊಡ್ಡ ಪ್ರಮಾಣದಲ್ಲಿ ಲೂಟಿ ನಡೆಯುತ್ತಿದೆ. ಇದರ ಬಗ್ಗೆ ವಿವರಣೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಡಿ.ಬಿ. ಇನಾಂದಾರ್.—ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

೬ ಪಿ. ಎಂ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳಿಂದ ಉತ್ತರ ಮುಕ್ತಾಯವಾಯಿತು, ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ,

"೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೯೧,೯೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 25 - ರಾಜ್ಯದ ಅಬಕಾರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ೧೮,೯೧,೯೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಉಪಾಧ್ಯಕ್ಷರು.—ಈಗ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬೇಡಿಕೆ ಮೇಲೆ ನಡೆದ ಚರ್ಚೆಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮಂತ್ರಿಗಳಿಂದ ಉತ್ತರ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಇಲಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ಆಹಾರ ನಾಗರೀಕ ಸರಬರಾಜು ಬೇಡಿಕೆಗಳ ಮೇಲೆ ನನ್ನ ಹಿರಿಯ ಸ್ನೇಹಿತರಾದ ಶ್ರೀ ಜಿ. ಎಸ್. ಶಿವನಂಜಪ್ಪನವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ನಮ್ಮ ಇಲಾಖೆಯ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದ್ದು ಕೆಲವು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಆದರೆ ಅವರು ಇವತ್ತು ಇಲ್ಲಿ ಮಾತನಾಡಿದ್ದನ್ನು ನೋಡಿದರೆ, ಮಾನ್ಯ ಶಿವನಂಜಪ್ಪನವರು ಆಗಾಗ ಬೇರೆ ಬೇರೆ ಸಂದರ್ಭಗಳಲ್ಲಿ ನನ್ನನ್ನು ಭೇಟಿಯಾದಾಗ ಮಾತನಾಡುವ ವಿಧಾನವನ್ನು ಹಾಗೂ ಇವತ್ತು ಈ ಸದನದಲ್ಲಿ ನನ್ನ ಇಲಾಖೆಯ ಮೇಲಿನ ಬೇಡಿಕೆ ಬಗ್ಗೆ ಮಾತನಾಡತಕ್ಕಂತಹ ಸಂದರ್ಭವನ್ನು ನೋಡಿದಾಗ ಅವರು ಮನಸ್ಸಿನಿಂದ ಆ ರೀತಿ ಮಾಡಿರಲಿಕ್ಕಿಲ್ಲ, ಮಾತನಾಡಿರಲಿಕ್ಕಿಲ್ಲ, ಏನೋ ವಿರೋಧ ಪಕ್ಷದಲ್ಲಿ ಅವರು ಇರುವ ದೃಷ್ಟಿಯಿಂದ ಆ ರೀತಿ ಹೇಳಬೇಕು ಅನ್ನತಕ್ಕಂತಹ ಭಾವನೆಯನ್ನು ಇಟ್ಟುಕೊಂಡು ಹೇಳಿದ್ದಾರೆ ಅನ್ನತಕ್ಕಂಥಾ ಅನಿಸಿಕೆ ನನಗೆ ಆಗುತ್ತಿದೆ. ಅದು ಏನೇ ಇರಲಿ ಅವರ ಟೀಕೆ ಮತ್ತು ಅವರ ಸಲಹೆಗಳನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಮಾನವನಿಗೆ ಆಹಾರ ಮುಖ್ಯವಾದಂತಹ ವಸ್ತುವಾಗಿದೆ. ಉರ್ದುವಿನಲ್ಲಿ ಒಂದು ನಾಣ್ಣುಡಿ ಇದೆ. ಅದೇನೆಂದರೆ ;

दाने दाने पर लिखा है सानेवाले का नाम

ಎಂದು

ಜನತಾ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಚುನಾವಣೆಯಲ್ಲಿ ಮಾತು ಕೊಟ್ಟಂತೆ ನಡೆದುಕೊಂಡಿಲ್ಲ ಎಂದು ಹೇಳುತ್ತಾ ಹಸಿರು ಕಾರ್ಡಿನ ಬಗ್ಗೆ ಬಹಳ ಲಘುವಾಗಿ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ಬಹಳಷ್ಟು ಮೆಚ್ಚಿಗೆಯನ್ನು ಪಡೆದಿದೆ ಇದರ ಬಗ್ಗೆ ನಾವು ಪ್ರತ್ಯೇಕವಾಗಿ ಹೇಳುವ ಪ್ರಶ್ನೆ ಇಲ್ಲ.

ರಾಜ್ಯದಲ್ಲಿ ಒಟ್ಟು ೩೨ ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡಿನಿಂದ ಲಾಭ ಸಿಗುತ್ತಿದೆ. ರಾಷ್ಟ್ರದಲ್ಲಿ ೮೦ ಕೋಟಿ ಜನಸಂಖ್ಯೆ ಇದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ೪ ಕೋಟಿ ಜನಸಂಖ್ಯೆ ಇದೆ. ಒಬ್ಬ ಮನುಷ್ಯನಿಗೆ ಪ್ರತಿ ದಿವಸಕ್ಕೆ ಅಕ್ಕಿ ೧೬೦ ಗ್ರಾಂ ಗೋಧಿ ೧೬೦ ಗ್ರಾಂ. ಎಣ್ಣೆ ೩೮ ಗ್ರಾಂ ಸಕ್ಕರೆ ೪೦ ಗ್ರಾಂ, ದ್ವಿದಳ ಧಾನ್ಯ ೮೫ ಗ್ರಾಂನಂತೆ ಅವಶ್ಯಕತೆ ಕಾಣುತ್ತಿದೆ. ರಾಷ್ಟ್ರಮಟ್ಟದಲ್ಲಿ ಸರ್ವೇ ಸಾಧಾರಣವಾಗಿ ವರದಿಯನ್ನು ತೆಗೆದುಕೊಂಡಾಗ ಪ್ರತಿ ದಿವಸಕ್ಕೆ ಅಕ್ಕಿ ೧.೨೮ ಲಕ್ಷ ಟನ್ ಗೋಧಿ ೧.೨೮ ಲಕ್ಷ ೩೦ ಸಾವಿರ ಎಣ್ಣೆ ೩೨ ಸಾವಿರ ಸಕ್ಕರೆ, ದ್ವಿದಳ ಧಾನ್ಯಗಳು ೬೪ ಸಾವಿರ ಈ ರೀತಿ ಇದೆ. ಒಂದು ತಿಂಗಳಿಗೆ ೨೩.೮೫ ಲಕ್ಷ ಟನ್ ಗೋಧಿ, ೫.೬೨ ಎಣ್ಣೆ, ಸಕ್ಕರೆ ೫.೯೬, ದ್ವಿದಳ ಧಾನ್ಯ ೧೨.೬೭, ಇಷ್ಟು ನಮ್ಮ ರಾಜ್ಯಕ್ಕೆ ಆಹಾರ ಧಾನ್ಯ ಬೇಕಾಗತಕ್ಕಂತಹ ಪರಿಸ್ಥಿತಿ ಇದೆ. ಈವತ್ತು ನಾವು ಒಂದು ಪಕ್ಷ ಅಂದಾಜು ತೆಗೆದುಕೊಂಡಾಗ ವರ್ಷಕ್ಕೆ ೪೬೦ ಲಕ್ಷ ಟನ್ ಅಕ್ಕಿಯನ್ನು, ೪೬೦ ಲಕ್ಷ ಟನ್ ಗೋಧಿಯನ್ನು ೧೦೮ ಸಾವಿರ ಟನ್ ಎಣ್ಣೆ, ೧೭೫ ಲಕ್ಷ ಟನ್ ಸಕ್ಕರೆ, ಈ ರೀತಿಯಲ್ಲಿ ನಾವು ಒಂದು ಅಂದಾಜನ್ನು ಸಂಗ್ರಹಣಾ ಪರಿಸ್ಥಿತಿಯಲ್ಲಿ ಕಾಣುತ್ತಿದ್ದೇವೆ. ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದವರು ಈವತ್ತಿನ ಪರಿಸ್ಥಿತಿಯಲ್ಲಿ ೪೫ ಸಾವಿರ ಟನ್ ಅಕ್ಕಿ, ಕೊಡುತ್ತಿದ್ದಾರೆ. ಗೋಧಿ ೧೫ ಸಾವಿರ ಟನ್ ಕೊಡುತ್ತಿದ್ದಾರೆ, ತಾಳೆ ಎಣ್ಣೆ ೪ ಸಾವಿರ ಟನ್, ಷುಗರ್ ೦೭,೭೭೦ ಮೆಟ್ರಿಕ್ ಟನ್, ಸೀಮೆ ಎಣ್ಣೆ ೪೦ ಸಾವಿರ ಕಿಲೋಲೀಟರ್ ಕೊಡುತ್ತಿದ್ದಾರೆ. ಇದನ್ನು ನಾವು ರಾಜ್ಯದಲ್ಲಿ ೧೬ ಸಾವಿರ ನ್ಯಾಯಬೆಲೆ ಅಂಗಡಿಗಳ ಮುಖಾಂತರವಾಗಿ ಆಹಾರ ಪದಾರ್ಥಗಳನ್ನು ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ, ಇದರಲ್ಲಿ ೩೧ ಲಕ್ಷ ಹಸಿರು ಕಾರ್ಡುಗಳ ಮುಖಾಂತರವಾಗಿ ಕೊಡುತ್ತಿದ್ದೇವೆ. ಈ ದಿಸೆಯಲ್ಲಿ ಮಾನ್ಯ ಶಿವನಂಜಪ್ಪನವರು ತಮ್ಮ ತುಮಕೂರು ಜಿಲ್ಲೆಯ ಬಗ್ಗೆ ಆಧಾರವಾಗಿ ಇಟ್ಟುಕೊಂಡು ತಾಳೆ ಎಣ್ಣೆ. ಅಕ್ಕಿ ಗೋಧಿ ಸರಿಯಾಗಿ ವಿತರಣೆಯಾಗುತ್ತಿಲ್ಲವೆನ್ನುವ ಆಪಾದನೆ ಕೂಡ ಮಾಡಿದ್ದಾರೆ, ಮಾನ್ಯ ಅಧ್ಯಕ್ಷರೇ, ನಾನು ಈ ಇಲಾಖೆಯ ಒಂದು ಜವಾಬ್ದಾರಿಯನ್ನು ಹೊತ್ತಮೇಲೆ ಏಪ್ರಿಲ್ ತಿಂಗಳಿಂದ ಎರಡು ರೀತಿಯ ಹಂಚಿಕೆ ಯಾಗತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇನೆ. ಇದು ಮಾನ್ಯ ಶಾಸಕರಿಗೂ ಗೊತ್ತಿದೆ. ಪಟ್ಟಣ ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಜಿಲ್ಲಾ ಪರಿಷತ್ ಆಗಿ ಅಧಿಕಾರ ವಿಕೇಂದ್ರೀಕರಣವಾದ ಮೇಲೆ ಜಿಲ್ಲಾ ಪರಿಷತ್‌ಗಳ ಮುಖಾಂತರ ಹಂಚಿಕೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರತಿಯೊಂದು ಮಂಡಲಿಗಳಿಂದ ಗ್ರಾಮಗಳಿಗೆ ಆಹಾರಧಾನ್ಯಗಳನ್ನು ಹಂಚತಕ್ಕಂಥ ವ್ಯವಸ್ಥೆಯನ್ನು ಜಿಲ್ಲಾಪರಿಷತ್ ಅಲಾಟ್ ಮಾಡುತ್ತದೆ. ಈ ದಿಸೆಯಲ್ಲಿ ಈವತ್ತು ಮಾನ್ಯ ಶಿವನಂಜಪ್ಪನವರು ಆಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ಎಷ್ಟು ಸರ್ಕಾರದ ಜವಾಬ್ದಾರಿ ಇರುತ್ತದೋ ಅಷ್ಟೇ ತಮ್ಮದೂ ಕೂಡ ಕರ್ತವ್ಯ ಇರುತ್ತದೆಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ. ಈಗ ನಾವು ಜಿಲ್ಲಾ ಪರಿಷತ್‌ಗಳ ಮೂಲಕ ಮಂಡಲ್ ಪಂಚಾಯತ್‌ಗಳಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಿದ ಮೇಲೆ ಪ್ರತಿಯೊಂದು ಮಂಡಲಕ್ಕೂ ಕೂಡ ಅದರ ಅಲಾಟ್‌ಮೆಂಟ್ ಕಾಪಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಮಂಡಲ ಪ್ರಧಾನರು ಪ್ರತಿಯೊಬ್ಬರಿಗೂ ಅದರ ಪ್ರತಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಜಿ ಎಸ್. ಶಿವನಂಜಪ್ಪ.—ಮಂಡಲ್ ಪಂಚಾಯತ್ ಪ್ರಧಾನಿಗಳೆ ಎಫ್.ಪಿ.ಡಿ.ಯನ್ನು ನಡೆಸುತ್ತಿದ್ದಾರೆ. ಅವರಿಗೇನೇ ಎಫ್.ಡಿ.ಡಿ,ಯನ್ನು ಕೊಡುತ್ತಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದರ ವಾದ ವಿವಾದಕ್ಕೆ ನಾನು ಹೋಗುವುದಿಲ್ಲ. ಅವರೂ ಕೂಡ ಜನರಿಂದ ಆರಿಸಿ ಬಂದಿರತಕ್ಕಂಥ ಪ್ರತಿನಿಧಿಗಳಾಗಿರುತ್ತಾರೆ. ಎಲ್ಲೋ ಒಬ್ಬಿಬ್ಬರು ಈರೀತಿ ಅವ್ಯವಹಾರದಲ್ಲಿ ತೊಡಗಿರ ಬಹುದು. ಅದರ ವಾದವಿವಾದಕ್ಕೆ ಹೋಗುವುದಿಲ್ಲ. ಒಂದೆರಡು ಪ್ರಕರಣಗಳು ಕಂಡುಬಂದಿರುವುದರಿಂದ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಒಂದು ಸುತ್ತೋಲೆಯನ್ನು ಸಹ ಕಳುಹಿಸಲಾಗಿದೆ. ಮಂಡಲ ಪ್ರಧಾನರಾಗಿರುವರು ನ್ಯಾಯ ಬೆಲೆ ಅಂಗಡಿಗಳನ್ನು ನಡೆಸಕೂಡದೆಂದು, ಅಂಥವರಿಗೆ ಮಂಡಲ ಪಂಚಾಯತಿಗಳಿಗೆ ನ್ಯಾಯ ಬೆಲೆ ಅಂಗಡಿಗಳನ್ನು ಕೂಡ ಕೊಡಕೂಡದು ಎಂದು ಒಂದು ಸರ್ಕಾರಿ ವತಿಯಿಂದ ಒಂದು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಕಟ್ಟುನಿಟ್ಟಾಗಿ ಪರಿಪಾಲನೆ ಮಾಡುತ್ತೇವೆ. ಅಂಥದ್ದು ಯಾವುದೇ ಪ್ರಕರಣ ಕೊಟ್ಟಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಬಹಳ ಸರಳವಾದ ರೀತಿಯಲ್ಲಿ ಆಹಾರ ಮಂತ್ರಿಗಳಾಗಿರತಕ್ಕಂಥವರಿಗೆ ಆಹಾರದ ಕಷ್ಟ ಸುಖ ಗೊತ್ತಿಲ್ಲವೆಂದು ಹೇಳಿದ್ದಾರೆ. ನಮ್ಮ ಗುರುಗಳಾದ ಗುಲ್ಬರ್ಗಾ ಶಾಸಕರು ಕೂಡ ಅದಕ್ಕೆ ಧ್ವನಿಗೂಡಿಸಿದ್ದಾರೆ. ಆಹಾರಧಾನ್ಯ ಗೊತ್ತಿಲ್ಲದವರಿಗೆ ಈ ಡಿಮ್ಯಾಂಡ್ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಾರೆ. ಅವರು ನ್ಯಾಯವಾದಿಗಳು, ಮಂದಿಮೇಲೆ ಬದುಕತಕ್ಕಂಥ ಉದ್ಯೋಗವನ್ನು ಇಟ್ಟುಕೊಂಡಿರತಕ್ಕಂಥವರು ಆಹಾರದ ಕೊರತೆ ಗೊತ್ತಿಲ್ಲದೆ ಮಾತನಾಡಿದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಸಚಿವರು ಒಂದು ದಿವಸ ನೇಗಿಲನ್ನು ಎತ್ತಿಲ್ಲ. ಇವರಿಗೆ ಏನಿದ್ದರೂ ಬಸ್ ಬಿಡುವುದು ಮಾತ್ರ ಗೊತ್ತಿದೆ. ಈ ಸದನದಲ್ಲೂ ಬಸ್ ಬಿಡುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನನ್ನ ಜೊತೆಯಲ್ಲಿ ಆರು ಕೆಲವು ಕಾಲ ಇದ್ದರು. ರೊಟ್ಟಿ ಗಿಟ್ಟಿ ಹಾಕಿಕೊಂಡು ಹೇಗೆ ತಿನ್ನಬೇಕೆಂದು ಅವರಿಗೆ ಗೊತ್ತು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಬಹಳ ಸಂತೋಷ. ಹಿರಿಯ ಶಾಸಕರು ನನ್ನ ಪರವಾಗಿ ಸಪೋರ್ಟ್ ಮಾಡಿದ್ದಾರೆ. ಅವರಿಗೆ ಇದರ ಬಗ್ಗೆ ಅಷ್ಟು ಕಳಕಳಿ ಇಲ್ಲ. ಬಹಳ ಲಘುವಾಗಿ ಹೇಳುತ್ತಿದ್ದಾರೆ, ನಾನು ದಷ್ಟಪುಷ್ಟವಾಗಿದ್ದೇನೆಂಬುದು ನಿಜ. ನಾನು ಒಬ್ಬನೇ ಮಗನಾಗಿರುವುದರಿಂದ ದಷ್ಟಪುಷ್ಟವಾಗಿ ಬೆಳೆಸಿದ್ದಾರೆ. ಏನೂ ಮಾಡಿಲ್ಲವೆಂದು ಒಂದು ಮಾತು ಹೇಳಿದರು. ಅದು ಸತ್ಯಕ್ಕೆ ದೂರವಾದುದು. ನಮ್ಮ ಇಲಾಖೆಯ ಬಗ್ಗೆ ಮತ್ತು ಸರ್ಕಾರದ ಬಗ್ಗೆ ಬಹಳ ಹಗುರವಾಗಿ ಜವಾಬ್ದಾರಿ ಇಲ್ಲವೆಂಬ ಮಾತನ್ನು ಹೇಳಿದರು. ನಾನು ಒಂದು ಪತ್ರಿಕಾ ಹೇಳಿಕೆಯ ಒಂದು ಭಾಗವನ್ನು ಓದಬಯಸುತ್ತೇನೆ. ಅದು ಕೇಂದ್ರ ಸರ್ಕಾರದ ಆಹಾರ ಇಲಾಖೆಯ ಜವಾಬ್ದಾರಿಯನ್ನು ಹೊತ್ತ ಆಹಾರ ಮಂತ್ರಿಗಳಾದ ಭಗತ್‌ರವರು ಇಲಾಖೆಯ ಬಗ್ಗೆ ಪ್ರಶಂಸೆ ಮಾಡಿದ ಒಂದು ಮಾತು. ಅವರು ಹೇಳುವುದು ಸರಿಯೋ, ಇವರು ಹೇಳುವುದು ಸರಿಯೋ ಎಂಬುದನ್ನು ಅಧ್ಯಕ್ಷರಿಗೆ ಬಿಡುತ್ತೇನೆ. ಕರ್ನಾಟಕದ ಅಗತ್ಯ ಪೂರೈಕೆ ಬಗ್ಗೆ ಹೇಳಿರುವುದನ್ನು ಮಾತ್ರ ಹೇಳುತ್ತೇನೆ. ಅವರು ಇದರಲ್ಲಿ ಉಳಿದ ಎಷ್ಟೋ ರಾಜ್ಯಗಳ ಬಗ್ಗೆ ಹೇಳಿದ್ದಾರೆ. ಅವರು ''ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಕರ್ನಾಟಕ ಮುಂದಿದೆ'' ಎಂದು ಪ್ರಶಂಸೆ ಮಾಡಿದ್ದಾರೆ. ಆ ಪ್ರಶಂಸೆಯನ್ನು ನೋಡಿದ ಮೇಲೆ ಶಿವನಂಜಪ್ಪನವರು ಸ್ವಲ್ಪಮಟ್ಟಿಗಾದರೂ ನನ್ನ ಬಗ್ಗೆ ಒಂದೆರಡು ಮೆಚ್ಚಿಗೆಯ ಮಾತುಗಳನ್ನು ಹೇಳಬಹುದಾಗಿತ್ತು.

ಶ್ರೀ ಜಿ. ಎಸ್. ಶಿವನಂಜಪ್ಪ.—ಬಹಳ ಚೆನ್ನಾಗಿದೆ. ಬೇಕಾದಾಗ ಸರ್ಟಿಫಿಕೇಟ್ ಬೇಕು, ಬೇಡವಾದಾಗ ಕೇಂದ್ರ ಸರ್ಕಾರದ ಮೇಲೆ ದೂರು. ಯಾವುದಾದರೂ ಒಂದು ಇಟ್ಟುಕೊಳ್ಳಿ. ಹೊಗಳುವುದು ಅಥವಾ ದೂರುವುದು ಯಾವುದಾದರೂ ಒಂದನ್ನು ಇಟ್ಟುಕೊಳ್ಳಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅವರು ಇನ್ನೊಂದು ಮಾತನ್ನು ಹೇಳಿದರು. ಎಲ್ಲಿಲ್ಲಿ ಯಾರ್‍ಯಾರಿಗೆ ಕೊಟ್ಟಿಲ್ಲವೆಂದು ಹೇಳಿದರು. ಸ್ಥಳೀಯ ಶಾಸಕರಾದ ಮಾನ್ಯ ಕಣ್ಣನ್‌ರವರು ನನ್ನ ಜೊತೆ ಪಾರ್ಟಿಸಿಪೇಟ್ ಮಾಡಿದ್ದರು, ಅವರ ಹೇಳಿಕೆ ಕೂಡ ಪತ್ರಿಕೆಯಲ್ಲಿದೆ. ನಾನು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡ ಮೇಲೆ ಗುಲ್ಬರ್ಗ, ಬೀದರ್, ಧಾರವಾಡ, ಬಿಜಾಪುರ ಮತ್ತು ಅನೇಕ ತಾಲ್ಲೂಕು ಮತ್ತು ಪಟ್ಟಣಗಳಲ್ಲಿ ನೇರವಾಗಿ ಬಳಕೆದಾರರ ಸಂಪರ್ಕ ಸಭೆಗಳನ್ನು ಮಾಡಿ ವೇದಿಕೆ ಮೇಲೆ ಯಾವುದೇ ಪಕ್ಷದ ವಿಚಾರ ಇಟ್ಟುಕೊಳ್ಳದೆ ಸ್ಥಳೀಯ ಶಾಸಕರ ಮತ್ತು ಪುರಸಭಾಧ್ಯಕ್ಷರ ಸಮಕ್ಷಮದಲ್ಲಿ ಕೆಲವು ಕಾರ್ಯಕ್ರಮಗಳನ್ನು ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ. ಇಂಥ ಕಾರ್ಯಕ್ರಮಗಳ ಬಗ್ಗೆ ಕಟುವಾದ ಟೀಕೆಗಳು, ಪ್ರಶಂಸೆಗಳು ಬಂದಿವೆ. ಅಲ್ಲಿ ಬಂದಿರತಕ್ಕ ಅನೇಕ ವಿಚಾರಗಳಲ್ಲಿ ನ್ಯಾಯ ಬೆಲೆ ಅಂಗಡಿಗಳಲ್ಲಿ ರೇಟ್ ಬೋರ್ಡ್ ಇರುವುದಿಲ್ಲವೆಂದು ದೂರುಗಳು ಬಂದಿವೆ. ಅಂಥ ಪ್ರತಿಯೊಂದು ನ್ಯಾಯಬೆಲೆ ಅಂಗಡಿ ಮುಂದೆ ರೇಟ್ ಬೋರ್ಡ್ ಮತ್ತು ಸ್ಟಾಕ್‌ಬೋರ್ಡ್ ಇಡತಕ್ಕ ಕಾರ್ಯಕ್ರಮವನ್ನು ಸುತ್ತೋಲೆ ಮೂಲಕ ಕಾರ್ಯರೂಪದಲ್ಲಿ ತರತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಅದರ ಬಗ್ಗೆ ಶಾಸಕರಿಗೆ ಏನಾದರೂ ಅನಿಸಿಕೆ ಇದ್ದರೆ ಹೇಳಬಹುದು. ಕರ್ನಾಟಕ ರಾಜ್ಯಕ್ಕೆ ಇವತ್ತಿನ ಪರಿಸ್ಥಿತಿಯಲ್ಲಿ ಅವರು ಹೇಳಿದಂತೆ ಇನ್ನೂ ಜಾಸ್ತಿ ಆಹಾರ ಪದಾರ್ಥಗಳು ಬೇಕೆಂಬ ಬೇಡಿಕೆಗಳಿವೆ. ಆದರೆ ಮಾನ್ಯ ಸದಸ್ಯರು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಲ್ಲಿ ಹೊಣೆಗಾರರು ಇದ್ದಾರೆಂಬ ದೃಷ್ಟಿಯಲ್ಲಿ ಮಾತನಾಡುತ್ತೇನೆಂದು ಹೇಳಿದರು. ನಿಜ, ಕೆಲವೊಂದು ಸಂದರ್ಭದಲ್ಲಿ ರಾಜ್ಯ ಸರ್ಕಾರ ಕೇಂದ್ರ

ಸರ್ಕಾರವನ್ನು ಅವಲಂಬಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ಕೊಟ್ಟಂತಹ ಆಹಾರ ಪದಾರ್ಥಗಳನ್ನು ವಿತರಣೆ ಮಾಡತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ರಾಜ್ಯದಲ್ಲಾಗಲಿ ರಾಷ್ಟ್ರದಲ್ಲಾಗಲಿ ಎರಡು ವಿಧದಲ್ಲಿ ಅಂದರೆ ಪಡಿತರ ವ್ಯವಸ್ಥೆ ಮೂಲಕ ಮತ್ತು ಓಪನ್ ಮಾರ್ಕೆಟ್ ಮೂಲಕ ಆಹಾರ ಪದಾರ್ಥಗಳನ್ನು ಕೊಡಿಸತಕ್ಕ ವ್ಯವಸ್ಥೆ ಇದೆ. ಇದರಲ್ಲಿ ಕೆಲವೊಂದು ಲೋಪದೋಷಗಳು, ನ್ಯೂನತೆಗಳು ಆಗುವುದು ಸಹಜ. ಅವನ್ನು ಚುನಾಯಿತ ಸದಸ್ಯರು ಬಳಕೆದಾರರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಸರ್ಕಾರದ ಗಮನಕ್ಕೆ ತಂದಾಗ ಸರಿಪಡಿಸಿ ಕಾರ್ಯರೂಪಕ್ಕೆ ತಂದಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯದ ಮೇರೆಗೆ ಒಂದೆರಡು ಮಾತು ಹೇಳುವುದಾದರೆ ರಾಜ್ಯದಲ್ಲಿ ಒಂದು ಕಡೆ ಒಂದು ರೀತಿ ಇನ್ನೊಂದು ಕಡೆ ಇನ್ನೊಂದು ರೀತಿ ಆಹಾರಧಾನ್ಯ ಹಂಚುತ್ತಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಿಗೂ ವ್ಯತ್ಯಾಸ ಏತಕ್ಕೆ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಬೆಳೆದು ಆಹಾರವನ್ನು ತಿನ್ನತಕ್ಕ ರೈತಾಪಿ ಕುಟುಂಬಗಳು ಬಹಳಷ್ಟಿರುತ್ತವೆ. ಆದರೆ ಪಟ್ಟಣ ಪ್ರದೇಶದಲ್ಲಿ ಪಡಿತರ ಪದ್ಧತಿ ಮೇಲೆಯೇ ಅವಲಂಬಿಸಿರುವ ಜನರಿದ್ದಾರೆ. ಹೀಗಿರುವುದರಿಂದ ನಗರ ಪ್ರದೇಶಗಳಿಗೂ ಗ್ರಾಮಾಂತರ ಪ್ರದೇಶಗಳಿಗೂ ಹಂಚತಕ್ಕ ಪದ್ಧತಿಯಲ್ಲಿ ಮೊದಲಿನಿಂದ ವ್ಯತ್ಯಾಸವನ್ನು ಇಟ್ಟುಕೊಂಡು ಬಂದಿದ್ದೇವೆ. ಪ್ರತಿಯೊಂದು ಪಟ್ಟಣದಲ್ಲೂ ಒಂದೇ ರೀತಿ ಹಂಚಬೇಕಾದರೆ ಕಷ್ಟವಾಗುತ್ತದೆ. ನಾನು ಈ ಬಗ್ಗೆ ಪತ್ರಿಕಾ ಹೇಳಿಕೆ ಕೂಡ ಕೊಟ್ಟಿದ್ದೇನೆ. ಅನೇಕ ಸಲ ಸದನದಲ್ಲಿ ಪ್ರಶ್ನೆ ಮಾಡಿದಾಗ ಕೂಡ ಹೇಳಿದ್ದೇನೆ. ಎಲ್ಲ ಕಡೆ ಒಂದೇ ರೀತಿ ಕೊಡಬೇಕಾದರೆ ೧,೨೦,೦೦೦ ಟನ್ ಅಕ್ಕಿ ಸರ್ವೇಸಾಧಾರಣ ಬೇಕಾಗುತ್ತದೆ. ೨೦ ಸಾವಿರ ಟನ್ ಗೋಧಿ ಬೇಕಾಗುತ್ತದೆ. ೨೦ ಸಾವಿರ ಟನ್ ಸಕ್ಕರೆ ಬೇಕಾಗುತ್ತದೆ. ನಾಲ್ಕು ವರ್ಷದಿಂದ ಸತತವಾಗಿ ನಮ್ಮ ರಾಜ್ಯದಲ್ಲಿ ಬರಗಾಲ ಬಿದ್ದಿರುವುದರಿಂದ ರಾಷ್ಟ್ರದಲ್ಲಿ ಕೂಡ ಅಕ್ಕಿ ಹೆಚ್ಚಿಗೆ ಬೆಳೆಯತಕ್ಕ ಪ್ರದೇಶದಲ್ಲಿ ಕೂಡ ಬರಗಾಲ ಇದ್ದುದರಿಂದ ಕೇಂದ್ರ ಸರ್ಕಾರಕ್ಕೂ ತೊಂದರೆಯಾಗಿದೆ, ನಾವು ಪದೇ ಪದೇ ಒತ್ತಾಯ ಮಾಡಿದಾಗ ಈ ಸಾರಿ ಹೆಚ್ಚಿನ ಧಾನ್ಯವನ್ನು ಪೂರೈಸುವುದಕ್ಕಾಗುವುದಿಲ್ಲ. ಸಹಕಾರ ನೀಡಬೇಕು ಎಂದು ತಿಳಿಸಿದ್ದಾರೆ. ಮೊದಲು ಕೇಂದ್ರ ಸರ್ಕಾರ ೬೦ ಸಾವಿರ ಟನ್ ಅಕ್ಕಿ ಕೊಡುತ್ತಿತ್ತು. ಆದರೆ ಈ ವರ್ಷ ೪೫ ಸಾವಿರ ಟನ್‌ಗೆ ಕಡಿಮೆ ಮಾಡಿದ್ದಾರೆ. ನಾನು ಕೇಂದ್ರ ಸರ್ಕಾರದ ಮೇಲೆ ನೇರವಾಗಿ ಆಪಾದನೆ ಮಾಡುತ್ತಿಲ್ಲ. ಅವರೂ ತೊಂದರೆಯಲ್ಲಿದ್ದಾರೆ. ಹೀಗಾಗಿ ಅವರು ಕಡಿಮೆ ಮಾಡಿದ ಮೇಲೆ ನಾವೂ ಕಡಿಮೆ ಮಾಡುವ ಪರಿಸ್ಥಿತಿ ಬಂತು. ಕೇಂದ್ರ ಸರ್ಕಾರದ ಸಬ್ಸಿಡಿ ವಿಚಾರದಲ್ಲಿ ಮಾತನಾಡಿದ್ದಾರೆ. ರಾಷ್ಟ್ರಮಟ್ಟದಲ್ಲಿ ಆಹಾರ ಧಾನ್ಯಗಳ ಮೇಲೆ ಸಬ್ಸಿಡಿ ಕೊಡತಕ್ಕ ವಿಚಾರ ಇಟ್ಟುಕೊಂಡು ಯೋಜನೆಯನ್ನು ರೂಪಿಸಿದ್ದೇವೆ. ಮಾನ್ಯ ಶಿವನಂಜಪ್ಪನವರು ಹಸಿರು ಕಾರ್ಡಿಗೆ ಸಬ್ಸಿಡಿ ಕೊಡುತ್ತಿದ್ದಾರೆಂಬ ಭಾವನೆ ಇಟ್ಟುಕೊಂಡಿದ್ದಾರೆ. ಅದು ತಪ್ಪು. ಕೇಂದ್ರ ಸರ್ಕಾರದವರು ಎಲ್ಲ ರಾಜ್ಯಗಳಿಗೆ ಕೊಡುವ ರೇಟ್‌ನಲ್ಲೇ ನಮಗೂ ಅಕ್ಕಿಯನ್ನು ಕೊಡುತ್ತಾರೆ. ರೂ. ೩-೧೫ ಅಕ್ಕಿಗೆ ಬೆಲೆಬಿದ್ದರೆ ನಾವು ಸಬ್ಸಿಡಿ ರೇಟ್‌ನಲ್ಲಿ ಎರಡು ರೂಪಾಯಿ ಪ್ರಕಾರ ಹಸಿರು ಕಾರ್ಡ್ ಮುಖಾಂತರ ೩೧ ಲಕ್ಷ ಕಾರ್ಡ್‌ದಾರರಿಗೆ ಪ್ರತಿ ಕಾರ್ಡ್‌ದಾರರಿಗೆ ೧೦ ಕೆ.ಜಿ. ಯಂತೆ ೩೬ ಕೋಟಿ ರೂಪಾಯಿಗಳವರೆಗೆ ಸಬ್ಸಿಡಿ ಕೊಟ್ಟು, ಟ್ರಾನ್ಸ್‌ಪೋರ್ಟ್ ಛಾರ್ಜಸ್ ತುಂಬಿ ರಾಜ್ಯ ಸರ್ಕಾರದ ಮುಖಾಂತರ ಗ್ರಾಮಾಂತರ ಪ್ರದೇಶದ ಜನರಿಗೆ ಹಂಚತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಶಾಸಕರು ಮಾತನಾಡಿ ಹಸಿರು ಕಾರ್ಡ್‌ಗಳನ್ನು ಹೆಚ್ಚಿಗೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಶಾಸಕರಿಗೆ ಹೇಳುವುದಾದರೆ ರಾಜ್ಯದಲ್ಲಿ ಆರ್ಥಿಕವಾಗಿ ಕಡುಬಡವರಾಗಿರುವವರಿಗೆ ಬಡತನ ರೇಖೆಗಿಂತ ಕೆಳಗಿರುವವರನ್ನು ರಾಷ್ಟ್ರದಲ್ಲಿ ಏನು ಗುರುತಿಸಿದ್ದಾರೆ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಹಸಿರು ಕಾರ್ಡ್ ಮೂಲಕ ಕೊಡುತ್ತಿದ್ದೇವೆ. ಸರಾಸರಿ ೪೦ ಪರ್ಸೆಂಟ್ ನಷ್ಟು ಬಡತನ ರೇಖೆಯಲ್ಲಿರುವ ಜನ ರಾಷ್ಟ್ರಮಟ್ಟದಲ್ಲಿ ಇದ್ದಾರೆಂದು ಅವರು ಹೇಳಿದ್ದಾರೆ ನಮ್ಮಲ್ಲಿ ಬಡತನ ರೇಖೆಯಲ್ಲಿರುವ ೫೭ ಲಕ್ಷ ಜನಗಳ ಪೈಕಿ ೩೧ ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡ್ ಮೂಲಕ ಆಹಾರ ಧಾನ್ಯಗಳನ್ನು ಕೊಡುತ್ತಿದ್ದೇವೆ. ಅಂದರೆ ೫೦ ಪರ್ಸೆಂಟ್‌ಗಿಂತ ಹೆಚ್ಚು ಬಡತನ ರೇಖೆಗಿಂತ ಕೆಳಗಿರುವವರಿಗೆ ಆಹಾರಧಾನ್ಯ ಕೊಡುತ್ತಿದ್ದೇವೆ. ಆದ್ದರಿಂದ ಹಸಿರು ಕಾರ್ಡ್‌ಗಳ ಮೂಲಕ ಹೆಚ್ಚು ಜನರಿಗೆ ಕೊಟ್ಟಿಲ್ಲ ಎಂದು ಏನು ಹೇಳಿದ್ದಾರೆ ಅದು ಸರಿಯಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನೂ ಬಹಳಷ್ಟು ಕಡೆ ಹಸಿರು ಕಾರ್ಡ್‌ಗಳಿಂದ ವಂಚಿತರಾಗಿದ್ದಾರೆ ಎಂಬ ಮಾತನ್ನು ನಾನೂ ಒಪ್ಪುತ್ತೇನೆ. ಈಗಾಗಲೇ ವಿಭಾಗ ಮಟ್ಟದಲ್ಲಿ ಪ್ರತಿಯೊಬ್ಬ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಆ ಭಾಗದ ಚೀಫ್ ಸೆಕ್ರೆಟರಿಯವರನ್ನು, ಜಿಲ್ಲಾಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿದ್ದೇನೆ. ನಾಲ್ಕು ವಿಭಾಗ ಮಟ್ಟದಲ್ಲಿ ಹಿರಿಯ ಅಧಿಕಾರಿಗಳ ಜೊತೆ ಸಭೆಯನ್ನು ಮಾಡಿದ್ದೇನೆ.

ತಮಗೆ ಗೊತ್ತಿದ್ದ ಹಾಗೆ ೧೯೮೫ರ ನಂತರ ಪುನಃ ಹಸಿರು ಕಾರ್ಡನ್ನು ಕೊಡುವುದರಲ್ಲಿ ವಂಚಿತರಾದಂತಹವರ ಪಟ್ಟಿಯನ್ನು ಮಾಡಿದೆವು. ಅದರಲ್ಲಿ ಒಂದು ಲಕ್ಷದಷ್ಟು ಜನ ಉಳಿದುಕೊಂಡಿದ್ದರು. ಇದರಿಂದಾಗಿ ೩೦ ಲಕ್ಷ ಕುಟುಂಬದವರು ಏನು ಹಸಿರು ಕಾರ್ಡುದಾರರು ಇದ್ದರು ಅವರು ಈಗ ೩೧ ಲಕ್ಷ ಕಾರ್ಡುದಾರರು ಇದ್ದಾರೆ. ಮೊದಲು ಇದ್ದಂತಹವರಿಗಿಂತ ಹೆಚ್ಚಾಗಿದೆಯೇ ವಿನಃ ಅನಧಿಕೃತವಾಗಿ ಇರತಕ್ಕಂತಹ ಕಾರ್ಡುದಾರರನ್ನು ತೆಗೆದುಹಾಕುವುದಕ್ಕಾಗಲ್ಲಿಲ್ಲ. ಮಾನ್ಯ ಸದಸ್ಯರು ಹೇಳಿದ್ದು ನಿಜ. ಐ. ಆರ್. ಡಿ. ಪಿ. ಫಲಾನುಭವಿಗಳಿಗೆ ಹಸಿರು ಕಾರ್ಡುಗಳನ್ನು ಹಂಚಿರುವುದರಿಂದ ಅಲ್ಲಿ ಸ್ವಲ್ಪ ಲೋಪವಾಗಿದೆ. ಆದ್ದರಿಂದ ಈಗ ಯಾರು ಹಸಿರು ಕಾರ್ಡನ್ನು ಕೊಡುವಲ್ಲಿ ವಂಚಿತರಾಗಿದ್ದಾರೆ ಅಂತಹವರ ಪಟ್ಟಿಯನ್ನು ಮಾಡಬೇಕೆಂದೂ. ಹಾಗೂ ಯಾರು ಅನಧಿಕೃತವಾಗಿ ಕಾರ್ಡನ್ನು ಪಡೆದಿದ್ದಾರೆ ಅಂತಹವರನ್ನು ಪತ್ತೆ ಹಚ್ಚತಕ್ಕ ಕೆಲಸವನ್ನು ಮಾಡಬೇಕೆಂದು ಪ್ರತಿಯೊಂದು ಮಂಡಲ ಪಂಚಾಯಿತಿಯ ಪ್ರಧಾನರಿಗೆ ಹಾಗೂ ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ನಿರ್ದಿಷ್ಟವಾಗಿ ಹೇಳಿದ್ದೇವೆ. ಪಟ್ಟಿಯನ್ನು ಮಾಡುವಾಗ ಯಾರು ಅನಧಿಕೃತವಾಗಿ ಹಸಿರು ಕಾರ್ಡನ್ನು ಪಡೆದಿದ್ದಾರೋ ಅಂತಹವರ ಪಟ್ಟಿಯನ್ನೂ ಮಾಡಬೇಕು. ಅದೇ ರೀತಿ ಯಾರು ಈ ಹಸಿರು ಕಾರ್ಡನ್ನು ಪಡೆಯುವುದರಲ್ಲಿ ವಂಚಿತರಾಗಿದ್ದರೋ ಅವರ ಪಟ್ಟಿಯನ್ನೂ ಕೂಡ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಹೇಳಿದ್ದೇವೆ. ಇವೆರಡರಲ್ಲಿ ೫-೧೦ ಪರ್ಸೆಂಟ್ ಇದ್ದರೆ ಅವರ ಮಟ್ಟದಲ್ಲೇ ಸರಿಪಡಿಸಿಕೊಳ್ಳಬೇಕೆಂದೂ ಕೂಡ ತಿಳಿಸಲಾಗಿದೆ. ಅದಕ್ಕಿಂತ ಹೆಚ್ಚು ಪರ್ಸೆಂಟ್ ಇದ್ದರೆ ಅಂತಹವರ ಪಟ್ಟಿಯನ್ನು ಸರ್ಕಾರಕ್ಕೆ ಕೊಡಿ, ಆ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆಂದು ವಿಭಾಗ ಮಟ್ಟದಲ್ಲಿ ನಡೆದಂತಹ ಸಭೆಯಲ್ಲೇ ಈಗಾಗಲೇ ಅವರಿಗೆ ಹೇಳಿದ್ದೇವೆ.

ನಮ್ಮ ಇಲಾಖೆಯಲ್ಲಿ ಅನೇಕ ಬದಲಾವಣೆಯನ್ನು ತರುವುದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸಮಸ್ಯೆ ಬಂದಾಗ ಸ್ಥಳದಲ್ಲೇ ಪರಿಹಾರವನ್ನು ಸೂಚಿಸುವ ನಿರ್ಣಯದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಿಗದಿತ ಅವಧಿಯೊಳಗೆ ಅಗತ್ಯವಸ್ತುಗಳ ಪೂರೈಕೆಯನ್ನು ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಫಲಾನುಭವಿಗಳ ಭಾವ ಚಿತ್ರವನ್ನು ಕಾರ್ಡಿನಲ್ಲಿ ಹಾಕಬೇಕೆಂಬ ನಿರ್ಣಯವನ್ನೂ ಕೂಡ ತೆಗೆದುಕೊಂಡಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಅನಧಿಕೃತ ಕಾರ್ಡುದಾರರನ್ನು ಪತ್ತೆ ಹಚ್ಚುವ ಸಲುವಾಗಿ ಮತ್ತೆ ಪಟ್ಟಣ ಪ್ರದೇಶಗಳಲ್ಲಿ ಕೂಲಿ ಆಳುಗಳು ಕೆಲವೊಂದು ಸಮಯದ ಅವಧಿಯಲ್ಲಿ ಬರುವುದು ವಾಡಿಕೆಯಾಗಿದೆ. ಅಂತಹವರಿಗೆ ತಾತ್ಕಾಲಿಕ ಅವಧಿಗೆ ಪಡಿತರ ಚೀಟಿಯನ್ನು ಕೊಡಬೇಕೆಂಬ ವಿಚಾರ ಕೂಡ ಮಾಡಿದ್ದೇವೆ. ಅದೇ ರೀತಿ ಕಾವಲು ಸಮಿತಿಯನ್ನು ಮಾಡತಕ್ಕಂತಹ ನಿರ್ಣಯವನ್ನೂ ತೆಗೆದುಕೊಂಡಿದ್ದೇವೆ. ಬೆಲೆ ಮತ್ತು ಅದರ ಗುಣಮಟ್ಟವನ್ನು ನಿಯಂತ್ರಣ ಮಾಡತಕ್ಕ ಸಮಿತಿಯನ್ನು ಈಗಾಗಲೇ ರಚನೆ ಮಾಡಿದ್ದೇವೆ. ಅದೇ ರೀತಿ ಸಂಚಾರ ದಳವನ್ನೂ ಕೂಡ ರಚನೆ ಮಾಡಿದ್ದೇವೆ. ಅದೇ ರೀತಿ ಸಂಚಾರ ಪ್ರಯೋಗಾಲಯಗಳನ್ನು ಪ್ರಾರಂಭ ಮಾಡಬೇಕೆಂಬ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ರೀತಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಟ್ಟು ಎಷ್ಟು ಪಾಯಿಂಟ್ ಪ್ರೋಗ್ರಾಂ ಅದು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—೧೦ ಪಾಯಿಂಟ್ ಪ್ರೋಗ್ರಾಂ. ಎಲ್ಲಾ ನಗರಗಳಲ್ಲೂ ಏಕರೀತಿಯ ಪಡಿತರ ಪದ್ಧತಿಯನ್ನು ಜಾರಿಗೆ ತರಬೇಕೆಂಬ ವಿಚಾರ ಕೂಡ ಇದೆ. ಇದನ್ನು ಹಂತ ಹಂತವಾಗಿ ಮಾಡಬೇಕೆಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಅದೇ ರೀತಿ ಪಟ್ಟಣ ಪ್ರದೇಶಗಳಲ್ಲೂ ಕೂಡ ಹಸಿರು ಕಾರ್ಡುಗಳನ್ನು ಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಬಹಳಷ್ಟು ಶಾಸಕರು ಈಗಾಗಲೇ ಹೇಳಿದ್ದಾರೆ. ಅದರಲ್ಲೂ ಇದರ ಬಗ್ಗೆ ಶ್ರೀಮಾನ್ ವೆಂಕಟರಾಮಯ್ಯನವರು ಹಾಗೂ ಶ್ರೀ ಪಂಪಾಪತಿಯವರು ಹೇಳಿದ್ದಾರೆ. ಪಟ್ಟಣ ಪ್ರದೇಶಗಳಲ್ಲೂ ಬಡತನದ ರೇಖೆಗಿಂತ ಕೆಳಗಡೆ ಇರತಕ್ಕ ಜನ ಇದ್ದಾರೆಂಬುದು ಸರ್ಕಾರಕ್ಕೆ ಅರಿವಾಗಿದೆ. ಅವರಿಗೂ ಹಸಿರು ಕಾರ್ಡುಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಅದನ್ನು ಮಾಡಬೇಕೆಂಬ ಚಿಂತನೆಯಲ್ಲಿದ್ದಾರೆಂಬುದರ ಬಗ್ಗೆ ಪತ್ರಿಕಾ ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ. ೧೯೮೦-೮೧ರ ಜನಗಣತಿಯ ಪ್ರಕಾರ ೨೦ ಸಾವಿರ ಜನಸಂಖ್ಯೆ ಇರತಕ್ಕ ಒಟ್ಟು

೯೨ ಪಟ್ಟಣಗಳಲ್ಲಿ ಪಡಿತರ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದರ ಜಿಲ್ಲಾವಾರು ಪಟ್ಟಿ ಈ ರೀತಿ ಇದೆ.—

೧	ಬೆಂಗಳೂರು ಜಿಲ್ಲೆ.—	ದೇವನಹಳ್ಳಿ
		ಯಲಹಂಕ
		ಬೆಲ್‌ಟೌನ್ ಷಿಪ್
		ಬೈರಪ್ಪನ ಹಳ್ಳಿ
		ಕೃಷ್ಣರಾಜಪುರ
		ಹೆಚ್.ಎ.ಎಲ್. ಟೌನ್‌ಷಿಪ್
		ಕಾಡಗೊಂಡನಹಳ್ಳಿ
		ಹೆಬ್ಬಾಳ
		ಕನಗರಿ (ಷಿ)
		ಎಚ್ ಎಂ.ಟಿ. ಟೌನ್‌ಷಿಪ್
		ಲಿಂಗರಾಜಪುರ
		ಹೆಚ್.ಎಂ.ಟಿ. ವಾಚ್ ಫ್ಯಾಕ್ಟರಿ
		ಟೌನ್ ಷಿಪ್
		ಜಾಲಹಳ್ಳಿ
೨	ಬೆಳಗಾಂ	ಹುಕ್ಕೇರಿ
		ಸಾದಲಗೇರಿ
		ಖಾನಾಪುರ
		ಗೋಕಾಕ್ ಫಾಲ್ಸ್
		ರಾಯಬಾಗ್
		ಸಾಂಬ್ರ
		ಕಣ್ಣೂರು
೩	ಬಳ್ಳಾರಿ	ಕೊಟ್ಟೂರು
		ತೆಕ್ಕಲಕೋಟೆ
		ಹಡಗಲಿ
		ದೋಣಿ ಮಲೈ ಟೌನ್‌ಷಿಪ್
		ಶಿರಗುಪ್ಪ
೪	ಬೀದರ್	ಚಿಟಗುಪ್ಪ
		ಹುಮ್ನಾಬಾದ್
೫	ಬಿಜಾಪುರ	ಸಿಂಧಗಿ
		ಬಾದಾಮಿ
		ಮುದ್ದೇಬಿಹಾಳ್
		ಹುನಗುಂದ
		ಕೆರೂರ್
		ಮುಧೋಳ್
೬	ಚಿಕ್ಕಮಗಳೂರು	ಕುದುರೆಮುಖ (ಮೈನ್ಸ್ ಏರಿಯಾ)
೭	ಚಿತ್ರದುರ್ಗ	ಯಾವ ಪಟ್ಟಣವೂ ಇಲ್ಲ

೮	ದಕ್ಷಿಣ ಕನ್ನಡ	ಬೈಂದೂರು
		ಮೂಡಬಿದ್ರೆ
		ಸಾಲಿಗ್ರಾಮ
		ಮುಲ್ಕಿ
		ಗಂಗೊಳ್ಳಿ
		ಬಡಗ ಬೆಟ್ಟು
		ತೋನ್ಸ್ ವೆಸ್ಟ್
		ಕಂಕನಾಡಿ
		ಸೋಮೇಶ್ವರ
		ಡೇರೆ ಬೈಲ್
		ಪೊನನೂರ್
		ಕೋಟ್ರೆಕರ್
		ಅಲ್‌ಪೆ
		ನ್ಯೂ ಮಂಗಳೂರು ಪೋರ್ಟ್
		ಕನಸು
	ಧಾರವಾಡ	ರೋಣ
		ನವಲಗುಂದ್
		ಶಿಗ್ಗಾಂವ್
		ಮುಳಗುಂದ
		ಕುಂದಗೋಳ್
		ನರೇಗಲ್
		ಮುಂಡರ್ಗಿ
		ಶಿರಹಟ್ಟಿ
		ಅಳ್ಣಾವರ
		ಗಜೇಂದ್ರಗಡ
೧೦	ಗುಲ್ಬರ್ಗ	ಸೇಡಮ್
		ಗುರುಮಿಟ್ಕಲ್
		ಶಹಬಾದ್ ಎ.ಸಿ.ಸಿ.
		ವಾಡಿ ಎ.ಸಿ.ಸಿ.

ಹಾಸನ ಜಿಲ್ಲೆ ಚನ್ನರಾಯಪಟ್ಟಣ, ಬೇಲೂರು, ಸಕಲೇಶಪುರ ಗೋರೂರು, ಹೊಳೇನರಸೀಪುರ, ಕೊಡಗು; ಕೊಡಮಂಗಳೂರು. ಮಂಡ್ಯ: ಪಾಂಡವಪುರ, ಹೊಂಗಹಳ್ಳಿ. ಕೋಲಾರ: ಗೌರೀಬಿದನೂರು ಮಾಲೂರು, ಮುಳಬಾಗಿಲು, ಬಿ.ಇ.ಎಂ ಎಲ್. ನಗರ, ಬಂಗಾರಪೇಟೆ, ಶಿಡ್ಲಘಟ್ಟ, ಮೈಸೂರು : ಬನ್ನೂರು. ರಾಯಚೂರು : ಮುದಗಲ್, ಹಟ್ಟಿಗೋಲ್ಡ್ ಮೈನ್ಸ್. ಮುನಿರಾಬಾದ್ ಪ್ರಾಜೆಕ್ಟ್, ಸಿಂಧನೂರು. ಮಾನ್ವಿ, ಶಿವಮೊಗ್ಗ : ಜೋಗ್‌ಪಾಲ್ಸ್, ತೀರ್ಥಹಳ್ಳಿ, ಶಿರಾಳಕೊಪ್ಪ. ತುಮಕೂರು: ಚಿಕ್ಕನಾಯ್ಕನಹಳ್ಳಿ. ಉತ್ತರ ಕನ್ನಡ : ಹಳಿಯಾಳ್, ಹೊನ್ನಾವರ, ಅಂಕೋಲ, ಅಂಬಿಕಾನಗರ, ಗಣೇಶಗುಡಿ.

ಹೀಗೆ ಒಟ್ಟು ೯೨ ಪಟ್ಟಣಗಳಲ್ಲಿ ಹೆಸಿರು ಕಾರ್ಡು ಯೋಜನೆಯನ್ನು ಜಾರಿಗೆ ತರುವ ಉದ್ದೇಶದಿಂದ ಸರ್ವೆ ಮಾಡಿಸಲಾಗಿದೆ. ಇದಕ್ಕೆ ಮಾನ್ಯ ಸದಸ್ಯರುಗಳು ಕೂಡ ಒಪ್ಪುತ್ತಾರೆಂದು ಆಶಿಸುತ್ತೇನೆ. ಬಹು ಮುಖ್ಯವಾಗಿ ಈ ಪಟ್ಟಣಗಳಲ್ಲಿರತಕ್ಕ ಕುರುಬ, ಕುಂಬಾರ, ದೋಬಿ, ಅಸಂಘಟಿತ ಕಾರ್ಮಿಕರೂ ಕೂಡ ಇದರ ವ್ಯಾಪ್ತಿಯಲ್ಲಿ ಬರತಕ್ಕ ದೃಷ್ಟಿ ಇಟ್ಟುಕೊಂಡು ಸರ್ವೆ ಮಾಡಿಸಲಾಗಿದೆ. ಸುಮಾರು ಒಂದೂವರೆಯಿಂದ ಎರಡೂ ಲಕ್ಷ ಕುಟುಂಬಗಳು ಇದರ ಪ್ರಯೋಜನ ಪಡೆಯಬಹುದೆಂದು ಒಂದು ಅಂದಾಜು ಮಾಡಲಾಗಿದೆ.

ಇನ್ನು ಆಹಾರ ನಿಗಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಕಡಪಟ್ಟಿಯವರು ಅವರ ಭಾಗದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರವಾಸ ಕೈಗೊಂಡಾಗ ಇಳಕಲ್ ಮತ್ತು ಹುನಗುಂದ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೇಕಾರರು ಇರುವುದರಿಂದ, ಬೆಂಗಳೂರು ಪಟ್ಟಣದಲ್ಲಿರುವಂಥ ರೇಷನಿಂಗ್ ವ್ಯವಸ್ಥೆ ಕೊಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದರು. ನಾನು ಆ ಭಾಗದಲ್ಲಿ ಪ್ರವಾಸ ಮಾಡಿದಾಗ ಕೂಡ ಮನವಿ ಇಟ್ಟಿದ್ದರು, ಆ ಭಾಗವನ್ನು ಆಗಸ್ಟ್ ತಿಂಗಳಿಂದ ಇನ್‌ಫಾರ್‌ಮಿಂಗ್ ರೇಷನಿಂಗ್ ಏರಿಯಾ ಎಂದು ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಬೆಂಗಳೂರು ನಗರಕ್ಕೆ ಸಿಗತಕ್ಕ ಎಲ್ಲಾ ಅನುಕೂಲಗಳು ಮತ್ತು ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಿಕೊಡಲಾಗುವುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಕಡಪಟ್ಟಿಯವರು ಹೇಳಿದರೆ ಮಾತ್ರ ಮುಖ್ಯ ಮಂತ್ರಿಗಳು ಮಾಡುತ್ತಾರೋ ? ಬೇರೆ ಕಡೆ ನೇಕಾರರು ಇಲ್ಲವೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ,—೪೦,೦೦೦ ಜನಸಂಖ್ಯೆ ಇರಬೇಕು.

ಶ್ರೀ ಎಸ್. ಎಸ್. ಕಡಪಟ್ಟಿ.—ಆ ಭಾಗದ ಜನ ಮುಖ್ಯ ಮಂತ್ರಿಗಳು ಮತ್ತು ಆಹಾರ ಮಂತ್ರಿಗಳು ಬಂದಾಗ ಕೇಳಿದ್ದರು. ಆಗಸ್ಟ್ ಒಂದರಿಂದಲೇ ನಿರ್ದಿಷ್ಟವಾಗಿ ಮಾಡುತ್ತೀರಾ ?

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅಲ್ಲಿಯವರೆಗೂ ಅವರು ಇರಬೇಕಲ್ಲಾ ಸ್ವಾಮಿ,

ಶ್ರೀ ಎಸ್. ಎಸ್. ಕಡಪಟ್ಟಿ.—ನಮ್ಮ ಕಾಳಜಿ ನಿಮಗೆ ಏತಕ್ಕೆ ? ನಿಮ್ಮದಂ ಏನಿದೆಯೋ ಅದನ್ನು ನೋಡಿಕೊಳ್ಳಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಮಾನ್ಯ ಸದಸ್ಯರಾದ ಶಿವನಂಜಪ್ಪನವರು ಮಾತನಾಡುತ್ತಾ, ರೈತರಿಗೆ ಧಾರಣೆಗಳನ್ನು ನಿಗದಿ ಮಾಡುವಾಗ ವಂಚನೆ ಮಾಡಿದ್ದೀರೆಂದು ಹೇಳಿದ್ದಾರೆ. ಬೆಲೆ ನಿಗದಿ ಮಾಡುವಂಥ ಅಧಿಕಾರ ಕೇಂದ್ರ ಸರ್ಕಾರದ ಕೈನಲ್ಲಿದೆ. ರಾಜ್ಯ ಸರ್ಕಾರದ ಕೈನಲ್ಲಿ ಇಲ್ಲ. ನಾವು ಕೇಂದ್ರದ ಬಗ್ಗೆ ಹೇಳಿದರೆ, ಕೇಂದ್ರದ ಕಡೆ ಕೈ ತೋರಿಸುತ್ತಿರೆಂದು ಹೇಳುತ್ತಾರೆ. ಇದು ಕೇಂದ್ರ ಸರ್ಕಾರದ ನೀತಿಯಾಗಿರುವುದರಿಂದ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಭತ್ತಕ್ಕೆ ೨೫೫ ರೂ.ಗಳನ್ನು ಶಿಫಾರಸ್ಸು ಮಾಡಿದ್ದರೆ, ಕೇಂದ್ರ ಸರ್ಕಾರ ೧೪೭ ರೂ ಗಳನ್ನು ಗೊತ್ತು ಮಾಡಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಹಾರ್‌ವೆಸ್ಟ್ ಸೀಜನಿನಲ್ಲಿ ನೀವು ಅನೌನ್ಸ್ ಮಾಡಬೇಕಾಗಿತ್ತು. ಆಗ ನೀವು ಮಾಡಲಿಲ್ಲ ಅದು ನನ್ನ ಪ್ರಶ್ನೆ.

ಶ್ರೀ ಬಸವರಾಜ ಪಾಟೀಲ್ ಅನ್ವರ್.—ರೈತರ ಬಗ್ಗೆ ಕಳಕಳಿ ಇಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಜೋಳಕ್ಕೆ ೨೧೫ ರೂ. ಶಿಫಾರಸ್ಸು ಮಾಡಿದ್ದರೆ, ೧೭೫ ರೂ.ಗಳು ಗೊತ್ತು ಮಾಡಿದ್ದಾರೆ, ರಾಗಿಗೆ ೨೯೭ ರೂ ಗಳು ಶಿಫಾರಸ್ಸು ಮಾಡಿದ್ದರೆ, ೧೩೭ ರೂ.ಗಳು ಗೊತ್ತು ಮಾಡಿದ್ದಾರೆ. ಕೇಂದ್ರ ಸರ್ಕಾರದ ವಿಚಾರ ಹೇಳಿದರೆ ಮಾನ್ಯ ಉಪನಾಯಕರು ಸಿಟ್ಟಿಗೆ ಏಳುತ್ತಾರೆ.

೬-೩೦ ಪಿ. ಎಂ.

ಇವರಿಗೆ ಎಷ್ಟು ಕಳಕಳಿಯಿದೆ ಅಷ್ಟೇ ಕಳಕಳಿ ನಮಗೂ ಇದೆ ತಾವು ಕೂಡ ಆ ಬಗ್ಗೆ ವಿಚಾರ ಮಾಡಬೇಕು. ಮಾನ್ಯ ಚೆನ್ನಪ್ಪನವರು ಅವರ ಮನಸ್ಸಿನಲ್ಲಿರುವುದನ್ನು ಹೇಳಿದ್ದಾರೆ. ರೈತರ ಬಗ್ಗೆ ಅವರಿಗೆ ಎಷ್ಟು ಕಳಕಳಿಯಿದೆ ಅಷ್ಟೇ ಕಳಕಳಿ ನಮಗೆ ಇದೆ. ನಾನು ಕೃಷಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತಾಗ ಅನೇಕ ಪತ್ರಗಳನ್ನು ಬರೆದಿದ್ದೇನೆ. ಈಗಲೂ ಸಹ ಹೆಚ್ಚಿಗೆ ರೇಟ್ ಕೊಡಿಸತಕ್ಕ ಕಾಳಜಿ ನಮ್ಮ ಸರ್ಕಾರಕ್ಕೆ ಇದೆ ತಾವು ಕೂಡ ಆ ಬಗ್ಗೆ ಸಪೋರ್ಟ್ ಮಾಡಬೇಕು.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಆ ಬಗ್ಗೆ ರೆಸಲ್ಯೂಷನ್ ತೆಗೆದುಕೊಂಡು ಬನ್ನಿ. ಸುಮ್ಮನೆ ಏತಕ್ಕೆ ಹೇಳುತ್ತೀರಿ? ಕೇಂದ್ರ ಸರ್ಕಾರವನ್ನು ದೂರುವುಕ್ಕೆ ಇದನ್ನೆಲ್ಲಾ ಇಟ್ಟುಕೊಂಡಿದ್ದೀರಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಆಹಾರ ನಾಗರಿಕ ಸರಬರಾಜು ನಿಗಮ ಕೆಲವೊಂದು ಕೆಲಸಗಳನ್ನು ಮಾಡುತ್ತಿದೆ, ನಿಗಮದಲ್ಲಿರತಕ್ಕ ಲೋಪದೋಷಗಳು ನ್ಯೂನ್ಯತೆಗಳು ಏನಿವೆ ಅವುಗಳನ್ನು ನೇರವಾಗಿ ನನ್ನ ಗಮನಕ್ಕೆ ತಂದರೆ ನಾನು ವಿಚಾರಣೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ತೂಕ ಮತ್ತು ಅಳತೆಯ ಬಗ್ಗೆ ಮಾತನಾಡುತ್ತಾ, ಅಳತೆಯಲ್ಲಿ ಕಡಿಮೆ ಇರುತ್ತದೆಂದು ಅಪಾದನೆಯನ್ನು ಸಹ ಮಾಡಿದ್ದಾರೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ ಇದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ. ನಿರ್ದಿಷ್ಟವಾದ ತೂಕ ಇರಬೇಕೆಂದು ನಿಗಮದ ಮುಖಾಂತರ ತೂಕವನ್ನು ಮಾಡಬೇಕೆನ್ನುವ ಚಿಂತನೆಯನ್ನು ಸರ್ಕಾರ ಮಾಡುತ್ತಿದೆ ಅದನ್ನು ತೀವ್ರಗತಿಯಿಂದ ತಾವು ಹೇಳಿದ ರೀತಿಯಲ್ಲಿ ನ್ಯಾಯ ಬೆಲೆ ಅಂಗಡಿಗಳಿಗೆ ತೊಂದರೆಯಿದ್ದರೆ ಅದನ್ನು ಸರಿಪಡಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಟ್ಟಣಗಳಲ್ಲಿ ಪ್ಯಾಕೆಟ್‌ಗಳ ಮೂಲಕ ಎಣ್ಣೆಯನ್ನು ಕೊಡುತ್ತಿದ್ದಾರೆ. ಅದನ್ನು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ಪ್ಯಾಕೆಟ್ಟುಗಳ ಮೂಲಕ ಎಣ್ಣೆಯನ್ನು ಮಾರತಕ್ಕದ್ದು ನಿಜ. ಬೆಂಗಳೂರಿನಲ್ಲಿ ಪ್ಯಾಕೆಟ್‌ಗಳನ್ನು ಪ್ರಾರಂಭಿಸಿದ್ದೇವೆ. ೬೦ ಸಾವಿರ ಪ್ಯಾಕೆಟ್‌ಗಳನ್ನು ನಾವು ಮಾರಾಟ ಮಾಡುತ್ತಿದ್ದೇವೆ. ಆದರಿಂದ ಪ್ರತಿ ದಿವಸ ೧೦-೧೫ ಸಾವಿರ ನಿಗಮಕ್ಕೆ ಲಾಭ ಬರುತ್ತಿದೆ. ಈ ಪದ್ಧತಿಯನ್ನು ಹಂತ ಹಂತವಾಗಿ ವಿಭಾಗಗಳ ಮಟ್ಟದಲ್ಲಿ ಒಂದೊಂದು ಪ್ಯಾಕೆಟ್ ಯೂನಿಟ್ ಹಾಕಬೇಂದು ತೀರ್ಮಾನ ಮಾಡಿದ್ದೇವೆ. ತಮ್ಮ ಕಳಕಳಿಯ ತೀವ್ರಗತಿಯನ್ನು ಅರಿತುಕೊಂಡು ನಿಗಮದ ಮುಖಾಂತರ ಪ್ರತಿಯೊಂದು ವಿಭಾಗದ ಮಟ್ಟದಲ್ಲೂ ಯೂನಿಟ್ ತೆರೆಯಲು ತೀರ್ಮಾನವನ್ನು ಮಾಡುತ್ತೇವೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಹಾಗೆ ದೂರುಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದೇವೆಂದರೆ ನಮ್ಮ ನಿರ್ದೇಶನಾಲಯದ ಒಬ್ಬ ಅಧಿಕಾರಿಯನ್ನು ಕಳುಹಿಸಿ ವಿಚಾರಣೆ ಮಾಡಿಸುತ್ತೇವೆ. ಆ ಅಧಿಕಾರಿ ಕೊಟ್ಟ ವರದಿ ತೃಪ್ತಿಕರವಾಗಿಲ್ಲದಿದ್ದರೆ ಮತ್ತೊಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿ ವಿಚಾರಣೆ ಮಾಡಿಸಿ ನಂತರ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬಿಸ್ಕಟ್ ಬಗ್ಗೆ ಒಂದೆರಡು ಮಾತು ಹೇಳುವುದಾದರೆ, ಈ ವಿಚಾರ ಸಿ.ಓ.ಡಿ. ವ್ಯಾಪ್ತಿಯಲ್ಲಿರುವುದರಿಂದ ಈಗೇನೂ ಹೇಳಲಿಕ್ಕೆ ಸಾಧ್ಯವಿಲ್ಲ. ಸಿ.ಓ.ಡಿ. ರಿಪೋರ್ಟ್ ಬಂದಮೇಲೆ ಆ ಒಗ್ಗೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ. ನಿಗಮ ಅನೇಕ ವ್ಯವಹಾರ ಮಾಡತಕ್ಕ ಸಂದರ್ಭಗಲ್ಲಿ ಕೆಲವೊಂದು ಲಾಭದಾಯಕವಾದ ವಿಚಾರವನ್ನು ಇಟ್ಟುಕೊಂಡರೆ, ಕೆಲವೊಂದರಲ್ಲಿ ಲುಕ್ಸಾನು ಆಗುತ್ತದೆ. ನಾವು ಲುಕ್ಸಾನು ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಾಗರಿಕರ ಹಿತದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ತೃಪ್ತಿಕರವಾದ ಉತ್ತರ ಕೊಡುವುದಕ್ಕೆ ಸಮಯದ ಅಭಾವವಿರುವುದರಿಂದ ಶಾಸಕರ ಮನಸ್ಸಿನಲ್ಲಿರತಕ್ಕ ದುಗುಡವನ್ನು ಕಡಿಮೆ ಮಾಡಲಿಕ್ಕೆ ನಮ್ಮ ಇಲಾಖೆಯ ಬಗ್ಗೆ ಸ್ವಲ್ಪಮಟ್ಟಿಗೆ ತೃಪ್ತಿಕರವಾದ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಯಾವಾಗಲೂ ಬಿಗಿ ದೃಷ್ಟಿಯಿಂದ ಇರದೆ ಒಳ್ಳೆಯ ಕೆಲಸಗಳಿಗೆ ಬೆನ್ನುತಟ್ಟಿ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಇಲಾಖೆಯ ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಮಾತನಾಡುವಾಗ ೭೧ ಮುನಿಸಿಪಾಲಿಟಿಗಳು ಮಂಡಲ ಪಂಚಾಯತಿಗಳಾಗಿ ಕನ್ವರ್ಟ್ ಆಗಿವೆ. ಮಂಡಲ ಪಂಚಾಯಿತಿಗಳಾಗಿ ಕನ್ವರ್ಟ್ ಆದಮೇಲೆ ಜಿಲ್ಲಾಧಿಕಾರಿಗಳು ತಮ್ಮ ಕೋಟಾವನ್ನು ಕೊಡುತ್ತಿಲ್ಲ. ಜಿಲ್ಲಾ ಪರಿಷತ್‌ನವರು ಕೂಡ ಕೋಟಾವನ್ನು ಕೊಡುತ್ತಿಲ್ಲ. ಅಲ್ಲೀತಕ್ಕವರ ಗತಿಯೇನು ? ಈ ಕೂಡಲೇ ಅನಾಮಲಿ ಏನಿದೆ ಅದನ್ನು ಸರಿಪಡಿಸಿ ಹಳ್ಳಿಗಾಡಿನಲ್ಲಿ ವಿತರಣೆ ಮಾಡುವ ರೀತಿಯಲ್ಲಿ ಕೋಟಾವನ್ನು ಕೊಡಬೇಕೆಂದು ಕೂಡಲೇ ಆದೇಶ ಕೊಡಬೇಕೆಂದು ತಮ್ಮನ್ನು ಕೇಳಿಕೊಂಡಿದ್ದೆ ಅದಕ್ಕೆ ತಮ್ಮಿಂದ ಉತ್ತರ ಬಂದಿಲ್ಲ

ಆಮೇಲೆ ತಿಪಟೂರು ತಾಲ್ಲೂಕು ಕಸಬಾ ಹೋಬಳಿ ಬಿದರೆಯಮ್ಮನ ಹುಡಿಯ ಅಂಗಡಿಯನ್ನು ಶ್ರೀ ಚಂದ್ರಪ್ಪ ಎನ್ನುವವ ನಡೆಸುತ್ತಿದ್ದ. ಚಂದ್ರಪ್ಪನ ಹೆಸರಿಗೆ ಬೇರೆ ಯಾರೋ ಎರಡು ಸಾವಿರ ಲೀಟರ್ ತಾಳೆ ಎಣ್ಣೆಯನ್ನು ತೆಗೆದುಕೊಂಡು ಹೋಗಿ, ಆತ ಇದು ಬಂದಿಲ್ಲವೆಂದು ನೇರವಾಗಿ ನಿಮ್ಮ ಇಲಾಖೆಗೆ ಕಂಪ್ಲೇಂಟ್ ಕೊಟ್ಟರೆ ಅವನ ನ್ಯಾಯಬೆಲೆ ಅಂಗಡಿಯನ್ನು ವಜಾ ಮಾಡಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಲು ಹೋಗಿದ್ದವರು ನಂಜುಂಡೇಶ್ವರ ಹೋಟೆಲ್‌ನಲ್ಲಿದ್ದು ಏನೇನು ಸಂತರ್ಪಣೆ ಯೆಲ್ಲಾ ಆದ ಮೇಲೆ ವಾಪಾಸ್ಸು ಬಂದಿದ್ದಾರೆ, ತಿರುಗಿ ಅವನಿಗೆ ಆ ಅಂಗಡಿಯನ್ನು ಕೊಟ್ಟಿಲ್ಲ. ಬಡವನಾದ ಆತನಿಗೆ ಇದರಿಂದ ಅನ್ಯಾಯವಾಗಿದೆ. ನಾನು ವಿನಾಕಾರಣ ಹೇಳತಕ್ಕದ್ದು ಅಲ್ಲ. ನನ್ನ

ಹತ್ತಿರ ದಾಖಲೆಗಳು ಇವೆ. ಬೇಕಾದರೆ ತಮಗೆ ಕೊಡುತ್ತೇನೆ. ಅದಕ್ಕೋಸ್ಕರ ಬಹುಶಃ ನೀವು ಇಡೀ ತುಮಕೂರು ಜಿಲ್ಲೆಯ ಎಲ್ಲಾ ಬಿ.ಡಿ.ಓ.ಗಳನ್ನು ಮತ್ತು ಅಧಿಕಾರಿಗಳನ್ನು ವಜಾ ಮಾಡಬೇಕಾಗುತ್ತದೆ. ನನಗೊತ್ತಿದೆ, ಆತಾಕತ್ತು ನಿಮಗೆ ಇಲ್ಲ. ನಿಮಗೆ ಮಾಡುವುದಕ್ಕೆ ಆಗುವುದಿಲ್ಲ, ನೀವು ಮಾಡುವುದಿಲ್ಲ. ಆದ್ದರಿಂದ ಈ ಒಂದು ವಿಚಾರವನ್ನು ಮಾಡಿರಿ. ಆ ಬಡವನಿಗೆ ನ್ಯಾಯ ದೊರ ಸಿಕೊಡಿ. ಇವರು ಸೇಡು ಹಾಗೂ ಕೇಡಿನ ರಾಜಕೀಯ ಮಾಡುತ್ತಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ನಾಲ್ಕೈದು ನ್ಯಾಯ ಬೆಲೆ ಅಂಗಡಿಗಳನ್ನು ವಜಾ ಮಾಡಿದ್ದೀರಿ. ಅಲ್ಲಿ ಕೂಡ ರಾಜಕೀಯ, ತುಮಕೂರಿನಲ್ಲಿ ವೈ ಎನ್. ನಾಗರಾಜನ್ ಅಂತ ಅವರು ಖೋಟಾ ಕಾರ್ಡುಗಳನ್ನು ಹಿಡಿದುಕೊಟ್ಟಿಲ್ಲವೆಂದು ಹೇಳಿ. ಆತ ನ್ಯಾಯಬೆಲೆ ಅಂಗಡಿಯನ್ನು ಇಟ್ಟಿದ್ದ. ೨೦ ವರ್ಷಗಳಿಂದ ಒಂದು ಕೂಡ ದೂರು ಆತನ ಮೇಲೆ ಇಲ್ಲ. ಇದು ಶ್ರೀ ವೀರಣ್ಣ ಅವರಿಗೆ ಗೊತ್ತಿದೆ. ೯೦ ಖೋಟಾ ಕಾರ್ಡುಗಳನ್ನು ಹಿಡಿದುಕೊಟ್ಟಿಲ್ಲವೆಂದು ಹೇಳಿಬಿಟ್ಟು ಆತನನ್ನು ವಜಾ ಮಾಡಿದ್ದಾರೆ. ಇದನ್ನು ಕೂಡಲೇ ಸರಿಪಡಿಸಬೇಕು. ಅವರು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಅಪೀಲ್ ಹಾಕಿಕೊಂಡಿದ್ದಾರೆ. ಖಂಡಿತ ಬಹಳ ಅನ್ಯಾಯವಾಗಿದೆ. ಕೇಡಿನ ರಾಜಕೀಯವನ್ನು ನೀವು ಮಾಡಿದ್ದೀರಿ. ಎರಡನೇಯದ್ದು ಈ ಕಲಬೆರಕೆ ವಿಚಾರದಲ್ಲಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಬಹುಶಃ ತಾವು ಅದನ್ನು ಓದಿಲ್ಲವೆಂದು ಕಾಣುತ್ತದೆ. ನಿಮ್ಮ ಇಲಾಖೆಯ ಮೇಲೆ ಅದು ರಿಫ್ಲೆಕ್ಷನ್‌ನನ್ನು ಅದು ತೋರಿಸುತ್ತಿದೆ. ಯಾವ್ಯಾವುದರಲ್ಲಿ ಲಾಸ್ ಇದೆ, ಏಕೆ ಲಾಸ್ ಆಯಿತು ಎಂದು ಕಂಪ್ಲೀಟ್ ಆಗಿ ಈ ಸಮಿತಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಇದರ ಬಗ್ಗೆ ನಿಮ್ಮ ವಾರ್ಷಿಕ ವರದಿಯಲ್ಲಿ ಚಕಾರ ಶಬ್ದ ಕೂಡ ಇಲ್ಲ. ಇದರ ಬಗ್ಗೆ ಕಾರ್ಯಾಚರಣೆ ಏನು ಎನ್ನತಕ್ಕ ವಿಚಾರ ಇಲ್ಲ. ಅದನ್ನು ಕೊಟ್ಟಿದ್ದರೆ ಎಲ್ಲಿ ತಪ್ಪಿದೆ ಮತ್ತು ನೀವು ಚೆನ್ನಾಗಿ ಕೆಲಸ ಮಾಡಿದ್ದರೆ ನಿಮ್ಮನ್ನು ಹೊಗಳುವುದಕ್ಕೆ ನಮಗೆ ಅವಕಾಶ ಆಗುತ್ತಿತ್ತು. ನಾವು ಟೀಕೆ ಮಾಡುತ್ತೇವೆ ಎಂದು ಹೇಳುತ್ತೀರಿ ಬರೀ ಟೀಕೆ ಮಾಡುವುದಕ್ಕೆ ಬಂದವರಲ್ಲ ನಾವು. ನೀವು ಎಲ್ಲಿ ತಪ್ಪು ಮಾಡಿದ್ದೀರಿ ಎಂದು ಕಂಡು ಹಿಡಿದು ಅದನ್ನು ಹೇಳುವುದಕ್ಕೋಸ್ಕರ ನಾವು ವಿರೋಧ ಪಕ್ಷದಲ್ಲಿ ಇದ್ದೇವೆ. ಒಳ್ಳೆಯ ಕೆಲಸ ಮಾಡಿದ್ದರೆ ಮೆಚ್ಚಿಕೊಳ್ಳೋಣ. ಅದನ್ನು ಸ್ವಾಗತ ಮಾಡುವುದಕ್ಕೆ ನಾವು ಹಿಂಜರಿಯುವುದಿಲ್ಲ. ಇನ್ನು ನಿಮ್ಮ ಬಡತನದ ರೇಖೆ ಕುಸಿದದ್ದು ಯಾವಾಗ ಸ್ವಾಮಿ? ಐ.ಆರ್.ಡಿ.ಪಿ.ಯಿಂದ ಲಿಸ್ಟ್ ಮಾಡಿದ್ದು ೭೮ರಲ್ಲಿ. ಈಗ ತೆಗೆದುಕೊಂಡಿರುವುದು ೮೫ರಲ್ಲಿ. ಅವತ್ತಿನಿಂದ ಇವತ್ತಿನ ತನಕ ಬಡವರು ಇಲ್ವಾ ?

ಉಪಾಧ್ಯಕ್ಷರು.—ನೀವು ಸಂಕ್ಷಿಪ್ತವಾಗಿ ಕೇಳಿ.

ಒಬ್ಬರು ಮಾನ್ಯ ಸದಸ್ಯರು.—ಇದೇನು ಕ್ಲಾರಿಫಿಕೇಷನ್ನಾ ಏನು ಸ್ವಾಮಿ ?

ಶ್ರೀ ಜಿ.ಎಸ್. ಶಿವನಂಜಪ್ಪ.—ನಾನು ಏನು ಕೇಳಬೇಕೆಂದು ಹೇಳಿ, ಅದನ್ನೇ ಕೇಳುತ್ತೇನೆ. ಅಲ್ಲಸ್ವಾಮಿ, ಐ.ಆರ್.ಡಿ.ಪಿ.ಯಿಂದ ಲಿಸ್ಟ್ ಮಾಡಿದ್ದು ೭೭–೭೮ರಲ್ಲಿ. ನೀವು ಅದರಂತೆ ಒಂದು ಕೆ.ಜಿ. ಅಕ್ಕಿಗೆ ಎರಡು ರೂಪಾಯಿನಂತೆ ವಿತರಣೆ ಮಾಡುತ್ತೇವೆ ಎಂದು ಡಿಕ್ಲೇರ್ ಮಾಡಿದ್ದು ಎಲೆಕ್ಷನ್‌ಗೆ ಮುಂಚೆ ಹಾಗಾದರೆ ೭೮ರಿಂದ ೮೫ರ ತನಕ ಬಡವರು ಇಲ್ಲವೇ ? ನಾಲ್ಕು ಕೋಟಿಯೊಳಗೆ ಕನಿಷ್ಠಪಕ್ಷ ಎರಡು ಕೋಟಿ ಬಡವರು ಇದ್ದಾರೆ. ಅದರಲ್ಲಿ ಅರ್ಧಭಾಗ ಜನಕ್ಕೆ ನೀವು ಕೊಡಬೇಕು. ಮೊನ್ನೆ ಪತ್ರಿಕೆಯಲ್ಲಿ ನೋಡಿದ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಹಸಿರು ಕಾರ್ಡಿಗೆ ಕೊಡತಕ್ಕಂಥ ಪಡಿತರವನ್ನು ಕಡಿಮೆ ಮಾಡುತ್ತೇವೆ ಎಂದು ಇದೆ. ಈ ರಾಜ್ಯದ ಜನತೆಯನ್ನು ಸಾಕತಕ್ಕಂಥ ಜವಾಬ್ದಾರಿ ಹೊತ್ತಿರತಕ್ಕಂಥವರು ನೀವು. ಬೆಗ್ ಬಾರೋ ಆರ್ ಸ್ಟೀಲ್– ಏನಾದರೂ ಮಾಡಿ ಕೊಡಬೇಕು. ಕೇಂದ್ರ ಸರ್ಕಾರ ಕೊಟ್ಟಿಲ್ಲ ಆದ್ದರಿಂದ ನಾವು ಕೊಡುವುದಿಲ್ಲ ಎಂದರೆ ಆಯಿತೆ ? ಎಷ್ಟು ಲಘುವಾಗಿ ಮಾತನಾಡುವುದು ಸರಿಯೇನು ? ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ನೀವು ಅಷ್ಟು ಸುಲಭವಾಗಿ ನುಣುಚಿಕೊಳ್ಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಏನು ಉತ್ತರ ಕೊಡುತ್ತೀರಿ ಹೇಳಿ. ಬೆಗ್–ಬಾರೋ–ಸ್ಟೀಲ್ ಮಾಡಿಯಾದರೂ ಜನಕ್ಕೆ ಆಹಾರವನ್ನು ಕೊಡಲೇಬೇಕೆಂದು ಹೇಳುತ್ತೇನೆ,

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ ಅವರು ಹೇಳತಕ್ಕಂತಾದ್ದು, ನಾವು ಬರೀ ಕೇಂದ್ರ ಸರ್ಕಾರದ ಮೇಲೆ ಆಧಾರವಾಗಿರುವಂತಾದ್ದು ಅಲ್ಲ ನಾವೂ ಕೂಡ ಸ್ಥಳೀಯವಾಗಿ ಈಗಾಗಲೇ ರಾಗಿ ೨೦ ಸಾವಿರ ಟನ್, ಮತ್ತು ಜೋಳ ೨೦ ಸಾವಿರ ಟನ್ ಖರೀದಿ ಮಾಡುವಂಥ

ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಮತ್ತೆ ಬಡತನ ರೇಖೆಯಲ್ಲಿ ಈಗ ಇಲ್ಲವೇ ಎಂಬ ಮಾತನ್ನು ಹೇಳುತ್ತಿದ್ದಾರೆ. ಈ ಮಾತನ್ನು ನಾವು ಎಲ್ಲಿಯೂ ಅಲ್ಲಗಳೆದಿಲ್ಲ. ಆದರೆ ಬಡತನ ರೇಖೆಯ ಜನರನ್ನು ಗುರುತಿಸುವಾಗ ಪದೇ ಪದೇ ಮತ್ತೆ ಎಡವುತ್ತಿದ್ದೇವೆ. ನಿರ್ದಿಷ್ಟವಾಗಿ ಬಡವರನ್ನು ಗುರುತಿಸುವ ಸಂದರ್ಭದಲ್ಲಿ ಬಹಳಷ್ಟು ರಾಜಕೀಯ ಪ್ರವೇಶವಾಗುತ್ತಿದೆ. ಆದ್ದರಿಂದ ನಿರ್ದಿಷ್ಟವಾಗಿ ಎಲ್ಲಿ ವಂಚಿತರಾಗಿದ್ದಾರೆ, ಎನ್ನುವಂಥ ಪಟ್ಟಿ ಮತ್ತು ಎಲ್ಲಿ ಅನಧಿಕೃತವಾಗಿ ಪಡೆದಿದ್ದಾರೆ ಎನ್ನುವಂಥ ಪಟ್ಟಿ. ಈ ಎರಡು ಪಟ್ಟಿಗಳನ್ನೂ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ, ಅದರಮೇಲೆ ಸರ್ಕಾರ ತೀವ್ರಗತಿಯ ನಿರ್ಣಯ ತೆಗೆದುಕೊಳ್ಳುತ್ತದೆಂದು ಪ್ರತಿಯೊಂದು ಜಿಲ್ಲಾಪರಿಷತ್ತಿಗೂ ನಾವೂ ಸುತ್ತೋಲೆಯನ್ನು ಕಳುಹಿಸುತ್ತಿದ್ದೇವೆ. ವಂಚಿತರಾಗಿರುವವರ ಬಗ್ಗೆ ಕೊಡಬಾರದು ಎಂಬ ದೃಷ್ಟಿ ಸರ್ಕಾರದ್ದಲ್ಲ ಎನ್ನುವ ಮಾತನ್ನು ಮಾನ್ಯ ಶಾಸಕರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಶಾಸಕರು ಪದೇ ಪದೇ ತಮ್ಮ ಜಿಲ್ಲೆಯಲ್ಲಿ ಏನೋ ಅಗಾಧವಾಗಿದೆ, ಏನೋ ಅನಾಹುತವಾಗಿದೆ ಇದಕ್ಕೆ ಸರ್ಕಾರ ಕುಮ್ಮಕ್ಕು ಕೊಡುತ್ತಿದೆ ಎಂಬ ಭಾವನೆಯನ್ನು ಇಟ್ಟು ಕೊಂಡಿದ್ದರೆ ಅದು ತಮ್ಮ ತಲೆಯಲ್ಲಿರತಕ್ಕ ಭಾವನೆ ಈ ಭಾವನೆಯನ್ನು ಅವರು ತೆಗೆದು ಹಾಕಬೇಕು. ಈ ವಿಷಯದ ಬಗ್ಗೆ ಯಾವುದೇ ರೀತಿಯಲ್ಲಿ ಎನ್‌ಕ್ವೈರಿ ಮಾಡಿ ಎಂಬುದಕ್ಕೆ ತಾವು ಸಲಹೆ ಕೊಟ್ಟರೆ, ಅಂತಹ ಹಿರಿಯ ಅಧಿಕಾರಿಗಳನ್ನೇ ಹಾಕಿ ವಿಚಾರಣೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಅಥವಾ ಸಿ.ಓ.ಡಿ.ಗೆ ಕೊಡಿ ಎಂದರೆ, ಸಿ.ಓ.ಡಿ.ಗೂ ಕೊಡುತ್ತೇನೆ, ಇದರಿಂದ ನಮಗೆ ಏನೂ ಆಗಬೇಕಾಗಿಲ್ಲ. ಯಾವುದೇ ಸರ್ಕಾರ ಇದ್ದರೂ ಬಡತನ ದಿಂದ ವಂಚಿತರಾಗಿರುವವರಿಗೆ, ಇಂತಹ ಜನರಿಗೆ ಕೊಡುವುದು ಸರ್ಕಾರದ ದೃಷ್ಟಿ ಇದೆ. ಜಿಲ್ಲಾಧಿ ಕಾರಿಗಳಿಗೆ, ಯಾವುದಾದರೊಂದು ಕೆಲಸಕ್ಕೆ ಮಂತ್ರಿಗಳು ಫೋನ್ ಮಾಡಬೇಕಾಗುತ್ತದೆ. ಇದನ್ನೇ ತಪ್ಪಾಗಿ ತೆಗೆದುಕೊಳ್ಳಬಾರದು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ತಾವು ಕೊಟ್ಟಂಥ ಕೆಲವು ವಿಚಾರಗಳ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುಕ್ಕೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳನ್ನು ನೇಮಿಸಿ, ವಿಚಾರಣೆ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀಮತಿ ಮುಕ್ತರುನ್ನಿಸಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಸಬ್ಸಿಡೈಸ್ಡ್ ಅಕ್ಕಿ, ಗೋಧಿ, ಸಕ್ಕರೆ ಎಲ್ಲಾ ಸೊಸೈಟಿಗೆ ಕೊಡುತ್ತಿದ್ದಾರೆ ಎಂದು ಹೇಳಿದರು. ಈ ರೀತಿ ಕಂಟ್ರೋಲ ಕಮಾಡಿಟೀಸ್ ಕೊಟ್ಟರೆ, ಇದಕ್ಕೆ ಸೇಲ್ಸ್ ಟ್ಯಾಕ್ಸ್ ಇಲ್ಲ. ಮೈಸೂರಿನಲ್ಲಿ ಲೇಡೀಸ್ ಸೊಸೈಟಿಗೆ ಟರ್ನ್‌ಓವರ್ ಮೇಲೆ ಕಂಟ್ರೋಲ್ ಕಮಾಡಿಟೀಸ್‌ಗೆ ಸೇಲ್‌ಟ್ಯಾಕ್ಸ್ ತೆಗೆದು ಕೊಳ್ಳುತ್ತಿದ್ದಾರೆ. ತಮಗೆ ಗೊತ್ತಿದೆಯೋ ಇಲ್ಲವೋ, ರೂಲ್ಸ್ ಪ್ರಕಾರ ತೆಗೆದುಕೊಳ್ಳಬಾರದು. ಇದನ್ನು ತಾವು ದಯಮಾಡಿ ಎನ್‌ಕ್ವೈರಿ ಮಾಡಬೇಕು. ಕಂಟ್ರೋಲ್ ಕಮಾಡಿಟೀಸ್‌ಗೆ ಟರ್ನ್‌ಓವರ್ ಮೇಲೆ ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳಬಾರದು. ಈ ಬಗ್ಗೆ ಸಚಿವರು ಉತ್ತರ ಕೊಡಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ಬಹಳ ಕಡೆ ಕೆಲವು ನ್ಯಾಯಬೆಲೆ ಅಂಗಡಿಗಳ ಮುಖಾಂತರವಾಗಿ, ತಮ್ಮ ಉದ್ಯೋಗದ ಮೇಲೆ ಟ್ಯಾಕ್ಸ್ ಇರುವ ಬಗ್ಗೆ, ಕೆಲವೊಂದು ಬೇಡಿಕೆಗಳು ಬಂದಿವೆ. ಇದು ನಮ್ಮ ಇಲಾಖೆಗೆ ಸಂಬಂಧ ಪಟ್ಟಿದ್ದಲ್ಲ, ಆದರೂ ಕೂಡ ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ಮಾಡಿ, ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುವಾಗ ಹೇಳಿದರು. ನಿರ್ದಿಷ್ಟವಾದ ದೂರುಗಳು ಇದ್ದರೆ, ಅವುಗಳನ್ನು ನನ್ನ ಗಮನಕ್ಕೆ ತಂದರೆ, ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ನಾನು ಈಗಾಗಲೇ ಅವರ ಗಮನಕ್ಕೆ ಎರಡು ಪತ್ರಗಳನ್ನು ಬರೆದಿದ್ದೇನೆ ನಮ್ಮ ಮತ ಕ್ಷೇತ್ರದಲ್ಲಿ ಗಣಪೂರ ಹೊನಗೇರ ಮತ್ತು ಅಜಲಪುರ ಈ ಹಳ್ಳಿಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ಯಾಯವಾಗುತ್ತಿದೆ ಈ ಊರಿನ ಜನರೇ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದು ಹಿಡಿದು ಪೋಲೀಸರಿಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ಆದರೂ ಕೂಡ ತಕ್ಷಣ ಕ್ಯಾನ್ಸಲ್ ಮಾಡಿ, ಮತ್ತೆ ಅವರಿಗೇ ಕೊಟ್ಟಿದ್ದಾರೆಂದು ತಮ್ಮ ಗಮನಕ್ಕೂ ತಂದೆ ಆದರೆ. ಯಾರ ಒತ್ತಡಕ್ಕಾದರೂ ಮಣಿದು, ಇಲ್ಲಿಯವರೆಗೂ ಕ್ರಮ ತೆಗೆದುಕೊಂಡಿಲ್ಲವೋ ನನಗೆ ಗೊತ್ತಿಲ್ಲ. ಎರಡು ಸಲ ಹೇಳಿದ್ದೇನೆ, ಪತ್ರವನ್ನೂ ಬರೆದಿದ್ದೇನೆ. ಆಮೇಲೆ ನಾನು ಒತ್ತಾಯ ಮಾಡಲಿಲ್ಲ. ಏಕೆಂದರೆ, ಏನೋ ಒತ್ತಡ ಇರಬಹುದು ಎಂದು ಸುಮ್ಮನಾದೆ. ಇದು ಒಂದು ಕಡೆ ಅಲ್ಲ

ತುಮಕೂರಿನವರಿಗೆ ಆ ರೀತಿಯಾಗಿ ಹೇಳಿದಿರಿ, ಗುಲ್ಬರ್ಗಾದವರಿಗೆ ಈ ರೀತಿಯಾಗಿ ಹೇಳುತ್ತೀರಿ, ಎಲ್ಲಾ ಕಡೆಯಲ್ಲೂ ಈ ರೀತಿಯಾಗಿ ನಡೆಯುತ್ತಿದೆ. ನಿಮ್ಮ ಪಕ್ಷದವರು ಯಾರಾದರೂ ಒತ್ತಡ ಮಾಡಿ, ನಿಮಗೆ ನಿಲ್ಲಿಸಿದರೋ ಏನೋ ಹಾಗಾದರೆ ಇದರ ಬಗ್ಗೆ ಸಿಓಡಿ ಎನ್‌ಕ್ವೈರಿ ಮಾಡಿಸಿ. ಪೋಲೀಸರ ರಿಪೋರ್ಟ್ ಇದ್ದರೂ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದನ್ನು ಮತ್ತೆ ಹೇಳಬೇಕಾಗುತ್ತದೆ. ರಾಜಕೀಯ ದುರುದ್ದೇಶದಿಂದ ಯಾರ ಒತ್ತಡಕ್ಕೋ ಮಣಿದು ನೀವು ಈ ರೀತಿ ಮಾಡುತ್ತಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇದು ಏಕೆ ಹೀಗೆ ಆಯಿತು ? ಎರಡನೆಯದು, ಫುಡ್ ಅಸಿಸ್ಟೆಂಟ್‌ನ್ನು ಬೆಳಗಾಂನಲ್ಲಿ ಲೋಕಾಯುಕ್ತದವರು ರೈಡ್ ಮಾಡಿದ್ದಾರೆ.

ಸುಮಾರು ೫೦ ಸಾವಿರ ರೂಪಾಯಿ ನಗದು ಹಣ, ೩೦ ತೋಲ ಬಂಗಾರ, ರೈಫಲ್ ಮತ್ತು ಅನೇಕ ವಸ್ತುಗಳನ್ನು ಜಪ್ತಿ ಮಾಡಿರುತ್ತಾರೆ. ತಾವು ಏತಕ್ಕೆ ಇದುವರೆಗೆ ಅವರನ್ನು ಸಸ್ಪೆಂಡ್ ಮಾಡಿಲ್ಲ. ಅದನ್ನು ಕೂಡಾ ತಾವು ಸ್ಪಷ್ಟವಾಗಿ ಹೇಳಬೇಕು. ಇದೇ ರೀತಿಯಾಗಿ ಕೆಲವು ಕಡೆ ಇನ್ನೂ ಕೆಲವು ಫುಡ್ ಅಸಿಸ್ಟೆಂಟ್ಸ್ ಇದ್ದಾರೆ. ಅವರ ಬಗ್ಗೆ ತಮ್ಮ ಗಮನಕ್ಕೆ ತಂದರೆ, ಕಂಪ್ಲೇಂಟ್ ಬಂದರೆ ತಾವು ಅವರ ಮೇಲೆ ನಿರ್ದಿಷ್ಟವಾದ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಏನಾದರೂ ಮಾಡುತ್ತೀರಾ ಹೇಗೆ ? ಇವೆರಡೂ ಕೇಸ್ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತೀರಿ, ಯಾವ ಆಕ್ಷನ್ ತೆಗೆದು ಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಹೇಳಿದಂತೆ ಅವರು ಹೇಳಿದಂಥ ಹಳ್ಳಿಗಳ ಬಗ್ಗೆ ಯಾರ ಒತ್ತಡವೂ ಇಲ್ಲ. ಯಾರ ಒತ್ತಡಕ್ಕೂ ನಾನು ಮಣಿದಿಲ್ಲ. ತಮಗೆ ಗೊತ್ತಿರುವ ಹಾಗೆ, ಏಪ್ರಿಲ್ ಒಂದರಿಂದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯಾಪ್ತಿಯಲ್ಲಿ ಇದೆಲ್ಲಾ ಬರುತ್ತದೆ. ಅವರಿಗೇ ಅಧಿಕಾರಿ ಕೊಟ್ಟಿರುವುದರಿಂದ ಅಲ್ಲಿಯ ಮಂಡಲ್ ಪ್ರಧಾನರು, ಜಿಲ್ಲಾ ಪರಿಷತ್‌ನವರು ಬೇರೆ ಬೇರೆ ರೀತಿಯ ನಿರ್ಣಯ ತೆಗೆದುಕೊಂಡಿರುವಂತಹದ್ದು ಇದಕ್ಕೆ ಕಾರಣ ಆಗಿರಬಹುದು. ಮಾನ್ಯ ಉಪನಾಯಕರು ಹೇಳಿದ ಹಾಗೆ, ಬಹಳಷ್ಟು ಕಡೆ ನ್ಯಾಯ ಬೆಲೆ ಅಂಗಡಿಗಳನ್ನು ಇವತ್ತು ಒಬ್ಬರಿಂದ ತೆಗೆದು ಇನ್ನೊಬ್ಬರಿಗೆ ಕೊಡುವ ಪ್ರಕರಣಗಳು ಅನೇಕ ಕಡೆ, ಅನೇಕ ಜಿಲ್ಲೆಯಿಂದ ಬಂದಿವೆ. ಈ ದೃಷ್ಟಿಯಿಂದ ಸರಕಾರ ತೀವ್ರಗತಿಯಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುತ್ತಿದೆ. ಯಾವುದೇ ಒಂದು ನ್ಯಾಯ ಬೆಲೆ ಅಂಗಡಿಯನ್ನು, ಕೆಲವು ನಿಯಮಗಳನ್ನು ಬಿಟ್ಟು ಕ್ಯಾನ್ಸಲ್ ಮಾಡುವಾಗಲೀ, ಬೇರೆಯವರಿಗೆ ಕೊಡುವುದಾಗಲೀ ಮಾಡುವುದಾದರೆ ಅದು ಸರಕಾರದ ಅಪ್ಪಣೆ ಪಡೆಯದೇ ಮಾಡಕೂಡದು ಎಂದು ನಾವು ನಿಯಮ ಮಾಡುತ್ತಿದ್ದೇವೆ. ಇದರ ಬಗ್ಗೆ ತೀವ್ರ ಗತಿಯಲ್ಲಿ ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ. ಮತ್ತು ಇದರ ಮೇಲೆ ಅಪೀಲ್ ಹಾಕತಕ್ಕಂಥಾದಕ್ಕೆ ಸರಕಾರಕ್ಕೆ ಬರಬೇಕೆಂದು ಒಂದು ಪ್ರಾವಿಜನ್ ಮಾಡಬೇಕೆಂಬ ವಿಚಾರದಲ್ಲಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಿಡಿದ ಮೇಲೂ ಆಕ್ಷನ್ ತೆಗೆದುಕೊಂಡಿಲ್ಲವಲ್ಲ ಏತಕ್ಕೆ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಅವರ ಅಣ್ಣ ತಮ್ಮಂದಿರ ಕಡೆಗೆ ಕೊಟ್ಟಿದ್ದಾರೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ತೀವ್ರಗತಿಯಲ್ಲಿ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ಒತ್ತಡ ಇಲ್ಲ. ಯಾರೂ ಒತ್ತಡ ತಂದಿಲ್ಲ ಎಂದು ಹೇಳುತ್ತೇನೆ.

ಇನ್ನು ಬೆಳಗಾಂ ಫುಡ್ ಅಸಿಸ್ಟೆಂಟ್ ಬಗ್ಗೆ ತಮಗೆ ಗೊತ್ತಿರುವ ಹಾಗೆ ಯಾವ ಇಲಾಖೆಯವರು ಯಾರು ಅವರನ್ನು ಹಿಡಿರುತ್ತಾರೆ ಅವರು ಸರಕಾರಕ್ಕೆ ಅದರ ಬಗ್ಗೆ ಒಂದು ರಿಪೋರ್ಟನ್ನು ಕಳುಹಿಸಬೇಕಾಗುತ್ತದೆ. ಇದು ನಡೆದು ಇನ್ನೂ ಮೂರು ನಾಲ್ಕು ದಿವಸ ಆಗಿದೆ. ಎರಡು ಮೂರು ದಿವಸದಲ್ಲಿ ಅದರ ರಿಪೋರ್ಟ್ ಬರಬಹುದು. ಬಂದ ತಕ್ಷಣ ಯಾವುದೇ ಪರಿಸ್ಥಿತಿಯಲ್ಲಿ ಯಾರಿಗೂ ಮುಲಾಜು ತೋರಿಸತಕ್ಕಂಥ ಪ್ರಶ್ನೆ ಮಾಡುವುದಿಲ್ಲ. ಈ ಫುಡ್ ಅಸಿಸ್ಟೆಂಟ್ ಬಗ್ಗೆ ಹಿಂದೆ ಕೂಡಾ ಡಿವಿಜನಲ್ ಕಮಿಷನರ್ ಕಡೆಯಿಂದ ದೂರು ಬಂದಿತ್ತು. ಇಲ್ಲಿಂದ ನೇರವಾಗಿ ಒಬ್ಬ ಐ. ಎ. ಎಸ್. ಅಧಿಕಾರಿಯನ್ನು ವಿಚಾರಣೆಗೆ ಹಾಕಬೇಕೆಂದು ಅಭಿಪ್ರಾಯ ಬಂದಿತ್ತು. ಅದೇ ಪ್ರಕಾರ ಐ. ಎ. ಎಸ್. ಅಧಿಕಾರಿಯನ್ನು ಹಾಕಿ ಅವರ ಮೇಲೆ ವಿಚಾರಣೆ ಮಾಡಿದ್ದೇವೆ, ಆ ರಿಪೋರ್ಟ್ ಇನ್ನೂ ಸರಕಾರಕ್ಕೆ ಬಂದಿಲ್ಲ. ಅವರು ಕ್ಲಾಸ್ ಒನ್ ಆಫೀಸರ್ ಇರುವುದರಿಂದ ನನ್ನ ವ್ಯಾಪ್ತಿಯಲ್ಲಿ ಕ್ರಮ ತೆಗೆದು

ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ತೀವ್ರ ಗತಿಯಲ್ಲಿ ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ರೆಕಮಂಡ್ ಮಾಡಿದರೆ ಚೀಫ್ ಮಿನಿಸ್ಟರ್ ಸಸ್ಪೆಂಡ್ ಮಾಡುತ್ತಾರೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾಡುತ್ತೇನೆ. ಮಾನ್ಯ ಉಪನಾಯಕರು ಹೇಳಿದ ಹಾಗೆ ಇದು ಆಗಿರತಕ್ಕಂಥಾದ್ದು ಮೂರು ನಾಲ್ಕು ದಿವಸದ ಕೆಳಗೆ. ರಿಪೋರ್ಟ್ ಬಂದ ತಕ್ಷಣ ರೆಕಮೆಂಡ್ ಮಾಡುತ್ತೇನೆ. ಉಳಿದ ವಿಷಯಗಳಲ್ಲಿ ನಾನು ರೆಕಮೆಂಡ್ ಮಾಡಿರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನೆ ಏನೆಂದರೆ, ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೨೩ರಲ್ಲಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಸಭೆಯನ್ನು ಕೋರುವುದು.

ಪ್ರಸ್ತಾವನೆಯು ಸರ್ವಾನುಮತದಿಂದ ಅಂಗೀಕಾರವಾಯಿತು ಮತ್ತು ಬೇಡಿಕೆಗೆ ಮಂಜೂರಾತಿ ದೊರೆಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಅಭಿಯಾಚನೆಯ ವಿವರಗಳನ್ನು ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ-೨೩

ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳು ಸರಬರಾಜು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೦,೬೪,೦೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಉಪಾಧ್ಯಕ್ಷರು.—ಈಗ ಮುದ್ರಣ ಲೇಖನ ಸಾಮಗ್ರಿ ಮತ್ತು ಉಚ್ಚ ಶಿಕ್ಷಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾಳೆ ಬೆಳಿಗ್ಗೆ ೯ ಘಂಟೆಗೆ ಪ್ರಾರಂಭ ಮಾಡಲಿ.

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ......

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ನಮ್ಮ ಪಾರ್ಟಿ ಮೀಟಿಂಗ್ ಇದೆ, ಬೆಳಿಗ್ಗೆ ೮ ಘಂಟೆಗೆ ನಾವು ಬಂದಿದ್ದೇವೆ, ಇಲ್ಲಿಯವರೆಗೆ ಕುಳಿತಿದ್ದೇವೆ.

ಉಪಾಧ್ಯಕ್ಷರು.—ಇಲ್ಲ ಆಗುವುದಿಲ್ಲ, ಉತ್ತರ ಆಗಲೇಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲೂ ಸಂಜೆ ೭ ಘಂಟೆ ಮೇಲೆ ಕೂಡಿತುಕೊಳ್ಳುವುದಿಲ್ಲ ಎಂದು ಹೇಳಿದ್ದೆ. ಒಂದು ಕಡೆ ಅದರ ನಿರ್ಣಯ ಹೇಳುತ್ತೀರಿ. ಅದರ ಪ್ರಕಾರ ನಡೆದು ಕೊಳ್ಳಬೇಕಾದರೆ ೭ ಘಂಟೆ ಮೇಲೆ ನಾವು ಕುಳಿತು ಕೊಳ್ಳುವುದಿಲ್ಲ.

ಶ್ರೀ ಪಿ. ಎಸ್. ರಾಣೆ,—ಬೆಳಗ್ಗೆ ೮ ಘಟಗೆ ಶುರ ಮಾಡೋಣ,

ಉಪಾಧ್ಯಕ್ಷರು,—ಇಲ್ಲ, ಈಗಲೇ ಆಗಬೇಕು ನೀವು ಉತ್ತರ ಹೇಳಿ.

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ. ಕಳೆದ ೫ ವರ್ಷಗಳಿಂದ ನಾವು ಅಧಿಕಾರಕ್ಕೆ ಬಂದ ಮೇಲೆ ನಮ್ಮ ಸರ್ಕಾರವು ಬಹಳಷ್ಟು ಗಹನವಾದ ಸುಧಾರಣೆಗಳನ್ನು ಮಾಡಿದ ಕೀರ್ತಿ ವಿದ್ಯಾ ಇಲಾಖೆಗೆ ಸೇರಬೇಕೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಸುಮಾರು ೨೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಂತಹ ವಿದ್ಯಾ ಇಲಾಖೆ ಇವತ್ತು ೬೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಈ ವಿದ್ಯಾ ಇಲಾಖೆ. ಇವತ್ತು ನಾವು ೫

ವರ್ಷಗಳಲ್ಲಿ ನಮ್ಮ ಹಿರಿಯುಮಂತ್ರಿಗಳಾಗಿದ್ದ ರಾಚಯ್ಯನವರೇ ಆಗಲಿ, ನಂತರ ಬಂದಂತಹ ಮಾನ್ಯ ರಘುಪತಿಯವರೇ ಆಗಲಿ ನಂತರ ಬಂದಂತಹ ಮಾನ್ಯ ಮಂಜುನಾಥ್‌ರವರೇ ಆಗಲಿ ಶ್ರೀಮಾನ್ ಸೋಮಶೇಖರ್‌ರವರೇ ಆಗಲಿ ವಿದ್ಯಾ ಇಲಾಖಾ ಮಂತ್ರಿಗಳಾಗಿ ಬಹಳಷ್ಟು ಒಳ್ಳೆಯ ಕೆಲಸ ಮಾಡಿ ಇವತ್ತು ಈ ಒಂದು ಪ್ರಗತಿಯನ್ನು ಸಾಧಿಸಿದ್ದಾರೆ. ವಿದ್ಯಾ ಇಲಾಖೆಯಲ್ಲಿ ಆಗಿರತಕ್ಕಂಥ ಸಂಪೂರ್ಣ ಪ್ರಗತಿಗೆ ಅವರುಗಳ ಮೂಲ ಕಾರಣಕರ್ತರಾಗಿದ್ದಾರೆ, ಒಂದೇ ಒಂದು ವಿಚಾರವನ್ನು ನಾನು ಅಂಕಿ ಅಂಶಗಳೊಟ್ಟಿಗೆ ಹೇಳುವುದಾದರೆ ನಮ್ಮ ವಿದ್ಯಾ ಇಲಾಖೆ ಕೇರಳ ರಾಜ್ಯದಲ್ಲಿ highest literacy percentage ಅಂತ ಇದೆಯೋ, ಆದೇ ಆಂಧ್ರಪ್ರದೇಶಕ್ಕೆ ನಾವು ನಮ್ಮ ರಾಜ್ಯವನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ೪೫ ಸಾವಿರ ಮಿಲಿಯನ್ ಜನಸಂಖ್ಯೆ ಇರುವಂತಹ ನಮ್ಮ ರಾಜ್ಯದಲ್ಲಿ ಸುಮಾರು ೩೬೫ ಫಸ್ಟ್ ಗ್ರೇಡ್ ಕಾಲೇಜುಗಳು ಇವೆ. ಅದೇ ಕೇರಳ ರಾಜ್ಯದಲ್ಲಿ ೧೫೦ ಫಸ್ಟ್‌ಗ್ರೇಡ್ ಕಾಲೇಜುಗಳು ಇವೆ. ೧೧ ಲಕ್ಷ ಜನಸಂಖ್ಯೆ ಇರುವ ನಮ್ಮಲ್ಲಿ ೮೦೦ ಕಾಲೇಜುಗಳು ಇವೆ. ಅಲ್ಲಿ ೪.೫ರಷ್ಟು ಕಾಲೇಜುಗಳು ಮಾತ್ರ ಇವೆ. ಈ ಮಾತನ್ನು ನಾನು ಪೂರಕವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ ಇವತ್ತು ನಾವು ಕಳೆದ ೩೫ ವರ್ಷಗಳ ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಮಿತಿಮೀರಿದ ಸಾಧನೆಯನ್ನು ನಾವು ನಮ್ಮ ವಿದ್ಯಾ ಕ್ಷೇತ್ರದಲ್ಲಿ ಮಾಡಿ ತೋರಿಸಿದ್ದೇವೆ.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ನನಗೆ ಬಹಳ ಸಂತೋಷವಾಯಿತು, ಮಾನ್ಯ ಸದಸ್ಯರಾದ ಶ್ರೀಮಾನ್ ಆಚಾರ್‌ರವರು ಮಾತ ನಾಡುವಾಗ ಅನೇಕ ಕಳಕಳಿಯ ವಿಚಾರಗಳನ್ನು ಮತ್ತು ಚಿಂತನೆ ಬಗ್ಗೆ ಮತ್ತು ತೊಂದರೆಗಳ ಬಗ್ಗೆ, ವಿದ್ಯಾ ಇಲಾಖೆಯಲ್ಲಿರತಕ್ಕಂಥ ನ್ಯೂನತೆಗಳ ಬಗ್ಗೆ ತಿಳಿದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ಅವರು ಧಾರಳವಾಗಿ ಸಲಹೆಗಳನ್ನು ಕೊಟ್ಟರು ಆದರೆ ಅದೇ ವಿಚಾರ, ಅದೇ ಧಾರಾಳತನ ನನ್ನ ಪರಮ ಮಿತ್ರರಾದ ಮಾನ್ಯ ರಾಣೆಯವರಿಗೆ ಬರಲ್ಲಿಲ್ಲವೆಂದು ನನಗೆ ಬಹಳ ಬೇಸರವಾಯಿತು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿದ್ಯಾ ಇಲಾಖೆಗೆ ಸುಮಾರು ೬೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಮ್ಮ ಸರ್ಕಾರದ ಒಟ್ಟು ವೆಚ್ಚದಲ್ಲಿ ೩೦ರಷ್ಟು ಹಣವನ್ನು ಈ ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಇದನ್ನೇ ನಾನು ಪುನರಪಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಇದನ್ನು ರಾಜಕೀಯವಾಗಿ ಟೀಕೆ ಮಾಡುತ್ತಿದ್ದೇನೆಂದು ತಾವ್ಯಾರು ತಪ್ಪು ತಿಳಿದುಕೊಳ್ಳಬಾರದು ? ಈ ವಿದ್ಯಾ ಇಲಾಖೆಯು concurrent subject ಆಗಿದ್ದು ರಾಜಕೀಯ ಬುನಾದಿಯಾಗಿದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಆಚಾರ್‌ರವರು ಹೇಳಿದರು, ಮತ್ತು ಬಡಬಗ್ಗರಿಗೆ ದೀನದಲಿತರಿಗೆ ವಿದ್ಯಾಭ್ಯಾಸ ಕೊಡಬೇಕೆಂದು ಅವರು ಹೇಳಿದರು. Though education is a concurrent subject, the contribution of the central Government was only Rs. 250 crores. Now, thanks to the Prime Minister, only this year it has been raised to Rs. 600 crores i.e., Rs. 50 crores less than our State expenditure on our Education Department, ಸರ್ಕಾರದ ಒಟ್ಟು ವೆಚ್ಚದಲ್ಲಿ ಅಂದರೆ ೩೫ ಸಾವಿರ ಕೋಟಿ ರೂಪಾಯಿಗಳಲ್ಲಿ ಶೇಕಡ ಒಂದು ಪರ್ಸೆಂಟ್ ಮಾತ್ರ ವಿದ್ಯಾ ಇಲಾಖೆಗೆ ಅವರು ಖರ್ಚು ಮಾಡುತ್ತಿದ್ದಾರೆ. ಇವತ್ತು ನನ್ನ ಮನವಿ ಅವರಲ್ಲಿ ಇಷ್ಟೇ. ಇವತ್ತು ನಮ್ಮಲ್ಲಿರತಕ್ಕಂಥ ಸುಮಾರು ೨೦ ಸಾವಿರ ಶಾಲಾ ಸಿಬ್ಬಂದಿಗೆ. ವಿಶ್ವವಿದ್ಯಾನಿಲಯಗಳ ಸಿಬ್ಬಂದಿ ವೆಚ್ಚಕ್ಕೆ ವಿದ್ಯಾ ಇಲಾಖೆಯ ಪೂರ್ತಿ ಹಣ ಸಂಬಳ ಸಾರಿಗೆಗಳಿಗೆ ಖರ್ಚಾಗುತ್ತಿದೆ ಎಂದು ಹೇಳಿ. There has been reciprocal gesture on behalf of the Government of India. ನಾವು ಎಷ್ಟು ಕಾಳಜಿ, ಎಷ್ಟು ಕಳಕಳಿ ವಿದ್ಯಾ ಇಲಾಖೆ ಬಗ್ಗೆ ಹೊಂದಿದ್ದೇವೆಯೋ ಅಷ್ಟೇ ಮುತುವರ್ಜಿ ಕೇಂದ್ರ ಸರ್ಕಾರ ವಹಿಸಿಲ್ಲ. ಮಾನ್ಯ ಮಿತ್ರರಾದ ಶ್ರೀಮಾನ್ ಸೋಮಶೇಖರ್‌ರವರು ಹೇಳುತ್ತಾ ಹೇಳಿದರು Operation Blackboardಗೆ ೧೦೦ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರುತ್ತದೆಂದೂ ಆದರೆ ವರುಷದ ಕೊನೆಗೆ ಬರುವಂತಹ ಹಣ ಒಂದು ಕೋಟಿ ರೂಪಾಯಿಗಳು ಮಾತ್ರ. ಆಮೇಲೆ ವೊಕೇಷನಲ್ ಟ್ರೈನಿಂಗ್‌ಗೆ ೮ ಕೋಟಿ ರೂಪಾಯಿಗಳೆಂದು ಹೇಳಿದರೆ ಕೊನೆಯಲ್ಲಿ ನಮಗೆ ಬರುವಂತಹ ಹಣ ಬರೀ ೩೦ ಲಕ್ಷ ರೂಪಾಯಿಗಳು. ಇವತ್ತು ರಾಜ್ಯ ಸರ್ಕಾರದ ವಿಶ್ವವಿದ್ಯಾನಿಲಯ ಗಳಿಗೆ ಬರಬೇಕಾದ ಹಣ it is a staggering amount. ಮಾನ್ಯ ಅಧ್ಯಕ್ಷರೇ, ಇದನ್ನೆಲ್ಲಾ

ಹೇಳಿದರೆ ರಾಜಕೀಯವೆಂದು ಹೇಳಬೇಡಿ. ನನ್ನ ಮಿತ್ರರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಕೆ. ಹೆಚ್. ಪಾಟೀಲ್‌ರವರು ಮತ್ತು ಮಾನ್ಯ ಶ್ರೀನಿವಾಸ್‌ರವರು ಇಲ್ಲಿ ಇದ್ದಾರೆ. ನನ್ನ ಈ ಅನಿಸಿಕೆಗಳನ್ನು ಕೇಂದ್ರದಲ್ಲಿ ನಡೆದ ವಿದ್ಯಾ ಮಂತ್ರಿಗಳ ಸಭೆಯಲ್ಲಿ ಹೇಳಿದ್ದೇನೆ. ನಾವು ನೀವು ಸೇರಿ ವಿದ್ಯಾ ಕೊಡಬೇಕು. The education that we are imparting is a soleless education. ಮಾನ್ಯ ಮಲ್ಲಿಕಾರ್ಜುನ ಎಂ. ಖರ್ಗೆಯವರು ಸಹ ವಿದ್ಯಾಮಂತ್ರಿಗಳಾಗಿ ಜವಾಬ್ದಾರಿ ಸ್ಥಾನದಲ್ಲಿದ್ದವರು ಕ್ಯಾಪಿಟೇಷನ್ ಬಗ್ಗೆ ಮಾನ್ಯ ರಾಣೆಯವರು ಮಾತನಾಡಿದರು. With that determination we have brought that Capitation Bill. ನೀವು ಮಾಡಿದ ಪಾಪಗಳನ್ನು ನಾವು ಇವತ್ತು ನಮ್ಮ ತಲೆ ಮೇಲೆ ಹೊತ್ತುಕೊಂಡಿದ್ದೇವೆ.

ಇವತ್ತು ಅದು ನಡೆದು ಬರುತ್ತಿದೆ. ಅದಕ್ಕೂ ಒಂದು ತಪ್ಪು ಕಲ್ಪನೆಯನ್ನು ತಾವು ಕೊಟ್ಟಿದ್ದೀರಿ. It will be effective from either 9th or 11th or 13th July. Any good or well-intentioned action may be misconstrued or distorted by vested interests. ಹಲವಾರು ಕಾಲೇಜುಗಳನ್ನು ತಮ್ಮ ಕಾಲದಲ್ಲೇ ಓಪನ್ ಮಾಡಲಾಯಿತು. ಕೊರಚರು, ಕೊರಮರು ಬಂದು ಕಾಲೇಜುಗಳನ್ನು ಓಪನ್ ಮಾಡುತ್ತೇವೆಂದು ಹೇಳಿದರೆ, ಅವರುಗಳಿಗೂ ಕಾಲೇಜುಗಳನ್ನು ನಡೆಸುವುದಕ್ಕೆ ಅವಕಾಶ ಕೊಡುತ್ತೇವೆಂದು ನಿಮ್ಮ ಸರ್ಕಾರದವರೇ ಹೇಳಿದ್ದರು. We have committed oureselves for abolition of capitation fees. We have brought a legislation which will come into effect. Again flaws may be there inherent in any legislation which suffers from the same inhibition and same flaws and distortion. ಆದ್ದರಿಂದ ನನ್ನ ಪ್ರಾರ್ಥನೆ ಇಷ್ಟೇ. ನಮ್ಮ ಸರ್ಕಾರ ಮೂಲ ತತ್ವಕ್ಕೆ ಬದ್ಧವಾಗಿರುತ್ತದೆ. ಜನತಾ ಸರ್ಕಾರ ಬಂದಮೇಲೆ ಕ್ಯಾಪಿಟೇಷನ್ ಫೀಸ್‌ನ್ನು ಅಬಾಲಿಷ್ ಮಾಡುತ್ತೇವೆಂದು ಹೇಳಿದ್ದೆವು. ಆ ಮಾತಿಗೆ ನಾವು ಬದ್ಧವಾಗಿದ್ದೇವೆ. You must say without any party prejudices what soevery. This is a menace that is facing the society. This must be understood. I am not carrying any brief to privitisation of education here. At the same time after the abolition of capitation fees where do we stand ? ಮಾನ್ಯ ಸದಸ್ಯರಾದ ರಾಣೆಯವರು ಕಾರವಾರ ಮತ್ತು ಬಿಜಾಪುರದಲ್ಲಿ ಪಿ. ಜಿ. ಸೆಂಟರ್‌ಗಳನ್ನು ತೆರೆಯಬೇಕೆಂದು ಕೇಳಿದ್ದಾರೆ ನಾವು ನಾವು ವಿದ್ಯಾ ಇಲಾಖೆಗೆ ಇಡತಕ್ಕ ಹಣದಲ್ಲಿ ಶೇಕಡಾ ೯೦ ಭಾಗ ಸ್ಯಾಲರಿಗೆ ಹೋದರೆ ಡೆವಲಪ್‌ಮೆಂಟಲ್ ಆಕ್ಟಿವಿಟಿಸಗೆ ಮತ್ತು ರೀಸರ್ಚ್ ಇನ್ಸ್ಟಿಟ್ಯೂಷನ್‌ಗಳನ್ನು ತೆಗೆಯುವುದಕ್ಕೆ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಎಲ್ಲಿಂದ ಹಣವನ್ನು ತರಬೇಕು ? ಇವತ್ತಿನ ಪರಿಸ್ಥಿತಿಯಲ್ಲಿ ಹೊಸ ಕಾಲೇಜುಗಳನ್ನು ಓಪನ್ ಮಾಡುವುದು ಬೇಡ ಎನ್ನುವ ಪರಿಸ್ಥಿತಿಯಲ್ಲಿ ನಾವು ಇದ್ದೇವೆ I must be the most unpopular Education Minister because whether it is Sri Manjunath or Sri Rachaiah or Sri Raghupathi or Sri Somashekhar, they have been very generous. When it came to me I did not want posterity to question my bona, fides. ಇವತ್ತು ನಾವು ಹೆಚ್ಚಿಗೆ ಕಾಲೇಜುಗಳನ್ನು ಕೊಟ್ಟು, ಯಾವುದೇ ಕಾಲೇಜಿಗೆ ಒಳ್ಳೆಯ ಅನುಕೂಲತೆಗಳು ಇಲ್ಲದಿದ್ದರೆ, ನಮ್ಮನ್ನು ಮತ್ತು ನಮ್ಮ ಸರ್ಕಾರವನ್ನು ಒಳ್ಳೆಯ ದೃಷ್ಟಿಯಿಂದ ನೋಡುವುದಿಲ್ಲ. because of paucity of funds, because of the restraint on the resources ನಾವು ಹೆಚ್ಚಿಗೆ ಕಾಲೇಜುಗಳನ್ನು ಮಂಜೂರು ಮಾಡಿಲ್ಲ. In good faith I have shared certain thing with him even though he has disclosed on the Floor of the House. Certain things do happen. I admitted that I am sorry Iam guilty of this act for whatever reason. There are some compulsion whether to call it political compulsion or social compulsion. Variouspressures act in counter force. ನಾವು ಯಾವುದೇ ಕೆಲಸಕ್ಕೆ ರಾಜಕೀಯವನ್ನು ಮಾಡುವುದಿಲ್ಲ. ಸದಾಶಿವನಗರದ ಕಾಲೇಜಿನ ಬಗ್ಗೆ ರಾಜಕೀಯ ಮಾಡು

ತ್ತಿದ್ದಿರೆಂದು ಬಹಳ ಕಟುವಾಗಿ ಮಾನ್ಯ ಸದಸ್ಯರು ಹೇಳಿದರು. College was not existing. When the college was not existing the Committee inspected. It was most uncharitable on the part of Sri Rane to have doubted my bona-fides. With sincerity I expressed mysel. I feel wounded. I feel hurt. You were very, very uncharitable, Sri Rane. ಆಮೇಲೆ ಮಾನ್ಯ ಜೆ. ಹೆಚ್. ಆಚಾರ್ ರವರು ಅನುದಾನಿತ ಕಾಲೇಜುಗಳಿಗೆ ಸರ್ಕಾರದವರು ಅನುದಾನ ಕೊಡುವುದನ್ನು ನಿಲ್ಲಿಸಿದರೆ ಕಾಲೇಜುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. If our resource has allowed us to function, I would have been the most generous man. ಹಣಕಾಸಿನ ಪರಿಸ್ಥಿತಿ ಬಹಳ ಬಿಕ್ಕಟ್ಟಿನಲ್ಲಿರುವಾಗ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಸಂಬಳ ಕೊಡುವುದಕ್ಕೆ ನಾವು ಹೆಚ್ಚು ಹಣವನ್ನು ಅಲೋಕೇಷನ್ ಮಾಡಬೇಕಾದ ಪರಿಸ್ಥಿತಿ ಇದೆ.

7-00 P. M.

We have planned out that so much allocation is for salaries. It will have to be certainly over and above when Government of India's Melhotra Committee report or any Commission Report comes. We have to agree because it is a binding thing. Then what happens, additional expenditure we have to incur. This is only an isolated example I am quoting. ಇದು ಏನಾಗುತ್ತದೆ ಅಂದರೆ, ಪ್ರತಿವರ್ಷವೂ ಇದೇ ತರಹ ವೇಕನ್ಸಿ ಇರಬಹುದು ಅಥವಾ ಡಿಯರ್‌ನೆಸ್ ಅಲೋಎನ್ಸ್ ಇರಬಹುದು ಮುಂತಾದ ಕಾರಣಗಳಿಗಾಗಿ ಕೊನೆಯ ತಿಂಗಳಲ್ಲಿ ತೊಂದರೆ ಇರುವುದು ಸಹಜ, ಅದಕ್ಕೂ ಕೂಡ ನೀವು ಟೀಕೆ ಮಾಡುತ್ತೀರಿ. I have been repeatedly reiterating this education is not the sole monopoly of the Government alone, it must be a joint endeavour between students, teaching fraternity, teaching institutions, university, the society and the government. ಇಲ್ಲಿ ನಮ್ಮ ಮುಂದೆ ಮಾನ್ಯ ಕೆ. ಹೆಚ್. ಪಾಟೀಲರವರು ಕುಳಿತಿದ್ದಾರೆ, ಅವರು ಒಂದು ಸಾಧನೆ ಮಾಡಿ ಹಲವಾರು ಸಂಸ್ಥೆಗಳನ್ನು ಬೆಳೆಸಿದ್ದಾರೆ. ಅವರ ಸಂಸ್ಥೆಯಿಂದ ಬಂದಥವರು ಇವತ್ತು ಇಂಜಿನೀಯರಿಂಗ್ ಮತ್ತು ಪಾಲಿಟೆಕ್ನಿಕ್ಸನ್ನು ಮಾಡಿದ್ದಾರೆ. ಹಂಲುಕೋಟೆಯಲ್ಲಿ ಅಂತಹ ಸಂಸ್ಥೆ ಸ್ಥಾಪನೆಯಾಗದಿದ್ದರೆ? ಶಿವಮೊಗ್ಗದಲ್ಲಿ ಮಾನ್ಯ ಶ್ರೀನಿವಾಸ್‌ರವರಂಥವರು ಸ್ಥಾಪನೆ ಮಾಡದಿದ್ದರೆ, ಇವೆಲ್ಲಾ ಆಗುತ್ತಿದ್ದುವೇ, Let us not be hypocrites. Let us face the reality. Therefore, let us not allow trading in business. Let us encourage endowments. ಯಾವುದೇ ಒಂದು ವ್ಯವಸ್ಥೆಯು ನಡೆಯಬೇಕಾದರೆ, ಇವೊತ್ತು ಕಾಲೇಜುಗಳನ್ನು ಕೇಳುತ್ತಾರೆ, ಪಾಲಿಟೆಕ್ನಿಕ್‌ಗಳನ್ನು ಕೇಳುತ್ತಾರೆ, ಇಂಜಿನಿಯರಿಂಗ್ ಕಾಲೇಜುಗಳನ್ನು ಕೇಳುತ್ತಾರೆ. ಹಾಗೆ ಮಾನ್ಯ ಸದಸ್ಯರು ಕೇಳುವಾಗ ನಾನು ಬಹಳ ಲಿಬರಲ್ ಆಗಿದ್ದೇನೆ. ನಾನ್‌ಗ್ರ್ಯಾಂಟ್ ಆಗಿದ್ದರೆ, ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದೆ. ಆದರೆ ಮಾನ್ಯ ಆಚಾರ್‌ರವರು ಹೇಳಿದಂತೆ ಹಾಗೆ ಕೊಡಬಾರದು ಎಂದು. ಅವರ ಸ್ಥಳಕ್ಕೆ, ಅವರ ಗ್ರಾಮಕ್ಕೆ, ಅವರ ಸ್ಥಳೀಯ ಸ್ಥಳಕ್ಕೆ ಈ ಕಾಲೇಜುಗಳ ಬೇಡಿಕೆ ಇರುವಾಗ, ನಾನು ಸರಕಾರದಿಂದ ಕೊಡದೇ ಇರುವಂಥ ಪರಿಸ್ಥಿತಿಯಲ್ಲಿ ಇರುವಾಗ, ಅನುದಾನ ರಹಿತ ಸಂಸ್ಥೆಗಳನ್ನು ಕೊಡುವುದು ಬೇಡ ಎಂದು ಹೇಳುವುದು ತಪ್ಪಾಗುತ್ತದೆ ಎಂದು ನನ್ನ ಭಾವನೆ. ಇನ್ನು ಕೆಲವರು ಎಸ್‌ವಿಎಸ್ ಕಾಲೇಜು ಬಗ್ಗೆ ಮಾಡಿದ್ದಾರೆ. ನಾನು ಅವರ ಹತ್ತಿರ ಯಾವ ಯಾವ ವಿಚಾರಗಳನ್ನು ಎತ್ತಿದ್ದೇನೆ, ಅದಕ್ಕೆ ಉತ್ತರ ಕೊಡುತ್ತೇನೆ. ಮತ್ತು ಭಟ್ಟಾಚಾರ್ಯ ಮತ್ತು ಭರತ್ ಸಮಿತಿಯ ರಿಪೋರ್ಟನ್ನು ಒಪ್ಪಿಲ್ಲ ಎಂದು ಹೇಳಿದ್ದಾರೆ. ಭಟ್ಟಾಚಾರ್ಯ ಸಮಿತಿಯ ರಿಪೋರ್ಟ್ ಬಗ್ಗೆ ಈಗಾಗಲೇ ಚರ್ಚೆ ನಡೆಯುತ್ತಾ ಇದೆ. Bharat Committee report has also been accepted in principle and my officers have been directed to implement the Bharat Committee report in toto. ಪಿ. ಯು. ಸಿ. ಯನ್ನು

ವಿಭಾಗಿಸಿ, ಅದನ್ನು ಪ್ಲಸ್ ಸಂಖ್ಯೆಯನ್ನು ಮಾಡುವುದಕ್ಕೆ ಒಪ್ಪಿದೆ. Again if Bharat Committee report will have to be implemented in toto, the additional burden to the State Exchequer will be to the tune of Rs. 142 crore. ಆ ಹಣವನ್ನು ನಾವು ಎಲ್ಲಿಂದ ತರುವುದು ? ಆದರೂ ಕೂಡ ಭಾಗಶಃ ಹಂತಹಂತವಾಗಿ ಮಾಡಬೇಕೆಂದು ಸರಕಾರ ನಿರ್ಧಾರ ತೆಗೆದುಕೊಂಡಿದೆ, ಭರತ್ ಸಮಿತಿ ರಿಪೋರ್ಟ್‌ನ್ನು ಕೂಡ ಹಂತಹಂತವಾಗಿ ಮಾಡುತ್ತೇವೆ. ಪ್ರಥಮ ಹಂತದ ಕೆಲಸವನ್ನು ಮಾಡುವಲ್ಲಿ ಯು. ಜಿ. ಸಿ. ಯ ಅಧ್ಯಾಪಕರು ಬಂದಿದ್ದರು ಅದನ್ನು ಪ್ರಥಮ ಹಂತದಲ್ಲಿ ಮಾಡಲಿಕ್ಕೆ ಒಪ್ಪಿದ್ದೇವೆ. ಇನ್ನು ತಾಂತ್ರಿಕ ವಿದ್ಯಾಭ್ಯಾಸದ ಬಗ್ಗೆ ಮತ್ತು ಕೃಷ್ಣಮೂರ್ತಿ ಕಮಿಟಿ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಹೊಸ ಎಜುಕೇಷನ್ ಪಾಲಿಸಿಯಲ್ಲಿ ವೊಕೇಷನಲ್ ಎಜುಕೇಷನ್‌ಗೆ ಹೆಚ್ಚು ಸಮಯ ಕೊಡಬೇಕೆಂಬುದು ನಮ್ಮ ವಿಚಾರವಾಗಿದೆ. White Collars in hundreds and thousands we are turning out from each university. ಅದಕ್ಕಾಗಿ ಜಾಬ್ ಓರಿಯಂಟೆಡ್ ಎಜುಕೇಷನ್ ಮೂಲಕ ಕೆಲಸ ಮಾಡುವಂಥವರನ್ನು ತಯಾರು ಮಾಡಬೇಕು. ಅದಕ್ಕಾಗಿ ನಮಗೆ ಪಾಲಿಟೆಕ್ನಿಕ್‌ಗಳು ಬೇಕು. ಆದರೆ ಅವುಗಳನ್ನು ಯಾವ ರೀತಿಯಲ್ಲಿ ಇಟ್ಟುಕೊಳ್ಳಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. Therefore polytechnicx is not much of a business trading centre. If an enterprising man or institution wanting to start, academic standards will have to be maintained and watched by the government. We have stipulated certain conditions. ಇದಕ್ಕಾಗಿ ಸಂಸ್ಥೆಯವರ ೫ ಲಕ್ಷ ರೂಪಾಯಿಗಳು ಸರಕಾರಿ ಖಜಾನೆಯಲ್ಲಿರಬೇಕು. ಇನ್‌ಫ್ರಾಸ್ಟ್ರಕ್ಚರ್ ಇಷ್ಟು ಆಗಬೇಕೆಂದು ಮಾಡಿ ಲೆಟರ್ ಆಫ್ ಇಂಟೆಂಡ್ ಕೊಟ್ಟು ಅವರಿಗೆ ಸ್ಟಾರ್ಟ್ ಮಾಡಲಿಕ್ಕೆ ಹೇಳಿದ್ದೇವೆ. ಇವೊತ್ತು ಕೃಷ್ಣಮೂರ್ತಿ ರಿಪೋರ್ಟ್ ಬಂದತತ್‌ಕ್ಷಣ ಸೂಕ್ತ ತನಿಖೆ ಮಾಡಿ, ತೀರ್ಮಾನ ಮಾಡಿ, ಕೆಲವು ಕಾಲೇಜುಗಳಲ್ಲಿ ಕೋರ್ಸ್ ಕಡಿಮೆ ಮಾಡಬೇಕೆಂದು ಹೇಳಿದ್ದೇವೆ. ಅದರ ಬಗ್ಗೆಯೂ ಟೀಕೆ ಬಂತು. ನಮಗೆ ಈ ಬಗ್ಗೆ ಅಭಿವೃದ್ಧಿಪಡಿಸಿಕೊಳ್ಳಲು ಸಾಕಷ್ಟು ಸಮಯವನ್ನು ಕೊಟ್ಟಿಲ್ಲ, ಸೂಕ್ತ ರೀತಿಯಲ್ಲಿ ಅಭಿವೃದ್ಧಿಗೊಳ್ಳಲು ನಮಗೆ ಒಂದು ವರ್ಷದಲ್ಲಿ ಆಗಲಿಲ್ಲ, ನಮಗೆ ಇನ್ನೂ ಅವಕಾಶ ಕೊಟ್ಟು ಅನಂತರ ನಿಮ್ಮ ಸಮಿತಿಯನ್ನು ಕಳುಹಿಸಿ ಕೊಟ್ಟು ಪರಿಶೀಲನೆ ಮಾಡಿ, ಆಗ ನಮ್ಮಲ್ಲಿ ಆಗದಿದ್ದರೆ ನಾವು ಕ್ಲೋಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಹೀಗಾಗಿ ನಾವು ಯಾವುದೇ ಪಾಲಿಟೆಕ್ನಿಕ್ಸ್ ಸರಿಯಾಗಿ ಸೂಕ್ತ ರೀತಿಯಲ್ಲಿ ಅಗತ್ಯ ಸೌಲಭ್ಯ ಸಲಕರಣೆಗಳನ್ನು ಹೊಂದಿರದಿದ್ದಲ್ಲಿ, ಸರಿಯಾಗಿ ಮೈಂಟೇನ್ ಮಾಡಿ ಕೊಂಡಿರದಿದ್ದಲ್ಲಿ, ಅಂತಹವರಿಗೆ ಮುಂದೆ ನಡೆಸಲಿಕ್ಕೆ ಅವಕಾಶವನ್ನು ಕೊಡುವುದಿಲ್ಲ.

My fear if there are again vested interests among this class also. They want the closure of all the 48 institutions, if possible 60 to 70 because the interests of their institutions are best served. There is a campiagn going on. Information centres have been developed all of a sudden. when overjealousness, over-interest is soown to certain class or section of the society. the very bonafides of these organisations are to be doubted. ಆದ್ದರಿಂದ ಸರ್ಕಾರ ಬೆಸ್ಟ್ ಆಫ್ ಇಂಟೆನ್‌ಷನ್‌ನಲ್ಲಿ ಯಾವುದೇ ಮಾಡಿದರೂ ಅದನ್ನು ನೀವು ನೋಡಿ. ನಾನೇನು ಒಳ್ಳೆಯ ಕೆಲಸಗಳನ್ನೆಲ್ಲಾ ಮಾಡಿದ್ದೇನೆಂದು ಹೇಳುತ್ತಿಲ್ಲ. ಹಿಂದೆ ಹೊಸಾ ಹೊಸ ಸ್ಕೀಮ್‌ಗಳನ್ನು ಐತಿಹಾಸಿಕ ತೀರ್ಮಾನಗಳನ್ನು ತಂದಿಲ್ಲ. ಮೊದಲು ರಾಜ್ಯದ ವಿದ್ಯಾ ಮಂತ್ರಿಯಾಗಿ ಒಂದು ಮಾತನ್ನು ಹೇಳಿದೆ. whatever calendar stipulated by these various uuiversities or polytechnics they must stick to that. ಇವತ್ತು ಸಂತೋಷದಿಂದ ಈ ಮಾತನ್ನು ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಎಲ್ಲಾ ವಿದ್ಯಾ ಮಂತ್ರಿಗಳೂ ಕಾಲೇಜುಗಳ ಪಾಲಿಟೆಕ್ನಿಕ್‌ಗಳ ಸಂಖ್ಯೆಯಲ್ಲಿ ಹೆಚ್ಚಿನ ಹಿರಿಮೆಯನ್ನು ಸಾಧಿಸಿದ್ದಾರೆ, ಅದು ಬೆಂಗಳೂರು. ಕರ್ನಾಟಕ, ಮೈಸೂರು ಯಾವುದೇ ವಿಶ್ವವಿದ್ಯಾನಿಲಯ ಇರಬಹುದು. ನಾನು ರಾಜ್ಯದ ವಿದ್ಯಾ ಮಂತ್ರಿಯಾದ ಮೇಲೆ ಅಲಹಾಬಾದಿಗೆ ಹೋದಾಗ ಅಲ್ಲಿನ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು ತಮಾಷೆ ಮಾಡಿ

Karnataka Minister for Education has come ಎಂದರು. I had to bow down my head in shame. ಅಂದರೆ ಅವತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಪದವೀಧರರ ಬಗ್ಗೆ ಪೇಪರ್‌ಗಳಲ್ಲಿ ಒಂದು ತರಹದ ಅಡ್ವರ್ಟೈಸ್‌ಮೆಂಟ್ ಬರುತ್ತಿತ್ತು. "Karnataka degree holders need not apply" ಎಂದು ಇದಕ್ಕೆ ನಾವು ನೀವೂ ಎಲ್ಲರೂ ಪಾಲುಗಾರರೇ. ಇದನ್ನೆಲ್ಲಾ ನೋಡಿ ಪ್ರಾಮಾಣಿಕವಾಗಿ ಅತ್ಯಂತ ಕಟು ನಿರ್ಧಾರ ತೆಗೆದುಕೊಂಡೆ. I had identified myself with all the problems of students like examination postponement, malpractice, etc. ವಿದ್ಯಾರ್ಥಿಗಳ ತೊಂದರೆಗಳ ಬಗ್ಗೆ ಅವರನ್ನು ಕರೆಸಿದೆ. ವಿದ್ಯಾರ್ಥಿಗಳು ಬಂದರು, ಅವರ ತೊಂದರೆಗಳ ಬಗ್ಗೆ ಕೇಳಿ ಒಂದು ಮಾತನ್ನು ಹೇಳಿದೆ. They calendar will have to be maintained at all costs. So admissions were on time, academic year was maintained, examinations were on time and results were on time. In the bargain, from the inception of Bangalore University we had lost 18 academic months. Today, I am happy and proud to inform you that we saved six precious academic months in this one year. ಇದು ನಾನು ಮಾಡಿರುವ ಸಾಧನೆ. ಇದಕ್ಕೆ ತಮ್ಮ ಸಹಕಾರ ಚೆನ್ನಾಗಿತ್ತು. ಅದರಲ್ಲೂ ಅಧ್ಯಾಪಕ ವೃಂದದ್ದು ಪ್ರತಿ ಸಲವೂ ಯಾವುದಾದರೂ ಒಂದು ಸ್ಟ್ರೈಕ್ ಇರುತ್ತಿತ್ತು. I had pleaded for a total moratorium on all strikes by by students and teachers. ಈ ಸಲ ಸ್ಟೂಡೆಂಟ್ಸ್ ಸ್ಟ್ರೈಕ್ ಮಾಡಲಿಲ್ಲ, ಅಧ್ಯಾಪಕರು ಕೇವಲ ಸಿಂಬಾಲಿಕಾಗಿ ಟೋಕನ್ ಸ್ಟ್ರೈಕ್ ಮಾಡಿದರು ಅಷ್ಟೇ. ಯಾರೂ ತೊಂದರೆ ಕೊಡಲಿಲ್ಲ. The atmosphere in the university and education field was much healthier and we were able to save six months. ಇನ್ನೂ ಹಲವಾರು ವಿಷಯಂಗಳನ್ನು ಹೇಳಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಆಕ್ಟ್ ತಿದ್ದುಪಡಿ, ಆಮೇಲೆ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನ್ ಇರಬಾರದೆಂದು ಸದಸ್ಯರು ಹೇಳಿರುವುದನ್ನು ಪೂರ್ಣವಾಗಿ ಒಪ್ಪುತ್ತೇನೆ. ಕೆಲವು ಫ್ಯಾಕಲ್ಟಿಗಳು ಎಲ್ಲಾ ಕಡೆ ಇರುವುದಿಲ್ಲ ಉದಾಹರಣೆಗೆ ಕುವೆಂಪು ವಿಶ್ವವಿದ್ಯಾಲಯ ಹೊಸದಾಗಿ ಶುರುವಾದದ್ದು ತಕ್ಷಣಕ್ಕೆ ಅಲ್ಲಿ ಎಲ್ಲವನ್ನೂ ಓಪನ್ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿಯ ವಿದ್ಯಾರ್ಥಿಗಳು ಮಂಗಳೂರಿಗೆ, ಮೈಸೂರಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಸದರಿ ಸಲಹೆಯನ್ನು ಒಪ್ಪಿಕೊಂಡಿದ್ದೇನೆ.

ಮಾಲ್‌ಪ್ರಾಕ್ಟೀಸಸ್ ಬಗ್ಗೆ ನಾನು ಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ತಕ್ಷಣ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾಲೇಜು ಪರೀಕ್ಷೆ ನಡೆದುವು Most unheard of malcractips were detected. It was not that it was not happening, but because of the initiative taken by our Vice-Chancellor, these large scale malpractices were detected. Our Vice-Chancellor was so disheartened he did not want to be Vice Chancellor to sec the decay of the entire system we have developed. He took a very strong stand. ನಾನು ರಾಜೀನಾಮೆ ಕೊಡುತ್ತೇನೆಂದರು. ವಿದ್ಯಾರ್ಥಿಗಳು ಇನ್‌ವಿಜಿಲೇಟರ್ಸ್‌ಗೆ ಹೊಡೆಯುವ ಪ್ರಸಂಗ ಬಂತು. ಪೋಲೀಸ್ ಪ್ರೊಟೆಕ್ಷನ್ ಕೊಟ್ಟೆವು. ಹಿಂದೆ ಒಂದು ಆರ್ಡಿನೆನ್ಸ್ ತಂದೆವು. In the name of over-democratic if it is made cognisable offence to ban malpractice in the college campus there will be healthy trend towards better education because, we have to maintain the dignity and decorum of the system that we have developed. If we are to be silent spectators allowing decaying of the system, I am sorry I have nothing to add. ನಾನು ನಮ್ಮ ವಿರೋಧ ಪಕ್ಷದ ಸದಸ್ಯರ ಸಹಕಾರವನ್ನು ಕೇಳುತ್ತಿದ್ದೇನೆ. ಮುಂದಿನ ಅಧಿವೇಶನದಲ್ಲಿ ಇದನ್ನು ಒಂದು ಮಸೂದೆಯಾಗಿ ಪರಿವರ್ತನೆ ಮಾಡಿ ತಂದಾಗ ಇದಕ್ಕೆ ತಮ್ಮ ಸಹಕಾರವನ್ನು ಕೊಡಬೇಕು.

ಇನ್ನು ಕರೆಸ್ಪಾಂಡೆನ್ಸ್ ಕೋರ್ಸ್ ಬಗ್ಗೆ ಒಂದು ಓಪನ್ ಯೂನಿವರ್ಸಿಟಿಯನ್ನು ಮಾಡಬೇಕು ಎಂದು ಕೇಳಿದ್ದಾರೆ. ಈಗಾಗಲೇ ಮೈಸೂರು ಯೂನಿವರ್ಸಿಟಿಯಲ್ಲಿ ಕರೆಸ್ಪಾಂಡೆನ್ಸ್ ಕೋರ್ಸ್ ಇದೆ. Correspondence Course at Mysore University is self sustaining one. ಇಂದಿರಾಗಾಂಧಿ ಓಪನ್ ಯೂನಿವರ್ಸಿಟಿಗೆ ಜಾಗವನ್ನು ಕೊಡಬೇಕೆಂದು ಅವರು ಕೇಳಿದ ತಕ್ಷಣ ನಾವು ಜಾಗವನ್ನು ಕೊಟ್ಟಿದ್ದೇವೆ ಈಗ ಅವರು ರೀಜನಲ್ ಆಫೀಸನ್ನು ಓಪನ್ ಮಾಡಿದ್ದಾರೆ.

ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಕ್ಯಾಪಿಟೇಷನ್ ಫೀಸ್ ಬಗ್ಗೆ ಸರ್ಕಾರದ ನಿಲುವು ಏನು ಎಂದು ಕೇಳಿದ್ದಾರೆ. ಏಕೆಂದರೆ ಪರದೆಯ ಹಿಂದೆ ಏನೇನೋ ಆಗುತ್ತಿದೆಯೆಂದು ಮಾನ್ಯ ರಾಣೆಯವರು ಹೇಳಿದ್ದಾರೆ. ಆದ್ದರಿಂದ ನಾನು ಅವರಿಗೆ ಇಷ್ಟು ಮಾತ್ರ ಹೇಳಬೇಕಾಗಿದೆ. Capitation Bill when it comes in to eff ct, the private institutions will have to give seats to the government quota by gratis, not by force, not by compulsion of the Act. ಇವತ್ತು ಸುಮಾರು ೪೦ ಪರ್ಸೆಂಟ್‌ನ್ನು as a good gesture they were giving to the Government of Karnataka.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ — ೫೦–೫೧ ಇರಬೇಕಲ್ಲಾ... ಹಾಗಾದರೆ ಮುಖ್ಯಮಂತ್ರಿಗಳ ಬುಕ್‌ಲೆಟ್‌ನ್ನೂ ಅಲ್ಲೇ ಮಾಡಿಸಿದಿರಾ ?

ಶ್ರೀ. ಜೀವರಾಜಆಳ್ವ.— ಹೌದು, ಮುಖ್ಯಮಂತ್ರಿಗಳ ಬುಕ್‌ಲೆಟ್‌ನ್ನೂ ಇಲ್ಲಿಯೇ ಮಾಡಿಸಿದ್ದೇವೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಬೇಸಿಕ್ ಎಕ್ಸಾಮಿನೇಷನ್ ಸಿಸ್ಟಂ ಬಗ್ಗೆ ಹೇಳಿದ್ದಾರೆ. ಅದೇ ರೀತಿ ಡಿ.ಟಿ.ಇ.ನಲ್ಲಿ ಮಲ್ಟಿ ಮೆಟಲ್ ಸಂಬಂಧಪಟ್ಟಂತೆ ಅವ್ಯವಹಾರ ನಡೆದಿದೆಯೆಂದು ಹೇಳಿದ್ದಾರೆ. ಇದನ್ನು ಸೂಕ್ತ ರೀತಿಯಲ್ಲಿ ತನಿಖೆ ಮಾಡಿಸುತ್ತೇನೆಂದು ಹೇಳಿ ಮತ್ತೊಮ್ಮೆ ಎಲ್ಲ ಮಾನ್ಯ ಸದಸ್ಯರಿಗೂ ವಂದಿಸಿ ನನ್ನ ಇಲಾಖೆಯ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.— ಮೆಡಿಕಲ್ ಕಾಲೇಜು ಅಡ್ಮಿಷನ್ ಪಾಲಿಸಿಯ ವಿಚಾರದಲ್ಲಿ ತಾವು ಹೇಳಿದ್ದೀರಿ. ೧೯೮೭–೮೮, ಮತ್ತು ೮೮–೮೯ರಲ್ಲಿ ಅವರ ಲಿಮಿಟ್‌ಗಿಂತ ಜಾಸ್ತಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಮಾನ್ಯತೆ ಇಲ್ಲದ ಇನ್‌ಸ್ಟಿಟ್ಯೂಷನ್‌ನಲ್ಲಿ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ.

ಶ್ರೀ ಜೀವರಾಜ ಆಳ್ವ —೪೦-೬೦ ಇದೆ. ಮ್ಯಾನೇಜ್‌ಮೆಂಟ್‌ನವರ ಸಭೆಯನ್ನು ಈ ಬಗ್ಗೆ ಕರೆದು ಪ್ರಯತ್ನ ಮಾಡುತ್ತಿದ್ದೇವೆ. After lot of persuation, we were in a position to make them agree because they are not entitled even to give a single seat to the Government. ಇವತ್ತು ಶೇಕಡ ೩೦ರಷ್ಟು ಸರ್ಕಾರದ ಮೆರಿಟ್ ಇರತಕ್ಕಂಥ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವುದಕ್ಕೆ ಅವರು ಒಪ್ಪಿದ್ದಾರೆ. ಇದರಿಂದ ಸುಮಾರು ೪೦೦೦ ವಿದ್ಯಾರ್ಥಿಗಳಿಗೆ ಸೀಟು ದೊರಕಿದಂತಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಬರತಕ್ಕ ಸೀಟುಗಳು ಬರುವುದಕ್ಕೆ ಫಲದಾಯಕವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೪೦ ಪರ್ಸೆಂಟ್, ೬೦ ಪರ್ಸೆಂಟ್ ಎಂದು ಹೇಳುತ್ತಿದ್ದೀರಿ. ಈಗ ತಮಗೂ ಗೊತ್ತಿದೆ. ಈಗಾಗಲೇ ಅವರು ಕಲೆಕ್ಟ್ ಮಾಡಿಕೊಂಡು ಕೂತಿದ್ದಾರೆ. ೪೦ ಪರ್ಸೆಂಟ್ ಇದ್ದುದನ್ನು ಅವರು ೩೦ ಪರ್ಸೆಂಟ್‌ಗೆ ಒಪ್ಪಿಕೊಂಡಿದ್ದಾರೆ. ಅಂದರೆ ೧೦ ಪರ್ಸೆಂಟ್‌ನ್ನು ನೀವು ಕಳೆದುಕೊಂಡಂತಾಯಿತು. ನೀವು ಏತಕ್ಕೆ ೧೦ ಪರ್ಸೆಂಟ್‌ನ್ನು ಕಳೆದುಕೊಳ್ಳಬೇಕು?

SRI JEEVARAJ ALVA.—I go by the rules. It will be a hypothetical question. But most of the external candidates who come from other states will come after july/August. Our Bill comes into effect after july 9th. Generally they are not the losers. It is kept straight away before the House.

ಇನ್ನು ನಗರ್ತಪೇಟೆಯ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ. ಪ್ರಿಂಟಿಂಗ್ ಪ್ರೆಸ್ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿತ್ತು. ಸರ್ಕಾರೀ ರೆಕಾರ್ಡ್‌ಗಳನ್ನು ಪ್ರಿಂಟ್ ಮಾಡುವುದಕ್ಕೆ ತೆಗೆದುಕೊಳ್ಳದ ರೀತಿಯಲ್ಲಿ ಇದು ಇತ್ತು. ಇದನ್ನು ನೋಡಿ ನಮ್ಮ ಪ್ರಿಂಟಿಂಗ್ ಕೆಲಸಗಳನ್ನೆಲ್ಲಾ ಹೊರಗಡೆಯೇ ಕೊಟ್ಟು ಮಾಡಿಸುತ್ತಿದ್ದೆವು, ಕಳೆದ ಒಂದು ವರ್ಷದಿಂದ ನಮ್ಮ ಯಾವುದೇ ಜಾಬ್ ವರ್ಕ್‌ನ್ನೂ ನಮ್ಮ ಸರ್ಕಾರೀ ಪ್ರಿಂಟಿಂಗ್ ಪ್ರೆಸ್‌ನ್ನು ಬಿಟ್ಟು ಬೇರೆ ಕಡೆ ಮಾಡಿಸುತ್ತಿಲ್ಲ. ಗ್ಲಾಸಿ, ಮಲ್ಟಿ ಕಲರ್ ಪ್ರಿಂಟಿಂಗ್‌ನ್ನೂ ಕೂಡ ನಾವು ಈ ಪ್ರೆಸ್‌ನಲ್ಲೇ ಮಾಡಿಸುತ್ತಿದ್ದೇವೆ.

ಶ್ರೀ ಜಿ. ಎಸ್. ಆಚಾರ್,—ಉಳಿದ ೨೦ ಪರ್ಸೆಂಟ್‌ನಲ್ಲಿ ಈ ರೀತಿ ಅವರಿಗೆ ಖುಷಿ ಬಂದ ಹಾಗೆ ಅಡ್ಮಿಷನ್ ಆಗುವ ಪರಿಸ್ಥಿತಿ ನಡೆಯುತ್ತದೆಯೇ? ಇನ್ನು ಮುಂದೆಯೂ ಸಹಾ ಆ ರೀತಿ ನಡೆಯುತ್ತದೆಯೇ?

ಶ್ರೀ ಜೀವರಾಜ ಆಳ್ವ.—ಇದು ಆರೋಗ್ಯ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ. ನಾಳೆ ಅವರಿಗೆ ಉತ್ತರ ಹೇಳುವುದಕ್ಕೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಅವರು ಮಾತನಾಡುವಾಗ ಸ್ವಲ್ಪ ಎಮೋಷನ್‌ನಲ್ಲಿ ಹೇಳಿಬಿಟ್ಟರು. ನಿಮ್ಮ ಸರ್ಕಾರ ಮಾಡಿದ್ದು, ನಾವು ಹೊತ್ತುಕೊಂಡು ಹೊರಟಿದ್ದೇವೆ ಎಂದು ಹೇಳಿದರು. ಬಹುಶಃ ನನಗನ್ನಿಸುತ್ತದೆ, ಹಿರಿಯರಾದ ಶ್ರೀಮಾನ್ ಆಳ್ವ ಆಗ ಹೆಲ್ತ್ ಮಿನಿಸ್ಟರ್ ಇದ್ದಾಗಲೂ ಕ್ಯಾಪಿಟೇಷನ್ ಫೀಸ್ ಬೇಸ್‌ಡ್ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳೂ ಇದ್ದವು ಎಂದು ಅವರಿಗೆ ಗೊತ್ತಿರಬಹುದು. ನಮ್ಮ ಸರ್ಕಾರದಲ್ಲಿ ಗುಂಡೂರಾವ್ ಕೊಟ್ಟಿದ್ದು ಎರಡೇ ಎರಡು ಕಾಲೇಜು, ಒಂದು ಕೆಂಪೇಗೌಡ ಕಾಲೇಜು, ಇನ್ನೊಂದು ಅಂಬೇಡ್ಕರ್ ಕಾಲೇಜು, ಇವರು ಹತ್ತಾರು ಕೊಟ್ಟರು, ಅದಕ್ಕೆ ಏನೇನು ಕಾರಣಗಳು ಇದ್ದವೋ ಅದು ತಮಗೆ ಗೊತ್ತಿದೆ ಅದನ್ನು ಹೇಳುವುದು ಬೇಡ. ಹೇಳುವುದು ಸುಲಭ ಆದರೆ ಆ್ಯಕ್ಟ್ ಮಾಡುವಾಗ ಇದಕ್ಕಿಂತಲೂ ವರ್ಸ್ಟ್ ಆಗಿ ನೀವು ಆ್ಯಕ್ಟ್ ಮಾಡಿದಿರಿ, ಇವತ್ತು ನಾನು ಏನು ಹೇಳುತ್ತೇನೆ ಎಂದರೆ ಹೋದ ಸಲ ಈ ಮೆರಿಟ್ ವಿದ್ಯಾರ್ಥಿಗಳಿಗೆ ಅನುಕೂಲ ಆಗಬೇಕು ಎಂದು ಹೇಳಿ ಒಂದು ಅಗ್ರಿಮೆಂಟ್‌ಗೆ ಬಂದು ಕೊನೆಗೆ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ೪೦ ಪರ್ಸೆಂಟ್ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಕೂಡಾ ಅದೇ ರೀತಿಯಾಗಿ ಪ್ರೊಪೊರ್ಷನೇಟನ್ನು ಇಟ್ಟುಕೊಂಡು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಇತ್ತು. ಇದನ್ನು ನೀವು ೩೦ ಪರ್ಸೆಂಟ್‌ಗೆ ಇಳಿಸಿದಿರಿ. ಹತ್ತು ಪರ್ಸೆಂಟ್ ಆಟೋಮ್ಯಾಟಿಕ್ ಆಗಿ ಪ್ರತಿಯೊಂದು ಕಾಲೇಜಿನಲ್ಲಿಯೂ ಕಡಿಮೆಯಾಗುವುದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುತ್ತದೆ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ತಮಗೂ ಗೊತ್ತಿದೆ, ಇಂಜಿನಿಯರಿಂಗ್ ಕಾಲೇಜು ಮೆಡಿಕಲ್ ಕಾಲೇಜುಗಳಿಗೆ ಪ್ರೋತ್ಸಾಹ ಕೊಟ್ಟು ಸ್ವತಃ ಎಸ್ಟಾಬ್ಲಿಸ್‌ಮೆಂಟ್ ಮಾಡಿಸಿದ್ದೇನೆ. ನಿಮ್ಮ ಸರ್ಕಾರದವರು ನಿಯಮದ ವಿರುದ್ಧವಾಗಿ ಬೇರೆಯವರಿಗೆ ಕೊಟ್ಟರು. ಎಸ್.ಸಿ. ಎಸ್.ಟಿಯವರಿಗೆ ಕೊಡಲಿಲ್ಲ ಎಂದು ಹೇಳಿ ಸುಪ್ರೀಂ ಕೋರ್ಟ್‌ನಿಂದ ತೆರತಕ್ಕಂಥ ವ್ಯವಸ್ಥೆ ಕೂಡಾ ಆಯಿತು, ನಾನು ಆ ಮಾತನ್ನು ಹೇಳುವುದಿಲ್ಲ. ಯಾರಿಗೆ ಅನುಕೂಲವಾಗುತ್ತದೋ, ಇನ್ಯಾರಿಗೆ ಅನಾನುಕೂಲವಾಗುತ್ತದೋ ಆ ಮಾತು ಬೇರೆ. ಆದರೆ ಇವತ್ತು ಯಾರಿಗೆ ಅನಾನುಕೂಲವಾಗುತ್ತದೆ ಎಂದರೆ merit students will be losing that 10%. Scheduled Caste, Backward Classes and ರೋಸ್ಟರ್ ಪ್ರಕಾರ ಬರತಕ್ಕಂಥ ವಿದ್ಯಾರ್ಥಿಗಳಿಗೆ ಮತ್ತು ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ದಯಮಾಡಿ ಅವರಿಗೆ ಕನ್‌ವಿನ್ಸ್ ಮಾಡಿ. ಯೂನಿವರ್ಸಿಟಿ ನಿಮ್ಮ ಕೈಯಲ್ಲಿದೆ. ನಿಮ್ಮ ಹತೋಟಿಯಲ್ಲಿದೆ. ಅವರಿಗೆ ನಾಳೆ ಕೊಡತಕ್ಕಂಥ ರೆಕಗ್ನೈಸ್ ಆಗಲೀ, ಅಫಿಲಿಯೇಷನ್ ಆಗಲೀ ಪ್ರತಿಯೊಂದು ರೀತಿಯಲ್ಲಿಯೂ ಹಿಡಿತದಲ್ಲಿ ಇಡತಕ್ಕಂಥದ್ದು, ಸರ್ಕಾರಕ್ಕಿಂತಲೂ ಸುಪ್ರೀಂ ಏನೂ ಅಲ್ಲ. ಆದ್ದರಿಂದ ದಯವಿಟ್ಟು ಕೊನೆಯ ಪಕ್ಷ ೫೦ ಪರ್ಸೆಂಟ್, ೫೦ ಪರಸೆಂಟ್ ತೆಗೆದುಕೊಳ್ಳುವುದಕ್ಕೆ ಆಗದಿದ್ದರೂ ಕೂಡ ಹೋದ ವರ್ಷದ್ದು ಆದರೂ ಏನು ಇದೆ, ೬೦-೪೦ ಅದನ್ನು ಆದರೂ ಕಂಟಿನ್ಯೂ ಮಾಡಬೇಕು. ಇಲ್ಲದ್ದಿದ್ದರೆ ಇದರಿಂದ ಹೊಡೆತ ಬೀಳುತ್ತದೆ. ಇದು ಏನೂ ಚಾರಿಟಿ ಅಲ್ಲ. ಕಾನೂನು ಪ್ರಕಾರವಾಗಿ ಮಾಡಲೇಬೇಕು. ಇಲ್ಲ ಎಂದು, ಒಂದು ಹೇಳಿ ಕಾನೂನನ್ನು ತಂದು, ೬೦-೪೦, ೫೦-೫೦ ಆದರೂ ಕೊಡುವುದಕ್ಕೆ ದಯವಿಟ್ಟು ಪ್ರಯತ್ನ ಮಾಡಬೇಕು. ಅವರನ್ನು ಕೈಬಿಡಬೇಡಿ,

ಬಡಮಕ್ಕಳಿಗೆ ಇದರಿಂದ ತೊಂದರೆಯಾಗುತ್ತದೆ. ಸಾವಿರಾರು ಸೀಟ್‌ಗಳು ಹೋಗುತ್ತಿವೆ. ಅದಕ್ಕೆ ತಾವು ಈ ಹೋದ ವರ್ಷದ್ದು ಏನು ಇದೆ, ಅಟ್‌ಲೀಸ್ಟ್ ಅದಕ್ಕಾದರೂ ಯೂನಿಫಾರಂ ಆಗಿ ಇರಬೇಕು ಎಂದು ಹೇಳಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಮೊನ್ನೆ ಈ ಬಗ್ಗೆ ಮ್ಯಾನೇಜ್‌ಮೆಂಟ್ ಸಭೆಯನ್ನು ಕರೆದಿದ್ದೆವು. ಸುಮಾರು ೩– ೩ ೧/೨ ಗಂಟೆಗಳ ಕಾಲ ಚರ್ಚೆ ಆಯಿತು. ಅವರು ಏನೂ ಕೊಡುವುದಿಲ್ಲ ಎಂದು ಹೇಳಿದರು, ಕೊನೆಗೆ ೨೦ ಪರ್‌ಸೆಂಟ್‌ಗೆ ಒಪ್ಪಿದ್ದೆವು. A settled threat was conveyed to them. ಇವತ್ತು ಆ್ಯಕ್ಟ್ ಪ್ರಕಾರ ನಮ್ಮ ಮೇಲೆ ಹತೋಟಿ ಇಲ್ಲದೇ ಇದ್ದರೂ ಕೂಡಾ ಸರ್ಕಾರ ಅಫಿಲಿಯೇಷನ್ ನಮಗೆ ಬರುವುದಿಲ್ಲ, ಈಗಾಗಲೇ ಕೊಟ್ಟು ಆಗಿದೆ, ಅದನ್ನು ಮತ್ತೆ ತೆಗೆಯುವುದು ಮತ್ತೊಂದು ಇಲ್ಲ. Otherwise as a gesture ನಾವು ಮಾಡಲೇಬೇಕು. ಎಂದು ಹೇಳಿ ಒತ್ತಾಯ ಪೂರ್ವಕವಾಗಿ ೩೦ ಪರ್‌ಸೆಂಟ್ ಒಪ್ಪಿಸಿದ್ದೇವೆ ಆದರೆ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪುನಃ ಮ್ಯಾನೇಜ್‌ಮೆಂಟ್‌ನವರನ್ನೂ ಕರೆಸಿ ಚರ್ಚೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಾವಿರಾರು ಈ ರೀತಿ ಹೋಗುತ್ತಿದೆ.

ಶ್ರೀ ಜೀವರಾಜ ಆಳ್ವ.—We will be short by 10% i.e., about 300.

ಶ್ರೀ ಕೆ. ಹೆಚ್. ಪಾಟೀಲ್. — ಪಿ. ಯು. ಸಿ. ಎಕ್ಸಾಮಿನೇಷನ್‌ನಲ್ಲಿ ಸಿಲಬಸ್‌ಗೆ ವಿರುದ್ಧವಾಗಿ ಅನೇಕ ಪ್ರಶ್ನೆಗಳು ಬಂದುದರಿಂದಾಗಿ ರಿಸಲ್ಟ್ ಕೇವಲ ೨೩ ಪರ್‌ಸೆಂಟ್ ಆಗಿದೆ. ೭೭ ಪರ್‌ಸೆಂಟ್ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಇದು ದೇಶಕ್ಕೆ ಬಹಳ ಆಘಾತ ಆದ ಹಾಗೆ ಆಗುತ್ತದೆ. ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಿ ಹೆಚ್ಚು ಗ್ರೇಸ್ ಮಾರ್ಕ್ಸ್‌ನ್ನು ಹಾಕುವುದಾಗಲೀ ಅಥವಾ ಪುನಹ ಎಕ್ಸಾಮಿನೇಷನನ್ನು ಇಟ್ಟು ಎಕ್ಸಾಮಿನೇಷನ್ ಆಗುವತನಕ ನಿಮ್ಮ ಅಡ್ಮಿಷನನ್ನು ಬಂದ್ ಮಾಡುವುದಾಗಲೀ ಮಾಡಿದರೆ ಹೆಚ್ಚು ವಿಹಿತ ಎಂದು ಹೇಳುತ್ತೇನೆ.

ಶ್ರೀ ಜೀವರಾಜ ಆಳ್ವ — ಪಿ. ಯು. ಸಿ. ಸ್ಟ್ಯಾಚ್ಯೂಟ್ಸ್‌ನಲ್ಲಿ ಅದಕ್ಕೆ ಅವಕಾಶ ಇಲ್ಲ. ಯಾವುದೇ ಪರೀಕ್ಷೆಗಳಲ್ಲಿ ಕೆಲವು ಸಾರಿ ಮೌಲ್ಯ ಮಾಪನ ವಿಧ ವಿಧವಾಗಿ ಸ್ವಲ್ಪ ಕರೆಕ್ಟ್ ಆಗಿ ರಿಜಿಡ್ ಆಗುತ್ತದೆ. ಕೆಲವು ಸಾರಿ ಈ ರೀತಿ ಆಗುತ್ತದೆ. ಬರುವ ವರ್ಷ ಇಂಥ ತಪ್ಪುಗಳು ಇದ್ದರೆ ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನವನ್ನು ಮಾಡೋಣ.

† ಶ್ರೀ ಚಂದ್ರಕಾಂತ ಜಿ. ಬೆಲ್ಲದ್.— ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಸರ್ಕಾರಿ ಒಂದು ಮುದ್ರಣಾಲಯ ಇದೆ. ಅದು ಬಹು ಹಳೆಯ ಮೆಷಿನರಿಗಳನ್ನು ಹೊಂದಿದ್ದು, ಅಲ್ಲಿ ಸಾಕಷ್ಟು ಪ್ರಿಂಟಿಂಗ್ ಪ್ರೆಸ್ ಕೆಲಸವನ್ನು ತೆಗೆದುಕೊಳ್ಳುತ್ತಾ ಇಲ್ಲ. ಅಲ್ಲಿ ಹಿಂದೆ ಒಂದು ಕಮಿಟಿ ಕಳಿಸಿ ಅದರ ರಿಪೋರ್ಟ್ ಬಂದ ಮೇಲೆ ಹೊಸ ಮೆಷಿನರಿಗಳನ್ನು ಅಳವಡಿಸಿಕೊಳ್ಳುತ್ತೇವೆಂದು ನನಗೆ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಮಾನ್ಯ ಅಧ್ಯಕ್ಷರೇ. ಕರ್ನಾಟಕದಾದ್ಯಂತ ಇರುವ ಎಲ್ಲಾ ಪ್ರೆಸ್‌ಗಳು ಹಿಂದಿನಿಂದ ಜಾಸ್ತಿ ಕೆಲಸ ಮಾಡುತ್ತಿವೆ. ಬೆಂಗಳೂರಿನ ಪ್ರೆಸ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಧಾರವಾಡದ ಪ್ರೆಸ್ ಪೂರ್ಣವಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಪೂರ್ಣ ಕೆಲಸ ತೆಗೆದುಕೊಳ್ಳುವಂತಹ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕ್ಯಾಪಿಟೇಷನ್ ಫೀ ಬಗ್ಗೆ ಸ್ಪಷ್ಟೀಕರಣ ಕೊಡುತ್ತಾ ತಮ್ಮ ಒಂದು ಕ್ರಮವನ್ನು ಸಮರ್ಥನೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಾನು ಒಂದು ಮಾತನ್ನು ಕೇಳುತ್ತೇನೆ. ಕಳೆದ ವರ್ಷ ೫೦/೬೦ ಇದ್ದದ್ದು, ಸರ್ಕಾರಕ್ಕೆ ಸೀಟುಗಳನ್ನು ಕೊಡತಕ್ಕಂಥದ್ದು ಇವೊತ್ತು ಕ್ಯಾಪಿಟೇಷನ್ ಫೀ ರದ್ದು ಮಾಡುತ್ತೇವೆಂದು ಹೇಳಿ ಅದನ್ನು ೩೦ಕ್ಕೆ ಇಳಿಸಿದ್ದೇವೆ ಎಂದು ಹೇಳುತ್ತಾರೆ. ನಾನು ಕೇಳುವುದು ನೀವು ಕ್ಯಾಪಿಟೇಷನ್ ಫೀ ರದ್ದು ಮಾಡುವುದಾದರೆ ೩೦ ಅನ್ನು ಇಳಿಸಿ ೧೦ ರಿಂದ ಅವರಿಗೆ ಏನು ಪ್ರಯೋಜನವಾಗುತ್ತದೆ. ಈಗ ಕಾರವಾರ ಮತ್ತು ಬಿಜಾಪುರದಲ್ಲಿ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಹಣಕಾಸಿನ ಅಸಹಾಯ

ಕತೆಯನ್ನು ಹೇಳಿದರು ದುಡ್ಡು ಇಲ್ಲ ಎಂದು ಹೇಳಿದ್ದಾರೆ. ಅಮೇರಿಕಾದಲ್ಲಿ ಕನ್ನಡ ಸಂಘಗಳಿಗೆ ಕೋಟಿಗಟ್ಟಲೆ ಕೊಡುವುದಕ್ಕೆ ಹಣ ಇದೆ. ಸರ್ಕಾರಕ್ಕೆ ದೆಹಲಿಯಲ್ಲಿ ದಸರಾ ಉತ್ಸವ ಆಚರಿಸುವುದಕ್ಕೆ ಕೋಟಿಗಟ್ಟಲೆ ಖರ್ಚು ಮಾಡುವುದಕ್ಕೆ ಆಗುತ್ತದೆ. ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಅವರ ಪಕ್ಷದ ಬಗ್ಗೆ ಪ್ರಚಾರ ಮಾಡುವುದಕ್ಕೆ ಲಕ್ಷಗಟ್ಟಲೆ ಖರ್ಚು ಮಾಡುವುದಕ್ಕೆ ಆಗುತ್ತದೆ. ಆದರೆ ಅತಿ ಅವಶ್ಯವಿರುವ ಪೋಸ್ಟ್ ಗ್ರಾಜುಯೇಟ್ ಸೆಂಟರ್‌ಗಳನ್ನು ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಆಶ್ಚರ್ಯವಾಗುತ್ತದೆ. ಇನ್ನು ಸದಾಶಿವಗೌಡ ಕಾಲೇಜಿನ ಬಗ್ಗೆ ಹೇಳಿದರು. ನಮ್ಮ ಇಲಾಖೆಯ ಅಧಿಕಾರಿಗಳ ಮೂಲಕ ಹೋದಾಗ ಕಾಲೇಜು ನಡೆಯಿರಲಿಲ್ಲ ಎಂದು ಹೇಳಿದ್ದಾರೆ. ಕಾಲೇಜು ನಡೆದೇ ಇರಲಿಲ್ಲ. ಮುಂದಿನ ವರ್ಷ ಪ್ರಾರಂಭ ಆಗಬೇಕಾಗಿತ್ತು. ಆಮೇಲೆ ಇನ್ನೂ ಒಂದು ವಿಷಯವನ್ನು ಹೇಳಿದರು. ಒಬ ಶ್ರೇಷ್ಠ ವ್ಯಕ್ತಿಯು ಹೇಳಿದ್ದಕ್ಕಾಗಿ ರದ್ದು ಮಾಡಿದ್ದೇವೆ ಎಂದು. ಒಬ್ಬ ವ್ಯಕ್ತಿ ಒಂದು ಸಂಸ್ಥೆಯು ಆಗಬಾರದು ಎಂದು ಹೇಳುವುದಾದರೆ ಇವರು ಅವರನ್ನು ಶ್ರೇಷ್ಠ ಎಂದು ಕರೆಯುವುದಾದರೆ I really pity for that. ನಿಜವಾಗಿ ಇವರು ಶ್ರೇಷ್ಠನೆ ಎನ್ನುವ ಬಗ್ಗೆ ಯಾವ ಒಂದು ಅಳತೆ ಗೋಲು ಇಟ್ಟುಕೊಂಡಿದ್ದಾರೆ ನನಗೆ ಅದು ಅರ್ಥವಾಗುವುದಿಲ್ಲ. ಮತ್ತು ಮಾನ್ಯ ರಾಚಯ್ಯನವರು ಶಿಕ್ಷಣ ಸಚಿವರಾಗಿದ್ದಾಗ ಬೆಳಗಾಂನಲ್ಲಿ ರಾಣಿ ಕಿತ್ತೂರು ಚೆನ್ನಮ್ಮ ಮಹಿಳಾ ವಿಶ್ವವಿದ್ಯಾ ನಿಲಯವನ್ನು ಸ್ಥಾಪಿಸುವುದರ ಬಗ್ಗೆ ಒಂದು ಮಾತು ಹೇಳಿದ್ದರು. ಇದರ ಬಗ್ಗೆ ಏನು ಆಯಿತು ಎಂದು ಮಾನ್ಯ ಸಚಿವರು ಹೇಳಬೇಕು,

ಶ್ರೀ ಜೀವರಾಜ್ ಆಳ್ವ.— ಮಾನ್ಯ ಅಧ್ಯಕ್ಷರೇ, ಜಾಂಡೀಸ್ ಖಾಯಿಲೆ ಆದವರಿಗೆ ಎಲ್ಲಾ ಹಳದಿ ಕಾಣುತ್ತವೆ. ಹಾಗೆ ನಮ್ಮ ಮಾನ್ಯ ರಾಣಿಯವರಿಗೂ ಎಲ್ಲಾ ಹಳದಿಯಾಗಿ ಕಾಣುತ್ತವೆ. ಈಗ ಎಷ್ಟು ವಿವರವಾಗಿ ಬಿಡಿಸಿ ಹೇಳಿದ್ದೇನೆ, ಕ್ಯಾಪಿಟೇಷನ್ ಸಿಸ್ಟಂನಲ್ಲಿ ಅಬಾಲಿಷನ್ ಆಫ್ ಆಕ್ಟ್ ಆದ ಮೇಲೆ in principle, by the spirit of the Act, we are not eligible for any seats in private colleges. ಆದರೆ ನಮ್ಮ ಸರ್ಕಾರದ ಹಿತ, ಈ ವಿಷಯದಲ್ಲಿ ಇರುವುದರಿಂದ ಅವರ ಹತ್ತಿರ ಚರ್ಚೆ ಮಾಡಿ ಶೇಕಡಾ ೩೦ನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಉಪ ನಾಯಕರು ಹೇಳಿದ ಹಾಗೆ ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. The Government has indirect control over these institutions. ಇವೊತ್ತು ನಿಮ್ಮ ಸರ್ಕಾರ, ಮಹಾರಾಷ್ಟ್ರ ಸರ್ಕಾರದಲ್ಲೂ ಕಡೆಯುತ್ತಾ ಇದೆ. ಆಂಧ್ರದಲ್ಲಿಯೂ ನಡೆಯುತ್ತಾ ಇದೆ. ಇತರ ರಾಜ್ಯಗಳಲ್ಲಿಯೂ ನಡೆಯುತ್ತಿದೆ. ಈ ಬಗ್ಗೆ ವಿಚಾರವನ್ನು ತಿಳಿದು ಮಾತನಾಡಬೇಕು. ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆ ಬಗ್ಗೆ ಹೇಳಿದ್ದಾರೆ, ಈ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎಸ್. ಎಸ್. ಕೌಜಲಗಿ.— ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆ ಹಾಗೂ ವಿಜಾಪುರ ಜಿಲ್ಲೆಯಲ್ಲಿ ಒಂದೂ ಸರ್ಕಾರಿ ಡಿಗ್ರಿ ಕಾಲೇಜು ಇರುವುದಿಲ್ಲ. ಆದಕಾರಣ ಕರ್ನಾಟಕ ಯೂನಿವರ್ಸಿಟಿಯವರು ಡಿಗ್ರಿ ಕಾಲೇಜನ್ನು ಕೊಡಬೇಕೆಂಬ ಉದ್ದೇಶದಿಂದ ಬೆಳಗಾಂ ಜಿಲ್ಲೆಯ ನೇಸರಗಿಯಲ್ಲಿ ಕಾಲೇಜು ಕೊಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ ಆದಕಾರಣ ಅದನ್ನು ಈ ವರ್ಷ ಕೊಡುತ್ತಾರೆಯೋ ಎಂದು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಕ್ಯಾಪಿಟೇಷನ್ ಫೀ ಅಬಾಲಿಷನ್ ಆಕ್ಟ್‌ನ ಇಂಪ್ಲಿಕೇಷನ್ ಏನು ಮಾನ್ಯ ಮಂತ್ರಿಗಳು ಹೇಳಿದರು ಅದು ಸರಿಯಾದಂತಹ ವಿವರಣೆ ಅಲ್ಲ. ದಯವಿಟ್ಟು ಈ ರೀತಿ ತಾವೇ ಒಪ್ಪಿಕೊಳ್ಳುವುದಕ್ಕೆ ಹೋಗಬೇಡಿ. ತಮಗೆ ಈಗ ಗೊತ್ತಾಗದೇ ಹೋದರೆ ನಮ್ಮನ್ನು ಕೇಳಿ ನಾವು ಸ್ವಲ್ಪ ಹೇಳಿಕೊಡುತ್ತೇವೆ. ಏನು ಮಾಡಬೇಕು ಎಂದು ಕ್ಯಾಪಿಟೇಷನ್ ಫೀಸ್ ಆಕ್ಟ್ ಮಾಡದೇ ಎಲ್ಲಾ ವಿದ್ಯಾ ಸಂಸ್ಥೆಯನ್ನು ಗವರ್ನ್ ಮಾಡತಕ್ಕದ್ದು ಸಾಧ್ಯವಿಲ್ಲ. There are other rules and regulations and Government orders which control the educational institutions and their behaviour. ಆರ್ಟ್ಸ್ ಅಂಡ್ ಸೈನ್ಸ್ ಅಥವಾ ಕಾಮರ್ಸ್ ಕಾಲೇಜು ನಡೆಸುತ್ತಾ ಇದ್ದನೆಂದು ಇಟ್ಟುಕೊಂಡರೆ, ೧೦೦ ಪರ್ಸೆಂಟ್ ಸೀಟ್‌ಅನ್ನು ನಾನು ನನಗೆ ಖುಷಿ ಕಂಡವರಿಗೆ ಕೊಡಲಿಕ್ಕಾಗುತ್ತದೆಯೆ ?

ಆದೇ ರೀತಿ the question is only the management is allowe with 10% seats according to their choice and the rest of the seats will have to be distributed according to the reservation and general list. Under the contorl of the Government you can exercise and ask them to distribute these seats. You need not beg them. ಮೇನೇಜ್‌ಮೆಂಟ್ ಬೇಕಾದರೆ ತಮಗೆ ಬೇಕಾದವರಿಗೆ ಕೊಡಲು ಹತ್ತು ಪರ್ಸೆಂಟ್ ಸೀಟ್‌ಗಳನ್ನು ಇಟ್ಟುಕೊಳ್ಳಬಹುದು, ಅಷ್ಟನ್ನು ಬಿಟ್ಟರೆ ಅವರ ಜೊತೆ ನೀವು ಬೆಗ್ ಮಾಡುವುದು ಏನಿದೆ ಮತ್ತು ಅವರನ್ನು ಪದೇಪದೇ ಕರೆದು ಮೀಟಿಂಗ್ ಮಾಡುವುದು ಏನಿದೆ ಇದು ಸರಿಯಾದ ಕ್ರಮ ಅಲ್ಲ. ಅವರನ್ನು ಕಂಟ್ರೋಲ್‌ಗೆ ತರುವುದಕ್ಕೆ ಸಾಧ್ಯವಿದೆ. ಈ ಬಗ್ಗೆ ಮತ್ತೊಂದು ಆಕ್ಟ್ ತರುವುದಕ್ಕೆ ಸಾಧ್ಯವಿದೆ. ಆದರೆ ಈಗ ನೀವು ಅವರ ಜೊತೆ ನಡೆದುಕೊಳ್ಳುತ್ತಿರುವುದನ್ನು ನೋಡಿದರೆ, it only shows that the Government is not firm and is not prepared to deal with them correctly. You can bring them to books. Why are you backing with the Private Management. It is not correct. Don't compromise with the private management. ನಿಮಗೆ ವಿಲ್ ಇದ್ದರೆ ಅವರನ್ನು ಕಂಟ್ರೋಲ್‌ಗೆ ತರುವುದಕ್ಕೆ ಸಾಧ್ಯವಿದೆ. ಇದನ್ನು ಬಿಟ್ಟು ಈ ರೀತಿಯೆಲ್ಲಾ ಅವರು ಹೇಳಿದ್ದನ್ನೆಲ್ಲಾ ಸರ್ಕಾರದ ಪರವಾಗಿ ಒಪ್ಪಿಕೊಳ್ಳಲು ಹೋಗಬೇಡಿ. ಇದು ಒಂದು ವಿಚಾರವಾದರೆ ಎರಡನೇ ವಿಚಾರ ಮತ್ತೊಂದು ಇದೆ. ಈ ವಿದ್ಯಾ ಕ್ಷೇತ್ರದಲ್ಲಿ ಖಾಸಗಿಯವರು ಸಹಾಯ ಮಾಡಬೇಕೆಂದು ತಾವು ಹೇಳಿದಿರಿ. ಈ ಖಾಸಗಿ ಜನರು ವಿದ್ಯಾ ಕ್ಷೇತ್ರದಲ್ಲಿ ಸಹಾಯ ಮಾಡುತ್ತಿರುವ ಬಗ್ಗೆ ಸ್ಥೂಲವಾಗಿ ಎರಡು ಭಾಗ ಮಾಡಬಹುದು. ವಿದ್ಯಾ ಕ್ಷೇತ್ರದಲ್ಲಿ ಲಾಭ ಇದೆ, ಟ್ರೇಡ್ ಮಾಡಬೇಕು ಎಂಬ ದೃಷ್ಟಿಯಿಂದ ತಮಗೆ ಎಲ್ಲೆಲ್ಲಿ ಬೇಕೋ ಅಲ್ಲೆಲ್ಲಾ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡುವುದರ ಮೂಲಕ ಅಲ್ಲಿ ಬೇಕಾದಷ್ಟು ಬೋಗಸ್ ಮಾಡುವುದು ಮತ್ತು ಮಾಲ್ ಪ್ರಾಕ್ಟೀಸ್ ಮಾಡುವುದು ಒಂದು ಭಾಗವಾದರೆ, ಮತ್ತೆ ಕೆಲವರು ಆಯಾ ಸ್ಥಳಗಳ ಒಂದು ಅವಶ್ಯಕತೆಯನ್ನು ಅನುಸರಿಸಿಕೊಂಡು ಜೆನಿಯಿನ್ ಆದಂಥ ಖಾಸಗಿ ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಿ ನಡೆಸುತ್ತಿದ್ದಾರೆ. ಇದು ಮತ್ತೊಂದು ಭಾಗ. ಮಾನ್ಯ ಕೆ.ಹೆಚ್. ಪಾಟೀಲ್ ಅವರು ಸಹ ಕೆಲವು ವಿದ್ಯಾ ಸಂಸ್ಥೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಅದೇರೀತಿ ನಾವು ನಮ್ಮ ಭಾಗದಲ್ಲಿನ ಅವಶ್ಯಕತೆಗಳನ್ನು ನೋಡಿಕೊಂಡು ಕೆಲವು ವಿದ್ಯಾಸಂಸ್ಥೆಗಳನ್ನು ಪ್ರಾರಂಭ ಮಾಡಿರುವುದು ಟ್ರೇಡ್ ಮಾಡುವುದಕ್ಕಾಗಿ ಆಗಲೀ ಅಥವಾ ಪ್ರತಿಷ್ಠೆಗಾಗಿ ಆಗಲೀ ಅಲ್ಲ. ಆದರೆ ಈ ವಿಚಾರದಲ್ಲಿ ನಿಮ್ಮ ಪಾಲಿಸಿ ತಲೆಗೆಲ್ಲಾ ಒಂದೇ ಮಂತ್ರ ಎಂಬಂತೆ ಆಗಿದೆ. ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಹಣದ ಲೂಟಿ ಹೊಡೆಯುವವರು ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಬೇರೆಯವರನ್ನು ಬುಕ್ ಮಾಡಿಕೊಂಡು ಏನು ಬೇಕಾದರೂ ಮಾಡುತ್ತಾರೆ. ಆದರೆ ಜೆನಿಯನ್ ಆಗಿರುವಂತಹ ವಿದ್ಯಾಸಂಸ್ಥೆಗಳಿಗೆ ಯಾವ ಬೆಲೆಯೂ ಇಲ್ಲ. ನೇಮಕಾತಿ ಮಾಡಿಕೊಳ್ಳುವ ಅಧಿಕಾರವೂ ಇಲ್ಲ. ಇಲ್ಲಿ ಪಾಠ ಮಾಡುವಂತಹ ಮಾಸ್ಟರ್‌ಗಳು ಪಾಠ ಮಾಡಿದರೆ ಮಾಡಬಹುದು, ಇಲ್ಲದಿದ್ದರೆ ಸುಮ್ಮನಿರಬಹುದು, ಇದನ್ನು ನೋಡಿಕೊಂಡು ಸುಮ್ಮನಿರಬೇಕು. ನೀವು ಯಾವ ಅಧಿಕಾರವನ್ನು ಕೊಟ್ಟಿಲ್ಲ. ಈ ಒಂದು ಸ್ಥಿತಿಗೆ ರೆಡ್ಯೂಸ್ ಮಾಡಿದ್ದೀರಿ. We are no better than a betterment committee. ವಿದ್ಯಾ ಕ್ಷೇತ್ರದಲ್ಲಿ ಖಾಸಗಿಯವರೂ ಸಹ ಭಾಗವಹಿಸಬೇಕು, ಇಲ್ಲದಿದ್ದರೆ ದುಡ್ಡನ್ನು ಎಲ್ಲಿಂದ ತರಬೇಕು ಎಂದು ತಾವು ಹೇಳುವುದಾದರೆ, you think of a policy incentive for the gonuine institutions. You please review the position. ಎಲ್ಲೆಲ್ಲಿ Genuine private participation. ಇದೆ, ಅಂತಹ ವಿದ್ಯಾಸಂಸ್ಥೆಗಳಿಗೆ ನೀವು ಎಲ್ಲ ರೀತಿಯ ಪ್ರೋತ್ಸಾಹ ಕೊಡಬೇಕು ಹಾಗೂ ಸೂಕ್ತ ರಕ್ಷಣೆ ಕೊಡಬೇಕು ಕಾಲೇಜುಗಳಲ್ಲಿ ಪಾಠ ಪ್ರವಚನಗಳು ಸರಿಯಾಗಿ ನಡೆಯದಿದ್ದಾಗ ಅದನ್ನು ಕೇಳಲು ನಮಗೆ ಅಧಿಕಾರ ಇಲ್ಲದಿದ್ದರೆ ನಾವು ಇನ್ನೇನನ್ನು ಮಾಡಲು ಸಾಧ್ಯ? ಆದ್ದರಿಂದ ಈಗಿನ ನಿಮ್ಮ ಪಾಲಿಸಿಯನ್ನು ರಿವ್ಯೂ ಮಾಡಬೇಕು. ಕೇವಲ ವ್ಯಾಪಾರ ಮಾಡಬೇಕೆಂಬ ಉದ್ದೇಶದಿಂದ ಕೆಲವು ವಿದ್ಯಾಸಂಸ್ಥೆಗಳು ಪ್ರಾರಂಭವಾಗಿವೆ, ಅವುಗಳ ಮೇಲೆ ನೀವು ನಿಯಂತ್ರಣ

ಇಟ್ಟುಕೊಳ್ಳಬೇಕು. ಈ ರೀತಿಯ ಕ್ರಮವನ್ನು ನೀವು ತೆಗೆದುಕೊಂಡಾಗ ಮಾತ್ರ ನೀವು ಹೇಳತಕ್ಕಂಥ ಮಾತಿಗೆ ಅರ್ಥ ಬರುತ್ತದೆ.

ಇನ್ನು ಸರ್ಕಾರಿ ಮುದ್ರಣಾಲಯದ ಬಗ್ಗೆ ಪಿ.ಎ.ಸಿ. ಯವರು ಪರಿಶೀಲನೆ ಮಾಡಿದ್ದಾರೆ. ಮುದ್ರಣಾಲಯಕ್ಕೂ ಭೇಟಿ ಕೊಟ್ಟು ನೋಡಿದ್ದಾರೆ. ಈಗಿರುವಂತಹ ಡೈರಕ್ಟರ್ ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದಾರೆಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಆದರೆ ಇವರಿಗಿಂತ ಮೊದಲು ಇದ್ದ ಡೈರಕ್ಟರ್ ಅವರು ಸಂಪೂರ್ಣವಾಗಿ ಆ ಪ್ರೆಸ್‌ನ್ನು ಹಾಳು ಮಾಡಿದ್ದರು ಅಷ್ಟೇ ಅಲ್ಲ, ಬಹಳ ಅದ್ವಾನ ಮಾಡಿದ್ದರು. ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕೆಂಬ ಬಗ್ಗೆ ಒಂದು ಕಮಿಟಿಯನ್ನು ರಚಿಸಲಾಗಿತ್ತು. ಆ ಕಮಿಟಿಯವರು ವರದಿಯನ್ನು ಸಹ ಕೊಟ್ಟಿದ್ದಾರೆ. ಈಗ ಆ ವರದಿಯನ್ನು ಪರಿಶೀಲನೆ ಮಾಡಿ ಇಂಪ್ಲಿಮೆಂಟ್ ಮಾಡುವ ಸಲುವಾಗಿ ಈ ಹಿಂದೆ ಅಲ್ಲಿದ್ದ ಡೈರಕ್ಟರ್ ಅವರನ್ನೇ ಸೆಕ್ರೆಟರಿಯನ್ನಾಗಿ ನೇಮಕ ಮಾಡಿದ್ದಾರೆ. ಅವರಿಗೆ ಒಳ್ಳೆಯ ಸ್ಕೇಲ್ ಕೊಟ್ಟು ಇಟ್ಟುಕೊಂಡಿದ್ದಾರೆ. ಇದು ಸರಿಯಾದ ಕ್ರಮವಲ್ಲ, ಅವರನ್ನು ತಕ್ಷಣ ತೆಗೆದು ಈಗಿರುವ ಡೈರಕ್ಟರ್ ಅವರನ್ನೇ ಸೆಕ್ರೆಟರಿಯನ್ನಾಗಿ ನೇಮಕ ಮಾಡಬೇಕು. ಪಿ.ಎ.ಸಿ. ನವರು ಸಹ ಇದನ್ನೇ ಶಿಫಾರಸ್ ಮಾಡಿದ್ದಾರೆ. ಇದು ಬಹುಶಃ ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅದಕ್ಕಾಗಿ ಈಗ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಕ್ಷಣ ಈ ಕೆಲಸ ಮಾಡುತ್ತೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕೊನೆಯ ಎರಡು ಸಲಹೆಗಳನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಮೊದಲನೆಯ ವಿಚಾರದಲ್ಲಿ I beg to differ from him. I think his memory is not sharp. We passed a very progressive bill wanting to contain these vested interests of these various institutions i.e., the Comprehensive Education Bill. ಇದು ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಕಳೆದ ಮೂರು ವರ್ಷಗಳಿಂದ ಇದು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಾಯುತ್ತಿದೆ. ನಿಮಗೆ ಶಕ್ತಿ ಇದ್ದರೆ ಕೇಂದ್ರದಿಂದ ಇದನ್ನು ಪಾಸ್ ಮಾಡಿಸಿಕೊಂಡು ತೆಗೆದುಕೊಂಡು ಬನ್ನಿ. ಆಗ ತಾವು ಹೇಳಿದ್ದನ್ನು ಮಾಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ —ಅಂದರೆ ನಿಮಗೆ ಶಕ್ತಿ ಇಲ್ಲ ಎಂಬುದನ್ನು ಒಪ್ಪಿಕೊಳ್ಳಿ. ನಮಗೆ ಅವಕಾಶ ಕೊಡಿ, ಅದನ್ನು ನಾವು ಮಾಡಿ ತೋರಿಸುತ್ತೇನೆ. ಇಲ್ಲಿ ನಿಮಗೆ ಬೇಕಾದ್ದನ್ನು ನಾವು ಕೇಂದ್ರದಿಂದ ತರಿಸಿಕೊಡಬೇಕು. ಆದರೆ ನಿಮಗೆ ಬೇಡದಿದ್ದಕ್ಕೆ ಮಾತ್ರ ನೀವು ಇಲ್ಲಿ ನಮ್ಮ ಜೊತೆ ಜಗಳ ಮಾಡುತ್ತೀರಿ.

ಶ್ರೀ ಜೀವರಾಜ ಆಳ್ವ.—ಅದು ಕಳೆದ ಮೂರು ವರ್ಷಗಳಿಂದ ಅಲ್ಲಿನ ಕೋಲ್ಡ್ ಸ್ಟೋರೇಜ್ ನಲ್ಲಿದೆ.

SRI K.H. SRINIVAS.—Have you met the Government of India and also called on the President on this point ? What I should do in that behalf ?

SRI JEEVARAJ ALVA.—A very interesting episode occured. There was a communication from the Hon'ble Minister for Human Resources Development Shri P.V. Narasimha Rao wanting to find out whether a particular date is convenient for the Education Minister of Karnataka to meet him.

7-30 PM.

Then we gave a suitable date and went there. ಆ ನಿವಾಸಕ್ಕೆ ಕಾಫಿ ಕೊಟ್ಟು ಆದಮೇಲೆ ಒಬ್ಬ ಅಧಿಕಾರಿಯೂ ಪತ್ತೆ ಇಲ್ಲ, ಏನೂ ಇಲ್ಲ. ಆಮೇಲೆ ಮಾನ್ಯ ನರಸಿಂಹರಾಯರು ಕೇಳುತ್ತಾರೆ, What brings you here? ಆಗ ನಾವು ಕಾಂಪ್ರಹೆನ್ಸೀವ್ ಎಜುಕೇಷನ್ ಬಿಲ್ ಬಗ್ಗೆ ತಾವು ಚರ್ಚೆಗೆ ನಮ್ಮನ್ನು ಆಹ್ವಾನ ಮಾಡಿದಿರಿ ಎಂದು ಹೇಳಿದಾಗ, ಅವರ ಎರಡನೇ ಉತ್ತರ there is something wrong, I think the UGC has objected to it. I told him the UGC has not objected and they have no objection what so ever and it is pending with the Government of India. It is absolvtely clear. I said my Chief Minister had highest admiration for you. I feel there is total callous attitude on the part of the Government of India towards our State. ನಾನು ಈ ವಿಷಯವನ್ನು ಹೇಳಲಿಲ್ಲ. ಅವರು ಕೇಂದ್ರ ಸರ್ಕಾರಕ್ಕೆ ಹೋಗಿದ್ದಿರಾ ಎಂದು ಕೇಳಿದ್ದಕ್ಕೋಸ್ಕರ ಹೇಳಿದೆ.

(Interruptions)

ಶ್ರೀ ಜೀವರಾಜ ಆಳ್ವ.—ತಾವೂ ನಾವೂ ಹೋಗೋಣ, ರಾಷ್ಟ್ರಪತಿಯವರ ಅಂಕಿತವನ್ನು ಪಡೆದು ಕೊಂಡು ಬಂದು ಮಾಡೋಣ.

ಶ್ರೀ ಕೆ. ಹೆಚ್, ಶ್ರೀನಿವಾಸ್.— ನಿಮ್ಮ ಕೈಯಲ್ಲಿ ಹರಿಯಲೇ ಇಲ್ಲ ಅಂದರೆ ನಾವು ಮಾಡೋಣ, ಅಭ್ಯಂತರವಿಲ್ಲ.

ಅಧ್ಯಕ್ಷರು.— ಅವರೂ ನೀವೂ ಕೂಡಿ ಹೋಗಿ.

SRI J.A. FERNANDES.-- I request the minister whether there is a proposal to introduce B.Ed. course for B.Sc,, (Home Science) graduates;

SRI JEEVRAJ ALVA.-- I will examine it. ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ ಎಸ್. ಶಿವನಂಜಪ್ಪ.--ಸನ್ಮಾನ್ಯ ಅಧ್ಯಕ್ಷರೇ. ನನ್ನದು ಒಂದೇ ಬೇಡಿಕೆ ೨ ವರ್ಷಗಳಿಂದ ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ. ೧೯೮೩ರಲ್ಲಿ ಫಸ್ಟ್‌ಗ್ರೇಡ್ ಕಾಲೇಜನ್ನು ಗುಬ್ಬಿಯಲ್ಲಿ ಮಂಜೂರು ಮಾಡಿದರು. ಅಲ್ಲಿ ಒಂದು ಕ್ಲಾಸ್ ಮಾಡುತ್ತಾರೆ, ಗರ್ಲ್ಸ್ ಹೈಸ್ಕೂಲಿನಲ್ಲಿ ಇನ್ನೊಂದು ಕ್ಲಾಸ್ ಮಾಡುತ್ತಾರೆ ಬಾಯ್ಸ್ ಮಿಡ್ಲ್ ಸ್ಕೂಲಿನಲ್ಲಿ ಇನ್ನೊಂದು ಕ್ಲಾಸ್ ಮಾಡುತ್ತಾರೆ, ಇನ್ನೊಂದು ಕ್ಲಾಸ್ ಬಾಯ್ಸ್ ಹೈಸ್ಕೂಲ್‌ನಲ್ಲಿ ಮಾಡುತ್ತಾರೆ. ಮತ್ತು ಆಫೀಸ್ ಬೇರೆ ಕಡೆ ಇದೆ. ಅವರು ಇಟ್ಟುಕೊಂಡಿರತಕ್ಕಂಥ ರಿಜಿಸ್ಟರ್, ಸಾಮಾನು ಸರಂಜಾಮು ಬೇರೆ ಬೇರೆ ಕಡೆ ಇದೆ. ಇದನ್ನು ಯಾವರೀತಿ ನಡೆಸುತ್ತಿದ್ದೀರಿ, ಇದು ಸರಿ ಇಲ್ಲ ಈಗ ಗುಬ್ಬಿಯಲ್ಲಿ ಜನ ಒಂದು ಲಕ್ಷ ವಂತಿಗೆ ಕೊಟ್ಟಿದ್ದಾರೆ. ಆ ಹಣದಲ್ಲಿ ಕನಿಷ್ಟಪಕ್ಷ ೪ ಷೆಡ್ಡುಗಳನ್ನು ಹಾಕಿಸಿಕೊಡಿ ಎಂದು ೨ ವರ್ಷಗಳಿಂದ ಕೇಳುತ್ತಾ ಇದ್ದೇನೆ. ನೀವೂ ಈ ಬಗ್ಗೆ ಬರೆದಿರಿ, ನಿಮ್ಮ ಎಜುಕೇಷನ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ಏನು ಮಾಡುತ್ತಾರೋ ಗೊತ್ತಾಗಿಲ್ಲ. ದಯಮಾಡಿ ಟೆಂಪರರಿ ಷೆಡ್‌ಗಳನ್ನು ಮಾಡಲಿಕ್ಕೆ ಗವರ್ನಮೆಂಟ್ ಜೂನಿಯರ್ ಕಾಲೇಜಿನಲ್ಲಿ ಸುಮಾರು ೧೦ ಎಕರೆ ಜಮೀನು ಇದೆ, ಉತ್ತರ ಭಾಗದಲ್ಲಿ ೪ ಷೆಡ್ಡುಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಒಂದು. ಅಧ್ಯಕ್ಷರೆ, ಸಾಮಾನ್ಯವಾಗಿ ಇವರು ಹಣದ ಕೊರತೆ ಬಗ್ಗೆ ಹೇಳುತ್ತಾ ಇರುತ್ತಾರೆ. ಈಗ ಗುಲ್ಬರ್ಗ ಜಿಲ್ಲೆಯ ಯಳಸಂಗಿಯಲ್ಲಿ ಒಂದು ಜೂನಿಯರ್ ಕಾಲೇಜನ್ನು ಮಂಜೂರು ಮಾಡಿದ್ದೀರಿ ಅಲ್ಲಿ ೧೪ ಜನ ವಿದ್ಯಾರ್ಥಿಗಳಿದ್ದಾರೆ. ೭ ಜನ ಲೆಕ್ಚರರ್ಸ್. ಒಬ್ಬ ಪ್ರಿನ್ಸಿಪಾಲ್ ಕನ್ನಡ, ಇನ್ನೊಬ್ಬ ಲೆಕ್ಚರರ್ ಕನ್ನಡ, ಬಿಕಾಂ ಲೆಕ್ಚರರನ್ನು ಪೋಸ್ಟ್ ಮಾಡಿದ್ದೀರಿ, ಅಲ್ಲಿ ಒಬ್ಬ ಕೂಡ ಬಿ.ಕಾಂ ಪಿದ ರ್ಥಿ ಇಲ್ಲ ಅಲ್ಲಿ ಸೂಪರ್ ಪ್ಲೆಸ್ ಆಗಿರತಕ್ಕಂಥ ಇಬ್ಬರನ್ನು ಲೆಕ್ಚರರ್ಸ್‌ನ್ನು ನೀಡಿ ಇರುವ ಕಡೆ ಟ್ರಾನ್ಸ್‌ಫರ್ ಮಾಡಿಕೊಡಿ. ಮೂರು ಸಾರಿ ನೀವು ಬರೆದಿರಿ ಕಮಿಷನರಿಗೆ, ಅವರು ಐಎಎಸ್ ಆಫೀಸರ್ಸ್ ನಮ್ಮ ಮಾತು ಕೇಳುವುದಿಲ್ಲ. ನಾನು ಮೂರು ಸಾರಿ

ಹೋಗಿ ಕೇಳಿದೆ, ಏಕೆ ಹೀಗೆ ಮಾಡುತ್ತೀರಿ, ಯಾರು ಕೊಡಬೇಕು, ದುಡ್ಡು, ಯಾರಪ್ಪನ ಮನೆ ಹಣ ಗೊತ್ತಾಗುವುದಿಲ್ಲವೇ ಎಂದು ಕೇಳಿದರೂ ಸಹ ಈ ವಿಚಾರದಲ್ಲಿ ಅವರು ಏನೂ ತಲೆ ಕೆಡಿಸಿಕೊಂಡಿಲ್ಲ. ಈ ರೀತಿ ಮಾಡಿಕೊಂಡು ಬಂದರೆ ಹಣ ಎಲ್ಲಿ ಬರುತ್ತದೆ. ಒಂದು ಸಬ್ಜೆಕ್ಟ್‌ಗೆ ೧೪ ಜನ ವಿದ್ಯಾರ್ಥಿಗಳಿಗೆ ಇಬ್ಬರು ಲೆಕ್ಚರರ್ಸ್, ಅಲ್ಲಿ ವಿದ್ಯಾರ್ಥಿ ಇಲ್ಲದೇ ಇರತಕ್ಕಂಥ ಬಿಕಾಂ ಸಬ್ಜೆಕ್ಟ್‌ಗೆ ಒಬ್ಬ ಲೆಕ್ಚರರ್, ಈ ರೀತಿ ಆದರೆ ಇದು ಹೇಗೆ ಆಗುತ್ತದೆ. ಇದನ್ನು ಕೂಡಲೇ ಸರಿಪಡಿಸುತ್ತೀರಾ ಎನ್ನುವುದು ಎರಡನೆಯದು.

ಶ್ರೀ ಜೀವರಾಜ ಆಳ್ವ.— ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಆಮೇಲೆ ಟ್ರಾನ್ಸ್‌ಫರ್ ಬಗ್ಗೆ ಆಡಳಿತಾತ್ಮಕವಾಗಿ ಸ್ವಲ್ಪ ತೊಂದರೆ ಇರುವುದರಿಂದ ಆಗಿಲ್ಲ. ಈ ವಾರದ ಕೊನೆಗೆ ಅದನ್ನೆಲ್ಲಾ ಮಾಡುತ್ತಾ ಇದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.— ಅಲ್ಲಿ ಬಿಕಾಂ ಸಬ್ಜೆಕ್ಟ್‌ಗೆ ಒಬ್ಬ ವಿದ್ಯಾರ್ಥಿ ಇಲ್ಲ, ಒಬ್ಬ ಲೆಕ್ಚರರ್ ಇದ್ದಾರೆ. ನೀಡಿ ಇರುವ ಕಡೆ ಕೊಡಿ.

ಶ್ರೀ ಜೀವರಾಜ ಆಳ್ವ.— ಅದನ್ನು ಮಾಡುತ್ತಾ ಇದ್ದೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಸನ್ಮಾನ್ಯ ಅಧ್ಯಕ್ಷರೇ, ಹಲವಾರು ವರ್ಷಗಳಿಂದ ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಒಂದು ಮಹಿಳಾ ಯೂನಿವರ್ಸಿಟಿ ಆಗಬೇಕು ಎನ್ನತಕ್ಕಂಥ ಪ್ರಪೋಸಲ್ ಸರ್ಕಾರದ ಮುಂದೆ ಇದೆ. ಪ್ರತ್ಯೇಕವಾದ ಮಹಿಳಾ ಯೂನಿವರ್ಸಿಟಿ ಆಗಬೇಕು ಎನ್ನುವುದು ಅನೇಕ ವರ್ಷಗಳಿಂದ ಇರತಕ್ಕಂಥ ಬೇಡಿಕೆ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಯೂನಿವರ್ಸಿಟಿ ಆಗಬೇಕು ಎಂಬ ಪ್ರಪೋಸಲ್ ಇದೆ. ಅದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.— ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.— ಈಗ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ

ಪ್ರಸ್ತಾವವೇನೆಂದರೆ,

"೩೧–೩–೧೯೮೪ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೧ ಮತ್ತು ೧೨ ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೧ — ಲೇಖನ ಸಾಮಗ್ರಿ ಮತ್ತು ಮುದ್ರಣ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೦೫,೨೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ — ೧೨ — ಉಚ್ಚ ಶಿಕ್ಷಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೦೧.೭೨,೩೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೦೯.೦೯೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.''

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ಮಾಡೋಣ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರು ಎರಡು ಗಂಟೆಗೆ ಮೊದಲು ೧೨ ಗಂಟೆಯಾದರೂ ಕೂತುಕೊಂಡು ಮುಗಿಸೋಣ ಎಂದು ಹೇಳಿದ್ದರು ಈಗ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಕೂತು ಕೊಳ್ಳಬಹುದಿತ್ತು ಅವಕಾಶ ಇಲ್ಲದೇ ಏನು ಮಾಡುವುದು.

ಶ್ರೀ ಕೆ. ಹೆಚ್. ಪಾಟೀಲ್.—ನಾವು ಎಷ್ಟು ಹೊತ್ತು ಬೇಕಾದರೂ ಕೂರುತ್ತೇವೆ ನಿಮ್ಮ ಮೈನಲ್ಲಿ ನೆಟ್ಟಗಿಲ್ಲ ಎನ್ನುವ ದೃಷ್ಟಿಯಿಂದ ನಾಳೆ ಸೇರೋಣ ಎಂದು ಹೇಳಿದೆವು.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನನಗೆ ಸೇರಿದ ಎರಡು ಇಲಾಖೆಗಳು ಸಣ್ಣವು ಅವುಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ ಸಣ್ಣ ಉಳಿತಾಯದಲ್ಲಿ ೮೭–೮೮ರಲ್ಲಿ ಅತ್ಯಂತ ಹೆಚ್ಚಿನ ಮತ್ತು ಪ್ರಗತಿದಾಯಕವಾದ ಸಾಧನೆಯಾಗಿದೆಯೆಂದರೆ ತಪ್ಪಾಗಲಾರದು, ಇಡೀ ಭರತಖಂಡದಲ್ಲಿ ೮೭–೮೮ರಲ್ಲಿ ನ್ಯಾಷನಲ್ ಆವರೇಜ್ ಗ್ರೋಥ್‌ನಲ್ಲಿ ಕರ್ನಾಟಕಕ್ಕೆ ಮೊದಲನೇ ಸ್ಥಾನ ಸಿಕ್ಕಿದೆ. ನ್ಯಾಷನಲ್ ಆವರೇಜ್ ೮ ಪರ್ಸೆಂಟ್ ಇದ್ದರೆ ಕರ್ನಾಟಕದಲ್ಲಿ ೪೨ ಪರ್ಸೆಂಟ್ ಇದೆ. ದಕ್ಷಿಣ ಭಾರತದಲ್ಲಿ ತಮಿಳುನಾಡು, ಆಂಧ್ರ, ಕೇರಳ ಹಾಗೂ ಕರ್ನಾಟಕ ಸೇರಿ ಆವರೇಜ್ ೧೭ ಪರ್ಸೆಂಟ್ ಇದ್ದರೆ ಅದರಲ್ಲಿ ಕರ್ನಾಟಕದ್ದು ೬೨ ಪರ್ಸೆಂಟ್ ಇದೆ. ಒಟ್ಟು ನಾವು ೬೦೩ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿದ್ದೇವೆ. ನಿಮ್ಮಳ ೨೬೦ ಕೋಟಿ ರೂಪಾಯಿಗಳು ಈ ಒಂದು ಸಾಧನೆಗೆ, ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳು, ಕರ್ನಾಟಕದ ಜನತೆ ಹಾಗೂ ಶಾಸಕರುಗಳು ಕಾರಣರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಇಲಾಖೆಯ ಅಧಿಕಾರಿಗಳು ಹಗಲು ರಾತ್ರಿ ಕಾಲದ ಪರಿವೆ ಇಲ್ಲದೆ ಗುರಿ ಸಾಧನೆ ಮಾಡಬೇಕೆಂಬ ದೃಷ್ಟಿಯಿಂದ, ಅಡಿಷನಲ್ ರಿಸೋರ್ಸಸ್ ಮೊಬಲೈಜೇಷನ್ ಮಾಡಬೇಕೆಂಬ ಭಾವನೆಯಿಂದ ಕೆಲಸ ಮಾಡಿದ್ದಾರೆ. ಅದಕ್ಕಾಗಿ ಎಲ್ಲಾ ಅಧಿಕಾರಿಗಳಿಗೂ, ಸಂಘ ಸಂಸ್ಥೆಗಳಿಗೂ, ರಾಜ್ಯದ ಜನತೆಗೂ ಶಾಸಕರುಗಳಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ೧೯೭೮ ರಿಂದ ೧೯೮೨ರವರೆಗೆ ಅಂದರೆ, ೫ ವರ್ಷಗಳಲ್ಲಿ ೫೬೬ ಕೋಟಿ ರೂಪಾಯಿಗಳನ್ನು ಕರ್ನಾಟಕದಲ್ಲಿ ಸಂಗ್ರಹಣೆ ಮಾಡಲಾಗಿದೆ. ೧೯೮೩ರಿಂದ ೮೮ರ ವರೆಗಿನ ೫ ವರ್ಷಗಳಲ್ಲಿ ೨೦೩೧ ಕೋಟಿ, ೫೫ ಲಕ್ಷ ಮಾಡಲಾಗಿದೆ. ಪರ್ಸೆಂಟೇಜ್ ಆಫ್ ಗ್ರೋಥ್ ಎಷ್ಟಿದೆ ಎಂಬುದನ್ನು ಯೋಚನೆ ಮಾಡಿ.

ಕಾರಾಗೃಹಗಳ ಬಗ್ಗೆ ಮಾನ್ಯ ಸದಸ್ಯರುಗಳಾದ ವೆಂಕಟರಾಮಯ್ಯನವರು ಮತ್ತು ಪಂಪಾಪತಿಯವರು ಹೇಳಿದ್ದಾರೆ. ಕೈದಿಗಳು ಸಾಯುವವರೆಗೆ ಜೈಲಿನಲ್ಲಿ ಇಡಬೇಡಿ ಎಂದು ಹೇಳಿದ್ದಾರೆ. ದೇವರಾಣೆಗೂ ನಾವು ಸಾಯುವವರೆಗೆ ಇಡುವುದಿಲ್ಲ. ಕೋರ್ಟಿನಲ್ಲಿ ಎಷ್ಟು ವರ್ಷ ಸಜಾ ಎಂದು ತೀರ್ಮಾನವಾಗುತ್ತದೆಯೋ ಅಷ್ಟು ವರ್ಷಗಳಾದ ಮೇಲೆ ಒಂದು ಗಳಿಗೆ ಕೂಡ ಇಟ್ಟುಕೊಳ್ಳುವುದಿಲ್ಲ. ಹೊರಗಡೆ ತಳ್ಳಿ ಬಿಡುತ್ತೇವೆ. ಯಾರಿಗೆ ಜೀವಾವಧಿ ಶಿಕ್ಷೆ ಯಾಗಿರುತ್ತದೆ ೧೪ ವರ್ಷಗಳು ಏನಿದೆ, ಅಂಥ ಸಂದರ್ಭದಲ್ಲಿ ೧೯೭೮ನೇ ಇಸವಿಗಿಂತ ಹಿಂದಕ್ಕೆ ಶಿಕ್ಷೆ ಆದವರಿಗೆ ಒಳ್ಳೆಯ ನಡವಳಿಕೆ ಕಂಡು ಬಂದರೆ ವಿಚಾರಣಾವಧಿಯ ತಿಂಗಳನ್ನು ಸೇರಿಸಿಕೊಂಡು ಸೆಂಟೆನ್ಸಸ್ ಎಂದು ಪರಿಗಣನೆ ಮಾಡಿ ಪ್ರಿಮೆಚೂರ್ ಆಗಿ ಬಿಡುತ್ತೇವೆ.

ಅಧ್ಯಕ್ಷರೆ ೧೯೬೫ನೇ ಇಸವಿಯಿಂದ ಈ ಒಂದು ಪದ್ಧತಿ ಜಾರಿಗೆ ಬಂದಿದೆ. ಈಗ ಮುಖ್ಯವಾಗಿ ತಕ್ಕ ಮಾತನ್ನು ಹೇಳಬೇಕೆಂದರೆ ಅಪರಾಧಿಗಳಲ್ಲಿ ಸ್ಕಿಲ್ಡ್ ಲೇಬರ್ ಅನ್‌ಸ್ಕಿಲ್ಡ್ ಲೇಬರ್ ಎಂದು ಎರಡು ಭಾಗವಾಗಿ ವಿಂಗಡಣೆಯನ್ನು ಮಾಡಿದ್ದೇವೆ ಜೈಲಿನಲ್ಲಿ ತೋಟದ ಕೆಲಸ ಮಾಡುವಂತಾದ್ದು ಇದೆ ಕಾರ್ಪೆಂಟರಿ ಕೆಲಸ ಇದೆ ಬಟ್ಟೆ ನೇಯುವುದು ಇದೆ, ಪ್ರಿಂಟಿಂಗ್ ಮಾಡತಕ್ಕ ಕೆಲಸ ಇದೆ, ಮೊದಲು ಸ್ಕಿಲ್ಡ್ ಲೇಬರ್‌ಗೆ ಮೂರು ರೂಪಾಯಿ ನಾನ್ ಸ್ಕಿಲ್ಡ್ ಲೇಬರ್‌ಗೆ ಎರಡು ರೂಪಾಯಿ ಕೊಡುತ್ತಿದ್ದೆವು ಅದನ್ನು ಹೆಚ್ಚಿಸಬೇಕೆಂದು ಹೇಳಿದ್ದರಿಂದ ಸ್ಕಿಲ್ಡ್ ಲೇಬರ್‌ಗೆ ಐದು ರೂಪಾಯಿ ನಾನ್‌ಸ್ಕಿಲ್ಡ್ ಲೇಬರ್‌ಗೆ ಮೂರುವರೆ ರೂಪಾಯಿ ಈ ವರ್ಷದಿಂದಲೇ ಕೊಡುತ್ತಿದ್ದೇವೆ. ಇನ್ನು ವಿಚಾರಣಾ ಅಪರಾಧಿಗಳಿಗೆ ಕೋರ್ಟಿಗೆ ತೆಗೆದುಕೊಂಡು ಹೋದಾಗ ಅಥವಾ ಒಂದ ಜೈಲಿನಿಂದ ಮತ್ತೊಂದು ಜೈಲಿಗೆ ವರ್ಗ ಮಾಡಿದಾಗ ಜೈಲಿನಲ್ಲಿ ಊಟ ತಿಂಡಿ ಕೊಡುವುದರ ಜೊತೆಗೆ ಮೊದಲು ಒಂದು ರೂಪಾಯಿ ಇಪ್ಪತ್ತೈದು ಪೈಸೆ ಮಾತ್ರ ಭತ್ಯ ಕೊಡುತ್ತಿದ್ದೆವು. ಈಗ ಸರ್ಕಾರ ತನ್ನಷ್ಟಕ್ಕೆ ತಾನೇ ನಾಲ್ಕು ರೂಪಾಯಿಗಳಿಗೆ ಏರಿಸಲಿಕ್ಕೆ ಸರ್ಕಾರ ತೀರ್ಮಾನಿಸಿದೆ ಇನ್ನು ಅವರು ಬಿಡುಗಡೆ ಆದಮೇಲೆ ಅವರಿಗೆ ಆರ್ಥಿಕ ಸಹಾಯವನ್ನು ಮಾಡಬೇಕೆಂದು ಹೇಳಿದರು ಈಗಾಗಲೇ ಬಿಡುಗಡೆ ಆದವರಿಗೆ ಅಲ್ಲ. ಜೈಲಿನಲ್ಲಿ ಯಾರು ಜೀವಾವಧಿ ಶಿಕ್ಷೆಯನು ಅನುಭವಿಸುತ್ತಾ ಇರುತ್ತಾರೆ ಅವರ ಹೆಂಡತಿ ಮಕ್ಕಳಿಗೆ ದುಡಿಯತಕ್ಕ ಶಕ್ತಿ ಇಲ್ಲದೇ ಇದ್ದರೆ ಯಾರಿಗೆ ಆರ್ಥಿಕ ಸಹಾಯ ಬೇಕು ಅವರನ್ನು ಖುದ್ದಾಗಿ ಕಂಡು ಐಆರ್‌ಡಿಪಿ ಕೆಳಗಡೆ ಸರ್ಕಾರದ ಸೌಲಭ್ಯಗಳು ಏನು ಸಿಕ್ಕುತ್ತದೆ ಅದನ್ನು ಅವರಿಗೆ ಆದ್ಯತೆಯ ಮೇಲೆ ಕೊಡಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ಬಿಡುಗಡೆಯಾದಂಥವರಿಗೂ ಸಹ ಆದ್ಯತೆ ಆಧಾರದ ಮೇಲೆ ಆರ್ಥಿಕ ಸಹಾಯ ಮಾಡಲಿಕ್ಕೆ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ. ಸಾಮಾನ್ಯವಾಗಿ ಹೆಚ್ಚಿಗೆ ಜೈಲಿಗೆ ಬರತಕ್ಕವರು ಜೀವಾವಧಿ ಶಿಕ್ಷೆಗೊಳಗಾಗುವವರು ವ್ಯವಸಾಯದಲ್ಲಿ ನಿರತರಾಗಿರುವವರು ಅವರು ತಮ್ಮ ವೃತ್ತಿಯನ್ನು ಮರೆಯಬಾರದೆಂದು ಕೋರಮಂಗಲದಲ್ಲಿ ೧೧ ಎಕರೆಯಲ್ಲಿ ತೋಟವನ್ನು ಮಾಡಿದ್ದೇವೆ. ಯಾರು ಐದಾರು ವರ್ಷ ಶಿಕ್ಷೆಯನ್ನು ಅನುಭವಿಸಿ ಒಳ್ಳೆಯ ನಡತೆಯನ್ನು ಇಟ್ಟುಕೊಂಡಿರುತ್ತಾರೆ ಅವರಿಗೆ ಅನುಭವ ಹೋಗಬಾರದೆಂದು ಅವರಿಗೋಸ್ಕರ ಇದನ್ನು ಮಾಡಿದ್ದೇವೆ ಇಷ್ಟು ವಿಚಾರಗಳನ್ನು ಜೈಲು ಖಾತೆ ಮತ್ತು ಸಣ್ಣ ಉಳಿತಾಯ ಖಾತೆಯ ಬಗ್ಗೆ ಹೇಳಿ ನನ್ನ ಬೇಡಿಕೆಗಳಿಗೆ ಮಂಜೂರಾತಿಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ — ಸಣ್ಣ ಉಳಿತಾಯದಲ್ಲಿ ದೊಡ್ಡ ಸಾಧನೆಯನ್ನು ಮಾಡಿರತಕ್ಕದ್ದು ನಿಜ. ಅದಕ್ಕಾಗಿ ನಾನು ಮಾನ್ಯ ವೀರಣ್ಣನವರನ್ನು ಅಭಿನಂದಿಸುತ್ತೇನೆ ಇದರಲ್ಲಿ ಹಲವಾರು ಜನರ ಸಹಕಾರವನ್ನು ಪಡೆದಿದ್ದೀರಿ. ಸಣ್ಣ ಉಳಿತಾಯ ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ಬಲಾತ್ಕಾರ ಮಾಡಲಾಗಿದೆ. ಮಾಡಿದರೂ ಸಹ ತಪ್ಪು ಎಂದು ಹೇಳುವುದಿಲ್ಲ. ಮಾಡದೇ ಹೋದರೆ ಅದನ್ನು ಯಾರೂ ಸಹ ಒಪ್ಪುವುದಿಲ್ಲ ಅವರು ನಮ್ಮ ಹತ್ತಿರ ಪರಸನಲ್ ಆಗಿ ಬಂದು ನಮಗೆ ಹೇಳಿದ್ದರಿಂದ ನಾವು ಒಪ್ಪಿಕೊಂಡೆವು. ಇವೊತ್ತು ನಾವು ಪಾಸ್ ಬುಕ್ ನೋಡಿದರೆ ನಮಗೂ ಸಂತೋಷವಾಗುತ್ತಿದೆ. ಆದರೆ ಅದು ನ್ಯೂಸೆನ್ಸ್ ಟ್ಯಾಕ್ಸ್ ಸ್ವರೂಪವಾಗದಂತೆ ಕಾಳಜಿ ವಹಿಸಿ ನೋಡಿಕೊಳ್ಳಬೇಕು. ಇನ್ನು ಓಲ್ಡ್ ಏಜ್ ಪೆನ್‌ಷನ್ ತೆಗೆದುಕೊಳ್ಳುವವರು ಹತ್ತು ರೂಪಾಯಿ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೆಟ್ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗದಂತೆ ನೋಡಿಕೊಳ್ಳಬೇಕು. ಕೊಡುವ ಶಕ್ತಿ ಇರತಕ್ಕವರಿಗೆ ಒತ್ತಡ ಹಾಕಿ ಅದನ್ನು ನಾನು ಬೇಡ ಎಂದು ಹೇಳುವುದಿಲ್ಲ, ಆದರೆ It should not bring a sort of disreputation to the Government. ಇನ್ನು ಜೈಲಿನ ಬಗ್ಗೆ ತಮಗೆ ಗೊತ್ತಿರಬೇಕು ಶಿವಮೊಗ್ಗದಲ್ಲಿ ಒಂದು ಸಾರಿ ಘಟನೆ ಆಯಿತು. ಇದರ ಬಗ್ಗೆ ನಾನು ಹಲವಾರು ಸಾರಿ ಈ ಸದನದಲ್ಲಿ ಎತ್ತಿದ್ದೇನೆ. ಆದರೂ ಸಹ ಪರಿಹಾರ ಮಾತ್ರ ದೊರಕಿಲ್ಲ. ಅಲ್ಲಿನ ಜೈಲರ್‌ಗೆ ಪೋಲೀಸರು ಲಾಕಪ್‌ಗೆ ತೆಗೆದುಕೊಂಡು ಹೋಗಿ ಹೊಡೆದರು, ಅದರ ಬಗ್ಗೆ ಎನ್‌ಕ್ವಯಿರಿ ಆಯಿತು ಪೋಲೀಸರದು ತಪ್ಪು ಎಂದು ಹೇಳಿದರು ಆದರೂ ಕೂಡ ಈ ಜೈಲರ್‌ನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಪೋಲೀಸರಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಇದಕ್ಕೆ ನಾನು ಹೇಳಿದೆ, ಎರಡೂ ಇಲಾಖೆಗಳಿಗೂ ರಾಜಿ ಮಾಡಿ ಏಕೆಂದರೆ ಎರಡೂ ಇಲಾಖೆಗಳು ತಮ್ಮದೇ ಇವೆಯೆಂದು ಹೇಳಿದೆ ಈ ವಿಚಾರವನ್ನು ನಾನು ದೊಡ್ಡದು ಮಾಡುವುದಕ್ಕೆ ಇಷ್ಟವಿಲ್ಲವೆಂದೂ ಕೂಡ ಹೇಳಿದೆ. ಆದರೂ ಅವರು ಅದನ್ನು ಮಾಡಲಿಲ್ಲ. ಪೋಲೀಸ್ ಇಲಾಖೆಯವರು ಆ ಜೈಲರ್‌ನ್ನು ಪ್ರಾಸಿಕ್ಯೂಟ್

ಮಾಡುವುದಕ್ಕೇ ಪರ್ಮಿಷನ್ ಕೊಟ್ಟಿದ್ದಾರೆ. ಆ ಜೈಲರ್ ಯಾರು ನಿಜವಾಗಿ ನೊಂದಿದ್ದಾನೆ ಅವನು ಪರ್ಮಿಷನ್‌ನ್ನು ಕೇಳಿದರೆ ಅವನಿಗೆ ಕೊಡಲಿಲ್ಲ. ಆ ಪೋಲೀಸರು ಜೈಲರ್‌ಗೆ ಹೊಡೆದಿದ್ದಾರೆ. ಅವನನ್ನು ಹೊಡೆದಂಥ ಪೋಲೀಸರನ್ನು ನೀವು ಅಲ್ಲಿಯೇ ಇಟ್ಟಿದ್ದೀರಿ. ಪಾಪ, ಆ ಜೈಲರ್‌ನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದ್ದಾರೆ. ಈ ರೀತಿಯ ಅನ್ಯಾಯ ಮಾಡುವುದರಿಂದ ಮೊರೇಲ್ ಎಂಬುದು ಏನಿದೆ ಅದು ಹಾಳಾಗಿ ಹೋಗುತ್ತದೆ. ನೀವು ಜೈಲು ಇಲಾಖೆಯ ಮಂತ್ರಿಗಳಾಗಿ ಆಸಕ್ತಿಯನ್ನು ವಹಿಸಿ ಬಂದರೆ ನಿಮ್ಮ ಇಲಾಖೆಯನ್ನೂ ಕೂಡ ನೀವು ರಕ್ಷಣೆ ಮಾಡಿಕೊಳ್ಳುವುದಕ್ಕೆ ಶ್ರದ್ಧೆ ವಹಿಸಲು ಪ್ರಯತ್ನ ಮಾಡಿಲ್ಲ. ಈಗಲಾದರೂ ಆ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಜೈಲರ್‌ನ ಬಗ್ಗೆ ಕನಿಕರ ತೋರಿಸಿ. ಅವನಿಗೆ ಎಲ್ಲೂ ಕೂಡ ರಕ್ಷಣೆ ಸಿಕ್ಕಿಲ್ಲ ಅವನನ್ನು ಬೆತ್ತಲೆ ಮಾಡಿ ಹೊಡೆದಿದ್ದಾರೆ. ಇವತ್ತು ಅವನು ಅರೆ ಹುಚ್ಚನಾಗಿ ಬೀದಿಯಲ್ಲಿದ್ದಾನೆ. ಆದ್ದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಇವರ ಬಗ್ಗೆ ಗಮನ ಹರಿಸಿ ಆ ಜೈಲರನಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ — ಮಾನ್ಯ ಅಧ್ಯಕ್ಷರೇ: ಓಲ್ಡ್ ಏಜ್ ಪೆನ್‌ಷನರ್ಸ್‌ಗೆ ೧೦ ರೂಪಾಯಿ ಎನ್.ಎಸ್.ಸಿ. ತೆಗೆದುಕೊಳ್ಳಬೇಕೆಂದು ಯಾವ ಕಡ್ಡಾಯವನ್ನೂ ಮಾಡುತ್ತಿಲ್ಲ. ಬಹುಶಃ ಅದು ಹೀಗಾಗಿರಬಹುದು ಕೆಲವು ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಕೆಲವು ಅಧಿಕಾರಿಗಳಿಗೆ ನಾವು ಇಂತಿಷ್ಟು ಎನ್.ಎಸ್.ಸಿ. ಟಾರ್ಗೆಟ್ ತೋರಿಸಬೇಕೆಂದು ಗುರಿಯನ್ನು ಹಾಕಿ ಕೊಟ್ಟಿರುತ್ತೇವೆ. ಯಾರು ಆ ಗುರಿಯನ್ನು ಮುಟ್ಟುವುದಕ್ಕೆ ಹಣವನ್ನು ಸಂಗ್ರಹ ಮಾಡಿರುವುದಿಲ್ಲ ಅವರು ಈ ರೀತಿಯ ಅಪಪ್ರಚಾರ ಮಾಡುವುದಕ್ಕೆ ಅಥವಾ ಬಲವಂತವನ್ನು ಮಾಡುವುದಕ್ಕೆ ಹೋಗುತ್ತಾರೆ. ಅಂಥವರ ಮೇಲೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ, ಮತ್ತು ಈ ರೀತಿ ಓಲ್ಡ್ ಏಜ್ ಪೆನ್‌ಷನರ್ಸ್‌ಗೆ ಕಿರುಕುಳ ಕೊಡಕೂಡದೆಂದು ಸೂಚನೆಯನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ. ಮೊದಲು ೧೦ ರೂಪಾಯಿಯ ಎನ್.ಎಸ್.ಸಿ. ಇತ್ತು. ಆದರೆ ಈಗ ಕೇಂದ್ರಸರ್ಕಾರದವರು ಅದನ್ನು ರದ್ದು ಮಾಡಿದ್ದಾರೆ. ಈಗ ಮಿನಿಮಂ ಎನ್.ಎಸ್.ಸಿ. ಇರತಕ್ಕದ್ದೇ ೧೦೦ ರೂಪಾಯಿಗೆ. ಮಾನ್ಯ ಶ್ರೀನಿವಾಸ್‌ರವರು ಹೇಳುವುದು ನಿಜ. ಏಕೆಂದರೆ ಪ್ರಗತಿಯ ಹೆಸರಿನಲ್ಲಿ ಜನರಿಗೆ ತೊಂದರೆಯಾಗಬಾರದು. ಇದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಇನ್ನು ಯಾರೋ ಒಬ್ಬ ಜೈಲರ್‌ನ ವಿಚಾರದಲ್ಲಿ ಹೇಳಿದ್ದಾರೆ. ಇದನ್ನು ನಾನು ವಿಚಾರ ಮಾಡುತ್ತೇನೆ. ನಮ್ಮ ಜೈಲಿನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಿಲ್ಲ. ಪೋಲಿಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರ ಎನ್‌ಕ್ವೈರಿ ಅವರ ಮೇಲೆ ಮತ್ತೆ ಅವರ ರೀ ಇನ್‌ಸ್ಟೇಟ್ ಆಗಿದ್ದಾರೆ. ಅವರನ್ನು ಬೇರೆ ಕಡೆ ಹಾಕಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಅವರು ಏನು ಪ್ರಾಸಿಕ್ಯೂಷನ್‌ಗೆ ಆರ್ಡರ್ ಮಾಡಿದ್ದಾರೆ. ಅದನ್ನು ವಿತ್‌ಡ್ರಾ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ, ಒಂದು ವೇಳೆ ಅವನ ಮೇಲೆ ಕೇಸನ್ನು ಹಾಕಿದ್ದರೂ ಕೂಡ ಅದನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಗೃಹ ಇಲಾಖೆಯ ಸಂಬಂಧಪಟ್ಟವರ ಹತ್ತಿರ ಮಾತನಾಡಿ ಇವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆ ಸಂಖ್ಯೆ ೨೧ ಮತ್ತು ೨೮ನ್ನು ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು — ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವ ಏನೆಂದರೆ:

> "೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೧ ಮತ್ತು ೨೮ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು"
>
> (ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳು ಮಂಜೂರಾದವು)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ : ೨೧— ಸಣ್ಣ ಉಳಿತಾಯಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಗಳ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೬,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ : ೨೮— ಜೈಲುಗಳು ಮತ್ತು ಇತರೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೬೭,೭೯,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು."

ಅಧ್ಯಕ್ಷರು.—ಈಗ ಮಾನ್ಯ ಅರಣ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಜಿ.ಎಸ್. ಬಾಗಲಕೋಟೆ (ಮಾನ್ಯ ಅರಣ್ಯ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯ ಮೇಲೆ ನಮ್ಮ ಮಾನ್ಯ ಸದಸ್ಯರುಗಳಾದ ಸ್ವಾಮಿರಾವ್‌ರವರು, ಪಂಪಾಪತಿಯವರು, ವೆಂಕಟರಾಮಯ್ಯನವರು ಹಾಗೂ ರಾಣಿಯವರುಗಳು ಮಾತನಾಡಿ ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರ ಸಲಹೆಗಳನ್ನು ನಾನು ಸ್ವಾಗತಿಸಿ ಅವರು ಕೊಟ್ಟಂಥ ಸಲಹೆ ಸೂಚನೆಗಳನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಈವತ್ತು ಅರಣ್ಯ ಇಲಾಖೆ ಈ ರಾಜ್ಯದಲ್ಲಿಯೇ ಅಲ್ಲ ಇಂಡಿಯಾದಲ್ಲಿ ಬಹಳ ಮಹತ್ವವಾದ ಪಾತ್ರವನ್ನು ವಹಿಸುವಂಥ ಇಲಾಖೆಯಾಗಿದೆ. ಏತಕ್ಕೆಂದರೆ ಮರಗಳಿಂದ ಮಳೆ, ಮಳೆಯಿಂದ ಬೆಳೆ ಎನ್ನುವ ಮಾತನ್ನು ನೆನಪಿಗೆ ತೆಗೆದುಕೊಂಡಾಗ ಈವತ್ತು ಅರಣ್ಯ ಇಲಾಖೆಗೆ ಎಷ್ಟು ಮಹತ್ವವನ್ನು ಕೊಡಬೇಕು ಎನ್ನುವ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಮೊದಲು ಒಂದು ಕಾಲದಲ್ಲಿ ಅರಣ್ಯ ಇಲಾಖೆಯಿಂದ ಎಷ್ಟೋ ಲಾಭವನ್ನು ಗಳಿಸುತ್ತಿದ್ದರು. ಆದರೆ ಈವತ್ತು ಪರಿಸರ ಮಾಲಿನ್ಯ ಕಾಪಾಡಬೇಕೆನ್ನುವ ದೃಷ್ಟಿಯಿಂದ, ನಾಳಿನ ನಾಡನ್ನು ಉಳಿಸಬೇಕು ಎನ್ನುವ ದೃಷ್ಟಿಯಿಂದ ಅರಣ್ಯ ಇಲಾಖೆಗೆ ಬಹಳ ಮಹತ್ವವನ್ನು ಕೊಡಬೇಕು ಎನ್ನುವ ಪ್ರಸಂಗ ಇದೆ. ಈ ದಿಸೆಯಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ಈವತ್ತು ಅರಣ್ಯ ನಾಶಕ್ಕೆ ಅನೇಕ ಕಾರಣಗಳಿವೆ. ಇವಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಉರುವಲು ಕಟ್ಟಿಗೆಯ ಬೇಡಿಕೆ, ಸುಮಾರು ೧.೭೫ ರಷ್ಟಿರುವಂಥ ದನಗಳ ಸಂಖ್ಯೆ ಅಲ್ಲದೆ ಕುರಿ, ಆಡು ಇನ್ನಿತರ ಪ್ರಾಣಿಗಳ ಸಂಖ್ಯೆ ಹೆಚ್ಚಿರುವುದರಿಂದಲೂ ಕೂಡ ಅರಣ್ಯ ನಾಶವಾಗುತ್ತಿದೆ. ಈ ನಾಶವಾಗುತ್ತಿರುವ ಅರಣ್ಯವನ್ನು ಉಳಿಸುವ ದೃಷ್ಟಿಯಿಂದ ನಮ್ಮ ಸರ್ಕಾರ ೧೯೮೩ರಿಂದ ಅರಣ್ಯ ಇಲಾಖೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅರಣ್ಯ ಮತ್ತು ಅರಣ್ಯ ಪ್ರಾಣಿಗಳನ್ನು ರಕ್ಷಿಸುವ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ಸನ್ಮಾನ್ಯ ಅಧ್ಯಕ್ಷರೇ, ಅರಣ್ಯವನ್ನು ಬೆಳೆಸುವ ದೃಷ್ಟಿಯಿಂದ ಒಂದು ಮಾತನ್ನು ಹೇಳಿದರೆ ಸಾಕಾಗುತ್ತದೆ. ಉತ್ತರ ಕರ್ನಾಟಕ ದಲ್ಲಿರತಕ್ಕಂಥ ಸುಮಾರು ೭೫ ಸಾವಿರ ಎಕರೆ "ಡಿ" ಗ್ರೇಡ್‌ಲ್ಯಾಂಡ್‌ನಲ್ಲಿ ೫ ವರ್ಷಗಳಲ್ಲಿ ಹೆಚ್ಚು ಅರಣ್ಯವನ್ನು ಬೆಳೆಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇತ್ತೀಚೆಗೆ ನಾವು ಅರಣ್ಯವನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಪುಷ್ಪಗಿರಿ ಮತ್ತು ದೇವರಕಾಡು ಎನ್ನುವ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಳೆದ ಒಂದು ವರ್ಷದಲ್ಲಿ ಪುಷ್ಪವನವನ್ನು ಮತ್ತು ದೇವರಕಾಡನ್ನು ಮಾಡಿದ್ದೇವೆ. ಅಲ್ಲಿ ಸುಮಾರು ೩೩೩ ಹೆಕ್ಟೇರ್‌ಗಳಷ್ಟು ಜಮೀನಿನಲ್ಲಿ ಅರಣ್ಯವನ್ನು ಬೆಳೆಸಿದ್ದೇವೆ. ತಮಗೆ ಗೊತ್ತಿರುವ ಹಾಗೆ ಪಶ್ಚಿಮ ಘಟ್ಟವು ಅನೇಕ ನದಿಗಳ ಉಗಮ ಸ್ಥಾನವಾಗಿದೆ. ಅಲ್ಲಿ ಈಗಾಗಲೇ ನಾವು ನಿತ್ಯಹರಿದ್ವರ್ಣ ಮತ್ತು ಸೆಮಿಹರಿದ್ವರ್ಣ ಕಾಡುಗಳಲ್ಲಿ ಮರ

ಗಳನ್ನು ಕಡಿಯುವ ವ್ಯವಸ್ಥೆಯನ್ನು ನಿಲ್ಲಿಸಿದ್ದೇವೆ. ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆಯ ಒಂದು ಯೋಜನೆಯನ್ನು ಹಾಕಿಕೊಂಡು ಸುಮಾರು ೨೨೦ ಕೋಟಿ ರೂಪಾಯಿಗಳನ್ನು ಈ ಯೋಜನೆ ಸಲುವಾಗಿ ನಾವು ಈಗಾಗಲೇ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಹಂತದಲ್ಲಿ ಇದ್ದೇವೆ. ಪಶ್ಚಿಮ ಘಟ್ಟದಲ್ಲಿ ಒಳ್ಳೆಯರೀತಿಯಲ್ಲಿ ಅರಣ್ಯವನ್ನು ಬೆಳೆಸಲು ಈ ಯೋಜನೆಯಿಂದ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ಹೇಳಿದರು ಅರಣ್ಯವನ್ನು ಬೆಳೆಸುವಂಥ ದೃಷ್ಟಿ ಇಟ್ಟುಕೊಂಡಿರುವಾಗ ಅರಣ್ಯಗಳು ಇಲ್ಲದಿರತಕ್ಕಂಥ ಉತ್ತರ ಕರ್ನಾಟಕದಲ್ಲೂ ಕೂಡ ಅರಣ್ಯವನ್ನು ಬೆಳೆಸುವಂತಾಗಬೇಕೆನ್ನುವ ಮಾತನ್ನು ಹೇಳಿದರು. ಈ ದಿಸೆಯಲ್ಲೂ ಕೂಡ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡು ಒಣ ಪ್ರದೇಶದಲ್ಲಿ ಕಾಡು ಅಭಿವೃದ್ಧಿ ಯೋಜನೆ ಎನ್ನುವ ಒಂದು ಯೋಜನೆಯನ್ನು ತಯಾರು ಮಾಡಬೇಕು ಎನ್ನುವ ವಿಚಾರದಲ್ಲಿ ಅರಣ್ಯ ಇಲಾಖೆಯಲ್ಲಿ ಕಾರ್ಯ ಪ್ರವೃತ್ತರಾಗಿದ್ದೇವೆ. ಇತ್ತೀಚೆಗೆ ಕಾಡು ಮರಗಳನ್ನು ಕಡಿಯುವ ಸಂಖ್ಯೆಯಲ್ಲಿ ಸುಮಾರು ೧೦೦ ಮರಗಳನ್ನು ಮಾತ್ರ ನಾವು ಕಡಿಯುವಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಈಗಾಗಲೇ ಅನೇಕ ರೀತಿಯಲ್ಲಿ ಮರಗಳನ್ನು ಕಡಿಯುವುದು ಮತ್ತು ಬಿದರನ್ನು ಕಡಿಯುವ ಕಾರ್ಯಕ್ರಮವನ್ನು ಕಡಿಮೆ ಮಾಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಇಂಡಸ್ಟ್ರೀಸ್‌ಗಳಿಗೆ ಕೊಟ್ಟಿರುವ ಲೀಸ್ ಅವಧಿಯನ್ನು ಕಡಿಮೆ ಮಾಡುವಂಥ ದೃಷ್ಟಿಯಿಂದ ಕರ್ನಾಟಕ ಅರಣ್ಯ ಉತ್ಪಾದನೆಯನ್ನು ಸರ್ವತೋಮುಖವಾಗಿ ಸರ್ಕಾರ ಕೈಗೊಂಡಿದೆ. ರಾಷ್ಟ್ರೀಯ ಅರಣ್ಯ ಕಾಯಿದೆಯನ್ವಯ ಅರಣ್ಯವನ್ನು ಬೆಳೆಸುವ ಮತ್ತು ಉಳಿಸುವುದರ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೊಸದಾಗಿ ನ್ಯಾಷನಲ್ ಪಾರ್ಕ್ ಸುಮಾರು ೭೫೦ ಸ್ಕ್ವೇರ್ ಮೀಟರ್, ಅನಂತರ ಕುದುರೇಮುಖ ನ್ಯಾಷನಲ್ ಪಾರ್ಕ್ ೩೭೪ ಸ್ಕ್ವೇರ್ ಕಿಲೋಮೀಟರ್, ಬಿ.ಆರ್.ಡಿ. ಸೆಂಟರ್‌ನಲ್ಲಿ ೫೩೦-೫೪೭ ಸ್ಕ್ವೇರ್ ಕಿಲೋಮೀಟರ್, ದಾಂಡೇಲಿಯಲ್ಲಿ ೮೩೪.೧೫೭ ಸ್ಕ್ವೇರ್ ಕಿಲೋಮೀಟರ್ ಕಾವೇರಿ ನದಿಪಾತ್ರದಲ್ಲಿ ೫೧.೫೦೦ ಸ್ಕ್ವೇರ್ ಕಿಲೋಮೀಟರ್, ತಲಕಾವೇರಿಯಲ್ಲಿ ೧೦೫ ಸ್ಕ್ವೇರ್ ಕಿಲೋಮೀಟರ್, ಪುಷ್ಪಗಿರಿಯಲ್ಲಿ ೧೫೦.೫೦ ಸ್ಕ್ವೇರ್ ಕಿಲೋಮೀಟರ್‌ಗಳಷ್ಟು ಸ್ಯಾಂಕ್ಚುರಿಗಳನ್ನು ಮಾಡುವಂಥ ಕೆಲಸವನ್ನು ಈ ವರ್ಷದಲ್ಲಿ ಕೈಗೊಂಡಿದ್ದೇವೆ. ಇತ್ತೀಚೆಗೆ ಅರಣ್ಯಗಳಿಂದ ಹೆಚ್ಚು ಔಷಧಿಗಳು ಬರುವಂಥ ಮರಗಳನ್ನು ಮತ್ತು ಸಸಿಗಳನ್ನು ಬೆಳೆದು ವನಸ್ಪತಿ ಕಡಿಮೆಯಾಗದ ರೀತಿಯಲ್ಲಿ ಅದನ್ನೂ ಕೂಡ ಬೆಳೆಸಬೇಕೆನ್ನುವ ದೃಷ್ಟಿಯಿಂದ ಬೆಂಗಳೂರಿನಲ್ಲಿರುವ ವೈದ್ಯ ಇಲಾಖೆಯ ಜೊತೆಗೂಡಿ ಸುಮಾರು ೩೭ ಎಕರೆಗಳಲ್ಲಿ ಇಂಥ ಒಂದು ಸಸಿಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಇದರ ಜೊತೆಗೆ ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಈಗಾಗಲೇ ಅನೇಕ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡು ಸಸಿಗಳನ್ನು ಪುಕ್ಕಟ್ಟೆಯಾಗಿ ಹಂಚುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೋದಸಲ ಸುಮಾರು ೩೦ ಕೋಟಿಗೆ ಮೇಲ್ಪಟ್ಟು ಸಸಿಗಳನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಈ ವರ್ಷವಾದರೂ ಕೂಡ ಸುಮಾರು ೨೭ ಕೋಟಿ ಸಸಿ ನೆಡುವ ಕಾರ್ಯಕ್ರಮ ಈಗಾಗಲೇ ಮುಗಿದಿದೆ. ಮಾನ್ಯ ಅಧ್ಯಕ್ಷರೇ, ಡ್ಯಾನಿಡಾ ಸಹಾಯದಿಂದ ಸುಮಾರು ೨೪ ಕೋಟಿ ೪೮ ಲಕ್ಷ ಈ ಶಾಲಾವನವನ್ನು ಮಾಡುವಂಥ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ. ಇದರ ಜೊತೆಗೆ ೫೦ ಲಕ್ಷ ರೂಪಾಯಿ ವೆಚ್ಚದಲ್ಲಿ ೨೮೦೬ ಹೆಕ್ಟೇರ್ ಪ್ರದೇಶದಲ್ಲಿ ಈ ವರ್ಷ ಶಾಲೆಗಳಲ್ಲಿ ನೆಡುತೋಪು ನೆಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇನ್ನೊಂದು ಮಹತ್ವವಾದ ವಿಚಾರ ಏನೆಂದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಮಕ್ಕಳ ವನ ಅಥವಾ ಚಿಗುರು ವನ ಇರಲಿಲ್ಲ. ಈ ವರ್ಷ ಪ್ರತಿ ಜಿಲ್ಲೆಗೆ ಇಂತಹ ಮಕ್ಕಳ ವನ ಚಿಗುರು ವನ ಮಾಡುವುದಲ್ಲದೆ ಇದ್ದಂಥ ಚಿಗುರುವನ ಅಥವಾ ಪ್ರಾಣಿ ಸಂಗ್ರಹಾಲಯಗಳನ್ನು ಒಳ್ಳೆಯ ರೀತಿಯಿಂದ ಬೆಳೆಸುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದೇ ಪ್ರಕಾರ ಈ ವರ್ಷ ತುಮಕೂರು, ಚಿತ್ರದುರ್ಗ, ಬಿಜಾಪುರ, ಕೆಂಪಾಂಬುಧಿ ಬೆಂಗಳೂರು, ಮತ್ತು ಕೊಂಡಜ್ಜಿ ಭಾಗದಲ್ಲಿ ಇಂತಹ ಮಕ್ಕಳ ವನ ಮತ್ತು ಚಿಗುರುವನಗಳನ್ನು ನಾವು ಮಾಡಿದ್ದೇವೆ. ಇನ್ನು ಉಳಿದ ರಾಯಚೂರು ಬೆಳಗಾವಿಯಲ್ಲಿ ಇದನ್ನು ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅಂದಮೇಲೆ ಇಡೀ ಕರ್ನಾಟಕ ತುಂಬ ಪ್ರತಿಜಿಲ್ಲೆಗೂ ಇಂತಹ ಚಿಗುರುವನ ಮಾಡಿ ಆ ಭಾಗದ ಮಕ್ಕಳಿಗೆ ಕೂಡ ಇದರ ಲಾಭ ತಟ್ಟುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಜೊತೆಗೆ ಶಿವಮೊಗ್ಗದಲ್ಲಿ ಲೆಯನ್ ಸಫಾರಿ ಮಾಡಿ ಇನ್ನು ಕೆಲವೇ ದಿನಗಳಲ್ಲಿ ಅಲ್ಲಿ ಸಿಂಹಗಳನ್ನು ಬಿಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಕೂಡ

ಬೇಕು ಏಕೆಂದರೆ ಬನ್ನೇರುಘಟ್ಟ ಬೆಳೆಯುತ್ತಿರತಕ್ಕಂಥ ಒಂದು ನ್ಯಾಷನಲ್ ಪಾರ್ಕ್, ಅಲ್ಲಿ ಅವರು ಈ ವರ್ಷ ೨೫ ಲಕ್ಷ ರೂಪಾಯಿಗಳನ್ನು ವಿಶೇಷ ಧನಸಹಾಯ ಮಾಡಿ ಈ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ್ನು ಬೆಳೆಸುವಲ್ಲಿ ಸಹಾಯ ಮಾಡಿದ್ದಾರೆ. ಇದರ ಜೊತೆಗೆ ಕಿಸಾನ್ ನರ್ಸರಿಯಲ್ಲಿ ಪ್ರತಿಸಲ ರೈತರು ಕೇವಲ ಸಸಿಗಳನ್ನು ಬೆಳೆಸುವುದರಲ್ಲಿ ಮಾತ್ರ ಆಸ್ಥೆಯನ್ನು ತೋರಿಸುತ್ತಿದ್ದರು. ಆದರೆ ಬೆಳೆದಂಥ ಸಸಿಗಳನ್ನು ತಮ್ಮ ಹೊಲದಲ್ಲಿ ನೆಡುವ ಸಲುವಾಗಿ ಆಸ್ಥೆಯನ್ನು ತೋರಿಸುತ್ತಿರಲಿಲ್ಲ. ಈ ವರ್ಷ ಅವರಿಗೆ ಕೊಟ್ಟಂಥ ಸಸಿಗಳಲ್ಲಿ ಒಂದು ಪರ್ಸೆಂಟ್ ಆದರೂ ಬೆಳೆಸಿ ಕಾಯ್ದು ಕಾಪಾಡಬೇಕೆಂದು ಎನ್ನತಕ್ಕಂಥ ಆಜ್ಞೆಯನ್ನು ಈಗಾಗಲೆ ಹೊರಡಿಸಿದ್ದೇವೆ. ಇದರ ಜೊತೆಗೆ ನಮ್ಮ ಅರಣ್ಯ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಬೇರೆ ಮಲೇಶಿಯಾ ಮೊದಲಾದ ದೇಶಗಳಿಂದ ಕಟ್ಟಿಗೆಯನ್ನು ತರಿಸುವ ಒಂದು ವ್ಯವಸ್ಥೆಯನ್ನು ಈಗಾಗಲೇ ಮಾಡಿದೆ. ಸುಮಾರು ಹೋದವರ್ಷ ೬೫,೫೧೫ ಲಾಗ್ಸ್ ಬಂದಿದ್ದರೆ ಈ ವರ್ಷ ೧,೪೯,೯೫೦ ಲಾಗ್ಸ್ ಬಂದಿವೆ. ರಾಷ್ಟ್ರದಲ್ಲೇ ಪ್ರಪ್ರಥಮವಾಗಿ ಉರುವಲು ಕಟ್ಟಿಗೆ ಯೋಜನೆಯನ್ನು ೭೫ ಕೋಟಿ ರೂಪಾಯಿ ವೆಚ್ಚದಲ್ಲಿ ಮಾಡಿ ೩೦ ಸಾವಿರ ಎಕರೆ ಜಮೀನು ಪ್ರದೇಶವನ್ನು ಇದರ ಒಂದು ಆಡಳಿತ ವ್ಯವಸ್ಥೆಗೆ ಒಳಪಡಿಸಲಾಗಿದೆ. ದಕ್ಷಿಣಕನ್ನಡ, ಉತ್ತರಕನ್ನಡ, ಚಿಕ್ಕಮಗಳೂರು, ಹಾಸನ ಕೊಡಗು ಜಿಲ್ಲೆಯಲ್ಲಿ ಇದನ್ನು ತರಲಾಗಿದೆ. ಈ ಯೋಜನೆ ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾದ ಯೋಜನೆಯಾಗಿದ್ದು ನಮಗೆ ಬೇಕಾಗುವ ಉರುವಲು ಕಟ್ಟಿಗೆಯನ್ನು ಪೂರೈಸುವ ಯೋಜನೆಯಾಗಿದೆ. ಇದರ ಜೊತೆಗೆ ನಮ್ಮ ಅರಣ್ಯ ಸಿಬ್ಬಂದಿ ಕೂಡ ಡೆವಲಪ್‌ಮೆಂಟ್ ಮತ್ತು ಪ್ರೊಟೆಕ್ಷನ್‌ನಲ್ಲಿ ಸರಿಯಾಗಿ ಕೆಲಸ ಮಾಡಿದವರಿಗೆ ಅರಸಿ ಬಹುಮಾನ ಕೊಡುವ ಯೋಜನೆ ಕೂಡ ಅರಣ್ಯ ಇಲಾಖೆಯವರು ಹಾಕಿಕೊಂಡಿದ್ದಾರೆ. ಜೊತೆಗೆ ಈ ಕಳ್ಳಸಾಗಾಣಿಕೆಯಲ್ಲಿ ಶ್ರೀಗಂಧ ಮತ್ತಿತರ ವಸ್ತುಗಳನ್ನು ಹಿಡಿದಂಥ ಜನರಿಗೆ ಸುಮಾರು ೧೫ ಪರ್ಸೆಂಟ್‌ವರೆಗೆ ಬೋನಸ್ ಕೊಡುವ ಯೋಜನೆಯನ್ನು ಕೂಡ ಹಾಕಿಕೊಂಡಿದ್ದೇವೆ. ಶಾಲಾಮಕ್ಕಳು ಒಳ್ಳೆಯ ರೀತಿಯಿಂದ ಸಸಿಗಳನ್ನು ನೆಟ್ಟು ಬೆಳೆಸಿದರೆ ಅವರಿಗೂ ಕೂಡ ಬಹುಮಾನ ಕೊಡುವ ಯೋಜನೆಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ನನಗೆ ಸಂತೋಷ ಏನೆಂದರೆ ನಮ್ಮ ಇಲಾಖೆ ನೆಟ್ಟಂಥ ಸಸಿಗಳಲ್ಲಿ ಉಳಿದ ಸಸಿಗಳನ್ನು ಕೇಂದ್ರ ಸರ್ಕಾರದಿಂದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಓವರ್‌ಸೀಸ್ ಅವರು ಈ ಬಗ್ಗೆ ಒಂದು ತನಿಖೆ ಮಾಡಿ ನಿರ್ಧಾರಕ್ಕೆ ಬಂದಿದ್ದಾರೆ. ಈ ಒಂದು ಸರ್ವೆ ಪ್ರಕಾರ ನಮ್ಮ ರಾಜ್ಯ ಸರ್ಕಾರ ಸರ್ವೈವಲ್ ರೇಟ್ ಆಫ್ ಪ್ಲಾಂಟೆಡ್ ಟ್ರೀಸ್‌ನಲ್ಲಿ ಇಡೀ ದೇಶದಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳುವುದಕ್ಕೆ ನನಗೆ ಹೆಮ್ಮೆ ಎನಿಸುತ್ತದೆ. ನಮ್ಮ ಸರ್ವೈವಲ್ ರೇಟ್ ೭೯.೪೦ ಇದೆ. ಇದರ ಜೊತೆಗೆ ೨೦ ಅಂಶಗಳ ಕಾರ್ಯಕ್ರಮದಲ್ಲಿರುವ ೧೬ನೇ ಕಾರ್ಯಕ್ರಮದ ಪ್ರಕಾರ ಅರಣ್ಯ ಇಲಾಖೆ ಸಸಿಗಳನ್ನು ಬೆಳೆಸುವ ಗುರಿಯನ್ನು ಚೆನ್ನಾಗಿ ಸಾಧಿಸಿದೆ. ಮೇಘಾಲಯ ಒಂದು ಸಣ್ಣ ರಾಜ್ಯ. ಅದು ಬಿಟ್ಟರೆ ನಮ್ಮ ರಾಜ್ಯ ಇಡೀ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ನಮ್ಮಲ್ಲಿ ೨೫ ಕೋಟಿ ಸಸಿಗಳನ್ನು ಬೆಳೆಸಿದ್ದೇವೆ. ಇದರ ಜೊತೆಗೆ ಸನ್ಮಾನ್ಯ ಸಭಾಧ್ಯಕ್ಷರೆ ಹುಣಸೆ, ಹಲಸು, ಸಾಗುವಾನಿ ಮತ್ತು ಶ್ರೀಗಂಧ ಮುಂತಾದ ಒಳ್ಳೆಯ ತಳಿಯ ಸಸಿಗಳನ್ನು ಅರಣ್ಯ ಇಲಾಖೆ ಬೆಳೆಸುವುದರಲ್ಲಿ ದೇಶದಲ್ಲೇ ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ. ನಮ್ಮ ಸದಸ್ಯರಾದ ಸ್ವಾಮಿರಾವ್ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ವರಾಹಿ ಯೋಜನೆಯಲ್ಲಿ ಇದ್ದಂಥ ಅಧಿಕಾರಿಗಳಿಗೆ ತಪ್ಪು ಮಾಡಿದಂಥ ಅಧಿಕಾರಿಗಳಿಗೆ ಯಾವುದೇ ಶಿಕ್ಷೆಯನ್ನು ಮಾಡಲಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ತಪ್ಪು ಮಾಡಿದ ಅಧಿಕಾರಿಗಳನ್ನು ಲೋಕಾಯುಕ್ತ ವಿಚಾರಣೆಗೆ ಒಳಪಡಿಸಲಾಗಿದೆ. ಅದು ಲೋಕಾಯುಕ್ತದ ಮುಂದೆ ಇದೆ. ಅದರ ಜೊತೆಗೆ ಅರಣ್ಯಾಧಿಕಾರಿಗಳ ಬಗ್ಗೆ ಅವರು ಅನೇಕ ಮಾತುಗಳನ್ನು ಆಡಿದ್ದಾರೆ ನಾನು ಅದನ್ನು ಒಪ್ಪುತ್ತೇನೆ. ಎಲ್ಲ ಇಲಾಖೆಗಳಲ್ಲಿ ಇದ್ದ ಹಾಗೆ ಅರಣ್ಯ ಇಲಾಖೆಯಲ್ಲೂ ಒಳ್ಳೆಯವರು ಮತ್ತು ಒಳ್ಳೆಯರಲ್ಲದವರು ಇದ್ದಾರೆ ತಮ್ಮೆಲ್ಲರ ಸಹಕಾರದಿಂದ ಒಳ್ಳೆಯವರಿಗೆ ಪ್ರೋತ್ಸಾಹ ಕೊಟ್ಟು ಒಳ್ಳೆಯರಲ್ಲದವರಿಗೆ ಶಿಕ್ಷೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ. ಅದಕ್ಕೆ ಸನ್ಮಾನ್ಯ ಸದಸ್ಯರ ಸಹಕಾರವನ್ನು ಬೇಡುತ್ತೇನೆ. ಇದರ ಜೊತೆಗೆ ಮಾನ್ಯ ಸದಸ್ಯರು ಕಾಯಿದೆ ತಿದ್ದುಪಡಿ ಮಾಡಿದ್ದಾರೆಂದು ಹೇಳಿದ್ದಾರೆ. ಇದು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಬರುವುದಿಲ್ಲ. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ. ಜೊತೆಗೆ ತಾಲ್ಲೂಕು ಸಮಿತಿಗಳನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಿದ್ದಾರೆ. ಆ ವಿಚಾರವನ್ನು ನಾನು ಒಪ್ಪುತ್ತೇನೆ. ಆ ಬಗ್ಗೆ ಆದಷ್ಟು ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಜೊತೆಗೆ ಇನ್ನೂ ಅನೇಕ ವಿಷಯಗಳನ್ನು ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ವಿವರ ಕೊಟ್ಟರೆ ಸಂಬಂಧಿಸಿದ

ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಎಂದು ಹೇಳಿ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟ ಎಲ್ಲ ಮಾನ್ಯ ಸದಸ್ಯರಿಗೆ ವಂದಿಸಿ ಈ ಪ್ರಸ್ತಾವನೆಯನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ.— ಮಾನ್ಯ ಸಚಿವರು ತಮ್ಮ ಕೆಲವು ಯೋಜನೆಗಳಲ್ಲಿ ಅನ್ಸಿಯಲ್ಲಿ, ನ್ಯಾಷನಲ್ ಪಾರ್ಕ್ ಮಾಡುತ್ತೇವೆಂದು ಹೇಳಿದ್ದಾರೆ. ಆ ನ್ಯಾಷನಲ್ ಪಾರ್ಕ್ ಮಾಡುವ ಜಾಗದಲ್ಲಿ ಒಳಭಾಗದಲ್ಲಿ ಅನೇಕ ರೈತರು ವಾಸಿಸುತ್ತಿದ್ದಾರೆ. ಇದರಿಂದ ನ್ಯಾಷನಲ್ ಪಾರ್ಕ್ ಸರಿಯಾಗಿ ಮಾಡುವುದಕ್ಕೆ ಅಡ್ಡಿ ಆತಂಕ ಬರಬಹುದು ಎಂಬುದು ನಮ್ಮ ಸಂಶಯ. ಆದ್ದರಿಂದ ಈ ಜನಾಗೆ ರಸ್ತೆಯ ಪಕ್ಕದಲ್ಲಿ ಸವಲತ್ತುಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ, ಅಲ್ಲಿ ಸ್ಥಳಾಂತರಿಸುವ ಯೋಚನೆ ಮಾಡುತ್ತೀರಾ ? ಎರಡನೆಯದಾಗಿ ಅರಣ್ಯ ಜಮೀನಿನ ಅತಿಕ್ರಮಣವನ್ನು ಸಕ್ರಮಗೊಳಿಸುವ ಬಗ್ಗೆ ಹೇಳಬೇಕಾಗಿದೆ. ಈಗಾಗಲೇ ಅನೇಕ ಸಲ ಪ್ರಸ್ತಾಪ ಮಾಡಿದಾಗ ಅವಕ್ಕೆ ಸಮಿತಿಯನ್ನು ಅದಷ್ಟು ಬೇಗ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ್, ಯಲ್ಲಾಪುರ, ಸಿರಸಿ, ಸಿದ್ದಾಪುರ ಮುಂತಾದ ಭಾಗಗಳಲ್ಲಿ ಭೂರಹಿತರು ೧೯೭೮ಕ್ಕೆ ಪೂರ್ವದಲ್ಲಿ ಅತಿಕ್ರಮಣ ಮಾಡಿದ್ದಾರೆ. ನಿಮ್ಮ ಇಲಾಖೆ ಅಧಿಕಾರಿಗಳು ಕೆಲವು ವಿಶಿಷ್ಟ ಹಿತಾಸಕ್ತಿಗಳ ಒತ್ತಡಕ್ಕೆ ಒಳಗಾಗಿ ಅವರನ್ನು ಒಕ್ಕಲೆಬ್ಬಿಸುವ ಕಾರ್ಯ ಮಾಡುತ್ತಿದ್ದಾರೆ. ಇದನ್ನು ಕೂಡಲೇ ತಡೆಹಿಡಿಯುತ್ತೀರಾ ? ತಾವು ಅರಣ್ಯವನ್ನು ಉಳಿಸಿ ಬೆಳೆಸಿ ಬಳಸಬೇಕು ಎಂದು ಹೇಳುತ್ತೀರಿ. ಯಾರು ಅರಣ್ಯವನ್ನು ಉಳಿಸಿ ಬೆಳೆಸುತ್ತಾರೋ ಅವರಿಗೆ ಬಳಸುವ ಹಕ್ಕು ಇರುತ್ತದೆ. ಬ್ರಿಟಿಷ್ ಸರ್ಕಾರ ಇದ್ದಾಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆನರಾ ಫಾರೆಸ್ಟ್ ಪ್ರಿವಿಲೆಜ್‌ನಲ್ಲಿ ಕೆಲವು ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಇವತ್ತು ರಾಜ್ಯದಲ್ಲಿ ಸಮೃದ್ಧವಾಗಿ ಅರಣ್ಯ ಉಳಿದುಕೊಂಡಿದ್ದರೆ ಅದು ಉತ್ತರ ಕನ್ನಡ ಜಿಲ್ಲೆ ಎಂದರೆ ತಪ್ಪಾಗುವುದಿಲ್ಲ. ಆದ್ದರಿಂದ ಕೆನರಾ ಫಾರೆಸ್ಟ್ ಪ್ರಿವಿಲೆಜ್ ಪ್ರಕಾರ ಕೆಲವು ವಿಶೇಷ ಸವಲತ್ತುಗಳನ್ನು ಉತ್ತರ ಕನ್ನಡ ಜಿಲ್ಲೆಯ ರೈತರಿಗೆ ನೀಡಲಾಗುತ್ತಿತ್ತು. ಅದನ್ನು ಮುಂದುವರಿಸುತ್ತೀರಾ ?

ಶ್ರೀ ಜಿ. ಎಸ್. ಬಾಗಲಕೋಟ್.—ಅನ್ಸಿಯಲ್ಲಿ ನ್ಯಾಷನಲ್ ಪಾರ್ಕ್ ಮಾಡುವ ವಿಚಾರದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಾ ಅದರ ಮಧ್ಯದಲ್ಲಿ ರೈತರು ಸಾಗುವಳಿ ಮಾಡುತ್ತಿದ್ದಾರೆ, ಅವರನ್ನು ಸಾಧ್ಯವಾದಷ್ಟು ಮಟ್ಟಿಗೆ ರಸ್ತೆಯ ಪಕ್ಕದಲ್ಲಿ ಬದಲಿ ವ್ಯವಸ್ಥೆ ಮಾಡುವಂತಹ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಮಾನ್ಯ ಸದಸ್ಯರು ಕೆನರಾ ಫಾರೆಸ್ಟ್ ಪ್ರಿವಿಲೇಜ್ ಬಗ್ಗೆ ಹೇಳಿದ್ದಾರೆ. ಅವರ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ೧೯೭೮ಕ್ಕಿಂತ ಪೂರ್ವದಲ್ಲೇ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರತಕ್ಕಂತಹ ರೈತರು ಇದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ೧೯೭೮ಕ್ಕಿಂತ ಪೂರ್ವದಲ್ಲೇ ಅತಿಕ್ರಮ ಪ್ರವೇಶ ಮಾಡಿ ಸಾಗುವಳಿ ಮಾಡುತ್ತಿದ್ದಂತಹ ರೈತರನ್ನು ಅಲ್ಲಿಂದ ಎಬ್ಬಿಸುವುದು ಬೇಡ ಎಂಬುದಾಗಿ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಬಿ. ಡಿ. ಬಸವರಾಜ್— ನನ್ನ ಕ್ಷೇತ್ರವಾದ ಸಕಲೇಶಪುರದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕು. ಕೇಂದ್ರ ಸರ್ಕಾರಕ್ಕೆ ೧೫ ಸಾವಿರ ಎಕರೆಯನ್ನು ಕಂದಾಯ ಇಲಾಖೆಯಿಂದ ಕೊಡುತ್ತೇವೆಂದು ಒಪ್ಪಿಗೆ ಕೊಟ್ಟಿದ್ದಾರೆ. ರೆವಿನ್ಯೂ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಹಾಗೂ ವಿಲೇಜ್ ಅಕೌಂಟೆಂಟ್ ಅವರುಗಳು ಮನೆಯಲ್ಲೇ ಕುಳಿತುಕೊಂಡು ತಮ್ಮ ಒಪ್ಪಿಗೆಯನ್ನು ಬರೆದುಕೊಟ್ಟಿದ್ದಾರೆ. ಇದರಿಂದಾಗಿ ಇವತ್ತು ಅರಣ್ಯ ಇಲಾಖೆಯವರು ಎಲ್ಲಿಯವರೆಗೆ ಬಂದಿದ್ದಾರೆಂದರೆ, ಊರಿನ ಗ್ರಾಮದ ಹಿಂದೆ ದನದ ಕೊಟ್ಟಿಗೆಗಳು ಇರುತ್ತವೆ. ಅಲ್ಲಿಗೆ ಒಂದು ತಂತಿ ಬೇಲಿಯನ್ನು ಹಾಕುತ್ತಿದ್ದಾರೆ. ಈ ವಿಚಾರವನ್ನು ಕಂದಾಯ ಸಚಿವರಲ್ಲೂ ತಿಳಿಸಿದ್ದೇನೆ. ಅದಕ್ಕವರು ಭೂಮಿಯನ್ನು ಬಿಟ್ಟುಕೊಡುವುದಕ್ಕೆ ನಿರ್ಧಾರ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ನಾನು ಅರಣ್ಯ ಇಲಾಖೆಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಸದ್ಯಕ್ಕೆ ಆ ಕೆಲಸವನ್ನು ನಿಲ್ಲಿಸಬೇಕು. ನೀವಿಬ್ಬರೂ ಒಟ್ಟಿಗೆ ಕುಳಿತು ಮಾತನಾಡಿಕೊಂಡು ಮುಂದೆ ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುವಿರಂತೆ. ಈ ಒಂದು ಕ್ರಮದಿಂದಾಗಿ ನಾವು ಆ ಪಟ್ಟಣದ ಸುತ್ತ ಒಂದು ಸೈಟನ್ನೂ ಕೂಡ ಬಡವರಿಗೆ ಕೊಡು

ವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಆ ಕೆಲಸವನ್ನು ನಿಲ್ಲಿಸುವ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟ್.— ಸನ್ಮಾನ್ಯ ಸದಸ್ಯರು ನನಗೆ ಆ ಬಗ್ಗೆ ವಿವರಗಳನ್ನು ಕೊಟ್ಟರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.— ಕರ್ನಾಟಕ ರಾಜ್ಯ ವರಪ್ರಸಾದವಾದ ಶ್ರೀಗಂಧ, ಬೀಟೆ, ಸಾಗುವಾನಿ ಇವುಗಳಿಗೆ ಹೆಸರುವಾಸಿಯಾಗಿದೆ. ಇಂತಹ ಒಳ್ಳೆಯ ಮರಗಳನ್ನು ಕಳ್ಳಸಾಗಣಿಕೆಯಾಗಿ ಕೇರಳಕ್ಕೆ ಕೊಂಡು ಹೋಗತಕ್ಕ ಪರಿಸ್ಥಿತಿ ಬಹಳ ಜಾಸ್ತಿಯಾಗಿದೆ. ಅವರಲ್ಲೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಪ್ರದೇಶದಲ್ಲಿರುವ ಚೆಕ್ ಪೋಸ್ಟ್‌ಗಳಿಂದ ಎತ್ತಿಕೊಂಡು ಹೋಗತಕ್ಕ ವಿಚಾರ ಆಗಾಗ ಪತ್ರಿಕೆಗಳಲ್ಲಿ ಓದಿದ್ದೇವೆ. ಕರ್ನಾಟಕ ರಾಜ್ಯದ ವರಪ್ರಸಾದ ಐಶ್ವರ್ಯವಾದ ಶ್ರೀಗಂಧವನ್ನು, ಆ ಬೀಟೆಯನ್ನು, ಹಾಗೂ ಸಾಗುವಾನಿಯನ್ನು ಕಳ್ಳಸಾಗಣಿಕೆಯಲ್ಲಿ ಹೋಗದ ಹಾಗೆ ಏನಾದರೂ ಉಗ್ರ ಕ್ರಮ ತೆಗೆದುಕೊಂಡರೆ ಒಳ್ಳೆಯದು. ಆ ಬಗ್ಗೆ ಪ್ರಯತ್ನ ಮಾಡುತ್ತೀರಾ ? ನಮ್ಮ ಉಳ್ಳಾಳ ಕ್ಷೇತ್ರದಲ್ಲಿ ಕಟ್ಟಿಗೆಯದು ಬಹಳ ಕಷ್ಟ ಇದೆ. ಅಲ್ಲಿಗೆ ಯಾರಾದರೂ ಬೇರೆ ಕಡೆಯಿಂದ ತಂದು ಕೊಡುವುದಕ್ಕೂ ಕೂಡ ನಿಮ್ಮ ಇಲಾಖೆಯ ಅಧಿಕಾರಿಗಳು ಪರ್ಮಿಟ್ ಕೊಡುತ್ತಿಲ್ಲ. ಅರಣ್ಯ ಇಲಾಖೆಯವರು ಇದನ್ನು ಗಮನಿಸಿ ಎಲ್ಲಿಂದಲಾದರೂ ತರಿಸಿ ಕೊಡುವಂತಹ ಕೆಲಸವನ್ನೂ ಕೂಡ ಮಾಡುತ್ತಿಲ್ಲ. ತಂದಂತಹವರ ಮೇಲೆ ಕೇಸು ಹಾಕುತ್ತಾರೆ. ಇದರಿಂದಾಗಿ ಇಡೀ ನನ್ನ ಕ್ಷೇತ್ರದಲ್ಲಿ ಕಟ್ಟಿಗೆ ಇಲ್ಲದೆ ಬಹಳ ತೊಂದರೆಯಾಗಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಸರಿಪಡಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ನಂತರ ತಮ್ಮ ಜಮೀನಿನಲ್ಲಿ ಇರತಕ್ಕ ಮರವನ್ನು ಸ್ವಂತ ಉಪಯೋಗಕ್ಕಾಗಿ ಕಡಿದರೆ ಅಂತಹವರ ಮೇಲೂ ನಿಮ್ಮ ಇಲಾಖೆಯ ಅಧಿಕಾರಿಗಳು ಕೇಸುಗಳನ್ನು ಹಾಕುತ್ತಿದ್ದಾರೆ. ದೊಡ್ಡ ದೊಡ್ಡ ಕಳ್ಳವ್ಯಾಪಾರಿಗಳನ್ನು ಬಿಟ್ಟು ಬಿಡುತ್ತಾರೆ. ನಿಮ್ಮ ಅಧಿಕಾರಿಗಳು ಇಂತಹ ಚಿಕ್ಕ ಚಿಕ್ಕ ಕಳ್ಳವ್ಯಾಪಾರಿಗಳನ್ನು ಹಿಡಿದು ಅವರ ಮೇಲೆ ಕೇಸು ಹಾಕುವುದು, ಅವರು ಮರವನ್ನು ಗಾಡಿಯಲ್ಲಿ ತೆಗೆದುಕೊಂಡು ಬರುತ್ತಿದ್ದರೆ, ಆ ಗಾಡಿಯನ್ನೂ ಸಹ ತೆಗೆದುಕೊಂಡು ಹೋಗುವುದು ಈ ರೀತಿ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯುವುದಕ್ಕೆ ಬದಲಾಗಿ ಸಣ್ಣ ಸಣ್ಣ ಮೀನುಗಳನ್ನು ಹಿಡಿದು ಅವರಿಗೆ ಕೇಸ್ ಕೊಡುತ್ತಿದ್ದಾರೆ. ಇದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕುತ್ತೀರಾ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.— ಶ್ರೀಗಂಧದ ಕಳ್ಳಸಾಗಾಣಿಕೆಯ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ನಮ್ಮ ರಾಜ್ಯದಲ್ಲಿರತಕ್ಕ ಶ್ರೀಗಂಧ ಹೊರಗಡೆಗೆ ಹೋಗದ ಹಾಗೆ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಅವರ ಕ್ಷೇತ್ರದಲ್ಲಿ ಕಟ್ಟಿಗೆಯ ಬಗ್ಗೆ ಇರತಕ್ಕ ಅಭಾವದ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಸ್ವಂತಕ್ಕಾಗಿ ಮರಗಳನ್ನು ಕಡಿದಂತಹ ಸಣ್ಣ ಸಣ್ಣ ರೈತರಿಗೆ ಇಲಾಖೆಯ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಅದರ ವಿವರಗಳನ್ನು ಮಾನ್ಯ ಸದಸ್ಯರು ನನಗೆ ಕೊಟ್ಟರೆ, ಆ ಬಗ್ಗೆ ಪರಿಶೀಲನೆ ಮಾಡಿ ಯೋಗ್ಯವಾದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.— ಬೆಳಗಾಂ ಜಿಲ್ಲೆಯ ಶ್ರೀ ಕ್ಷೇತ್ರದಲ್ಲಿ ರಾಷ್ಟ್ರೀಯ ಉದ್ಯಾನವನವನ್ನು ಮಾಡುವುದಾಗಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಇದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎರಡನೆಯದಾಗಿ ಅದೊಂದು ಪವಿತ್ರವಾದ ಕ್ಷೇತ್ರ. ದೇವರ ಕಾಡನ್ನು ರಕ್ಷಿಸುವ ಕ್ರಮ ತೆಗೆದುಕೊಳ್ಳಬೇಕು. ಮತ್ತು ಅಲ್ಲಿ ಸಾಕಷ್ಟು ಗುಡ್ಡಗಳು ಇವೆ. ಅಲ್ಲಿ ಹಣ್ಣಿನ ಗಿಡಗಳನ್ನು ಹಚ್ಚಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಎಸ್. ಬಾಗಲ್‌ಕೋಟ್.— ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಚರ್ಚೆ ಮತ್ತು ಉತ್ತರ ಮುಗಿಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ:—

" ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಬಂಧ ದಲ್ಲಿ ಸಂಬಂಧಿಸಿದಂಥ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಅಭಿಯಾಚನೆ ಕ್ರಮಾಂಕ ೨೪– ಅರಣ್ಯ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮,೯೨,೪೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೪,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು".

ಅಧ್ಯಕ್ಷರು.—ಈಗ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಶಿಕ್ಷಣ ಸಚಿವರ ಉತ್ತರ.

ಶ್ರೀ ಕೆ. ಎಚ್. ಪಾಟೀಲ್.—ನನಗೆ ಕೀರ್ತನಕಾರರ ಕಥೆ ಒಂದು ನೆನಪಿಗೆ ಬರುತ್ತಿದೆ. ಅವರು ಹರಿಕಥೆ ಮಾಡುತ್ತಿದ್ದರಂತೆ ಒಂದು ಕಥೆ. ಅಲ್ಲಿಗೆ ಬಂದಿದ್ದಂತಹ ಎಲ್ಲಾ ಜನರೂ ಹೊರಟು ಹೋದರಂತೆ. ಕೊನೆಗೆ ಒಬ್ಬನೇ ಒಬ್ಬ ಕುಳಿತಿದ್ದನಂತೆ. ಅವನನ್ನು ಕುರಿತು ಆ ಹರಿಕಥೆದಾಸ ಸಧ್ಯ ನೀನೊಬ್ಬನಾದರೂ ನನ್ನ ಹರಿಕಥೆಯನ್ನು ಕೇಳುತ್ತಿದ್ದೀಯಲ್ಲಾ ಸಂತೋಷ ಎಂದನಂತೆ. ಅದಕ್ಕೆ ಕುಳಿತ್ತಿದ್ದ ಒಬ್ಬನು ಹೇಳಿದನಂತೆ ನಾನು ನಿಮ್ಮ ಹರಿಕಥೆಯನ್ನು ಕೇಳುವುದಕ್ಕೆ ಕುಳಿತಿಲ್ಲ. ನೀವು ನಿಂತಿರುವ ಕಂಬಳಿ ನನ್ನದು, ಅದನ್ನು ತೆಗೆದುಕೊಂಡು ಹೋಗಲು ಕಾದಿದ್ದೇನೆ. ಅಂದನಂತೆ. ನಮ್ಮ ಪರಿಸ್ಥಿತಿ ಇವತ್ತು ಆ ರೀತಿಯಾಗಿದೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ ಅದಕ್ಕಾಗಿಯೇ ಅವರೆಲ್ಲರೂ ಇದ್ದಾರೆ. ಇಲ್ಲದಿದ್ದರೆ ನಾವೂ ನೀವೂ ಇಬ್ಬರೂ ಇರಬೇಕಾಗುತ್ತಿತ್ತು.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು).—ನಮ್ಮ ಇಲಾಖೆಯ ಬೇಡಿಕೆ ನಂ. ೧೫, ೧೬ ಇವುಗಳ ಮೇಲೆ ಸುಮಾರು ಚರ್ಚೆ ನಡೆದಿದೆ. ನಮ್ಮ ಇಲಾಖೆಯ ಮೇಲೆ ಪ್ರಪ್ರಥಮವಾಗಿ ಶ್ರೀಮಾನ್ ಜಿ. ಎಸ್. ಆಚಾರ್‌ರವರು ಬಹಳ ವಿಷಯಗಳನ್ನು ಸೂಕ್ಷ್ಮವಾಗಿ ಮಾತನಾಡಿದ್ದಾರೆ. ಅದೇ ರೀತಿ ಶ್ರೀಮಾನ್ ರಾಣೆಯವರು ಕೂಡ ಮಾತನಾಡಿದ್ದಾರೆ. ನಾನು ಶ್ರೀಮಾನ್ ಜಿ. ಎಸ್. ಆಚಾರ್‌ರವರು ಮಾತನಾಡುವಾಗ ಏನು ನಮ್ಮ ಇಲಾಖೆಯು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಏನು ಯೋಜನೆಗಳನ್ನು ಹಾಕಿಕೊಂಡಿದೆ ಅವರ ಬಗ್ಗೆ ಅವರಿಗೆ ಸ್ವಲ್ಪ ಅರಿವು ಇದೆ ಎಂಬುದಾಗಿ ನಾನಾದರೂ ತಿಳಿದುಕೊಂಡಿದ್ದೆ. ಆದರೆ ಅವರು ಮಾತನಾಡುವಾಗ ಟೀಕೆಯನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಟೀಕೆ ಮಾಡಿದ್ದಾರೆಂದರೆ ತಪ್ಪಾಗಲಾರದು. ಆದರೂ ಸಹ ನಾನು ಅದನ್ನು ಟೀಕೆಯನ್ನಾಗಿ ತಿಳಿದುಕೊಳ್ಳದೆ

ನಮ್ಮ ಇಲಾಖೆಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೇನೆ. ಅದೇ ರೀತಿ ಇನ್ನೂ ಹಲವು ಮಾನ್ಯ ಸದಸ್ಯರು ಹೇಳತಕ್ಕ ವಿಷಯಗಳ ಬಗ್ಗೆ ನಂತರ ಬರುತ್ತೇನೆ. ಈಗಾಗಲೇ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನನ್ನ ಸಹೋದ್ಯೋಗಿ ಮಿತ್ರರು ಹೇಳಿದ್ದಾರೆ. ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತದಲ್ಲಿ ಕೆಲಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಅದೇ ರೀತಿ ಅನೇಕ ಯೋಜನೆಗಳನ್ನು ಕೂಡ ಹಾಕಿಕೊಂಡಿದ್ದೇವೆ. ಅವುಗಳನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಅದರ ಜೊತೆಗೆ ಇನ್ನೂ ಕೆಲವು ಹೊಸ ಯೋಜನೆಗಳನ್ನು ೧೯೮೮—೮೯ನೇ ಸಾಲಿನಲ್ಲಿ ನಾನು ತೆಗೆದುಕೊಂಡಿದ್ದೇವೆ; ಶಿಕ್ಷಣ ಇಲಾಖೆಗೆ ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೊಟ್ಟಂತಹ ಮಹತ್ವವನ್ನು ಬಹುಶಃ ಹಿಂದೆ ಯಾವುದೇ ಸರ್ಕಾರವಾಗಲಿ ಕೊಟ್ಟಿರಲಿಲ್ಲ. ಅಂತ ಹೇಳಿದರೆ ತಪ್ಪಾಗಲಾರದು, ನಾವು ಅಧಿಕಾರಕ್ಕೆ ಬಂದಾಗ ಶಿಕ್ಷಣ ಇಲಾಖೆಗೆ ೨೦೦—೨೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಆದರೆ ಇವತ್ತು ೬೬೦ ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ. ನಂತರ ಎಷ್ಟೋ ಕಾರ್ಯಕ್ರಮಗಳನ್ನು ಹೊಸದಾದ ಯೋಜನೆಗಳನ್ನು ನಾವು ತಂದಿದ್ದೇವೆ, ನಮ್ಮ ರಾಜ್ಯದ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವ ದಿಕ್ಕಿನಲ್ಲಿ ಮತ್ತು ಅದರ ಒಂದು ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಹಳ್ಳಿಗಾಡಿನ ಪ್ರದೇಶದಲ್ಲಿರುವ ಮಕ್ಕಳಿಗೆ ವಿದ್ಯಾಭ್ಯಾಸವನ್ನು ದೊರಕಿಸಿ ಕೊಡುವ ಒಂದು ದಿಕ್ಕಿನಲ್ಲಿ ಅನೇಕ ಸುಧಾರಣೆಗಳನ್ನು ನಾವು ಶಿಕ್ಷಣ ಮಾಡಿದ್ದೇವೆ. ಅದರಲ್ಲೂ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಯಶಸ್ವಿಯನ್ನಾಗಿ ಮಾಡಬೇಕಾದರೆ ಮತ್ತು ಅದರಲ್ಲಿ ಹೆಚ್ಚಿನ ಅನುಕೂಲ ಹಳ್ಳಿಗಾಡಿನಲ್ಲಿ ಮಕ್ಕಳಿಗೆ ಆಗಬೇಕಾದರೆ, ಉನ್ನತವಾದಹಾಗೂ ಉತ್ತಮವಾದ ಮಟ್ಟವನ್ನು ಹೆಚ್ಚಿಸಬೇಕಾದರೆ ನಾವು ಪ್ರಪ್ರಥಮವಾಗಿ ಪ್ರಾಥಮಿಕ ಹಂತದಲ್ಲಿ ಶಿಕ್ಷಕರು ಏನು ಇದ್ದಾರೆ. ಪ್ರೌಢ ಶಾಲಾ ಹಂತದಲ್ಲಿ ಶಿಕ್ಷಕರು ಏನು ಇದ್ದಾರೆ, ಅವರನ್ನು ಉತ್ತಮವಾದ ಶಿಕ್ಷಕರನ್ನಾಗಿ ತಯಾರು ಮಾಡುವುದಕ್ಕೆ ನಾವು ಒಂದು ಕಾರ್ಯಕ್ರಮವನ್ನು ಹಾಕಿದ್ದೇವೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕಾದರೆ, ಆ ಮಕ್ಕಳಿಗೆ ಶಿಕ್ಷಣವನ್ನು ಕೊಡತಕ್ಕಂತಹ ಶಿಕ್ಷಕರು ಅವರು ಮೊದಲು ಒಳ್ಳೆಯ ಶಿಕ್ಷಕರಾಗಿರಬೇಕು. ಆ ದೃಷ್ಟಿಯಿಂದ ನಾವು ಎಂತಹ ಶಿಕ್ಷಕರನ್ನು ನೇಮಕ ಮಾಡಿದ್ದರೂ ಕೂಡ ಅವರಿಗೆ ಉತ್ತಮವಾದ ತರಬೇತಿಯನ್ನು ಕೊಡತಕ್ಕಂತಹದ್ದು ಒಂದು ಇದರಿಂದ ಅವರನ್ನು ಒಳ್ಳೆಯ ಶಿಕ್ಷಕರನ್ನಾಗಿ ಮಾಡತಕ್ಕಂತಹದ್ದು, ಈ ರೀತಿಯ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದೊಂದು ಬೃಹತ್ ಕಾರ್ಯಕ್ರಮ, ಇದರಲ್ಲಿ ನಾವು ಈ ವರ್ಷ ನಮ್ಮ ರಾಜ್ಯದಲ್ಲಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಮೂಲಕ ನಾವು ಈಗಾಗಲೇ ಸುಮಾರು ೨೨.೪೮೭ ಜನ ಶಿಕ್ಷಕರಿಗೆ ತರಬೇತಿಯನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ ೫೭ ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಅದರಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಶಿಕ್ಷಕರು ಮತ್ತು ಅವರ ಪ್ರತಿನಿಧಿಗಳು ಅವರಿಗೆ ತರಬೇತಿಯನ್ನು ಕೊಟ್ಟು ಅವರನ್ನು ಒಳ್ಳೆಯ ಶಿಕ್ಷಕರನ್ನಾಗಿ ತಯಾರು ಮಾಡಬೇಕೆಂಬ ಉದ್ದೇಶದಿಂದ ಅವರಿಗೆ ತರಬೇತಿಯನ್ನು ಕೊಡುವಂತಹ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ.

ಒಟ್ಟು ೪೮೪ ಶಾಲೆಗಳಲ್ಲಿ ಶಿಕ್ಷಕರನ್ನು ತಯಾರು ಮಾಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಪ್ರಾಥಮಿಕ ಶಾಲೆಗಳಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅನೇಕ ಸವಲತ್ತುಗಳು ಶಾಲಾ ಕಟ್ಟಡಗಳು ಅದಕ್ಕೆ ಬೇಕಾದ ಪಾಠೋಪಕರಣ, ಪೀಠೋಪಕರಣಗಳು ನಮ್ಮಲ್ಲಿ ಇಲ್ಲ. ಅದಕ್ಕೋಸ್ಕರ ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಹಂತ ಹಂತವಾಗಿ ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಉತ್ತಮಪಡಿಸುವ ದೃಷ್ಟಿಯಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಪ್ರಪ್ರಥಮವಾಗಿ ಕೇಂದ್ರಸರ್ಕಾರದ ಹೊಸ ಎಜುಕೇಶನ್ ಪಾಲಿಸಿಯಂತೆ ಕಪ್ಪು ಹಲಗೆ ಯೋಜನೆಯನ್ನು ಹಾಕಿಕೊಂಡಿದ್ದೇವೆ. ೧೯೮೭–೮೮ನೇ ಸಾಲಿನಲ್ಲಿ ೧೯ ತಾಲ್ಲೂಕುಗಳಲ್ಲಿ ೧೯ ಶಿಕ್ಷಣ ರೇಂಜ್‌ಗಳಲ್ಲಿ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಶಾಲೆಯ ಕಟ್ಟಡ ಒಂದೂ ಇಲ್ಲದೆ ಇರುವ ಕಡೆ ಎರಡು ಕಟ್ಟಡಗಳನ್ನು ಒಂದು ಕಟ್ಟಡ ಇರುವ ಕಡೆ ಮತ್ತೊಂದು ಕಟ್ಟಡವನ್ನು ಕಟ್ಟಿಸತಕ್ಕ ಕಾರ್ಯಕ್ರಮವಿದೆ. ಅದೇರೀತಿ ಏಕೋಪಾಧ್ಯಾಯ ಶಾಲೆಗಳಿಗೆ ಮತ್ತೊಬ್ಬ ಶಿಕ್ಷಕರನ್ನು ಕೊಡತಕ್ಕದ್ದು ಅದರ ಜೊತೆಗೆ ಮಹಿಳಾ ಶಿಕ್ಷಕರನ್ನು ಕೊಡತಕ್ಕದ್ದು ಇದೆ.

ಶ್ರೀ ಕೆ. ಹೆಚ್. ಪಾಟೀಲ್.— ಸರಿಯಾಗಿ ಹಣವನ್ನು ಪ್ರೊವೈಡ್ ಮಾಡಿಲ್ಲ ಹೇಗೆ ಕಟ್ಟಡ ಕಟ್ಟುತ್ತೀರಿ ?

ಶ್ರೀ ಬಿ. ಸೋಮಶೇಖರ್.—ಅದನ್ನು ನಾನು ಹೇಳುತ್ತೇನೆ. ಕಪ್ಪು ಹಲಗೆ ಯೋಜನೆಯಲ್ಲಿ ಶಾಲೆಗೆ ಹೊಸದಾಗಿ ಬೇಕಾಗಿರತಕ್ಕ ಪಾಠೋಪಕರಣ, ಪೀಠೋಪಕರಣ, ಆಟೋಪಕರಣ ಕೊಡತಕ್ಕದ್ದು ಇದೆ. ೧೯೮೭-೮೮ರನೇ ಸಾಲಿನಲ್ಲಿ ಶೇಕಡ ೨೦ರಷ್ಟು ತಾಲ್ಲೂಕುಗಳನ್ನು ತೆಗೆದುಕೊಂಡಿದ್ದೇವೆ. ೧೯೮೮-೮೯ನೇ ಸಾಲಿನಲ್ಲಿ ಶೇಕಡ ೩೫ರಷ್ಟು ಮುಂದಿನ ವರ್ಷ ಶೇಕಡ ೫೦ರಷ್ಟು ಒಟ್ಟಿನಲ್ಲಿ ೧೯೯೦ರಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಶಾಲೆಗಳಿಗೆ ಕೊನೆಯ ಪಕ್ಷ ಎರಡು ಕಟ್ಟಡಗಳನ್ನು ಕಟ್ಟತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರಿಂದ ಎಷ್ಟೋ ಸುಧಾರಣೆಯಾಗಬಹುದೆಂದು ನಾನು ಆಸೆಯನ್ನು ಇಟ್ಟುಕೊಂಡಿದ್ದೇನೆ. ಈ ವರ್ಷ ೬ ಕೋಟಿ ೯೬ ಲಕ್ಷ ಸುಮಾರು ೭ ಕೋಟಿ ರೂಪಾಯಿ ವೆಚ್ಚದಲ್ಲಿ ಶಾಲಾ ಕಟ್ಟಡ ಕಟ್ಟಿಸತಕ್ಕ ಕಾರ್ಯಕ್ರಮಕ್ಕೆ ಹಣವನ್ನು ಖರ್ಚು ಮಾಡಿದ್ದೇವೆ. ಶಾಲೆಗಳಿಗೆ ಬೇಕಾಗಿರತಕ್ಕ ಶಿಕ್ಷಕರ ಸಂಖ್ಯೆ ೧೬೦೦. ಶಿಕ್ಷಕರನ್ನು ನೇಮಕ ಮಾಡುತ್ತಿದ್ದೇವೆ. ಅದಕ್ಕಾಗಿ ೩೬ ಲಕ್ಷದ ೨೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಶಾಲೆಗಳಿಗೆ ಬೇಕಾಗಿರತಕ್ಕ ಪಾಠೋಪಕರಣ, ಪೀಠೋಪಕರಣ, ಆಟೋಪಕರಣಗಳನ್ನು ಒದಗಿಸಲಿಕ್ಕೆ ೧ ಕೋಟಿ ೩೨ ಲಕ್ಷದ ೪೨ ಸಾವಿರ ರೂಪಾಯಿಗಳನ್ನು ಖರ್ಚುಮಾಡಲಿದ್ದೇವೆ. ಇದೆಲ್ಲಾ ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಬರುತ್ತದೆ. ಅನೌಪಚಾರಿಕ ಶಿಕ್ಷಣಕ್ಕೋಸ್ಕರ ಹಣವನ್ನು ವೆಚ್ಚ ಮಾಡುತ್ತಿದ್ದೇವೆ. ಹಳ್ಳಿಗಾಡಿನಲ್ಲಿರತಕ್ಕ ದೀನದಲಿತರ ಮಕ್ಕಳು ಶಾಲೆಗೆ ಸೇರಿದ ಮೇಲೆ ಸಂಪೂರ್ಣವಾದ ವಿದ್ಯಾಭ್ಯಾಸವನ್ನು ಮಾಡುವುದು ಬಹಳ ಕಷ್ಟವಾಗುತ್ತದೆ. ಒಂದನೆಯ ತರಗತಿಗೆ ಸೇರಿದಂತಹ ಮಕ್ಕಳು ಅವರು ಏಳನೇ ತರಗತಿಗೆ ಬರುವುದರೊಳಗೆ ಶಾಲೆಯನ್ನು ಬಿಟ್ಟು ಹೋಗತಕ್ಕ ಮಕ್ಕಳ ಸಂಖ್ಯೆ ಶೇಕಡ ೬೮ರಷ್ಟು. ನಾಲ್ಕನೇ ತರಗತಿಗೆ ಬರುವುದರೊಳಗೆ ಶೇಕಡ ೫೦ರಷ್ಟು ಮಕ್ಕಳು ಶಾಲೆಯನ್ನು ಬಿಟ್ಟು ಹೋಗುತ್ತಾರೆ. ಶಾಲೆಯನ್ನು ಬಿಟ್ಟುಹೋಗಲಿಕ್ಕೆ ಕಾರಣ ನಮ್ಮ ಆರ್ಥಿಕ ಪರಿಸ್ಥಿತಿ. ಹಳ್ಳಿಗಾಡಿನಲ್ಲಿ ಮಕ್ಕಳು ವಯಸ್ಸಿಗೆ ಬಂದ ತಕ್ಷಣ ಅವರ ತಂದೆ ತಾಯಿಗಳು ಹಣವನ್ನು ಸಂಪಾದನೆ ಮಾಡತಕ್ಕ ಸಣ್ಣಪುಟ್ಟ ಕೆಲಸಗಳಿಗೆ, ಕೂಲಿ ಕೆಲಸಗಳಿಗೋಸ್ಕರ ಶಾಲೆಯನ್ನು ಬಿಡಿಸುತ್ತಾರೆ. ಅಂತಹ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ, ಶಾಲೆಗೆ ಬಂದು ಯಾರು ಕಲಿಯಲಿಕ್ಕೆ ಅವಕಾಶವಿಲ್ಲವೋ ಅಂತಹವರಿಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲೂ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅಕ್ಷರಸೇನೆ ಕಾರ್ಯಕ್ರಮವನ್ನು ತೆಗೆದುಕೊಂಡು ಅನೇಕ ಕೇಂದ್ರಗಳನ್ನು ತೆರೆದಿದ್ದೇವೆ. ಈವೊಂದು ಕೇಂದ್ರಗಳಿಗೆ ಬೆಂಬಲವಾಗಿ ಕೇಂದ್ರಸರ್ಕಾರದ ಯೋಜನೆಯಂತೆ ಈ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಅನೌಪಚಾರಿಕ ಶಿಕ್ಷಣ ಹೊಸ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದಕ್ಕಾಗಿ ತಗಲತಕ್ಕ ವೆಚ್ಚ ಸುಮಾರು ೨೪ ಲಕ್ಷ ಅದಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ ಹಣವನ್ನು ರಿಲೀಸ್ ಮಾಡಿದ್ದೇವೆ. ಒಟ್ಟು ೮೯ ಲಕ್ಷ ರೂಪಾಯಿ ಯೋಜನೆ ತಯಾರಾಗಿದೆ. ಹಳ್ಳಿಗಾಡಿನಲ್ಲಿ ಪ್ರೌಢಶಾಲೆಗಳು ಇದ್ದರೆ ಅದಕ್ಕೆ ಬೇಕಾಗಿರತಕ್ಕ ಲಾಬೊರೇಟರಿ ಇಲ್ಲ. ವಿಜ್ಞಾನದ ಶಿಕ್ಷಣಕ್ಕೋಸ್ಕರ ವಿಷಯಗಳನ್ನು ಕಲಿಸುವುದಕ್ಕೆ ಬೇಕಾಗಿರತಕ್ಕಂಥ ಸಲಕರಣೆಗಳು ನಮ್ಮಲ್ಲಿ ಇಲ್ಲ. ಅದಕ್ಕೆ ಒಂದು ಹೊಸ ಯೋಜನೆಯನ್ನು ಮಾಡಿದ್ದೇವೆ. ಅದು ಸೈನ್ಸ್ ಕಿಟ್‌ಗಳನ್ನು ಕೊಡತಕ್ಕಂಥ ಯೋಜನೆ. ಇದರಲ್ಲಿ ನಮ್ಮ ಇಡೀ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಪ್ರೌಢಶಾಲೆಗಳಲ್ಲಿ ಹಂತ ಹಂತವಾಗಿ ಈ ಒಂದು ಸೈನ್ಸ್‌ಕಿಟ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ ಒಟ್ಟು ಎಂಟು ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಇದರಲ್ಲಿ ಈ ವರ್ಷ ಈಗಾಗಲೇ ಶೇಕಡಾ ೨೫ರಷ್ಟು ಶಾಲೆಗಳಿಗೆ ಈ ವರ್ಷ ವಿಸ್ತರಿಸುತ್ತಿದ್ದೇವೆ, ಇನ್ನು ಶೇಕಡಾ ೩೦ರಷ್ಟು ಮುಂದಿನ ವರ್ಷ ಮತ್ತು ಶೇಕಡಾ ೩೮ರಷ್ಟು ೮೯-೯೦ರಲ್ಲಿ ಒಟ್ಟು ಮೂರು ವರ್ಷಗಳ ಅವಧಿಯಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಮತ್ತು ಪ್ರೌಢಶಾಲೆಗಳಿಗೆ ವಿಜ್ಞಾನ ಸಲಕರಣೆಗಳನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಪ್ರತಿಯೊಂದು ಪ್ರಾಥಮಿಕ ಶಾಲೆಗೆ ವೀಡಿಯೋ ಕ್ಯಾಸೆಟ್ ಕೊಡತಕ್ಕಂಥ ಕಾರ್ಯಕ್ರಮ ಇದೆ. ಅಂದರೆ ಪ್ರತಿಯೊಂದು ಶಾಲೆಗೂ ವಿಡಿಯೋ ಕ್ಯಾಸೆಟ್ ಮುಖಾಂತರ ಶಿಕ್ಷಣವನ್ನು ಕೊಡತಕ್ಕಂಥ ಕಾರ್ಯಕ್ರಮ. ಈ ವರ್ಷ ಶೇಕಡಾ ೨೫ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸುತ್ತಿದ್ದೇವೆ. ಇನ್ನು ಮುಂದಿನ ವರ್ಷ ಶೇಕಡಾ ೭೫ರಷ್ಟು ಈ ಯೋಜನೆಯ ಅಡಿಯಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಈ ಸೌಲಭ್ಯವನ್ನು ಒದಗಿಸುತ್ತಿದ್ದೇವೆ, ನಂತರ ಸೆಂಟರ್ ಆಫ್ ಟೀಚರ್ಸ್ ಎಜ್ಯುಕೇಷನ್ ಅಂತ ಹೇಳಿ ಅದಕ್ಕೋಸ್ಕರ ೯೨ ಲಕ್ಷ ರೂಪಾಯಿ

ಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ಪರಿಶಿಷ್ಟ ಪಂಗಡದವರ ಮಕ್ಕಳಿಗೋಸ್ಕರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅವರ ಶಿಕ್ಷಣ ಅಭಿವೃದ್ಧಿಗೋಸ್ಕರ ಒಂದು ಹೊಸ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದಕ್ಕೆ ತಗಲತಕ್ಕಂಥ ವೆಚ್ಚ ಒಟ್ಟು ೧ ಲಕ್ಷ ೩೬ ಸಾವಿರ ರೂಪಾಯಿಗಳು. ಮತ್ತೊಂದು ಹೊಸ ಕಾರ್ಯಕ್ರಮ ಎಂದರೆ ನೀತಿಯ ಶಿಕ್ಷಣ. ಚಿಕ್ಕಂದಿನಲ್ಲೇ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಮೌಲ್ಯ ಶಿಕ್ಷಣವನ್ನು ಮೈಗೂಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ತರಬೇಕು. ಅದಕ್ಕೋಸ್ಕರವಾಗಿ ಪಠ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ನೀತಿಬೋಧನೆಯನ್ನು ಮಾಡುವ. ಅವರನ್ನು ಉತ್ತಮ ಪ್ರಜೆಗಳನ್ನಾಗಿ ತಯಾರು ಮಾಡತಕ್ಕಂಥ, ಕೆಲವು ರಾಷ್ಟ್ರೀಯ ಮೌಲ್ಯಗಳು ಅಡಕವಾಗಿರತಕ್ಕಂಥ ಪಠ್ಯಕ್ರಮವನ್ನು ತಯಾರು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಡಾಕ್ಟರ್ ಎಚ್. ನರಸಿಂಹಯ್ಯ ಕಮಿಟಿಯ ವರದಿ ಬಂದಮೇಲೆ ಇದರಲ್ಲಿ ಉತ್ತಮ ಪ್ರಜೆಗಳು ಆಗಬೇಕಾದರೆ ಮೊದಲು ಉತ್ತಮ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕೆಂದು ಇದೆ ರಾಷ್ಟ್ರೀಯ ಮನೋಭಾವನೆ, ಪ್ರಾಮಾಣಿಕತೆ, ನಿಷ್ಠೆ, ದುಡಿದು ಕೆಲಸ ಮಾಡತಕ್ಕಂಥ ಮನೋಪ್ರವೃತ್ತಿಯನ್ನು ಅವರಲ್ಲಿ ಮೂಡಿಸಬೇಕಾದರೆ ಎಂತಹ ಪಠ್ಯಕ್ರಮವನ್ನು ತಯಾರು ಮಾಡಬೇಕೆಂದು ಅದಕ್ಕೋಸ್ಕರವಾಗಿ ನಾವು ಸುಮಾರು ೫ ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಕೆಲಸವನ್ನು ಮಾಡುತ್ತಿದ್ದೇವೆ. ಇನ್ನು ಮಕ್ಕಳಲ್ಲಿ ಪರಿಸರ ಬಗ್ಗೆ ಚಿಂತನೆ ಮೂಡಬೇಕು. ಅರಣ್ಯ ಬೆಳೆಸತಕ್ಕಂಥ ಯೋಜನೆ ಇದೆ. ಸಾಮಾಜಿಕ ಅರಣ್ಯವನ್ನು ಬೆಳೆಸುವ ಯೋಜನೆ ಸಣ್ಣ ಮಕ್ಕಳಲ್ಲಿ ಬರಬೇಕು. ಅದಕ್ಕೋಸ್ಕರ ಎನ್‌ವೈರ್ನ್‌ಮೆಂಟ್ ಎಜ್ಯುಕೇಶನ್ ಅಂತ ಹೇಳಿ ೬ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಅದರಲ್ಲಿ ಆಯಾಯ ಶಾಲೆಗಳಲ್ಲಿ ನರ್ಸರಿಗಳನ್ನು ಮಾಡತಕ್ಕಂಥದ್ದು, ಗಿಡಮರಗಳನ್ನು ಬೆಳೆಸತಕ್ಕದ್ದು ಮತ್ತು ಪರಿಸರದ ಬಗ್ಗೆ ಮಕ್ಕಳಿಗೆ ಹೆಚ್ಚಿನ ವಿಷಯಗಳನ್ನು ತಿಳಿಸತಕ್ಕಂಥ ಪಠ್ಯಕ್ರಮವನ್ನು ತಯಾರು ಮಾಡತಕ್ಕಂಥ ಒಂದು ಕಾರ್ಯಕ್ರಮ. ಅದಕ್ಕೋಸ್ಕರ ೬ ಕೋಟಿ ೨೪ ಲಕ್ಷ ವೆಚ್ಚ ಮಾಡುತ್ತಿದ್ದೇವೆ. ನಂತರ ವೃತ್ತಿಶಿಕ್ಷಣದ ಬಗ್ಗೆ ಒಂದು ಮಹತ್ತರವಾದ ಯೋಜನೆಯನ್ನು ತಯಾರು ಮಾಡಿದ್ದೇವೆ. ಇದರಲ್ಲಿ ಈ ವರ್ಷ ಸುಮಾರು ೮ ಕೋಟಿ ವೆಚ್ಚದಲ್ಲಿ ಒಂದು ಯೋಜನೆಯನ್ನು ಮಾಡಿ ೨೬೦ ಕೋರ್ಸುಗಳನ್ನು ೧೭೫ ಕಿರಿಯ ಕಾಲೇಜುಗಳಲ್ಲಿ ತೆರೆಯುತ್ತಿದ್ದೇವೆ. ಇದರಿಂದ ಸುಮಾರು ೮ ಸಾವಿರ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರವೇಶಾವಕಾಶ ಸಿಗುತ್ತದೆ. ಇದರ ಉದ್ದೇಶ ನಮ್ಮ ಕೇಂದ್ರ ಸರ್ಕಾರದ ನೀತಿಯ ಅಡಿಯಲ್ಲಿ ೧೯೯೦ರೊಳಗೆ ಈ ಎರಡನೇ ಹಂತ, ಪ್ಲಸ್ ೨ ಲೆವೆಲ್‌ನಲ್ಲಿ ವಿದ್ಯಾರ್ಥಿಗಳು ಏನು ಬರುತ್ತಾರೆ, ಅವರಲ್ಲಿ ಶೇಕಡಾ ೧೦ರಷ್ಟು ವಿದ್ಯಾರ್ಥಿಗಳನ್ನು ಈ ವೃತ್ತಿಪರ ಶಿಕ್ಷಣಕ್ಕೆ ಡೈವರ್ಶನ್ ಆಗಬೇಕಾಗಿದೆ. ನಮ್ಮ ರಾಷ್ಟ್ರದ ಅಂಕಿ ಅಂಶಪ್ರಕಾರ ಇದು ಶೇಕಡಾ ೨ರಷ್ಟು ಮಾತ್ರ ಇದೆ. ಪಿ.ಯು.ಸಿ. ಯಾರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಅಂತಹವರು ಶೇಕಡಾ ೨ರಷ್ಟು ಮಾತ್ರ ವೃತ್ತಿಶಿಕ್ಷಣದಲ್ಲಿದ್ದಾರೆ.

ನಮ್ಮ ಟಾರ್‌ಗೇಟ್ ಇರತಕ್ಕಂಥಾದ್ದು ೧೯೯೦ನೇ ಇಸವಿಯಷ್ಟರೊಳಗೆ ೧೦ ಪರ್ಸೆಂಟ್‌ನಷ್ಟು ಮತ್ತು ೧೯೯೫ನೇ ಇಸವಿಯಷ್ಟರೊಳಗೆ ಅದು ೨೫ ಪರ್ಸೆಂಟ್‌ಗೆ ಹೆಚ್ಚು ಮಾಡತಕ್ಕಂಥಾದ್ದು. ಈ ಒಂದು ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ನಾವು ಹಮ್ಮಿಕೊಂಡಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಷ್ಟ್ರಮಟ್ಟದಲ್ಲಿ ಇದು ಶೇಕಡ ಒಂದು ಪರ್ಸೆಂಟ್‌ನಷ್ಟು ಮಾತ್ರ ಇದೆ. ಅವರಿಗಿಂತ ನಾವು ಜಾಸ್ತಿ ಇದ್ದೇವೆ. ಇನ್ನು ಎರಡು ವರ್ಷಗಳಲ್ಲಿ ನಮ್ಮ ಗುರಿಯನ್ನು ನಾವು ಸಾಧಿಸುತ್ತೇವೆ ಎನ್ನುವ ವಿಶ್ವಾಸ ನನಗಿದೆ. ಇನ್ನು ವೊಕೇಷನಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ ಈ ವೊಕೇಷನಲ್ ಎಜುಕೇಷನ್ ಕೋರ್ಸ್‌ಗಳನ್ನು ಕಾಲೇಜುಗಳಲ್ಲಿ ತೆರೆಯತಕ್ಕಂಥ ಕಾರ್ಯಕ್ರಮ ಒಂದನ್ನು ನಾವು ಹಾಕಿಕೊಂಡಿದ್ದೇವೆ. ಈ ವೊಕೇಷನಲ್ ಎಜುಕೇಷನ್ ಪಾಸು ಮಾಡಿಕೊಂಡಂತಹ ವಿದ್ಯಾರ್ಥಿಗಳಿಗೆ ಕೆಲಸಕ್ಕೆ ಸೇರುವ ಒಂದು ಅವಕಾಶ ಸಿಗುತ್ತದೆ. ಯಾರು ವೃತ್ತಿ ಶಿಕ್ಷಣವನ್ನು ಪಡೆದಿರುತ್ತಾರೋ ಅಂತಹವರಿಗೆ ನಿರುದ್ಯೋಗದ ಸಮಸ್ಯೆ ಇರುವುದಿಲ್ಲ. ನಾವು ವೃತ್ತಿ ಶಿಕ್ಷಣಕ್ಕೆ ಕಾಲೇಜು ಮಟ್ಟದಲ್ಲಿ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಬೇಕಾಗುತ್ತದೆ: ತದನಂತರ ನಾನು ವಯಸ್ಕರ ಶಿಕ್ಷಣದ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಡಿಮೆ ಇದೆ. ರಾಷ್ಟ್ರಮಟ್ಟದಲ್ಲಿ ಅಕ್ಷರಸ್ಥರು ಸುಮಾರು ೩೬ ಪರ್ಸೆಂಟ್ ಇದ್ದರೆ ನಮ್ಮ ರಾಜ್ಯದಲ್ಲಿ ಅದು ಸುಮಾರು ೩೮ ಪರ್ಸೆಂಟ್ ಇದೆ. ಆದರೆ ನಮ್ಮ ರಾಜ್ಯದ ಸುಮಾರು ೮ ಜಿಲ್ಲೆಗಳಲ್ಲಿ ಈ ಅಕ್ಷರಸ್ಥರ ಸಂಖ್ಯೆ ಕಡಿಮೆ ಇದೆ ಎಂದು ನಮಗೆ ಮನವರಿಕೆಯಾಗಿದೆ. ಈ ಜಿಲ್ಲೆಗಳಲ್ಲಿ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸೂಕ್ತ

ಕಾರ್ಯಕ್ರಮಗಳನ್ನು ಹಾಕಿಕೊಂಡು ಅಕ್ಷರಸ್ಥರನ್ನಾಗಿ ಮಾಡಬೇಕಾಗಿದೆ. ಅನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ವಯಸ್ಕರ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲಾಗುವುದು. ನಮ್ಮ ರಾಜ್ಯದಲ್ಲಿ ಒಟ್ಟು ಸುಮಾರು ೮೩ ಲಕ್ಷ ೮೩ ಸಾವಿರ ಜನ ನಿರಕ್ಷರಸ್ಥರು ಇದ್ದಾರೆ. ಇವರೆಲ್ಲರನ್ನು ೧೯೯೫ನೇ ಇಸವಿಯುಷ್ಟರೊಳಗೆ ಅಕ್ಷರಸ್ಥನ್ನಾಗಿ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಲಿದೆ. ಇದುವರೆವಿಗೂ ನಮ್ಮ ರಾಜ್ಯದಲ್ಲಿ ಅಕ್ಷರಸ್ಥನ್ನಾಗಿ ಮಾಡಿರುವುದು ಕೇವಲ ೩೪ ಲಕ್ಷ ೧೭ ಸಾವಿರ ಜನರನ್ನು ಮಾತ್ರ. ಕೇಂದ್ರ ಸರ್ಕಾರದ ಒಂದು ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರ ಸಹ ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅಕ್ಷರ ಸೇನೆ, ಮತ್ತು ಸಾಕ್ಷರತಾ ಕಾರ್ಯಗಳನ್ನು ಹಾಕಿಕೊಂಡು ಸುಮಾರು ೬೦ ಪರ್ಸೆಂಟ್‌ನಷ್ಟು ನಿರಕ್ಷರಸ್ಥರನ್ನು ಅಕ್ಷರಸ್ಥನ್ನಾಗಿ ಮಾಡಿದೆ. ಇದರಲ್ಲಿ ಹರಿಜನ ಮತ್ತು ಗಿರಿಜನರು ಸುಮಾರು ಹನ್ನೊಂದು ಪರ್ಸೆಂಟ್‌ನಷ್ಟು ಜನ ಇದ್ದಾರೆ. ಇನ್ನು ಒಂದು ಪ್ರಾಮುಖ್ಯವಾದ ವಿಚಾರವನ್ನು ನಾನು ಸಭೆಯ ಗಮನಕ್ಕೆ ತರಬಯಸುವುದೇನೆಂದರೆ ಶಾಲೆಗಳ ಸೂಪರ್ ವೈಜ್ ಮಾಡುವ ಕಾರ್ಯಕ್ರಮವನ್ನು ಚುರುಕುಗೊಳಿಸುವ ಕೆಲಸ ಸರ್ಕಾರ ಮಾಡಬೇಕಾಗಿದೆ. ಈಗ ಒಬ್ಬ ಸುಮಾರು ೩೦ ಸೆಂಟರ್ಸ್‌ಗಳನ್ನು ಸೂಪರ್ ವೈಜ್ ಮಾಡಬೇಕಾಗಿದೆ. ಆದ್ದರಿಂದ ಎಲ್ಲಾ ಶಾಲೆಗಳನ್ನು ಸೂಪರ್‌ವೈಸ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅನೇಕ ಜನ ಮಾನ್ಯ ಸದಸ್ಯರು ನನಗೆ ದೂರುಗಳನ್ನು ಕೊಟ್ಟಿದ್ದರಿಂದ, ಮತ್ತು ಸರಿಯಾದ ಪೀಠೋಪಕರಣಗಳು ಇಲ್ಲ, ಸರಿಯಾಗಿ ಪಾಠ ಪ್ರವಚನಗಳು ನಡೆಯುತ್ತಿಲ್ಲ ನೀವು ಬರೀ ಸಂಬಳ ಮಾತ್ರ ಅವರಿಗೆ ಕೊಡುತ್ತಿದ್ದೀರಿ ವಿದ್ಯಾರ್ಥಿಗಳಿಗೆ ಅನುಕೂಲವಿಲ್ಲವೆಂದು ದೂರುಗಳು ಬಂದಿದ್ದರಿಂದ ಈಗ ಸರ್ಕಾರ ಇದನ್ನು ಪರಿಶೀಲನೆ ಮಾಡಿ ಒಬ್ಬ ಸೂಪರ್‌ವೈಸರ್ ಸುಮಾರು ೬೦ ಶಾಲೆಗಳನ್ನು ಭೇಟಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಹೇಳಿ ಒಬ್ಬ ಸೂಪರ್ ವೈಸರ್ ಒಂದು ತಿಂಗಳಲ್ಲಿ ಸುಮಾರು ೮ ಶಾಲೆಗಳನ್ನು ಭೇಟಿ ಮಾಡುವ ಕಾರ್ಯಕ್ರಮವೊಂದನ್ನು ಮಾಡಿದ್ದೇವೆ. ಈ ವರ್ಷ ಹೊಸದಾಗಿ ಸುಮಾರು ೪೦ ಸಾವಿರ ಜನ ವಿದ್ಯಾರ್ಥಿಗಳು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರಲ್ಲಿ ಯಾರು ಎನ್.ಎಸ್.ಎಸ್.ಗೆ ಸೇರಬಯಸುತ್ತಾರೋ ಅಂತಹವರನ್ನು ಸೇರಿಸಿಕೊಂಡು ಅವರಿಗೆ ಸೂಕ್ತವಾದ ತರಬೇತಿಯನ್ನು ಕೊಟ್ಟು ನಿರಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರಿಂದ ನಿರಕ್ಷರಸ್ಥರು ಅಕ್ಷರಸ್ಥರಾಗುವುದಕ್ಕೆ ಅನುಕೂಲವಾಗುತ್ತದೆ. ಆಮೇಲೆ ಎಸ್.ಸಿ, ಎಸ್.ಟಿ. ವಿದ್ಯಾರ್ಥಿಗಳು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಅವರ ಸೇವೆಯನ್ನು ಸಹ ಸರ್ಕಾರ ತೆಗೆದುಕೊಂಡು ಆ ಜನಾಂಗದವರಿಗೆ ವಿದ್ಯಾಭ್ಯಾಸ ಕಲಿಸಿಕೊಡುವ ವ್ಯವಸ್ಥೆಯನ್ನು ಸಹ ಮಾಡಲಾಗುವುದು. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಯುಥ್ ಸೆಂಟರ್ಸ್ ಇವೆ ಅಲ್ಲಿ ಯಾರ್ಯಾರೂ ಎಸ್.ಸಿ ಮತ್ತು ಎಸ್.ಟಿ ಮಕ್ಕಳು ಇದ್ದರೆ ಅವರನ್ನು ಅಲ್ಲಿಗೆ ತೆಗೆದುಕೊಂಡು ಈ ವರ್ಗದ ಜನರಿಗೆ ವಿದ್ಯಾಭ್ಯಾಸ ಕಲಿಸಿಕೊಡುವ ವ್ಯವಸ್ಥೆ ಮಾಡಲಾಗುವುದು. ಆಮೇಲೆ ಈ ವರ್ಷ ಸರ್ಕಾರದವರು ಜನ ಶಿಕ್ಷಣ ನಿಲಯಗಳನ್ನು ಸ್ಥಾಪನೆ ಮಾಡಿ ಆ ಮೂಲಕ ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮೇ ತಿಂಗಳಲ್ಲಿ ಪ್ರಧಾನಮಂತ್ರಿಗಳು ಸಾಕ್ಷರತಾ ದಿನಾಚರಣೆಯನ್ನು ಉದ್ಘಾಟನೆ ಮಾಡಿದರು. ಅದೇ ಸಾಕ್ಷರತಾ ದಿನಾಚರಣೆಯನ್ನು ನಾವು ನಮ್ಮ ರಾಜ್ಯದಲ್ಲಿಯೂ ಸಹ ಉದ್ಘಾಟನೆ ಮಾಡಿ ನಿರಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮ ಹಾಕಿಕೊಂಡು ಸುಮಾರು ೬೦೦ ಜನ ಶಿಕ್ಷಣ ನಿಲಯಗಳನ್ನು ಮಾಡಬೇಕೆಂದಿದ್ದೇವೆ. ಈ ಯೋಜನೆಯಲ್ಲಿ ಭಜನೆ, ಮಂದಿರಗಳಲ್ಲಿ, ಜಗಲಿಗಳಲ್ಲಿ ನಡೆಯುವ ಭಜನೆಗಳು ಇಂತಹ ಕಡೆ ಜನರಲ್ಲಿ ಸಾಕ್ಷರತಾ ಮೂಡಿಸುವ ಒಂದು ಸಾಮಾಜಿಕ ಪ್ರಜ್ಞೆ ಮೂಡಿಸುವಂತಹ ಮತ್ತು ಜನರಿಗೆ ತಿಳುವಳಿಕೆಯನ್ನು ಕೊಡತಕ್ಕಂಥಾದ್ದು, ಜನರಲ್ಲಿ ಸಾಮಾಜಿಕ ಪ್ರೇರಣೆಯನ್ನುಂಟು ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ ಜನರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಮಂಡಲ ಪಂಚಾಯಿತಿಯವರು, ಜಿಲ್ಲಾ ಪರಿಷತ್ತಿನವರು ಇನ್ನು ಕೆಲವು ಜನ ಸ್ವಯಂ ಸೇವಕರು ಈ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಕಾರ್ಯಕ್ರಮ ಯಶಸ್ವಿಗೊಳಿಸುತ್ತಾರೆನ್ನುವ ಭರವಸೆ ನನಗಿದೆ. ಈ ಬಗ್ಗೆ ಸರ್ಕಾರದವರು ತರಬೇತಿಯನ್ನು ಸಹ ಕೊಡಲಾಗುವುದು. ಇನ್ನು ಪ್ರೌಢಶಾಲೆಗಳ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಒಟ್ಟು ೩೧೦೦ ಪ್ರೌಢಶಾಲೆಗಳು ಇವೆ. ನಮ್ಮ ಸರ್ಕಾರ ಬಂದ ಮೇಲೆ ೮೫೩ ಪ್ರೌಢಶಾಲೆಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ತೆರೆದಿದ್ದೇವೆ. ಇದು ಇತಿಹಾಸದಲ್ಲಿ ೪ ವರ್ಷಗಳಲ್ಲಿ ಸುಮಾರು ೮೦೦ಕ್ಕೂ ಹೆಚ್ಚು ಪ್ರೌಢಶಾಲೆಗಳನ್ನು ತೆರೆದಂತಹ ನಿದರ್ಶನ ಯಾವ ಸರ್ಕಾರದಲ್ಲೂ ಇಲ್ಲ.

೮-೩೦ ಪಿ.ಎಂ.

ಎಲ್ಲಾ ಹಳ್ಳಿಗಾಡಿನಲ್ಲಿ ಪ್ರೌಢಶಾಲೆಗಳು ಇರಬೇಕು, ಹಳ್ಳಿಗಾಡಿನ ಮಕ್ಕಳಿಗೆ ಈ ಸವಲತ್ತು ಸಿಗಬೇಕು ಅವರಿಗೆ ಪ್ರೌಢಶಿಕ್ಷಣದ ವ್ಯವಸ್ಥೆಯಾಗಬೇಕು. ಆದರ ಒಂದು ನ್ಯಾಯದಿಂದ ಯಾರೂ ವಂಚಿತರಾಗಿರಬಾರದು, ಅದರಲ್ಲೂ ಗ್ರಾಮೀಣ ಹೆಣ್ಣುಮಕ್ಕಳಿಗೆ ಪ್ರೌಢಶಿಕ್ಷಣದ ಸೌಲಭ್ಯ ಸಿಗಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ ಶಿಕ್ಷಕರ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಎಂಟು ಸಾವಿರ ಶಿಕ್ಷಕರು ನಮಗೆ ಬೇಕಾಗಿದ್ದಾರೆ. ಅದರಲ್ಲಿ ಆರು ಸಾವಿರ ಶಿಕ್ಷಕರನ್ನು ನೇಮಕ ಮಾಡತಕ್ಕ ಕಾರ್ಯಕ್ರಮವನ್ನು ನಾವು ಈಗಾಗಲೇ ಹಮ್ಮಿಕೊಂಡಿದ್ದೇವೆ. ಅದಕ್ಕಾಗಿ ಜಿಲ್ಲಾ ನೇಮಕ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಒಂದೆರಡು ತಿಂಗಳಲ್ಲಿ ಶಿಕ್ಷಕರ ಭರ್ತಿ ಮಾಡಿಕೊಂಡು ಈ ಒಂದು ಕಾರ್ಯಕ್ರಮವನ್ನು ನಾವು ಪೂರೈಸುತ್ತೇವೆ. ಹಿಂದಿ ಶಿಕ್ಷಕರನ್ನು ಹೊಸದಾಗಿ ನೇಮಕ ಮಾಡತಕ್ಕ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದು ಮಂಜೂರಾತಿ ಆಗತಕ್ಕಂಥ ಸಂದರ್ಭ ಇದೆ. ಮುಖ್ಯವಾಗಿ ಪ್ರೌಢಶಾಲಾ ಶಿಕ್ಷಕರ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ರಾಣಿಯವರು ಪ್ರೌಢಶಾಲಾ ಶಿಕ್ಷಕರ ಬಗ್ಗೆ ಹೇಳುತ್ತಾ, ಅವರ ವೇತನ ತಾರತಮ್ಯ ನಿವಾರಣೆ ಮಾಡುವ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದಿರಿ, ಅದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಹೇಳಿದ್ದಾರೆ. ಈಗಾಗಲೇ ನಮ್ಮ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಮುಖ್ಯವಾಗಿ ಅವರು ಮೂರು ಬೇಡಿಕೆಗಳನ್ನು ಇಟ್ಟಿದ್ದರು. ಅದರ ಬಗ್ಗೆ ಸಮಿತಿಯವರು ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ತಕ್ಷಣದಲ್ಲೇ ಅಧ್ಯಯನ ಮಾಡಿದ್ದೇವೆ. ಎರಡು ಮೂರು ಶಿಫಾರಸ್ಸುಗಳನ್ನು ಅವರು ಮಾಡಿರುತ್ತಾರೆ. ಆ ಶಿಫಾರಸ್ಸುಗಳಲ್ಲಿ ಮಹತ್ತರವಾದಂಥ ಒಂದು ಬದಲಾವಣೆ ಎಂದು ಹೇಳಿದರೆ, ಪ್ರೌಢಶಾಲಾ ಶಿಕ್ಷಕರಾಗಿ ಸೇರಿದವರಿಗೆ ಒಂದನೇ ದರ್ಜೆಗೆ ಬಡ್ತಿ ಕೊಡುವುದರಲ್ಲಿ ಹಿಂದೆ ಯಾವ ಕಾರ್ಯಕ್ರಮವೂ ಇರಲಿಲ್ಲ. ಆದರೆ ಅವರಿಗೆ ಒಂದನೇ ದರ್ಜೆಗೆ ಬಡ್ತಿ ಕೊಡಬೇಕೆಂಬ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಒಟ್ಟು ೧೭,೯೯೪ ಜನ ಪ್ರೌಢಶಾಲಾ ಶಿಕ್ಷಕರಿದ್ದಾರೆ. ಇವರಿಗೆ ಶೇಕಡಾ ೨೫ರಷ್ಟು ಎಂದರೆ ಸುಮಾರು ೪೫೪೪ ಶಿಕ್ಷಕರಿಗೆ ಒಂದನೇ ದರ್ಜೆ ಶಿಕ್ಷಕರನ್ನಾಗಿ ಬಡ್ತಿ ಕೊಡುವ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಕಮಿಟಿಯವರು ಇದರ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಇದರಿಂದ ಸುಮಾರು ಒಂದು ವರ್ಷಕ್ಕೆ ಎರಡು ಕೋಟಿ ರೂಪಾಯಿ ಖರ್ಚಾಗುತ್ತದೆ. ಇದುವರೆಗೆ ಅವರಿಗೆ ಬಡ್ತಿಯನ್ನು ಕೊಡತಕ್ಕಂಥ ಅವಕಾಶ ಇದ್ದರೂ ಅದನ್ನು ನೀಡಿರಲಿಲ್ಲ. ಇದೇ ಪ್ರಥಮ ಬಾರಿಗೆ ಪ್ರೌಢಶಾಲಾ ಶಿಕ್ಷಕರಿಗೆ ಎರಡನೇ ದರ್ಜೆಯಿಂದ ಮೊದಲನೇ ದರ್ಜೆಗೆ ಬಡ್ತಿ ಕೊಡತಕ್ಕಂಥಾದ್ದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ನಂತರ ಅವರಿಗೆ ಬಡ್ತಿ ಅವಕಾಶ ಹೆಚ್ಚು ಇರಬೇಕೆಂದು ಹೇಳಿ ಬೇರೆಲ್ಲಾ ಇಲಾಖೆಗಳಲ್ಲಿ ಶೇಕಡಾ ೫೦ರಷ್ಟು ಮಾತ್ರ ಪ್ರಮೋಷನ್ ಕೊಡತಕ್ಕಂಥ ಅವಕಾಶ ಇದ್ದರೆ, ನಮ್ಮ ಇಲಾಖೆಯಲ್ಲಿ ಶೇಕಡಾ ೭೫ರಷ್ಟು ಹುದ್ದೆಗಳನ್ನು ಬಡ್ತಿ ಮುಖಾಂತರ ತುಂಬಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಒಂದನೇ ದರ್ಜೆ ಪ್ರೌಢಶಾಲಾ ಶಿಕ್ಷಕರಿಂದ ಮುಖ್ಯೋಪಾಧ್ಯಾಯರ ಹುದ್ದೆಗೆ ಬಡ್ತಿ ಕೊಡುವ ಪ್ರಮಾಣ ಶೇಕಡಾ ೫೦ರಷ್ಟು ಇತ್ತು. ಈಗ ಇದನ್ನು ಶೇಕಡಾ ೭೫ಕ್ಕೆ ಏರಿಸಬೇಕೆಂದು ಸಮಿತಿಯವರು ಶಿಫಾರಸ್ಸು ಮಾಡಿರುತ್ತಾರೆ. ಆ ಶಿಫಾರಸ್ಸನ್ನು ನಮ್ಮ ಸರ್ಕಾರ ಒಪ್ಪಿಕೊಳ್ಳುತ್ತದೆ ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. ವೇತನ ತಾರತಮ್ಯದ ಬಗ್ಗೆ ಶಿಕ್ಷಕರು ಬೇಡಿಕೆಯನ್ನು ಇಟ್ಟಿದ್ದಾರೆ. ಆದರೆ ಇದು ಹೆಚ್ಚಿನ ಹಣಕಾಸಿನ ಹೊರೆ ಬರತಕ್ಕಂಥ ಬೇಡಿಕೆಯಾಗಿದೆ. ಬೇರೆ ಇಲಾಖೆಗಳಲ್ಲಿ ತತ್ಸಮಾನವಾದ ಹುದ್ದೆಗಳಿಗೆ ಏನು ವೇತನ ಇದೆ ಎಂಬ ಬಗ್ಗೆಯೂ ವಿಚಾರ ಮಾಡಬೇಕಾಗಿದೆ. ಬೇರೆ ಬೇರೆ ಇಲಾಖೆಗಳಲ್ಲಿ ಇದೇ ಒಂದು ಸರಿಸಮಾನವಾದ ಹುದ್ದೆಗಳಿಗೆ ಏನು ಇವೆ, ಅದು ಸಬ್ ಇನ್‌ಸ್ಪೆಕ್ಟರ್ಸ್ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಇನ್‌ಸ್ಪೆಕ್ಟರ್ಸ್ ಇರಬಹುದು, ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ಹುದ್ದೆಗಳು ಇರಬಹುದು, ಆ ಹುದ್ದೆಗಳ ಜೊತೆಗೆ ಇದನ್ನೂ ಸೇರಿಸಿ ವಿಚಾರ ಮಾಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಸ್ವಲ್ಪ ದಿನಗಳಲ್ಲೇ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟು, ಪ್ರೌಢಶಾಲಾ ಶಿಕ್ಷಕರಿಗೆ ಪ್ರಮೋಷನ್‌ನಲ್ಲಿ ಶೇಕಡಾ

ಏರಿರಷ್ಟು ಬಡ್ತಿಯನ್ನು ಕೊಡುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ, ಇದನ್ನು ಹೊಸದಾಗಿ ನಮ್ಮ ರಾಜ್ಯದಲ್ಲಿ ಮಾಡಿ, ಅವರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಜಿ. ಎಸ್. ಆಚಾರ್‌ರವರು ತಮ್ಮ ಭಾಷಣದಲ್ಲಿ ಕೆಲವು ವಿಷಯಗಳನ್ನು ಎತ್ತಿದ್ದಾರೆ. ಮೌಲ್ಯ ಶಿಕ್ಷಣದ ಬಗ್ಗೆ ಅಂದರೆ ಮಾರಲ್ ಎಜುಕೇಷನ್ ಬಗ್ಗೆ ನಾವು ಹೊಸ ಯೋಜನೆಯನ್ನು ತಯಾರು ಮಾಡಿದ್ದೇವೆ, ಅದರ ಬಗ್ಗೆ ಪಠ್ಯಕ್ರಮಗಳನ್ನು ತಯಾರು ಮಾಡುತ್ತಿದ್ದೇವೆ. ಪ್ರಾಥಮಿಕ ಶಾಲೆಯಲ್ಲಿ ಈ ಮೌಲ್ಯ ಶಿಕ್ಷಣವನ್ನು ಕಡ್ಡಾಯ ಮಾಡಿ ಅಳವಡಿಸುವ ಯೋಜನೆ ಹಾಕಿಕೊಂಡಿದ್ದೇವೆ ಎಂದು ಹೇಳುತ್ತೇನೆ. ಉಚಿತ ಪಠ್ಯ ಪುಸ್ತಕ ಮತ್ತು ಬಟ್ಟೆಯ ಬಗ್ಗೆ ಹೇಳುತ್ತಾ, ಇದನ್ನು ಶ್ರೀಮಂತರ ಮಕ್ಕಳಿಗೂ ಕೊಡತಕ್ಕದ್ದು ಸರಿಯಲ್ಲ, ಕೇವಲ ಬಡ ಮಕ್ಕಳಿಗೆ ಇದನ್ನು ಕೊಡಬೇಕೆಂಬ ಸಲಹೆ ಕೊಟ್ಟಿದ್ದಾರೆ. ಇದರ ಬಗ್ಗೆ ವಿಚಾರ ಮಾಡುತ್ತೇನೆ. ಶಾಲಾ ಕಟ್ಟಡಗಳ ಬಗ್ಗೆ ಕಪ್ಪುಹಲಗೆ ಯೋಜನೆಯ ಅಡಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಡಿಟೇಲ್ಸ್‌ಗೆ ಹೋಗುವುದಕ್ಕಿಂತ ಎಲ್ಲಾ ಸದಸ್ಯರು ಕೊಟ್ಟ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದು ಹೇಳಿಬಿಡಿ.

ಶ್ರೀ ಬಿ. ಸೋಮಶೇಖರ್.—ಇನ್ನು ಕೆಲವು ಜನ ಮಾನ್ಯ ಸದಸ್ಯರು ಬಹಳ ಮುಖ್ಯವಾದ ವಿಷಯದ ಬಗ್ಗೆ ಟೀಕೆ ಮಾಡಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಅಥವಾ ಇನ್ನಿತರೆ ಯಾವುದೇ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಾಂಗದವರ ಬಗ್ಗೆ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಎಷ್ಟು ಕಳಕಳಿ ಇಟ್ಟುಕೊಂಡಿದ್ದಾರೋ ಅದಕ್ಕಿಂತ ಜಾಸ್ತಿ ಇಲ್ಲದಿದ್ದರೂ ಸಹ ಅಷ್ಟೇ ಕಳಕಳಿ ನಮಗೂ ಇದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಮಾತನಾಡುತ್ತಾ ಹೇಳಿದರು ಟಿ.ಸಿ.ಎಚ್.ಗೆ ಮಿನಿಮಮ್ ಕ್ವಾಲಿಫಿಕೇಷನ್ ಎಸ್ ಎಸ್ ಎಲ್ ಸಿ ಇದ್ದದ್ದನ್ನು ತೆಗೆದು ಪಿ.ಯು.ಸಿ ಮಾಡಿದ್ದರಿಂದ ಅನೇಕ ಜನ ಬಡ ವಿದ್ಯಾರ್ಥಿಗಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಅನ್ಯಾಯವಾಗಿದೆ ಎಂದು ಹೇಳಿದರು. ನಾವು ಡಾಕ್ಟರ್ ಹೆಚ್ ನರಸಿಂಹಯ್ಯ ಸಮಿತಿಯ ಆಧಾರದ ಮೇಲೆ ಈ ಕ್ರಮ ತೆಗೆದುಕೊಂಡಿದ್ದೇವೆ. ಅವರು ತಮ್ಮ ವರದಿಯಲ್ಲಿ ಇವತ್ತು ಪ್ರಾಥಮಿಕ ಶಿಕ್ಷಣದ ಮಟ್ಟ ದಿನೇ ದಿನೇ ಕ್ಷೀಣಿಸುತ್ತಿದೆ ಮತ್ತು ಹಳ್ಳಿಗಾಡಿನ ಮಕ್ಕಳ ವಿದ್ಯಾಭ್ಯಾಸದಮಟ್ಟ ಕುಂಠಿತವಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ಶಿಕ್ಷಣ ಮಟ್ಟ ಉನ್ನತಿಗಾಗಿ ಈ ಶಿಕ್ಷಣ ಗುಣಮಟ್ಟವನ್ನು ಹೆಚ್ಚು ಮಾಡುವ ಸಲುವಾಗಿ ನಾವು ಅವರ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕಾಯಿತು.

SRI M. MALLIKARJUNA KHARGE -All intellectuals just to exploit tell like this. ಬೇರೆಯವರು ಮುಂದೆ ಬರಬಾರದೆಂದು ಕೆಲವು ಜನ ಫಾರ್‌ವರ್ಡ್ ಕ್ಲಾಸ್‌ಗಳಲ್ಲಿ ಇರುತ್ತದೆ. ಈಗ ನಾವು ಹಿಂದೆ ಬಿ-ಎಡ್. ಮತ್ತು ಟಿ.ಸಿ.ಹೆಚ್.ಗೆ ಎಕ್ಸೆಂಡ್ ಮಾಡಿರಲಿಲ್ಲವೇ? ಅದೇ ರೀತಿ ಈಗಲೂ ಮಾಡಿ.

ಶ್ರೀ ಬಿ. ಸೋಮಶೇಖರ್.—ನಮ್ಮ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನಖರ್ಗೆ ಯವರಿಗೆ ಮತ್ತು ಮಾನ್ಯ ಸದಸ್ಯರಾದ ರಾಣೆಯವರಿಗೆ ಈ ರೀತಿ ಮಾಡಿದ್ದರಿಂದ ಕೆಲಸ ಸಿಗುವುದಿಲ್ಲವೆನು ವ ಒಂದು ಭಾವನೆ ಇರಬಹುದು ಆದರೆ ಕೆಲಸಕ್ಕಿಂತ ಮುಖ್ಯವಾಗಿ ಅವರು ವಿದ್ಯಾವಂತರಾಗುತ್ತಾರಲ್ಲಾ, ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಮಾಡಿದ್ದೇವೆ. ಕೆಲಸಕ್ಕೆ ಸೇರತಕ್ಕಂಥವರು ಎಷ್ಟು ಜನ?...

ಶ್ರೀ ಕೆ, ಎಚ್. ಪಾಟೀಲ್.—ಗ್ರ್ಯಾಜುಯೇಟ್, ಎಂ.ಎ. ಆದವರಿಗೆ ಕೊಡಿ ಆದರೆ ಪಿ.ಯು.ಸಿ. standard and matriculation standard is almost the same. I can unde stand if he is a graduate and I can understand if he is a post-graduate.

ಶ್ರೀ ಬಿ. ಸೋಮಶೇಖರ್,—ಮಾನ್ಯ ಅಧ್ಯಕ್ಷರೇ, ನಾವು ಏತಕ್ಕೆ ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆಂದರೆ. ಅವರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನಾದರೂ ಕೊಡೋಣವೆಂದು. ಕೆಲಸ ಕೊಡತಕ್ಕಂಥ ಉದ್ದೇಶದಿಂದ ಅಲ್ಲ. ಈ ವರ್ಗದ ಜನ ಉನ್ನತ ಶಿಕ್ಷಣ ಸಿಗದೆ ಇರುವುದಕ್ಕೆ ಕಾರಣ

ಅವರು ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಒಳ್ಳೆಯ ವಿದ್ಯಾಭ್ಯಾಸ ಇಲ್ಲದೆ ಇರುವುದೇ ಕಾರಣವಾಗಿದೆ. ಅವರಿಗೆ ಉತ್ತಮ ಶಿಕ್ಷಣ ಕೊಡಬೇಕೆನ್ನುವ ಉದ್ದೇಶದಿಂದ ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಎಸ್‌ಎಸ್‌ಎಲ್‌ಸಿ ಆದವರಿಗೆ ಬೇರೆಬೇರೆ ಕೆಲಸಗಳು ಸಿಗುತ್ತದೆ, ಡಿಗ್ರಿ ಆದವರಿಗೆ ಕೆಲಸ ಸಿಗುತ್ತದೆ ಆದರೆ ಪಿಯುಸಿ ಆದವರಿಗೆ ಬೇರೆ ಯಾವ ಕೆಲಸವು ಸಹ ಸಿಗುವುದಿಲ್ಲ ಅವರು ಕೆಲಸಕ್ಕೆ ಅರ್ಜಿ ಹಾಕಬೇಕಾದರೆ ಎಸ್‌ಎಸ್‌ಎಲ್‌ಸಿ ಸರ್ಟಿಫಿಕೇಟ್ ಬೇಕಾಗುತ್ತದೆ. ಮತ್ತು ಪಿಯುಸಿ ಆದವರು ಆಪ್ಷನಲ್ ಸಬ್ಜೆಕ್ಟ್ ತೆಗೆದುಕೊಂಡು ವ್ಯಾಸಂಗ ಮಾಡಿರುತ್ತಾರೆ, ಇಂತಹವರು ಟಿ.ಸಿ.ಎಚ್. ಮಾಡಿದರೆ ಶಿಕ್ಷಕರಾಗುವುದಕ್ಕೆ ಅನುಕೂಲವಾಗುತ್ತದೆ ಏತಕ್ಕೆಂದರೆ ಎಲ್ಲಾ ಸಬ್ಜೆಕ್ಟ್ ತಿಳಿದುಕೊಂಡಿರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದರಲ್ಲಿ ಎಸ್‌ಸಿ ಮತ್ತು ಎಸ್‌ಟಿಬಿಸಿ ಜನಾಂಗದವರು ಎಸ್‌ಎಸ್‌ಎಲ್‌ಸಿ ಪಾಸಾದ ತಕ್ಷಣ ಪಿಯುಸಿಗೆ ಹೋಗುವುದೇ ಇಲ್ಲ. ಒಂದು ವೇಳೆ ಅವರು ಕಾಲೇಜು ಸೇರಲು ಹೋದರೂ ಅವರಿಗೆ ಅಡ್ಮಿಷನ್ ಸಿಗುವುದೇ ಇಲ್ಲ.

ಶ್ರೀ ಬಿ. ಸೋಮಶೇಖರ್.—ಅವರು ಕೆಲಸಕ್ಕೆ ಸೇರಬೇಕೆನ್ನುವ ಉದ್ದೇಶದಿಂದ ನಾವು ಈ ರೀತಿ ಮಾಡಿಲ್ಲ. ಸಾವಿರಾರು ಜನ ಈ ವರ್ಗದವರಿಗೆ ಅನುಕೂಲವಾಗಲೆಂದು ಮಾಡಿದ್ದೇವೆ. ಈ ಬಗ್ಗೆ ಚಿಂತನೆ ಮಾಡಬೇಕು, ನಮ್ಮ ಉದ್ದೇಶ ಅದಲ್ಲ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹರಿಜನ ಮತ್ತು ಗಿರಿಜನರಿಗೆ ಕೆಲಸ ಕೊಡುವ ವಿಷಯ ಬೇರೆ. It is a fault of the Education Department.

ಶ್ರೀ ಬಿ. ಸೋಮಶೇಖರ್.—ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು ಸರಿಯಾಗಿಲ್ಲದಿದ್ದರಿಂದ ಅವರು ಥರ್ಡ್ ಕ್ಲಾಸ್‌ನಲ್ಲಿ ಪಾಸ್ ಮಾಡಿಕೊಂಡು ಬಂದಿರುವುದರಿಂದ ಅಲ್ಲಿನ ವಿದ್ಯಾರ್ಥಿಗಳಿಗೆ ಯಾವ ರೀತಿ ವಿದ್ಯಾಭ್ಯಾಸ ಹೇಳಿಕೊಡುತ್ತಾರೆ? ಅವರು ೩೫–೪೦ ಅಂಕಗಳನ್ನು ಪಡೆದು ಬಂದಿರುತ್ತಾರೆ. ಅದೇ ನೋಡಿ ಪ್ರೈವೇಟ್ ಶಾಲೆಗಳಲ್ಲಿ ಡಿಗ್ರಿ ಆದವರನ್ನು ನೇಮಕ ಮಾಡಿಕೊಂಡಿರುತ್ತಾರೆ. ಆದ್ದರಿಂದ ಅಲ್ಲಿ ಒಳ್ಳೆಯ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ರೋಸ್ಟರ್ ಸಿಸ್ಟಂ ತೆಗೆದು ಹಾಕಿ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ರೋಸ್ಟರ್ ಸಿಸ್ಟಂ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಇಲ್ಲದಿದ್ದರೂ ಅಷ್ಟೇ ಕಳಕಳಿ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಯಾವುದೇ ವರ್ಗದ ಜನರಿಗೆ ಅವರಿಗೆ ಇರತಕ್ಕಂಥ ರೋಸ್ಟರ್ ಸಿಸ್ಟಂ ತಪ್ಪಿಸುವುದಕ್ಕಾಗುವುದಿಲ್ಲ. ಅವರಿಗೆ ಕೊಡಬೇಕಾದ ೧೮ ಪರ್ಸೆಂಟ್ ನಾವು ಕೊಡಲೇಬೇಕು. ಯಾವುದೇ ರೀತಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಡೀಟೇಲ್ ಆಗಿ ಹೇಳುವುದಕ್ಕೆ ಹೋದರೆ ಮತ್ತೆ ಅವರು ಕೇಳುತ್ತಾರೆ. ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಬಿ. ಸೋಮಶೇಖರ್.—ಮತ್ತೆ ಇನ್ನೂ ಒಂದು ಮಹತ್ತರವಾದ ವಿಷಯವನ್ನು ಮಾನ್ಯ ಸದಸ್ಯರಾದ ಜಿ.ಎಸ್. ಆಚಾರ್‌ರವರು ಹೇಳಿದ್ದಾರೆ. ಶನಿವಾರದಂದು ಪೂರ್ತಿ ದಿನ ಸ್ಕೂಲು ನಡೆಸುವುದು ಸರಿಯಲ್ಲ ಶನಿವಾರದ ಅರ್ಧ ದಿನ ಮಾತ್ರ ಸ್ಕೂಲು ನಡೆಯಲಿ ಎಂದು ಹೇಳಿದ್ದಾರೆ. ನಾನು ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಪ್ರಾಥಮಿಕ ಹಂತದಲ್ಲಿ ಅಂದರೆ, ಒಂದನೇ ತರಗತಿಯಿಂದ ೭ನೇ ತರಗತಿಯವರೆಗೆ ಶನಿವಾರ ಅರ್ಧ ದಿನ ಮಾತ್ರ ಶಾಲೆ ನಡೆಸುವ ಬಗ್ಗೆ ನಾವು ಈಗಾಗಲೇ ಚಿಂತನೆ ಮಾಡಿದ್ದೇವೆ. ಅಧಿಕಾರಿಗಳ ಮತ್ತು ಟೀಚರ್ಸ್‌ಗಳ ಕೆಲಸದ ವೇಳೆಯನ್ನು ಮಾರ್ಪಾಡು ಮಾಡುವ ಬಗ್ಗೆಯೂ ಯೋಚನೆ ಮಾಡಲಾಗುತ್ತಿದೆ ತಕ್ಷಣದಲ್ಲೇ ಇದನ್ನು ಮಾಡುತ್ತೇವೆಂದು ಹೇಳುತ್ತೇನೆ. ಮತ್ತೆ ಮಾನ್ಯ ಅಧ್ಯಕ್ಷರೇ, ಇನ್ನೂ ಅನೇಕ ವಿಷಯಗಳು ಇದ್ದರೂ ಸಹ ಕಾಲದ ಅಭಾವದಿಂದ ನಾನು ಹೆಚ್ಚಿಗೆ ವೇಳೆಯನ್ನು ತೆಗೆದುಕೊಳ್ಳುವುದಿಲ್ಲ ಮಾನ್ಯ ಸದಸ್ಯರುಗಳು ಏನೇನು ಉತ್ತಮವಾದ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೋ ಅದರ ಬಗ್ಗೆ ವಿಚಾರ ಮಾಡುತ್ತೇನೆ. ಆದುದರಿಂದ, ಈ ಬೇಡಿಕೆಗೆ ಮಾನ್ಯ ಸಭೆ ಮಂಜೂರಾತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಶನಿವಾರದ ರಜಾ ದಿನವನ್ನು ಪುನರ್ ಪರಿಶೀಲನೆ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದೇ ರೀತಿ ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಯನ್ನು ಎರಡನೇ ಬಾರಿ ಜೂನ್‌ನಲ್ಲಿ ಏನು ನಡೆಸುತ್ತಾ ಇದ್ದಾರೋ ಅದನ್ನು ನಿಲ್ಲಿಸುವ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕು ಮತ್ತೆ ವೆಕೇಷನ್ ರಜವನ್ನು ವರ್ಷಕ್ಕೆ ಎರಡು ಅವಧಿಯಲ್ಲಿ ಕೊಡುವುದಕ್ಕಿಂತ ವರ್ಷಕ್ಕೆ ಮೂರು ಅವಧಿಯಲ್ಲಿ ಕೊಡಬೇಕು. ಈ ರೀತಿ ಮೂರು ಸಾರಿ ವೆಕೇಷನ್ ರಜವನ್ನು ಕೊಡುವುದರಿಂದ ಮಕ್ಕಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಚಿಂತನೆ ಮಾಡಬೇಕು. ಇನ್ನು ಮೂರನೆಯದಾಗಿ, ಚಿಕ್ಕ ವಯಸ್ಸಿನ ಅಧ್ಯಾಪಕರುಗಳಿಂದ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ಹಾಗೂ ವಯಸ್ಕರ ಶಿಕ್ಷಣವನ್ನು ಕೊಡಲಾಗುತ್ತಿದೆ. ಚಿಕ್ಕ ವಯಸ್ಸಿನ ಅಧ್ಯಾಪಕರುಗಳಿಂದ ತರಬೇತಿ ಕೊಡುವುದರಿಂದ ವಯಸ್ಕರ ಶಿಕ್ಷಣ ಶಾಲೆಯಲ್ಲಿ ಬರುವ ದೊಡ್ಡವರಿಗೆ ಒಂದು ತರಹ ಅಲರ್ಜಿಯಾಗುತ್ತದೆ. ಇದನ್ನು ಕುರಿತು ಸಹಾ ತಾವು ಆಲೋಚನೆ ಮಾಡಬೇಕು. ಕೊನೆಯದಾಗಿ, ನಾನು ಹೇಳುವುದೇನೆಂದರೆ, ಅಧ್ಯಾಪಕರುಗಳಲ್ಲಿ ಇರುವ ವೇತನ ತಾರತಮ್ಯ ನಿವಾರಣೆ ಆಗಲೇಬೇಕು. ಕರ್ನಾಟಕ ಏಕೀಕರಣ ಆದಾಗ ಬೇರೆ ಬೇರೆ ಕಡೆಗಳಿಂದ ಶಿಕ್ಷಕರು ಬಂದಿರುವುದರಿಂದ ವೇತನದಲ್ಲಿ ತಾರತಮ್ಯ ಉಂಟಾಗಿದೆ. ಇದುವರೆಗೂ ವೇತನ ಪರಿಷ್ಕರಣ ಆಗಿಲ್ಲ ಮಾನ್ಯ ಸಚಿವರು ಶಿಕ್ಷಕರ ವೇತನವನ್ನು ಸಬ್ ಇನ್ಸ್‌ಪೆಕ್ಟರುಗಳ ವೇತನಕ್ಕೆ ಹೋಲಿಸಿ ಹೇಳಿದ್ದಾರೆ. ಆ ರೀತಿ ಹೋಲಿಸಿ ಹೇಳಬಾರದು. ಹೈದರಾಬಾದ್ ಕರ್ನಾಟಕ ಮುಂಬಯಿ ಕರ್ನಾಟಕಗಳಿಂದ ಬಂದಿರುವ ಶಿಕ್ಷಕರುಗಳಿಗೆ ಏಕರೂಪವಾದ ವೇತನವನ್ನು ಕೊಡಬೇಕು. ಶಿಕ್ಷಕರುಗಳಲ್ಲಿ ಎರಡನೇ ದರ್ಜೆ ಶಿಕ್ಷಕರು, ಮೊದಲನೇ ದರ್ಜೆ ಶಿಕ್ಷಕರು ಎನ್ನುವ ತಾರತಮ್ಯ ಇರಬಾರದು.

ಶ್ರೀ ಬಿ. ಸೋಮಶೇಖರ್.—ಎಸ್.ಎಸ್.ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆಗಳನ್ನು ಪ್ರೀಪೋನ್ ಮಾಡಿರುವ ವಿಷಯದಲ್ಲಿ ನಾನು ಆಗಲೇ ಹೇಳಬೇಕಾಗಿತ್ತು, ಆದರೆ, ಹೇಳುವುದಕ್ಕೆ ಆಗಿರಲಿಲ್ಲ. ಈ ಸಂದರ್ಭದಲ್ಲಿ ಆ ವಿಷಯವನ್ನು ಹೇಳುತ್ತೇನೆ. ಇಲ್ಲಿ ಏನಾಗಿದೆ ಎಂದರೆ, ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಬದಲಾವಣೆ ಮಾಡಬೇಕೆಂದು ಏನಾದರೂ ಚಿಂತನೆ ಮಾಡಿದಾಗ ಸ್ಟೇಟಸ್–ಕೋ ಗುಂಪಿನ ಜನರು ಈ ಹೊಸ ಬದಲಾವಣೆಯನ್ನು ಒಪ್ಪುವುದಕ್ಕೆ ತಯಾರಿರುವುದಿಲ್ಲ. ಈ ರೀತಿ ಒಪ್ಪಿಕೊಳ್ಳದೇ ಇರುವ ಜನರು ಶೇಕಡಾ ೫ರಷ್ಟು ಮಾತ್ರ ಇರಬಹುದು ಇನ್ನುಳಿದ ಶೇಕಡಾ ೯೫ರಷ್ಟು ಜನ ಈ ಬದಲಾವಣೆಯನ್ನು ಒಪ್ಪಿಕೊಂಡಿದ್ದಾರೆ. ಪಬ್ಲಿಕ್ ಪರೀಕ್ಷೆಯಲ್ಲಿ ಕಾರಣಾಂತರಗಳಿಂದ ಫೇಲ್ ಆದ ವಿದ್ಯಾರ್ಥಿಗಳು ಒಂದು ವರ್ಷ ಹಾಳು ಮಾಡಿಕೊಳ್ಳಬಾರದೆನ್ನುವ ಉದ್ದೇಶದಿಂದ ಈ ರೀತಿ ಪ್ರೀಪೋನ್ಡ್ ಸಪ್ಲಿಮೆಂಟರಿ ಪರೀಕ್ಷೆಯನ್ನು ಮಾಡಲಾಯಿತು. ಇದರಿಂದ ಅನೇಕ ಬಡ ಹುಡುಗರಿಗೆ ಅನುಕೂಲವಾಗಿದೆ. ಒಂದು ವರ್ಷ ಹಾಳಾಗದೇ ಅದೇ ವರ್ಷ ಮುಂದಿನ ತರಗತಿಗೆ ವಿದ್ಯಾರ್ಥಿಗಳು ಹೋಗುವುದಕ್ಕೆ ಇದರಿಂದ ಅನುಕೂಲವಾಗಿದೆ. ಈ ರೀತಿ ಪರೀಕ್ಷೆಗಳನ್ನು ಮಾಡುತ್ತಿರುವುದು ಜನರಿಗೆ ಒಪ್ಪಿಗೆಯಾಗಿದೆಯೋ ಇಲ್ಲವೋ ಎಂಬ ಬಗ್ಗೆ ಒಂದು ಸ್ಯಾಂಪಲ್ ಸರ್ವೆಯನ್ನು ನಮ್ಮ ಅಧಿಕಾರಿಗಳು ಮಾಡಿದ್ದರು ೪೫೦ ಜನರುಗಳನ್ನು ಸಂದರ್ಶಿಸಿ ಇದರ ಬಗ್ಗೆ ಕೇಳಿದಾಗ ೪೨೫ ಜನರು ಹೊಸ ಬದಲಾವಣೆಯನ್ನು ಒಪ್ಪಿಕೊಂಡಿದ್ದಾರೆ. ದುರ್ದೈವದಿಂದ ಈ ೪೨೫ ಜನರು ಹೊಸ ಬದಲಾವಣೆ ಇಷ್ಟಪಟ್ಟಿದ್ದೇವೆ ಎಂಬ ಬಗ್ಗೆ ಪ್ರೆಸ್ ಸ್ಟೇಟ್‌ಮೆಂಟ್ ಕೊಡಲಿಲ್ಲ. ಅವರು ಸುಮ್ಮನೆ ಮನೆಯಲ್ಲಿ ಇದ್ದಾರೆ. ಶೇಕಡಾ ೫ರಷ್ಟು ಮಾತ್ರ ಈ ಬದಲಾವಣೆ ಬೇಡ ಎನ್ನುತ್ತಿದ್ದಾರೆ ನಾನು ಹೇಳುತ್ತೇನೆ, ಇದಕ್ಕಿಂತ ಉತ್ತಮವಾದ ವ್ಯವಸ್ಥೆ ಯಾವುದೂ ಇಲ್ಲ. ಇದರ ಬಗ್ಗೆ ಜುಲೈ ತಿಂಗಳು ಆದ ಮೇಲೆ ಇದರ ಫಲಿತಾಂಶ ಏನು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಈ ವರ್ಷ ಒಟ್ಟು ಶೇಕಡಾ ೪೭ರಷ್ಟು ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ ಅಂದರೆ, ಪ್ರತಿ ವರ್ಷಕ್ಕಿಂತ ಈ ವರ್ಷ ಶೇಕಡಾ ೩ರಷ್ಟು ಅಧಿಕ ಫಲಿತಾಂಶ ಬಂದಿದೆ.

ಶ್ರೀ ಜಿ.ಎಸ್. ಆಚಾರ್.—ಗ್ರೇಸ್ ಮಾರ್ಕ್ಸ್ ಕೊಟ್ಟು ಬಹಳ ವಿದ್ಯಾರ್ಥಿಗಳನ್ನು ಪಾಸ್ ಮಾಡಲಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಸದಸ್ಯರಿಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿರಬಹುದು ಇ ರೀತಿ ಯಾರಿಗೂ ಗ್ರೇಸ್ ಮಾರ್ಕ್ಸ್ ಕೊಟ್ಟಿಲ್ಲ. ಪರೀಕ್ಷಾ ಮಂಡಳಿಗೆ ನಾವು ಯಾವುದೇ ತರಹ ನಮ್ಮದೇ ಆದ ನಿರ್ದೇಶನಗಳನ್ನು ಕೊಡುವುದಕ್ಕಾಗುವುದಿಲ್ಲ. ಪರೀಕ್ಷಾ ಮಂಡಳಿಯು ಒಂದು

ಸ್ವಾಯತ್ತ ಸಂಸ್ಥೆ ಆ ಮಂಡಳಿಗೇ ಬೇರೆ ಸದಸ್ಯರುಗಳು ಇದ್ದಾರೆ ಯಾವುದೇ ತೀರ್ಮಾನವನ್ನು ಅದು ಸ್ವತಂತ್ರವಾಗಿ ತೆಗೆದುಕೊಳ್ಳುವುದಕ್ಕೆ ಅದಕ್ಕೆ ಅಧಿಕಾರ ಇದೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಆಗಿಲ್ಲ, ಗ್ರೇಸ್ ಮಾರ್ಕ್ಸ್‌ನ್ನು ಯಾವ ವಿದ್ಯಾರ್ಥಿಗಳಿಗೂ ಕೊಟ್ಟಿಲ್ಲವೆಂದು ಹೇಳುತ್ತೇನೆ. ಆಮೇಲೆ ವೇತನ ತಾರತಮ್ಯದ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ನಾನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಈ ಮೊದಲು ನಮ್ಮ ರಾಜ್ಯದಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ಪ್ರಾರಂಭ ಮಾಡಲಾಗುತ್ತಿತ್ತು ಈಗ ಹೊಸದಾಗಿ ಕೊಡುವುದನ್ನು ನಿಲ್ಲಿಸಿರುವುದರಿಂದ ವಿದ್ಯಾರ್ಥಿಗಳ ಶೋಷಣೆ ನಡೆದಿದೆ ಹಾಲಿ ಇರುವ ಸ್ಕೂಲ್‌ಗಳ ಮ್ಯಾನೇಜ್‌ಮೆಂಟಿನವರು ೫ ಸಾವಿರದಿಂದ ೧೦ ಸಾವಿರ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ ಹೊಸದಾಗಿ ಕೊಡುವ ವ್ಯವಸ್ಥೆ ತರಬೇಕು ಪಟ್ಟಭದ್ರಾಶಕ್ತಿಗಳ ಶಾಲೆಗಳಾಗುತ್ತಿವೆ. ಇದರ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ಮಾಡಬೇಕು. ಆಮೇಲೆ ಸೆಕೆಂಡ್ ಇಯರ್ ಪಿಯುಸಿ ಆದ ಮೇಲೆ ಎರಡು ವರ್ಷದ ಕೋರ್ಸ್ ಮಾಡಬೇಕೆಂದು ಕೇಳುತ್ತೇನೆ ಅಂದರೆ ಇದನ್ನು ಪಿಯುಸಿ ಬದಲಿಗೆ ಮಾಡಬೇಕು. ಶಾಲಾ ಶಿಕ್ಷಕರ ಗಳ ಕೊರತೆ ಬಹಳ ಇದೆ. ಇದನ್ನು ತುಂಬ ಬೇಕು ಒಳ್ಳೆಯ ಶಿಕ್ಷಕರನ್ನು ಹಳ್ಳಿಗಾಡಿನ ಕಡೆ ತುಂಬಬೇಕು. ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ಸ್‌ಗೆ ವಾಹನಗಳ ತೊಂದರೆ ಬಹಳ ಇರುವುದರಿಂದ ಅವರು ಇನ್‌ಸ್ಪೆಕ್ಷನ್‌ಗೆಂದು ಪ್ರತಿ ದಿನ ಸರ್ಕಾರಿ ಅಥವಾ ಖಾಸಗಿ ಬಸ್‌ಗಳನ್ನು ಅವಲಂಬಿಸಬೇಕಾಗಿದೆ, ಇದರಿಂದ ನಿಧಾನವಾಗುತ್ತಿದೆ ಆದ್ದರಿಂದ ಅವರಿಗೆ ಇಲಾಖೆಯ ವಾಹನ ಒದಗಿಸುವ ಏರ್ಪಾಡು ಮಾಡಬೇಕು. ಆಮೇಲೆ ಈ ಸಲ ಎಷ್ಟು ಹೈಸ್ಕೂಲ್‌ಗಳನ್ನು ಕೊಡುತ್ತೀರಾ ಎಂಬುದನ್ನು ಹೇಳಲಿಲ್ಲ. ಅದನ್ನು ಹೇಳಬೇಕು.

ಶ್ರೀ ಬಿ. ಸೋಮಶೇಖರ್.—ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳ ಬಗ್ಗೆ ಪುನರ್‌ಪರಿಶೀಲನೆ ಮಾಡುವ ಪ್ರಯತ್ನ ಮಾಡುತ್ತೇನೆ. ಆಮೇಲೆ ಪಿಯುಸಿ ಬದಲಿಗೆ ಬೇರೆ ಕೋರ್ಸ್ ಮಾಡುವ ವಿಚಾರ ಅಂದರೆ ಸಿಪಿಎಡ್ ವ್ಯವಸ್ಥೆ ಮಾಡಬೇಕು ಎಂದಿದ್ದಾರೆ ಪಿಯುಸಿ ಆದಮೇಲೆ ಒಂದು ವರ್ಷ ಸಿ ಪಿ ಎಡ್ ಎಂದು ಇದುವರೆಗೂ ಏನಿತ್ತೋ ಅದನ್ನೆ ತಾತ್ಕಾಲಿಕವಾಗಿ ಮುಂದುವರಿಸಿಕೊಂಡು ಹೋಗಲು ತೀರ್ಮಾನಿಸಿದ್ದೇವೆ ಆಮೇಲೆ ಟೀಚರ್ಸ್ ಅಪಾಯಿಂಟ್‌ಮೆಂಟ್ಸ್‌ನ್ನು ಆದಷ್ಟು ಬೇಗನೆ ಮಾಡುತ್ತೇನೆ. ಈಗಾಗಲೇ ಮುಖ್ಯಮಂತ್ರಿಗಳು ಕ್ಲಿಯರೆನ್ಸ್ ಕೊಟ್ಟಿದ್ದಾರೆ ಪ್ರೌಢಶಾಲೆಗಳನ್ನು ಇನ್ನು ಮುಂದೆ ಬೇಕು ಬೇಕಾದ ಕಡೆ ತೆರೆಯಲು ಆಗುವುದಿಲ್ಲ ಅದಕ್ಕೊಂದು ಸೈಂಟಿಫಿಕ್ ಆಧಾರವಿದೆ ಯಾವ ಗ್ರಾಮದಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಅವರಲ್ಲಿ ಎಷ್ಟು ವಿದ್ಯಾರ್ಥಿಗಳು ಎಷ್ಟು ದೂರ ಯಾವ ಕಡೆ ಹೋಗುತ್ತಾರೆ ಎಂಬ ಬಗ್ಗೆ ಒಂದು ನೀಲಿನಕ್ಷೆಯನ್ನು ಇಡೀ ರಾಜ್ಯದಲ್ಲಿ ತಯಾರಿಸುತ್ತಿದ್ದೇವೆ ಆಮೇಲೆ ಅದನ್ನು ಅನುಸರಿಸಿ ನಮ್ಮ ಇಲಾಖೆ ಒಂದು ನೋಟಿಫಿಕೇಷನ್ ಹೊರಡಿಸಿ ಇಂಥಾ ಕಡೆ ಸ್ಕೂಲ್ ಓಪನ್ ಮಾಡುತ್ತೇವೆಂದು ಅನೌನ್ಸ್ ಮಾಡುತ್ತೇವೆ ಆಗ ಬರುವ ಅಬ್ಜೆಕ್ಷನ್‌ನ್ನು ಪರಿಶೀಲಿಸುತ್ತೇವೆ. ಇನ್ನು ಮುಂದೆ ಸರ್ಕಾರ ಖಾಸಗಿ ಶಾಲೆಗಳನ್ನು ತೆರೆಯಲು ಮನಸ್ಸು ಮಾಡುವುದಿಲ್ಲ ಈ ರೀತಿ ಮಾಡದೇ ಹೋದರೆ ಬೇಕು ಬೇಡವಾದ ಕಡೆಯೆಲ್ಲಾ ಶುರುಮಾಡಿ ಆಮೇಲೆ ಗ್ರ್ಯಾಂಟ್ ಕೊಡಿ ಎಂದು ಕೇಳುತ್ತಾರೆ. ಅಧಿಕಾರಿಗಳಿಗೆ ವಾಹನ ಒದಗಿಸುವ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪ್ರಭಾಕರ ಎಸ್ ರಾಣೆ.—ಕರ್ನಾಟಕದಲ್ಲಿ ಶಿಕ್ಷಕರಿಗೆ ಬಡ್ತಿಯನ್ನು ಶೇಕಡ ೫೦ ಮತ್ತು ಶೇಕಡ ೭೫ ರೇಷಿಯೋದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ ಸಂತೋಷ. ಅದೇ ಕಾಲದಲ್ಲಿ ಯಾವುದೇ ತಪ್ಪುಗಳಾಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ, ಎರಡನೆಯದು, ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಹಿಂದೆ ನಮ್ಮ ಸರ್ಕಾರ ಇದ್ದಾಗ ೨೦ ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ಆದ್ಯತೆ ಮೇರೆಗೆ ನೇಮಿಸಿಕೊಳ್ಳುವ ಪದ್ಧತಿ ಇತ್ತು. ಈಗಲೂ ಅಂತಹ ಆದ್ಯತೆಯನ್ನು ವಿಸ್ತರಿಸುವ ವಿಚಾರ ಇದೆಯೇ ? ಮೂರನೆಯದು, ಶಿಕ್ಷಕರ ತರಬೇತಿ ವಿಚಾರದಲ್ಲಿ ಪಿಯುಸಿ ಆದ ನಂತರ ಶಿಕ್ಷಕರ ಶೈಕ್ಷಣಿಕ ಮಟ್ಟ ಹೆಚ್ಚುತ್ತದೆಂದಿದ್ದಾರೆ. ನಾನು ಒಂದು ಸ್ಪಷ್ಟೀಕರಣ ಕೇಳುತ್ತೇನೆ. ಈಗಾಗಲೇ ಇಂಟೆನ್ಸೀವ್ ಕೋರ್ಸ್ ಎಂದು ಇದೆ. ಪಿಯುಸಿಗಿಂತ ಮುಂದೆ ಬರುವ ಈ ಪರೀಕ್ಷೆಯನ್ನು ಪಾಸು ಮಾಡಿರುವವರ ಬಗ್ಗೆ ಏನು ವಿಚಾರ ಮಾಡಿದ್ದೀರಿ ? ಆಮೇಲೆ ಸಿಪಿಎಡ್ ಬಗ್ಗೆ ಹೇಳುವುದಾದರೆ ಅದನ್ನ ಒಂದು ವರ್ಷದ ಕೋರ್ಸ್ ಮಾಡುತ್ತೇವೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ತರಬೇತಿ ಶಿಕ್ಷಣದಲ್ಲಿ ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ ವ್ಯತ್ಯಾಸ ಇಲ್ಲ. ಹೆಚ್ಚಿನ ಇಂಪ್ರೂವ್‌ಮೆಂಟ್ ಇರುವುದಿಲ್ಲ. ಆದ್ದರಿಂದ ಎಸ್‌ಎಸ್‌ಎಲ್‌ಸಿಯನ್ನೇ ಮುಂದುವರೆಸಲಿ. ತಾವು ಪದವಿಪೂರ್ವ ಹಂತದಲ್ಲಿ ವೊಕೇಷನಲ್

ಶಿಕ್ಷಣಾರ್ಥಿಗಳಿಗೆ ಪರಿಹಾರ ಧನ ಕೊಡುವ ಧೋರಣೆ ಇಟ್ಟುಕೊಂಡಿರುವುದಾಗಿ ಹೇಳಿದಿರಿ. ಆದರೆ ತಾವು ಅನುದಾನ ಕೊಡುವುದನ್ನು ಹೆಚ್ಚು ಮಾಡಿಲ್ಲ, ಮೂರು ವರ್ಷದ ಹಿಂದೆ ಏನು ಕೊಡುತ್ತಿದ್ದರೋ ಅಷ್ಟಕ್ಕೇ ನಿಲ್ಲಿಸಿದ್ದೀರಿ. ಅನುದಾನವನ್ನು ಹೆಚ್ಚಿಸದೆ ಸುಮ್ಮನೆ ಕೋರ್ಸ್ ತೆರೆಯಲು ಅವಕಾಶ ಕೊಟ್ಟರೆ ಶೋಷಣೆ ಆಗಲು ಅವಕಾಶವಾಗುತ್ತದೆ. ಆದ್ದರಿಂದ ಅನುದಾನವನ್ನು ಹೆಚ್ಚಿಸುವ ಉದ್ದೇಶ ಇದೆಯೇ? ಲೈಬ್ರರಿ ವಿಚಾರದಲ್ಲಿ ಪ್ರತಿ ಗ್ರಾಮ ಪಂಚಾಯತಿ ದಲ್ಲೂ ಒಂದೊಂದು ಲೈಬ್ರರಿ ಮಾಡಬೇಕೆಂದಿದ್ದೇವೆ ಎಂದು ಹೇಳಿದಿರಿ, ಆದರೆ ಅದನ್ನು ಮಾಡುವುದಕ್ಕೆ ಯಾವ ಆರ್ಥಿಕ ಸಹಾಯವನ್ನೂ ಸೂಚಿಸಿಲ್ಲ. ಅದರ ಬಗ್ಗೆ ಹೇಳಬೇಕು.

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಪ್ರೌಢಶಾಲ ಶಿಕ್ಷಣದ ಬಗ್ಗೆ ಶಿಕ್ಷಕರ ವೇತನದ ವಿಚಾರದಲ್ಲಿ ಗಮನಹರಿಸುತ್ತಿದ್ದೇವೆ. ಟೀಚರ್ಸ್ ಅಪಾಯಿಂಟ್‌ಮೆಂಟ್ ಬೇಗ ಮಾಡುತ್ತೇವೆ. ಏಜ್ ರಿಲಾಕ್ಸ್ ಬಗ್ಗೆ ಕೇಳಿದ್ದಾರೆ. ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್ ಏನಿದೆಯೋ ಅದನ್ನೇ ನಮ್ಮ ಇಲಾಖೆಯಲ್ಲೂ ಅನುಸರಿಸುತ್ತೇವೆ. ಹೊಸದನ್ನು ಮಾಡಿಲ್ಲ. ಆಮೇಲೆ ಪಿಯುಸಿ ಎಜುಕೇಷನ್ ಬಗ್ಗೆ ಮಾನ್ಯ ರಾಣೆಯವರು ಕೇಳಿದ್ದಾರೆ. ಇಂಟೆನ್ಸೀವ್ ಕೋರ್ಸ್ ಪಿಯುಸಿ ಕೋರ್ಸ್‌ಗೆ ಸಮಾ ಇದ್ದು ಇಂಟೆನ್ಸೀವ್ ಕೋರ್ಸನ್ನೇ ನಾವು ಅಪ್‌ಲಿಫ್ಟ್ ಮಾಡಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು. ಈಗ ಬೇಡಿಕೆಯನ್ನು ಮತದಾನಕ್ಕೆ ಹಾಕುತ್ತೇನೆ.

"ಪ್ರಸ್ತಾವ ಏನೆಂದರೆ, ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೫ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರಕಾರಾತ್ಮಕ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೫—ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

"ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೪೫,೦೨,೯೧,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು

ಪ್ರಕಟಣೆ

ಅಧ್ಯಕ್ಷರು.—ದೂರ ದರ್ಶನದಲ್ಲಿ 'ಸಂಸತ್ ಸಮಾಚಾರ' ಮಾದರಿಯಲ್ಲಿ 'ವಿಧಾನ ಮಂಡಲ ಸಮಾಚಾರ' ಎಂಬುವ ಕಾರ್ಯಕ್ರಮವನ್ನು ಪ್ರಸಾರ ಮಾಡಬೇಕೆಂದು ಬೆಂಗಳೂರಿನ ದೂರದರ್ಶನ ಕೇಂದ್ರದ ನಿರ್ದೇಶಕರಿಗೆ ಸೂಚಿಸಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಸಲಾಗಿದೆ.

ನಮ್ಮ ಸೂಚನೆಯನ್ನು ಗಮನಿಸಿ ಮೊದಲನೆಯದಾಗಿ ಕಳೆದ ಶುಕ್ರವಾರ ಅಂದರೆ ದಿನಾಂಕ ೧೦-೬-೧೯೮೮ ರಂದು ರಾತ್ರಿ ೮.೪೦ ಗಂಟೆಗೆ ವಿಧಾನ ಮಂಡಲದ ಸದರಿ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು "ವಿಧಾನ ಮಂಡಲ ಸಮಾಚಾರ" ಎಂಬ ಶೀರ್ಷಿಕೆಯಲ್ಲಿ ದೂರದರ್ಶನ ಕೇಂದ್ರ, ಬೆಂಗಳೂರು ಇವರು ಬಿತ್ತರಿಸಿದ್ದಾರೆ ಹಾಗೂ ಇನ್ನು ಮುಂದೆ ವಿಧಾನ